ಭಾನುವಾರ, ನವೆಂಬರ್ 14, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 315 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮಕ್ಕಳ ದಿನಾಚರಣೆಯ ನೆಪದಲ್ಲಿ ಕಥೆ, ಪದ್ಯ ಮತ್ತು ಆಟಗಳ ಜುಗಲ್‌ಬಂದಿ

ಕೋವಿಡ್ ನಿಯಂತ್ರಣ: ಮಧುಮೇಹ ಉಲ್ಬಣ 7
ವಾಯು ಮಾಲಿನ್ಯ: ಎರಡು ದಿನ 'ಲಾಕ್‌ಡೌನ್' ಘೋಷಣೆಗೆ 'ಸುಪ್ರೀಂ' ಸಲಹೆ
ಅಮರಾವತಿ: ಹಿಂಸಾಚಾರ– ಕರ್ಫ್ಯೂ 9
ದೆಹಲಿ: ಶಾಲೆಗಳಿಗೆ ಒಂದು ವಾರ ರಜೆ 9

ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ
#ಬಟ್ಟೆಅಂದರೆBSC
BSC
B.S. CHANNABASAPPA & SONS
ಸ್ಥಾಪನೆ - 1938
ಬಿ.ಎಸ್.ಚನ್ನಬಸಪ್ಪ & ಸನ್ಸ್ ದಾವಣಗೆರೆ
shop online at WWW.bscfashion.com
88804 33000

SSLC
Augmented Reality [AR]
One Stop Academic/ Examination Reference
ಕನ್ನಡ/ಇಂಗ್ಲೀಷ್ ಮಾಧ್ಯಮ
ZEN
EXPLORER BOOKS
Available in all Bookstores

ಒಳ ಪುಟ

ಸೇನಾ ವಾಹನದ ಮೇಲೆ ಉಗ್ರರ ದಾಳಿ: ಐವರು ಯೋಧರು ಹುತಾತ್ಮ 5B

ಚಿನಕುರಳಿ

ಪ್ರಕಾಶ್ ಶೆಟ್ಟಿ

ಚೇತರಿಸೀತೇ ಚಿತ್ರರಂಗ?

• ವಿಶಾಖ ಎನ್.

ದಾವಣಗೆರೆ: ಹತ್ತೊಂಬತ್ತು ವರ್ಷಗಳ ಹಿಂದೆ ಲೈಟ್ ಬಾಯ್ ಆಗಿ ಸಿನಿಮಾ ಕಾರ್ಮಿಕರಾದವರು ಪ್ರಕಾಶ್. ಬೆಂಗಳೂರಿನ ರಾಜ್‌ಕುಮಾರ್ ಸಮಾಧಿಗೆ ಹೊಂದಿಕೊಂಡ ಬಡಾವಣೆಯಲ್ಲಿ ತಿಂಗಳ ಹಿಂದೆ ಅವರು ಪ್ರಾವಿಷನ್ ಸ್ಟೋರ್ಸ್ ಪ್ರಾರಂಭಿಸಿದ್ದಾರೆ. ಮಗನ ಭವಿಷ್ಯಕ್ಕೆ ಅದು ದಾರಿಯಾಗಲಿ ಎನ್ನುವುದು ಅವರ ಸಂಕಲ್ಪ.

ಲಗ್ಗೆರೆಯಲ್ಲಿ ಬಾಡಿಗೆ ಕಟ್ಟಲಾಗದೇ ಮನೆ ಖಾಲಿ ಮಾಡಿ, ಹೆಂಡತಿ–ಮಕ್ಕಳನ್ನು ಹಾಸನದ ತವರಿಗೆ ಕಳುಹಿಸಿದ್ದ ಲೈಟ್ ಯೂನಿಟ್‌ನ ಪ್ರದೀಪ್ ಈಗ ಮತ್ತೆ ತಮ್ಮವರನ್ನು ಕರೆಸಿಕೊಳ್ಳುವ ಉತ್ಸಾಹದಲ್ಲಿದ್ದಾರೆ. ಕಳೆದ ಶುಕ್ರವಾರ ತೆರೆಕಂಡ 'ಟಾಮ್ ಅಂಡ್ ಜೆರ್ರಿ' ಅವರ ಕೆಲಸ ಇರುವ ಚಿತ್ರ.

ದಾವಣಗೆರೆಯ ಪದ್ಮಾಂಜಲಿ ಚಿತ್ರಮಂದಿರದ ವ್ಯವಸ್ಥಾಪಕ ರಾಜೇಂದ್ರ ಇನ್ನು ಏಕಪರದೆಯ ಚಿತ್ರಮಂದಿರಗಳು ಮೊದಲಿನಂತೆ ಉಸಿರಾಡುವುದು ಅನುಮಾನವೆನ್ನುತ್ತಾ ನಿಡುಸುಯ್ದರು.

ಈ ಚದುರಿದ ವಾಸ್ತವಗಳನ್ನೆಲ್ಲ ಜೋಡಿಸಿಕೊಂಡರೆ, ಕನ್ನಡ ಚಿತ್ರೋದ್ಯಮದ ಏದುಸಿರು ಕಿವಿಯೊಳಗೆ ಇಳಿದೀತು.

'ಸಲಗ', 'ಕೋಟಿಗೊಬ್ಬ 3' ತರಹದ ದೊಡ್ಡ ಕನ್ನಡ ಚಿತ್ರಗಳು ಆಯುಧ ಪೂಜೆಯ ಹೊತ್ತಿನಲ್ಲಿ ಚಿತ್ರರಂಗಕ್ಕೆ ಜೀವಾನಿಲವಾದಾವು ಎಂಬ ನಂಬಿಕೆ ಇತ್ತು. ಅದು ಪೂರ್ಣಪ್ರಮಾಣದಲ್ಲಿ ಕೈಗೂಡಲಿಲ್ಲ.

'ದುನಿಯಾ ವಿಜಿ ಸಿನಿಮಾಗೆ ಫ್ಯಾಮಿಲಿ ಆಡಿಯೆನ್ಸ್ ಇಲ್ಲ. ಪಡ್ಡೆಗಳು ನೋಡುವ ಹಿಂದೆ, ಡಬ್ಬಲ್ ಮೀನಿಂಗ್ ಮಾತಿನ ಚಿತ್ರ ಅದು. ಹೀಗಾಗಿ ಅದರ ಕಲೆಕ್ಷನ್ ನೋಡಿಕೊಂಡು ಚಿತ್ರರಂಗದ ಭವಿಷ್ಯ ನಿರ್ಧರಿಸಲು ಆಗದು. ಸುದೀಪ್ ಅಭಿನಯದ 'ಕೋಟಿಗೊಬ್ಬ 3' ಕುರಿತು ನಿರೀಕ್ಷೆ ಇತ್ತು. ಅದೂ ಹುಸಿಯಾಯಿತು' ಎನ್ನುತ್ತಾರೆ ಪದ್ಮಾಂಜಲಿ ಚಿತ್ರಮಂದಿರದ ರಾಜೇಂದ್ರ.

ರಜನೀಕಾಂತ್ ನಟಿಸಿದ 'ಅಣ್ಣಾತ್ತೆ' ಚಿತ್ರ ಇತ್ತೀಚೆಗೆ ತೆರೆಕಂಡಿತು. ಬಿಡುಗಡೆಯ ದಿನ ಮೊದಲ ಪ್ರದರ್ಶನಕ್ಕೆ ದಾವಣಗೆರೆಯ ಚಿತ್ರಮಂದಿರಕ್ಕೆ ಹತ್ತು ಹನ್ನೆರಡು ಪ್ರೇಕ್ಷಕರು ಬಂದದ್ದನ್ನು ಕಂಡು ಅವರು ದಂಗಾದರು. 'ಸ್ಟಾರ್ ನಟನ ಚಿತ್ರಕ್ಕೆ ಇಷ್ಟು ನೀರಸ ಪ್ರತಿಕ್ರಿಯೆ ಇರುತ್ತಿರಲಿಲ್ಲ. ಜನರಿಗೆ ಮನೆಯಲ್ಲೇ ಸಿಗುವ ಮನರಂಜನೆ ಈಗ ಸಾಕೆನಿಸುತ್ತಿದೆಯೋ ಏನೋ' ಎಂದು ಇನ್ನೊಂದು ಪ್ರಶ್ನೆಯನ್ನು ರಾಜೇಂದ್ರ ಹಾಕಿದರು.

6ನೇ ಪುಟ ನೋಡಿ

ಒಳನೋಟ
ಸಿನಿಮಾ ಸಂಕಷ್ಟ
ಪ್ರತಿಕ್ರಿಯಿಸಿ: 9606038256
feedback@prajavani.co.in

ಸ್ಟಾರ್ ನಟರು ವರ್ಷಕ್ಕೆ ಮೂರ್ನಾಲ್ಕು ಸಿನಿಮಾಗಳನ್ನಾದರೂ ಮಾಡಿದರಷ್ಟೇ ಉದ್ಯಮಕ್ಕೆ ಉಳಿಗಾಲ ಎಂದು, ಈಗಿನ ನಟರನ್ನು ಉದ್ದೇಶಿಸಿ ಅಂಬರೀಷ್ ಹೇಳಿದ್ದರು. ಅದು ಜಾರಿಗೆ ಬರಬೇಕಷ್ಟೆ
ರಾಜೇಂದ್ರ, ದಾವಣಗೆರೆ ಪದ್ಮಾಂಜಲಿ ಚಿತ್ರಮಂದಿರದ ವ್ಯವಸ್ಥಾಪಕ

ಸಿನಿಮಾ ಕಾರ್ಮಿಕರಲ್ಲಿ ಎಷ್ಟೋ ಜನ ತರಕಾರಿ ಮಾರುತ್ತಿದ್ದಾರೆ. ಕೋವಿಡ್‌ನಿಂದಾಗಿ, ಚಿತ್ರರಂಗದ ಮೇಲೆ ಕವಿದ ಮೋಡ ಕರಗಲು ಇನ್ನೂ ಒಂದೂವರೆ ವರ್ಷ ಬೇಕು
ಸಾ.ರಾ. ಗೋವಿಂದು, ಕರ್ನಾಟಕ ಚಲನಚಿತ್ರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ

ಇನ್ನಷ್ಟು ಸುದ್ದಿಗಳು 6

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಶನಿವಾರ ರಾತ್ರಿ ತುರ್ತು ಸಭೆ

'ಕ್ರಿಪ್ಟೋ' ನಿಯಂತ್ರಣಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಟ್ ಕಾಯಿನ್ ಒಳಗೊಂಡ ಕ್ರಿಪ್ಟೋ ಕರೆನ್ಸಿಯ ಹೂಡಿಕೆಯ ಮೇಲಿನ ಭಾರಿ ಆದಾಯದ 'ಭರವಸೆ' ಕುರಿತ ಆತಂಕ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಎರಡನೇ ಶನಿವಾರದ ರಜಾ ದಿನವಾದರೂ ರಾತ್ರಿ ತುರ್ತು ಸಭೆ ನಡೆದಿದೆ.

ಕರ್ನಾಟಕದಲ್ಲಿ ಬಹು ಕೋಟಿ ಮೌಲ್ಯದ ಬಿಟ್ ಕಾಯಿನ್ ಹಗರಣದ ತನಿಖಾಧಿಕಾರಿಗಳಿಂದ ಸಮಗ್ರ ಮಾಹಿತಿ ಕಲೆ ಹಾಕಿರುವ ಹಣಕಾಸು ಮತ್ತು ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ)ನ ಮುಖ್ಯಸ್ಥರು ಸಭೆಯಲ್ಲಿ ಪಾಲ್ಗೊಂಡಿದ್ದು ಕುತೂಹಲ ಕೆರಳಿಸಿದೆ.

ರಾಜ್ಯದಲ್ಲಿ ಬೆಳಕಿಗೆ ಬಂದ ಹಗರಣದ ತನಿಖೆ ನಡೆಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಹಾಗೂ ಕೇಂದ್ರೀಯ ಗುಪ್ತದಳದ ಅಧಿಕಾರಿಗಳು ಕ್ರಿಪ್ಟೋ ಕರೆನ್ಸಿಯಿಂದ ಎದುರಾಗಬಹುದಾದ ಸಮಸ್ಯೆಗಳ ಕುರಿತು ಸಭೆಗೆ ವಿವರ ನೀಡಿದರು.

ಕಳೆದ ಒಂದು ವಾರದಿಂದ ಬಿಟ್ ಕಾಯಿನ್ ಹಗರಣ ಕುರಿತು ತನಿಖಾ ಸಂಸ್ಥೆಗಳ ಸಿಬ್ಬಂದಿ ರಾಜ್ಯಕ್ಕೆ ಭೇಟಿ ನೀಡಿ ಸಮಗ್ರ ಮಾಹಿತಿ ಸಂಗ್ರಹಿಸಿರುವ ಹಿನ್ನೆಲೆಯಲ್ಲಿ ಈ ತುರ್ತು ಸಭೆಯನ್ನು ಆಯೋಜಿಸಲಾಗಿತ್ತು ಎಂದು ಪ್ರಧಾನಿ ಕಚೇರಿಯ ಮೂಲಗಳು ತಿಳಿಸಿವೆ.

ಕ್ರಿಪ್ಟೋ ಕರೆನ್ಸಿಯ ಬಳಕೆಯ ಮಾದರಿ ಹಾಗೂ ಇದರಿಂದ ಜಾಗತಿಕವಾಗಿ ಎದುರಾಗಿರುವ ಪರಿಣಾಮಗಳ ಕುರಿತು ಆರ್‌ಬಿಐ, ಹಣಕಾಸು ಸಚಿವಾಲಯ, ಗೃಹ ಸಚಿವಾಲಯಗಳು ಪ್ರಮುಖ ದೇಶಗಳ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಸಂಗ್ರಹಿಸಿರುವ ಸಮಗ್ರ ಮಾಹಿತಿಯನ್ನೂ ಸಭೆಯಲ್ಲಿ ವಿನಿಮಯ ಮಾಡಿಕೊಂಡರು.

ಕ್ರಿಪ್ಟೋ ಕರೆನ್ಸಿಯಿಂದ ದಿಢೀರ್ ಲಾಭ ದೊರೆಯಲಿದೆ ಎಂದು ಅತಿಯಾದ 'ಭರವಸೆ' ನೀಡುವ ಹಾಗೂ ಪಾರದರ್ಶಕವಲ್ಲದ ಜಾಹೀರಾತಿನ ಮೂಲಕ ಯುವ ಜನರ ದಾರಿ ತಪ್ಪಿಸುವ ಪ್ರಯತ್ನಗಳಿಗೆ ತಡೆಯೊಡ್ಡುವ ನಿಟ್ಟಿನಲ್ಲಿ ಕಠಿಣ ನಿಯಂತ್ರಣ ಕ್ರಮ ಕೈಗೊಳ್ಳುವ ಕುರಿತೂ ಸಭೆಯಲ್ಲಿ ಚರ್ಚಿಸಲಾಗಿದೆ.

ಕ್ರಿಪ್ಟೋ ಕರೆನ್ಸಿಯ ಅನಿಯಂತ್ರಿತ ಮಾರುಕಟ್ಟೆಯು ಅಕ್ರಮ ಹಣ ವಿನಿಮಯ ಪ್ರಕ್ರಿಯೆಗೂ ಭಯೋತ್ಪಾದನಾ ಚಟುವಟಿಕೆಗೂ ಆರ್ಥಿಕ ನೆರವು ಒದಗಿಸುವ ಮಾರ್ಗವಾಗಲು ಅವಕಾಶ ನೀಡದಂತೆ ತಡೆಯುವ ಕ್ರಮಗಳ ಕುರಿತೂ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ನಿಯಂತ್ರಣರಹಿತವಾದ ಕ್ರಿಪ್ಟೋ ಕರೆನ್ಸಿಯ ವ್ಯವಸ್ಥಿತ ವಿನಿಮಯಕ್ಕಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ ಎಂಬ ಅಂಶದ ಕುರಿತೂ ಗಂಭೀರ ಚಿಂತನೆ ನಡೆಸುವ ಅಗತ್ಯವಿದ್ದು, ನಿಗಾ ವಹಿಸುವ ಇಂಗಿತವನ್ನೂ ಪ್ರಧಾನಿ ವ್ಯಕ್ತಪಡಿಸಿದರು.

ಪೊಲೀಸ್ 'ವ್ಯಾಲೆಟ್' ಮಾಹಿತಿ ನಿಗೂಢ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಬಳಿ ಬಿಟ್ ಕಾಯಿನ್‌ಗಳಿವೆ ಎಂಬುದನ್ನು ಖಚಿತಪಡಿಸಿಕೊಂಡಿದ್ದ ಬೆಂಗಳೂರು ನಗರ ಪೊಲೀಸರು, ಅವುಗಳನ್ನು ವಶಪಡಿಸಿಕೊಳ್ಳಲು ಕರ್ನಾಟಕದ ಗೃಹ ಇಲಾಖೆಯ ಅನುಮತಿ ಪಡೆದು ಡಿಜಿಟಲ್ ವ್ಯಾಲೆಟ್ ಮತ್ತು ಬ್ಯಾಂಕ್ ಖಾತೆ ತೆರೆದಿದ್ದರು. ಆದರೆ, ಅವುಗಳಲ್ಲಿ ನಡೆದಿರುವ ವಹಿವಾಟಿನ ವಿವರ ಮಾತ್ರ ನಿಗೂಢವಾಗಿಯೇ ಉಳಿದಿದೆ.

ಶ್ರೀಕಿ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಶ್ರೀಕಿ ಮತ್ತು ಇತರರ ವಿರುದ್ಧ 2020ರ ನವೆಂಬರ್ 27ರಂದು ದಾಖಲಿಸಿದ್ದ ಪ್ರಕರಣದ (ಎಫ್‌ಐಆರ್ ಸಂಖ್ಯೆ–153/2020) ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು, ಆರೋಪಿಯ ಡಿಜಿಟಲ್ ವ್ಯಾಲೆಟ್‌ನಲ್ಲಿ ಬಿಟ್‌ಕಾಯಿನ್‌ಗಳು ಇರುವುದನ್ನು ಪತ್ತೆಹಚ್ಚಿದ್ದರು. ಆರೋಪಿ ಬಳಿ ಇದ್ದ ಬಿಟ್‌ಕಾಯಿನ್ ಮತ್ತು ಇತರ ಕ್ರಿಪ್ಟೋ ಕರೆನ್ಸಿಗಳನ್ನು ವಶಕ್ಕೆ ಪಡೆಯಲು ಪ್ರತ್ಯೇಕ ಡಿಜಿಟಲ್ ವ್ಯಾಲೆಟ್ ಮತ್ತು ಬ್ಯಾಂಕ್ ಖಾತೆ ತೆರೆಯಬೇಕು ಎಂದು ಸೈಬರ್ ತಂತ್ರಜ್ಞರು ಸಲಹೆ ನೀಡಿದ್ದರು.

8ನೇ ಪುಟ ನೋಡಿ

> ಬಿಟ್‌ಕಾಯಿನ್ ಹಗರಣ ದೊಡ್ಡದು. ಆದರೆ ಅದನ್ನು ಮುಚ್ಚಿಹಾಕುವುದು ಇನ್ನೂ ದೊಡ್ಡ ಹಗರಣ. ಈ ಮೂಲಕ ಯಾರದ್ದೋ ಹುಸಿ ಅಹಂಕಾರವನ್ನು ರಕ್ಷಿಸಲಾಗುತ್ತಿದೆ
> **ರಾಹುಲ್ ಗಾಂಧಿ**
> ಕಾಂಗ್ರೆಸ್ ನಾಯಕ

Colgate
Toothpaste for the Oral Health of DIABETICS

ವಿಶ್ವ ಮಧುಮೇಹ ದಿನದಂದು,
ಎಕ್ಸ್‌ಪರ್ಟ್ ಓರಲ್ ಕೇರ್ ನಿಮ್ಮದಾಗಿಸಿ.

ಯಾಕೇ ?*
ಅಧಿಕ ರಕ್ತದಲ್ಲಿನ ಸಕ್ಕರೆಯ ಕಾರಣದಿಂದಾಗಿ, ನಿಮ್ಮ ಒಸಡುಗಳು ಹೆಚ್ಚು ಬ್ಯಾಕ್ಟೀರಿಯಾವನ್ನು ಆಕರ್ಷಿಸುತ್ತವೆ, ಸೋಂಕಿನ ಅಪಾಯವನ್ನು 3 ಪಟ್ಟು ಹೆಚ್ಚಿಸುತ್ತದೆ.
ಒಸಡು ಸೋಂಕುಗಳು ರಕ್ತದಲ್ಲಿನ ಸಕ್ಕರೆಯ ಹೆಚ್ಚಳಕ್ಕೆ ಕಾರಣವಾಗಬಹುದು, ಮಧುಮೇಹ ನಿರ್ವಹಣೆಯನ್ನು ಕಷ್ಟಕರವಾಗಿಸುತ್ತದೆ.

ಮಧುಮೇಹಿಗಳ ಬಾಯಿಯ ಆರೋಗ್ಯಕ್ಕಾಗಿ ಕೋಲ್ಗೇಟ್ ಟೂಥ್‌ಪೇಸ್ಟ್ ಅನ್ನು ಮಧುಮೇಹ ಎಕ್ಸ್‌ಪರ್ಟ್‌ರಿಂದ ತಯಾರಿಸಲಾಗಿದೆ ಮತ್ತು ಇದು ಜಾಮುನ್ (ಜಂಬುನೇರಳೆ)ಬೀಜದ ಸಾರಗಳು, ಕಹಿಬೇವು ಮತ್ತು ಮಧುನಾಶಿನಿಯೊಂದಿಗೆ ಪ್ರಬಲ ಆಯುರ್ವೇದ ಫಾರ್ಮುಲಾವನ್ನು ಹೊಂದಿದೆ. ಅದು ಎನೆರೋಬಿಕ್ (ಆಮ್ಲಜನಕ ರಹಿತ)ಬ್ಯಾಕ್ಟೀರಿಯಾವನ್ನು ಕೊಲ್ಲುತ್ತದೆ. ಮತ್ತು ಒಸಡಿನ ಸೊಂಕನ್ನು ಕಮ್ಮಿಯಾಗಿಸುತ್ತದೆ ^. ಮಧುಮೇಹಿಗಳ ಬಾಯಿಯ ಆರೋಗ್ಯಕ್ಕಾಗಿ ಕೋಲ್ಗೇಟ್ ಟೂಥ್‌ಪೇಸ್ಟ್ ಅನ್ನು ಮಧುಮೇಹ ನಿರ್ವಹಣೆಯ ರೂಟೀನ್‌ನ್ನಾಗಿ ಮಾಡಿ ಇಂದೇ.

ಇಲ್ಲಿ ಸ್ಕ್ಯಾನ್ ಮಾಡಿ ಮತ್ತು ಸೇವ್ ಮಾಡಿ
amazon.in
ಅಥವಾ ಬೆಂಗಳೂರಿನ ಹತ್ತಿರದ ಕೆಮಿಸ್ಟ್‌ನಿಂದ ಖರೀದಿಸಿ

^ಜಿಂಗೈವಿಟೀಸ್ ಅನ್ನು ಸೂಚಿಸುತ್ತದೆ
+ಈ ಟೂಥ್‌ಪೇಸ್ಟ್ ಮಧುಮೇಹ ಇರುವವರ ಬಾಯಿಯ ಆರೈಕೆಗಾಗಿ ಮತ್ತು ಪ್ರಮಾಣಿತ ಮಧುಮೇಹ ವಿರೋಧಿ ಚಿಕಿತ್ಸೆಗೆ ಬದಲಿಗಾಗಿ ಅಲ್ಲ. ಮಧುಮೇಹದ ನಿರ್ವಹಣೆಗಾಗಿ ದಯವಿಟ್ಟು ನಿಮ್ಮ ವೈದ್ಯರನ್ನು ಸಂಪರ್ಕಿಸಿ.
*ಉಲ್ಲೇಖ: ಕ್ಯಾಸನೋವಾ, ಎಲ್, ಹ್ಯೂಸ್, ಎಫ್ ಮತ್ತು ಪ್ರೆಶಾ, ಪಿ. ಮಧುಮೇಹ ಮತ್ತು ಪೆರಿಡೆಂಟಲ್ ಕಾಯಿಲೆ. ಬಿಡಿಜೆ ಟೀಮ್ 1, 15007 (2015).

Prestige GROUP
Add Prestige to your life

ಇವುಗಳ ಹತ್ತಿರಕ್ಕೆ ಸರಿಯಿರಿ To
ಕೆಲಸ | ಫಿಟ್ನೆಸ್ | ಮನರಂಜನೆ | ಮಾರುಕಟ್ಟೆ | ಆರೋಗ್ಯ | ಶಿಕ್ಷಣ

2950+ ಸುಖಿ ಕುಟುಂಬಗಳ ಸಮುದಾಯಕ್ಕೆ ಸೇರಿ

- ಈ ಯೋಜನೆಯ ಪಕ್ಕದಲ್ಲಿಯೇ ಮೆಟ್ರೋ ನಿಲ್ದಾಣವಿದೆ
- 32 ಎಕರೆಯಲ್ಲಿ ಹರಡಿಕೊಂಡಿದೆ
- 30+ ಸೌಕರ್ಯಗಳೊಂದಿಗೆ ಕ್ಲಬ್ ಹೌಸ್
- ಹಂತ 2: ಡಿಸೆಂಬರ್ 2022

PRESTIGE JINDAL CITY
MARK OF GREAT LIVING
ತುಮಕೂರು ರಸ್ತೆ

1, 2, 3 & 4 BHKs ಬೆಲೆ ರೂ.45 ಲಕ್ಷದಿಂದ ಪ್ರಾರಂಭವಾಗುತ್ತದೆ**
Phase 1 ready to occupy
Call: 84950 84950
www.prestigeconstructions.com
A Prestige Group & SR Jindal Group Joint Venture
**Taxes/additional cost are extra.
Please refer to the brochure for the carpet area.
MEMBER OF CREDAI
*T&C Apply

ಪಿಇಎಸ್ ವಿಶ್ವವಿದ್ಯಾಲಯ 6ನೇ ಘಟಿಕೋತ್ಸವ ನಾಳೆ: ದೊರೆಸ್ವಾಮಿ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವವನ್ನು ಇದೇ 15ರಂದು ಬೆಳಿಗ್ಗೆ 11.30ಕ್ಕೆ ಸಂಸ್ಥೆಯ ಪ್ರೊ.ಎಂ.ಆರ್.ಡಿ ಕಟ್ಟಡದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗೌರವ ಫಲಕ ಅನಾವರಣ ಮಾಡಲಿದ್ದಾರೆ. ಸಹಕುಲಾಧಿಪತಿ ಪ್ರೊ. ಡಿ.ಜವಾಹರ್ ಅವರು ಘಟಿಕೋತ್ಸವದ ಪ್ರಮಾಣ ವಚನ ಬೋಧಿಸಲಿದ್ದಾರೆ. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ತೋಟಗಾರಿಕೆ ಸಚಿವ ಮುನಿರತ್ನ ಪಾಲ್ಗೊಳ್ಳಲಿದ್ದಾರೆ.

ಈ ಬಾರಿ 2,249 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರಗಳನ್ನು ಸ್ವೀಕರಿಸಲಿದ್ದಾರೆ. ಘಟಿಕೋತ್ಸವದಲ್ಲಿ ಐವರಿಗೆ ಪಿಎಚ್.ಡಿ ಮತ್ತು ಒಬ್ಬರಿಗೆ ಎಂ.ಟೆಕ್ (ಸಂಶೋಧನೆ) ಪದವಿ ಹಾಗೂ ಅಧಿಕ ಅಂಕಗಳಿಸಿದ 22 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು 59 ವಿದ್ಯಾರ್ಥಿಗಳಿಗೆ ಬೆಳ್ಳಿ ಪದಕ ಪ್ರದಾನ ಮಾಡಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.



ದೊರೆಸ್ವಾಮಿ

ಪಿಇಎಸ್ ವಿಶ್ವವಿದ್ಯಾಲಯವು 'ಎಂ.ಟೆಕ್ ಇನ್ ಸಾಫ್ಟ್‌ವೇರ್ ಡೆವಲಪ್‌ಮೆಂಟ್' ಮತ್ತು ಎಂ.ಟೆಕ್ ಇನ್ ಇನ್ಫರ್ಮೇಷನ್ ಸೆಕ್ಯೂರಿಟಿ' ಮತ್ತು ಎಕ್ಸಿಕ್ಯೂಟಿವ್ ಎಂಬಿಎ ಕೋರ್ಸ್‌ಗಳನ್ನು 2021–22ನೇ ಶೈಕ್ಷಣಿಕ ವರ್ಷದಲ್ಲಿ ಆರಂಭಿಸಲಿದೆ ಎಂದು ತಿಳಿಸಿದರು.

ಉದ್ಯೋಗ ಆಯ್ಕೆಗಾಗಿ ಕ್ಯಾಂಪಸ್‌ನಲ್ಲೇ ನಡೆಸುವ ಸಂದರ್ಶನಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. 2021ರಲ್ಲಿ 179 ಕಂಪನಿಗಳು ಭೇಟಿ ನೀಡಿ ಬಿ.ಟೆಕ್ ಪದವಿ ಪಡೆದ ವಿದ್ಯಾರ್ಥಿಗಳನ್ನು ನೇಮಿಸಿಕೊಂಡಿವೆ. ಕೆಲವು ವಿದ್ಯಾರ್ಥಿಗಳು ವರ್ಷಕ್ಕೆ ಗರಿಷ್ಠ ₹43 ಲಕ್ಷದಷ್ಟು ವೇತನ ಪಡೆದಿದ್ದಾರೆ. 2022ರಲ್ಲಿ 114 ಕಂಪನಿಗಳು ಭೇಟಿ ನೀಡಿವೆ. ಬಿ.ಟೆಕ್ ಪದವಿಧರರು ವರ್ಷಕ್ಕೆ ಗರಿಷ್ಠ 40 ಲಕ್ಷದ ಪ್ಯಾಕೇಜ್ ಪಡೆದಿದ್ದಾರೆ. 2021ರಲ್ಲಿ ಎಂಬಿಎ ವ್ಯಾಸಂಗ ಮಾಡುತ್ತಿದ್ದ 206 ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದಲ್ಲಿ ಉದ್ಯೋಗ ಪಡೆದಿದ್ದಾರೆ ಎಂದು ವಿವರಿಸಿದರು.

ಪಿಇಎಸ್ ಶಾಲೆ ದತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಇದರಡಿ ಉತ್ತರ ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳ ಮತ್ತು ಅಂಗನವಾಡಿಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ರವಾಹ ಪೀಡಿತ ಪ್ರದೇಶದ ಏಳು ಸರ್ಕಾರಿ ಶಾಲೆಗಳು ಮತ್ತು ಎರಡು ಅಂಗನವಾಡಿ ಕೇಂದ್ರಗಳನ್ನು ಪಿಇಎಸ್ ವಿಶ್ವವಿದ್ಯಾಲಯ ದತ್ತು ತೆಗೆದುಕೊಂಡಿದೆ ಎಂದು ತಿಳಿಸಿದರು.

ಕೆಎಲ್‌ಇ ಕಾಲೇಜಿನಲ್ಲಿ 'ಹನಿವೆಲ್ ಸೆಂಟರ್ ಆಫ್ ಎಕ್ಸ್‌ಲೆನ್ಸ್' ಆರಂಭ

ಬೆಂಗಳೂರು: ಭವಿಷ್ಯದ ಅಗತ್ಯಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ನಗರದ ಕೆಎಲ್‌ಇ ಸೊಸೈಟಿಯ ಪದವಿ ಕಾಲೇಜಿನಲ್ಲಿ ಐಸಿಟಿ ಅಕಾಡೆಮಿ ವತಿಯಿಂದ 'ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್' ಅನ್ನು ಆರಂಭಿಸಲಾಗಿದೆ.

ಯುವಸಬಲೀಕರಣದಆಶಯವನ್ನು ಈ ಕೇಂದ್ರವು ಹೊಂದಿದೆ. ಬಿಗ್ ಡಾಟಾ ಅನಾಲಿಟಿಕ್ಸ್, ಕೃತಕ ಬುದ್ಧಿಮತ್ತೆ (ಎಐ), ಯಂತ್ರ ಕಲಿಕೆ (ಎಂಎಲ್), ಸ್ವಯಂಚಾಲಿತ ರೊಬೋಟಿಕ್ ಪ್ರಕ್ರಿಯೆ (ಆರ್‌ಪಿಎ) ಮೊದಲಾದ ಡಿಜಿಟಲ್ ಕೌಶಲಗಳನ್ನು ಬೆಳೆಸುವುದು ಈ ಕೇಂದ್ರದ ಉದ್ದೇಶ.

ಈ ತರಬೇತಿ ಕಾರ್ಯಕ್ರಮವು 100 ಗಂಟೆಗಳ ಕಲಿಕೆಯನ್ನು ಹೊಂದಿದೆ ಮತ್ತು ವಿದ್ಯಾರ್ಥಿಗಳಿಗೆ ಹ್ಯಾಕಥಾನ್‌ಗಳು ಮತ್ತು ಯುವ ಸಬಲೀಕರಣ ಶೃಂಗಸಭೆಯಲ್ಲಿ ಭಾಗವಹಿಸಲು ಅವಕಾಶಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳಲ್ಲದೆ ನಾಲ್ವರು ಅಧ್ಯಾಪಕರಿಗೆ ಸುಧಾರಿತ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡಲಾಗುವುದು.

ಹನಿವೆಲ್ ಇಂಡಿಯಾದ ಅಧ್ಯಕ್ಷ ಆಶಿಶ್ ಗಾಯಕ್ವಾಡ್, 'ತಂತ್ರಜ್ಞಾನದ ಕಾರ್ಯಕ್ರಮಗಳು ಕೈಗೆಟಕುವಂತಿರಬೇಕು ಮತ್ತು ಸಮಾಜದ ಎಲ್ಲಾ ವರ್ಗದವರಿಗೂ ಲಭ್ಯವಾಗಬೇಕು. ಉತ್ತಮ ವೃತ್ತಿಜೀವನವನ್ನು ಮುಂದುವರಿಸಲು ಮತ್ತು ಉತ್ತಮ ಜೀವನವನ್ನು ನಿರ್ಮಿಸಲು ಎಲ್ಲರೂ ಗುಣಮಟ್ಟದ ಶಿಕ್ಷಣ ಪಡೆಯಬೇಕು. ಈ ದೃಷ್ಟಿಕೋನದಿಂದ 5 ಸಾವಿರ ಯುವಜನರಿಗೆ ಕೌಶಲವನ್ನು ಹೆಚ್ಚಿಸುವಲ್ಲಿ ಐಸಿಟಿ ಅಕಾಡೆಮಿಯೊಂದಿಗಿನ ಈ ಒಪ್ಪಂದವು ನಮಗೆ ಮಹತ್ವದ ಹೆಜ್ಜೆ' ಎಂದು ತಿಳಿಸಿದ್ದಾರೆ.

ಸರ್ಕಾರಿ ಮತ್ತು ಕಾರ್ಪೊರೇಟ್ ಉಪಕ್ರಮಗಳ ವಿಭಾಗದ ಮುಖ್ಯಸ್ಥ ಎಲ್. ಸುರೇಶ್ ಬಾಬು, 'ತಂತ್ರಜ್ಞಾನವು ಪ್ರತಿಯೊಂದು ವ್ಯವಹಾರದ ಭಾಗ. ತಂತ್ರಜ್ಞಾನ ಬೆಳೆದಂತೆ ಕೌಶಲವು ಮುಖ್ಯವಾಗುತ್ತಿದೆ' ಎಂದು ಹೇಳಿದರು.

ಕೆಎಲ್‌ಇ ಸೊಸೈಟಿಯ ಪದವಿ ಕಾಲೇಜಿನ ಪ್ರಾಂಶುಪಾಲ ಎ.ಎಸ್. ವಿಜಯ್ ಕುಮಾರ್ ಇದ್ದರು.

T&C Apply. All prices are inclusive of taxes. Offers valid only for today and till stocks last. Images used are for representative purposes only and may differ from the actual products.

ಶ್ರೀ ಸಾಯಿ ಮಹಾಗಣಪತಿ ಜ್ಯೋತಿಷ್ಯ ಕೇಂದ್ರ

ಕೇರಳದ ಸರ್ವ ಮಾಂತ್ರಿಕ ಸಿದ್ಧಿಸಾಧಕರು,
ಶ್ರೀ ಭದ್ರಕಾಳಿ ಉಪಾಸಕರು
Famous Astrologer
ದೈವಜ್ಞ ಗುರುಪ್ರಸಾದ ಜೋಶಿ

9449850111

ಫೋನಿನ ಮೂಲಕ ಅಥವಾ ನೇರವಾಗಿ ನಮ್ಮನ್ನು ಭೇಟಿ ಮಾಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಃಸಿದ್ಧ

ವಿದ್ಯೆ, ಸಿದ್ಧಿ ಸಾಧಕ, ನುಡಿದಂತೆ ನಡೆಯುತ್ತಾರೆ. ಕೇರಳ ಪದ್ಧತಿಯಲ್ಲಿ ತಾಳಗ್ರಂಥದ ಮೂಲಕ ಪುರಾತನ ಋಷಿ ಮುನಿಗಳಿಂದ ಪರಿಹಾರ ತಿಳಿಸುತ್ತಾರೆ.

ವಾಸ್ತುಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಸಂಖ್ಯಾ ಶಾಸ್ತ್ರ, ಜಾತಕ, ಭಾವಚಿತ್ರದ ಆಧಾರಿತವಾಗಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ.

ಮನೆಯಲ್ಲಿ ಅಶಾಂತಿ, ಮಾನಸಿಕ ಜಿಗುಪ್ಸೆ, ಸ್ತ್ರೀ–ಪುರುಷ ವಶೀಕರಣ, ಪ್ರೇಮ ವಿಚಾರ, ದಾಂಪತ್ಯ ಕಲಹ, ಮದುವೆ, ಸಂತಾನ, ಆರೋಗ್ಯ, ಲೈಂಗಿಕ ತೊಂದರೆ, ಹಣಕಾಸಿನ ಸಮಸ್ಯೆ, ವಿದ್ಯೆ, ಉದ್ಯೋಗ, ವ್ಯಾಪಾರ ನಷ್ಟ, ಶತ್ರುಕಾಟ, ಮಾಟ ಮಂತ್ರ, ಅತ್ತೆ–ಸೊಸೆ ಕಲಹ, ಕೋರ್ಟ್ ಕೇಸ್, ಆಸ್ತಿ ವಿಚಾರ, ಇನ್ನೂ ಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದಿದ್ದರೆ ಇನ್ನೊಬ್ಬರಲ್ಲಿ ಹೇಳಲಾಗದೆ ಕೊರಗುತ್ತಿದ್ದೀರಾ? ಚಿಂತಿಸಬೇಡಿ,

Any Problems 100% Solutions

ಸ್ಥಳ: ಕಲಾನಿಕೇತನ ಹಿಂದೆ, ಟ್ರೇಂಡ್ಸ್ ಪಕ್ಕದಲ್ಲಿ, ಜಯನಗರ, 4th ಬ್ಲಾಕ್, ಬೆಂಗಳೂರು

PUBLIC NOTICE

Public are informed that my client **Mr. Nagaraja .G,** S/o. Gangahanumaiah, No. 57, 5th Cross, 7th Main, L.N. Puram, Srirampuram, Bangalore - 560 021, hereby informs that, the Original Sale Deed dtd. 29-10-2005 bearing document No. BLN -1-12854/05-06, Sale Deed dtd. 21-05-1969 Doc. No. 575/69-70 CC of the Sale Deed dtd. 05.01.1976 Doc. No.2744/76-77, Original GPA dtd. 5-7-2002 Doc. No. 293/02-03, Original Mortgage Deed dtd. 23-10-2002 Doc. No. 15186/02-03, Original Discharge Deed 22.09.2005 and Original Sale Deed dtd. 23.10.2002 Doc. No. 15131/02-03 and other documents which have been lost/misplaced while shifting the house and is not in a position to trace the said Original documents. My client has lodged a Police Complaint in Lost Article Report dtd. 11.11.2021 No. 0087343/2021 before Crime Branch, Bengaluru City police. Any person/s in possession of the aforesaid documents may return the same to us or anyone having any sort of claim over the said property may lodge their objections in writing within **7 days** from this day to the undersigned.

Anuradha .D, Advocate
No. 48, N.S. Building, 1st Floor,
Bhuvaneshwari Nagar,
Bangalore -560 057.
Dtd. 13-11-2021. Place : Bangalore.

ಬಿಎಸ್‌6 ಬಸ್‌ಗಳನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಶನಿವಾರ ಪರಿಶೀಲಿಸಿದರು

ಬಿಎಂಟಿಸಿಗೆ ಶೀಘ್ರ 'ಬಿಎಸ್ 6' ಬಸ್‌ಗಳು

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ದೇಶದಲ್ಲೇ ಮೊಟ್ಟಮೊದಲ ಬಾರಿಗೆ 'ಬಿಎಸ್ 6' ಬಸ್‌ಗಳನ್ನು ಖರೀದಿಸಲು ಮುಂದಾಗಿದೆ. ಈ ಬಸ್‌ಗಳು ಅತೀ ಶೀಘ್ರ ಸಂಸ್ಥೆಗೆ ಸೇರ್ಪಡೆಯಾಗಲಿವೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಹಾಗೂ ಹಿರಿಯ ಅಧಿಕಾರಿಗಳು ಶನಿವಾರ 'ಬಿಎಸ್ 6' ಬಸ್‌ಗಳ ಪರಿಶೀಲನೆ ನಡೆಸಿದರು. ಬಿಎಂಟಿಸಿಯು 'ಬಿಎಸ್ 6' ಮಾದರಿಯ ಒಟ್ಟು 565 ಬಸ್‌ಗಳನ್ನು ಅಶೋಕ್ ಲೇಲ್ಯಾಂಡ್ ಕಂಪನಿಯಿಂದ ಖರೀದಿಸಲು ಕಾರ್ಯಾದೇಶ ನೀಡಿದೆ. ಈ ಎಲ್ಲ ಬಸ್‌ಗಳನ್ನು 2022ರ ಫೆಬ್ರುವರಿ ಒಳಗಾಗಿ ಕಂಪನಿಯು ಪೂರೈಸಲಿದೆ.

ಈ ಬಸ್‌ಗಳನ್ನು 2017-18ರಲ್ಲಿ ಬಸ್‌ಗಳ ಖರೀದಿಗಾಗಿಯೇ ಮೀಸಲಿಟ್ಟಿರುವ ಹಣದಿಂದ ಖರೀದಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೈಶಿಷ್ಟ್ಯಗಳು: ಬಿಎಸ್6 ವಾಹನಗಳು ಪರಿಸರ ಸ್ನೇಹಿಯಾಗಿವೆ. ಇವುಗಳು ವಾತಾವರಣದಲ್ಲಿ ಮಾಲಿನ್ಯ ಉಂಟು ಮಾಡುವುದಿಲ್ಲ. ಇವುಗಳ ಎಂಜಿನ್ ಸಾಮರ್ಥ್ಯ (197ಎಚ್‌ಪಿ) ಬಿಎಸ್4 ವಾಹನಗಳಿಗಿಂತ ಅಧಿಕ. ಬೆಂಕಿ ಅವಘಡಗಳ ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆಯನ್ನು ಈ ಬಸ್‌ಗಳಲ್ಲಿ ಅಳವಡಿಸಲಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎ/ಸಿಎನ್/ಬಿಎನ್‌ಸಿ/45/2021
ದಿನಾಂಕ : 09–11–2021
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ವಿವರ	ಅಂದಾಜು ಮೌಲ್ಯ
ತುಮಕೂರು – ರಾಯದುರ್ಗ ಹೊಸ ಬಿಜಿ ಮಾರ್ಗ ಯೋಜನೆ : ಕೊರಟಗೆರೆಯಿಂದ ಮಧುಗಿರಿ ಸೆಕ್ಷನ್‌ನ ಕಿ.ಮೀ.34/000 ರಿಂದ 49/400 ಮತ್ತು ಮಧುಗಿರಿಯಿಂದ ಮಡಕಶಿರಾ ಸೆಕ್ಷನ್‌ನ ಕಿ.ಮೀ.51/300 ರಿಂದ 78/200ವರೆಗೆ ಸೇತುವೆಗಳಿಗಾಗಿ ಬೃಹತ್ ಮತ್ತು ಚಿಕ್ಕ ಸೇತುವೆಗಳಿಗಾಗಿ ನೀರಿನ ಮಾರ್ಗಗಳ ಲೆಕ್ಕಾಚಾರಗಳ ತಯಾರಿಕೆ ಮತ್ತು ಸಲ್ಲಿಸುವುದು, ರೈಲ್ವೆ ಮೇಲ್ಸೇತುವೆ, ಕೆಳಸೇತುವೆ, ಬೃಹತ್ ಮತ್ತು ಚಿಕ್ಕ ಸೇತುವೆಗಳಿಗಾಗಿ ಜಿಎಡಿಗಳು, ಮಣ್ಣಿನ ಪರಿಶೋಧನೆ, ಅಂತಿಮ ವರದಿಯ ತಯಾರಿಕೆ ಮತ್ತು ಸಲ್ಲಿಸುವುದು. **(ಟಿಕೆ–ಆರ್‌ಡಿಜಿ/85)**	**ರೂ. 1,12,00,048/–**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01–12–2021 ರಂದು 11.00 ಗಂಟೆಯವರೆಗೆ**

ಹೆಚ್ಚಿನ ವಿವರಗಳಿಗಾಗಿ **www.ireps.gov.in** ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ಕಾಮಗಾರಿಗಳು / ನಿರ್ಮಾಣ
ಬೆಂಗಳೂರು ದಂಡು
ಪಿಯುಬಿ/278/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

S.W.Railways SWRRLY SWRRLY

PUBLIC NOTICE

Public are hereby informed that my client has entered into an agreement to purchase property described in Schedule below from **Mr. Gururaj N. Havanur,** who has represented that he is the absolute owner in possession and that the property is free from any encumbrance/s, charge/s, claim/s, demand/s or litigation/s.

Person/s claiming any right, title or interest in or upon the Schedule Property and / or having any objection to the sale transaction, may lodge their objection/s supported by documents with the undersigned within **Fifteen (15) days** from the date of publication of this notice. If no objection/s is/are received within the said period, my client will go ahead with the transaction deeming that there is / are no claim/s or objection/s to the same.

SCHEDULE

All that piece and parcel of **Site bearing No.626, having new Municipal Katha No.324 measuring East to West (71.5+17)/2 ft. and North to South (84+100)/2 ft. (4070 Sq.ft.)** in Vinayaka Layout formed by Sri Vinayaka House Building Co-operative Society Ltd., out of land in Sy. Nos. 17, 18/1 to 6, 20, 23, 30, 31, 32, 36/1, 37, 64, 1, 96, 97, 98, 112 (19), 135 to 137 of **Nagarabhavi Village, Yeshwanthapura Hobli, Bengaluru North Taluk, Bengaluru District** coming under the Jurisdiction of BBMP and bounded on:

East by : Site No.626 A
West by : Road
North by : Site No.627
South by : Road

together with building comprising basement, ground and four upper floors.

Ms. Smita Singh, Advocate,
827, 12th Main, IV Block,
HBR Layout, Bengaluru - 560 043,
Email: smitasinghadvocate@gmail.com
Place : Bangalore Date : 14.11.2021

ಚನ್ನವೀರಯ್ಯ ನಿಧನ

ಚನ್ನವೀರಯ್ಯ

ಬೆಂಗಳೂರು: ಸಾರಕ್ಕಿ ಸರ್ಕಾರಿ ಪ್ರೌಢಶಾಲೆ ರಸ್ತೆಯ ನಿವಾಸಿ ಚನ್ನವೀರಯ್ಯ (67) ಅನಾರೋಗ್ಯದಿಂದ ಶುಕ್ರವಾರ ನಿಧನರಾಗಿದ್ದಾರೆ.

ಚನ್ನವೀರಯ್ಯನವರು ಜೆ.ಪಿ. ನಗರದಲ್ಲಿ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಮಗ ರಾಕೇಶ್ ಇದ್ದಾರೆ. ಅಂತ್ಯಕ್ರಿಯೆಯನ್ನು ಬನಶಂಕರಿಯ ಚಿತಾಗಾರದಲ್ಲಿ ಶನಿವಾರ ನೆರವೇರಿಸಲಾಯಿತು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com, www.teamleasegroup.com

30ನೇ ಸೆಪ್ಟೆಂಬರ್ 2021ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಡೀಕೃತ	
	30.09.2021ಕ್ಕೆ ಕೊನೆಯಾದ 3 ತಿಂಗಳಿಗೆ	30.09.2020ಕ್ಕೆ ಕೊನೆಯಾದ 3 ತಿಂಗಳಿಗೆ	30.09.2021ಕ್ಕೆ ಕೊನೆಯಾದ 3 ತಿಂಗಳಿಗೆ	30.09.2020ಕ್ಕೆ ಕೊನೆಯಾದ 3 ತಿಂಗಳಿಗೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	133,315.25	102,859.01	152,355.65	112,906.36
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಐಟಂಗಳು)	2,285.68	2,315.88	2,703.26	2,396.82
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಐಟಂಗಳ ನಂತರ)	(5,291.22)	2,077.80	(4,933.56)	1,861.38
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	(5,287.82)	2,089.70	(4,956.25)	1,889.17
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಶೀಟ್ ಪ್ರಕಾರ	63,728.97	55,169.95	63,492.89	55,499.15
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	(30.95)	12.15	(28.94)	10.89
(ಬಿ) ಡೈಲ್ಯೂಟೆಡ್ (ರೂ.)	(30.95)	12.15	(28.94)	10.89

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 30ನೇ ಸೆಪ್ಟೆಂಬರ್, 2021ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (www.teamleasegroup.com) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 30ನೇ ಸೆಪ್ಟೆಂಬರ್, 2021ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಳಿಯು 12ನೇ ನವೆಂಬರ್, 2021ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 12ನೇ ನವೆಂಬರ್, 2021
ಸ್ಥಳ: ಬೆಂಗಳೂರು

PUBLIC NOTICE

ನಮ್ಮ ಕಕ್ಷಿದಾರರು ಬೆಂಗಳೂರಿನ ಜೆಪಿ ನಗರ ವಾರ್ಡ್ ನಂ. 57ರ ಜೆಪಿ ನಗರ 2ನೇ ಹಂತದ 24ನೇ ಮುಖ್ಯರಸ್ತೆ, ಮುನಿಸಿಪಲ್ ನಂ. 829/1, 829/2, 830/831 ಮತ್ತು 832ರಲ್ಲಿರುವ ಒಟ್ಟು 38,036.97 ಚದರ ಅಡಿ ವಿಸ್ತೀರ್ಣವುಳ್ಳ ಷೆಡ್ಯೂಲ್‌ನಲ್ಲಿ ಸಂಖ್ಯೆ 1 ರಿಂದ 4ರ ವರೆಗೆ ನಮೂದಿಸಿರುವ ಮತ್ತು ಇನ್ನುಮುಂದೆ **ಷೆಡ್ಯೂಲ್ ಪ್ರಾಪರ್ಟಿ** ಎಂದು ಕರೆಯಲ್ಪಡುವ ಸ್ವತ್ತನ್ನು ಸಂಖ್ಯೆ 4ರ ಮಾಲೀಕರು ಹಾಗೂ ಕ್ರಮ ಸಂಖ್ಯೆ 1 ರಿಂದ 3ರವರೆಗೆ ಅಗ್ರಿಮೆಂಟ್ ಹೊಂದಿರುವ ನಂ. 12, 24ನೇ ಮುಖ್ಯರಸ್ತೆ, ಜೆಪಿ ನಗರ 1ನೇ ಫೇಸ್, ಬೆಂಗಳೂರು–560078 ವಿಳಾಸದಲ್ಲಿ ವಾಸವಿರುವ **ವಿ.ಎಸ್. ಚಂದ್ರಶೇಖರ್** ಅವರೊಡನೆ ಜಂಟಿಯಾಗಿ ಅಭಿವೃದ್ಧಿಪಡಿಸಲು ಕರಾರನ್ನು ಮಾಡಿಕೊಳ್ಳಲು ಇಚ್ಛಿಸಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಕ್ಲೈಮ್‌ಗಳನ್ನು ಹೊಂದಿದ್ದಲ್ಲಿ ಸದರಿ ಮಾಲೀಕರುಗಳ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಮಾಲೀಕರಿಂದ ನಮ್ಮ ಕಕ್ಷಿದಾರರ ಪರವಾಗಿ ಆಗುವ ವ್ಯವಹಾರದ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಯೊಡನೆ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕುಬಾಧ್ಯತೆ ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು ಮತ್ತು ಇದರಂತೆ ನಮ್ಮ ಕಕ್ಷಿದಾರರು ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಲು ಮುಂದಾಗುವರು.

ಷೆಡ್ಯೂಲ್ ಆಸ್ತಿ

ಬೆಂಗಳೂರಿನ ಜೆಪಿ ನಗರ ವಾರ್ಡ್ ನಂ. 57ರ ಜೆಪಿ ನಗರ 2ನೇ ಹಂತದ 24ನೇ ಮುಖ್ಯರಸ್ತೆ, ಮುನಿಸಿಪಲ್ ನಂ. 829/1, 829/2, 830/831 ಮತ್ತು 832ರಲ್ಲಿರುವ (ಈ ಹಿಂದೆ ಬಿಡಿಎನಿಂದ ನಿರ್ಮಾಣಗೊಂಡ ಸಾರಕ್ಕಿ 2ನೇ ಹಂತದ ವಿಸ್ತರಣೆ) ಒಟ್ಟು 38,036.97 ಚ. ಅಡಿಗಳಲ್ಲಿರುವ (3533.72 ಚ. ಮೀಟರ್‌ಗಳು) ಕಟ್ಟಡಗಳೂ ಸೇರಿದ ಕೆಳಕಂಡ ಸಂಪೂರ್ಣ ಸ್ವತ್ತುಗಳು.

ಐಟಂ ನಂ.	ಮಾಲೀಕರ ಹೆಸರು	ಮುನಿಸಿಪಲ್ ನಂ.	ಪಿಐಡಿ ನಂ.	ಒಟ್ಟು ವಿಸ್ತೀರ್ಣ ಚದರ ಅಡಿ	ಒಟ್ಟು ವಿಸ್ತೀರ್ಣ ಚದರ ಮೀಟರ್	ಚೆಕ್ಕುಬಂದಿ ಪೂರ್ವ	ಚೆಕ್ಕುಬಂದಿ ಪಶ್ಚಿಮ	ಚೆಕ್ಕುಬಂದಿ ಉತ್ತರ	ಚೆಕ್ಕುಬಂದಿ ದಕ್ಷಿಣ
1	ಪಿ. ನಟರಾಜ್ ಬಿನ್ ನಟರಾಜನ್ ಎನ್. ನಾರಾಯಣ ಬಾಬು ಎನ್. ಅರುಣ್ ಕುಮಾರ್ ಎನ್. ಸೋಮ ಸುಂದರಮ್ **ಇವರೆಲ್ಲರ ವಾಸ** ಮುನಿಸಿಪಲ್ ನಂ. 829/1, 24ನೇ ಮುಖ್ಯರಸ್ತೆ, 2ನೇ ಫೇಸ್, ಜೆಪಿ ನಗರ, ಬೆಂಗಳೂರು–78	829/1	57–83–829/1	6678.88	620.48	ಮುನಿಸಿಪಲ್ ನಂ. 841, 842 & 843.	ಮುನಿಸಿಪಲ್ ನಂ. 829/2 ಮತ್ತು ರಸ್ತೆ	ಮುನಿಸಿಪಲ್ ನಂ. 830	ಮುನಿಸಿಪಲ್ ನಂ. 832/2 ಮತ್ತು 828
2	ಎನ್. ವಚ್ಚಲ ದೇವ ಪ್ರಿಯ ಎನ್. ಗಿರಿಜ ಉಮಾಶಂಕರಿ **ಇವರೆಲ್ಲರ ವಾಸ** ಮುನಿಸಿಪಲ್ ನಂ. 829/1, 24ನೇ ಮುಖ್ಯರಸ್ತೆ, 2ನೇ ಫೇಸ್, ಜೆಪಿ ನಗರ, ಬೆಂಗಳೂರು–78	829/2	57–83–829/2	2800	260.12	ಮುನಿಸಿಪಲ್ ನಂ. 829/1	ರಸ್ತೆ	ಮುನಿಸಿಪಲ್ ನಂ. 829/1	ಮುನಿಸಿಪಲ್ ನಂ. 828
3	ಶಾಂತ ಕುಮಾರಿ ಎಂ.ಎಸ್. ಬಾಲಾಜಿ ಮತ್ತು ಇತರರು ಎಂ.ಎಸ್. ಹೇಮಂತ್ ಮತ್ತು ಇತರರು. **ಇವರೆಲ್ಲರ ವಾಸ** ಮುನಿಸಿಪಲ್ ನಂ. 832, 24ನೇ ಮುಖ್ಯರಸ್ತೆ, 2ನೇ ಫೇಸ್, ಜೆಪಿ ನಗರ, ಬೆಂಗಳೂರು–78	832	57–83–832	9518.17	884.25	ಮುನಿಸಿಪಲ್ ನಂ. 836 ಮತ್ತು 837	ರಸ್ತೆ	ಮುನಿಸಿಪಲ್ ನಂ. 833	ಮುನಿಸಿಪಲ್ ನಂ. 831
4	ವಿ.ಎಸ್. ಚಂದ್ರಶೇಖರ್ **ಇವರ ವಾಸ** ನಂ. 12, 24ನೇ ಮುಖ್ಯರಸ್ತೆ, ಜೆಪಿ ನಗರ 1ನೇ ಫೇಸ್, ಜೆಪಿ ನಗರ, ಬೆಂಗಳೂರು–78	830 / 831	57–83 – 830 / 831	19040	1768.85	ಮುನಿಸಿಪಲ್ ನಂ. 837, 838, 839, 840 ಮತ್ತು 841	ರಸ್ತೆ	ಮುನಿಸಿಪಲ್ ನಂ. 832	ಮುನಿಸಿಪಲ್ ನಂ. 829

ಸಹಿ/– (ಆರ್. ಸುನೀತಾ), ವಕೀಲರು, ಎಎಸ್‌ಎಲ್‌ಎಫ್ ಲಾ ಆಫೀಸಸ್
ನಂ. 34, 7ನೇ ಅಡ್ಡರಸ್ತೆ, ವಸಂತನಗರ ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560052, ದೂ. +91–80–42423000

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

For the Quarter and Half-year ended 30th September, 2021

(₹ in Crores except per share data)

Particulars	Quarter ended 30th September, 2021 (Unaudited)	Half year ended 30th September, 2021 (Unaudited)	Quarter ended 30th September, 2020 (Unaudited)
Total income from operations (net)	154.45	242.43	255.75
Net loss from ordinary activities after tax	(90.90)	(208.18)	(110.73)
Net loss for the period after tax (after Extraordinary items)	(90.90)	(208.18)	(110.73)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each)			
Basic :	(4.02)	(9.16)	(4.35)
Diluted :	(4.02)	(9.16)	(4.35)
Earnings Per Share (after extraordinary items) (of ₹ 10/- each)			
Basic :	(4.02)	(9.16)	(4.35)
Diluted :	(4.02)	(9.16)	(4.35)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 12th November, 2021 and have been subjected to the Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)** *(₹ in Crores)*

Particulars	Quarter ended 30th September, 2021 (Unaudited)	Half year ended 30th September, 2021 (Unaudited)	Quarter ended 30th September, 2020 (Unaudited)
Total income from operations (net)	3.99	4.92	1.77
Loss before tax and exceptional items	(18.66)	(38.47)	(19.05)
Loss profit after tax and exceptional items	(18.66)	(38.47)	(19.05)

For and behalf of Board of Directors
S.V Ranganath
Interim Chairman and Independent Director
Coffee Day Enterprises Limited

Place : Bengaluru
Date : November 12, 2021

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ
ಎಸ್.ಎಸ್.ಘಾಟಿ, ದೊಡ್ಡಬಳ್ಳಾಪುರ ತಾಲ್ಲೂಕು–561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂ: 080–29550091. ಇ–ಮೇಲ್- shrighatisubrahmanyatempleeo@gmail.com
ಎಸ್‌ಜಿಎಸ್/ಡಿವಿಎಸ್/ಸಿಆರ್ 46/2021–22 13–11–2021

"ಪತ್ರಿಕಾ ಪ್ರಕಟಣೆ"

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹದಲ್ಲಿ ಹೆಚ್ಚುವರಿಯಾಗಿರುವ ಸಂಗ್ರಹವಾಗಿರುವ ಅಕ್ಕಿ ಮತ್ತು ಬೆಲ್ಲವನ್ನು ದಿನಾಂಕ: 24–11–2021 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ದೇವಾಲಯದ ಕಲ್ಯಾಣ ಮಂಟಪದಲ್ಲಿ ಬಹಿರಂಗ ಹರಾಜು ಮೂಲಕ ವಿಲೆ ಮಾಡಲಾಗುವುದು. ಆಸಕ್ತಿಯುಳ್ಳವರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಚೇರಿಯನ್ನು ಸಂಪರ್ಕಿಸಬಹುದು.

ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ.

ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ)
(ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರ ವಿದ್ಯಾರ್ಥಿ ನಿಲಯ)
ನಂ.17, ಶೇಷಾದ್ರಿ ರಸ್ತೆ, ಬೆಂಗಳೂರು–560 009.
ದೂ : 080–22281848 / ಮೊ : 9380301904

ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಬಬ್ಬೂರುಕಮ್ಮೆ ಸೇವಾ ಸಮಿತಿಯ 2020–21ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ಸಮಿತಿಯ ಸಭಾಂಗಣದಲ್ಲಿ ದಿನಾಂಕ 21.11.2021 ರಂದು ಭಾನುವಾರ ಬೆಳಿಗ್ಗೆ 10:00 ಗಂಟೆಗೆ ಆಯೋಜಿಸಿದೆ. ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ಅಂಚೆಯ ಮೂಲಕ ಸದಸ್ಯರಿಗೆ ಕಳುಹಿಸಲಾಗಿದೆ. ಪತ್ರ ತಲುಪದೇ ಇದ್ದ ಸದಸ್ಯರು ಇದನ್ನೇ ತಿಳುವಳಿಕೆ ಪತ್ರವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ. 2020–21ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳು ಸಮಿತಿಯ ವೆಬ್‌ಸೈಟ್: **www.babboorkamme.org** ನಲ್ಲಿ ಲಭ್ಯವಿದೆ.

ಸೂಚನೆ : ಮಾಸ್ಕ್ ಕಡ್ಡಾಯವಾಗಿ ಹಾಕಿರಬೇಕು ; ಸಾಮಾಜಿಕ ಅಂತರ ಪಾಲಿಸಬೇಕು ; ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಎಂದು ವಿನಂತಿಸಲಾಗುತ್ತಿದೆ

"ಸದಸ್ಯರಿಗೆ ಮಾತ್ರ ಪ್ರವೇಶ"

ಆಡಳಿತ ಮಂಡಳಿ ಪರವಾಗಿ
ಡಾ: ಎನ್. ಸತ್ಯಪ್ರಕಾಶ್
ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 14–11–2021

PUBLIC NOTICE

Reply on behalf of **M/s NCC Urban Infrastructure Ltd (NCC Urban Mayfair, Doddaballapur Road)** to the public notice issued by one Mr. S. Venugopal, Advocate on 12/11/2021 (Times of India & Vijaya Karnataka) & on 13/11/2021 (Deccan Herald & Prajawani) concerning O.S. No. 7384/2007. The said notice is a distortion of facts and suppression of material facts. In the said notice it is stated that his clients are the owners of the land bearing Sy. No. 83 (Old Sy. No. 41) of Puttenahalli village, Yelahanka Hobli, Bangalore North Taluk, measuring 4 acres. On the other hand, a suit is filed in respect of the land bearing Sy. No. 42 alleging the incorporation of the said Survey Number in the original Sale Deed of the year 1970 was erroneous. **It is more than 50 years since the execution the Sale Deed, no rectification has been effected.** The plaintiff in O.S. No. 7384/2007 have not even sought the relief of declaration that the Sy. No. 41 has been erroneously stated as Sy. No. 42. As such it is too late in the day for them to contend that they are the owners of Sy. No. 41 when their registered documents continue to show that they are the owners of Sy. No. 42. They have filed suit in O.S. No. 7384/2007 wherein they filed applications;

IA 1: restraining the defendants therein from alienating the property;

IA 3: restraining the defendants from changing the nature of the land.

After contest the Trial Court dismissed the applications by an order dated 03/12/2007, holding they have not made out prima-facie case. The Plaintiff challenged the said order before the Hon'ble High Court of Karnataka in MFA 1149/2008 and the said appeal was withdrawn by the Plaintiff on 16/06/2009. The Hon'ble High Court of Karnataka directed the matter be disposed of expeditiously. Despite 12 years have elapsed the Plaintiff made no efforts to prosecute the suit diligently.

Later after impleading the M/s NCC Urban Infrastructure Ltd as parties, the Plaintiff herein again filed applications i.e., I.A's 16-19;

IA 16: seeking an order of Temporary Injunction restraining the Defendants from putting up further constructions on the property.

IA 18: seeking an order of Temporary Injunction against M/s NCC Urban Infrastructure Ltd restraining them from alienating the properties.

IA 19: seeking an order of Temporary Injunction against M/s NCC Urban Infrastructure Ltd restraining them from putting up any further constructions.

The Court vide order dated 27/05/2019 was pleased to reject the said applications and further directed the case be disposed of before 31/07/2019. Despite the said order the Plaintiffs have not even commenced the trial and the order dismissing their application have not been challenged before the High Court to the knowledge of our client.

The above narration of events makes it clear that they were unsuccessful in obtaining any order, as they have failed to prove prima facie case against property.

These facts are suppressed in the notice and hence the notice issued by them need not be considered by the public at large.

Mr. Manu P Kumar
Kumar & Kumar, Advocates
F-113, 3rd Floor, Central Chambers, 2nd Main, Gandhinagar, Bangalore 560009.
Ph.080 22281509

‘ಆರೋಗ್ಯ ಗ್ರಾಮ ವಾಸ್ತವ್ಯ 20ರಿಂದ’

ಡಾ. ರಾಜು ಕೃಷ್ಣಮೂರ್ತಿ

ಬೆಂಗಳೂರು: ‘ಗ್ರಾಮೀಣ ಭಾಗದ ಜನರಿಗೆ ಚಿಕಿತ್ಸೆ ಒದಗಿಸಲು ‘ಆರೋಗ್ಯ ಗ್ರಾಮ ವಾಸ್ತವ್ಯ’ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ಇದೇ 20ರಿಂದ ಗ್ರಾಮಗಳಿಗೆ ತೆರಳಲಾಗುವುದು’ ಎಂದು ವೈದ್ಯ ಡಾ. ರಾಜು ಕೃಷ್ಣಮೂರ್ತಿ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜುಸ್ ಹೆಲ್ದಿ ಇಂಡಿಯಾ ಹಾಗೂ ಶ್ರೀಸಾಯಿ ಚಾರಿಟಬಲ್ ಟ್ರಸ್ಟ್ ಜಂಟಿಯಾಗಿ ಈ ಯೋಜನೆ ರೂಪಿಸಿವೆ. ಹಳ್ಳಿಗಳು ಆರೋಗ್ಯವಾಗಿದ್ದರೆ ಇಡೀ ದೇಶ ಆರೋಗ್ಯವಾಗಿರುತ್ತದೆ. ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವೂ ಮುಖ್ಯ. ಎಲ್ಲ ಸಮಸ್ಯೆಗಳಿಗೆ ಔಷಧಗಳೇ ಪರಿಹಾರವಲ್ಲ. ವಾರಕ್ಕೆ ಎರಡು ದಿನ ಒಂದು ಗ್ರಾಮದಲ್ಲಿ ವಾಸವಿದ್ದು, ಅಲ್ಲಿನ ಜನರ ಜೀವನಶೈಲಿ, ಆರೋಗ್ಯ ಸಮಸ್ಯೆಗಳನ್ನು ಆಲಿಸಿ ಚಿಕಿತ್ಸೆ ನೀಡಲಾಗುತ್ತದೆ’ ಎಂದು ವಿವರಿಸಿದರು.

‘ತುರುವೇಕೆರೆಯ ಹಳ್ಳಿಯೊಂದರಿಂದ ಈ ಯೋಜನೆ ಪ್ರಾರಂಭಿಸಲಾಗುತ್ತದೆ. 10 ಜನರ ತಂಡ ನಮ್ಮ ಸೇವೆಗೆ ಕೈಜೋಡಿಸಿದೆ. ಶಾಲೆಗಳಿಗೂ ಭೇಟಿ ನೀಡಿ, ಆರೋಗ್ಯ ಕಾಪಾಡಿಕೊಳ್ಳಲು ಸಲಹೆಗಳನ್ನು ನೀಡಲಾಗುತ್ತದೆ’ ಎಂದು ತಿಳಿಸಿದರು.

‘ಔಷಧಗಳಿಲ್ಲದೆಯೇ ಸುತ್ತಮುತ್ತಲು ಸಿಗುವ ಮನೆ ಮದ್ದುಗಳಿಂದ ಆರೋಗ್ಯ ಸುಧಾರಿಸಿಕೊಳ್ಳುವ ಬಗ್ಗೆ ತಿಳಿಸಿಕೊಡಲಾಗುತ್ತದೆ. ಸಾಂಕ್ರಾಮಿಕ ಕಾಯಿಲೆ ನಿಯಂತ್ರಣದ ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಸಮಸ್ಯೆಗಳನ್ನು ಪಟ್ಟಿ ಮಾಡಿ, ಸಂಜೆ ಗ್ರಾಮದ ಮುಖಂಡರ ಜೊತೆಗೆ ಚರ್ಚಿಸಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಬಿ.ಎಂ.ಶ್ರೀ. ದತ್ತಿ ಪ್ರಶಸ್ತಿಗೆ ನಾಟಕ ಕೃತಿ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು 2020ನೇ ಸಾಲಿನ ಸಾರಂಗಿ ವೆಂಕಟ ರಾಮಯ್ಯ–ಪುಟ್ಟಚ್ಚಮ್ಮ ಸ್ಮಾರಕ ದತ್ತಿ ಪ್ರಶಸ್ತಿಗೆ ನಾಟಕ ಕೃತಿಗಳನ್ನು ಆಹ್ವಾನಿಸಿದೆ. ಈ ಪ್ರಶಸ್ತಿಯು ₹ 3 ಸಾವಿರ ನಗದನ್ನು ಒಳಗೊಂಡಿದೆ. 2020ರಲ್ಲಿ ಪ್ರಥಮ ಮುದ್ರಣಗೊಂಡ ಕೃತಿಗಳನ್ನು ಮಾತ್ರ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಈ ಸ್ಪರ್ಧೆಯು ಉದಯೋನ್ಮುಖ ಸಾಹಿತಿಗಳಿಗೆ ಮಾತ್ರ ಸೀಮಿತವಾಗಿದ್ದು, ಅವರು ಗರಿಷ್ಠ 2 ಕೃತಿಗಳನ್ನು ಪ್ರಕಟಿಸಿರಬೇಕು. ಮೊದಲ ಕೃತಿಗೆ ಆದ್ಯತೆ ನೀಡಲಾಗುವುದು. ಅರ್ಹರು ಕೃತಿಯ 3 ಪ್ರತಿಗಳನ್ನು ಡಿ.12ರೊಳಗೆ ಪ್ರತಿಷ್ಠಾನಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. **ಸಂಪರ್ಕ:** 080–26615877

SAINIK SCHOOL KODAGU
(Under Ministry of Defence, Govt. of India)
PO Kudige Dist: Kodagu, Karnataka PIN: 571232

WALK-IN-INTERVIEW :: PGT (CHEMISTRY)

A walk-in-interview will be conducted for the post of PGT (Chemistry) in Sainik School Kodagu on 22 November 2021 (Monday). Medium of Teaching is ENGLISH. Interested candidates are to report to the School at 0830 hrs on 22 November 2021 along with original and copies of Qualifications and Experience Certificates. The post is purely on temporary basis for a period of 45 days and will be renewed from time to time as required by the School till 31 Mar 2022. Total Salary would be Rs.1200/- per day. For detailed Notification and Application Form, visit School website **www.sainikschoolkodagu.edu.in** from 14 Nov 2021 (Sunday). The School administration reserves the right to cancel the vacancy due to administrative reasons.

PRINCIPAL

MBBS

Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB

UNIVERSITY - Founded in 1920, 101 years old, Smolensk is 380 km west of Moscow, Very high standards of education, strict disciplinary system. **1500** Indian students (**650** Girls) studying, **167** got degree in **2021,** English Medium in all years, Closed type campus system, **8** attached hospitals (**6000** Beds).
MCI SCREENING TEST – Our graduates of **2008** to **2020** have given **BEST** results among graduates of all foreign medical colleges (Official web sites of Indian Embassy, Moscow and National Board of Examination, New Delhi who conducts MCI Screening Test confirm this).
SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,50,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students.
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Bangalore & Manglore: Mrs. Sudha Kamath - 9740622038
Chitradurga: Mr. R. Venkatashiva – 9448839235
Mysore: Dr. Mothukar – 8105616675, Mr. Ganesh S. - 8073709996
Hubli-Dharwad & Belgavi: Dr. Suchita Halli - 9916187559
Karwar: Mrs. Bhat – 8884057559; **Hassan:** Ms. Nayana B.R. – 9606265744

58 ವರ್ಷಗಳ ಹಿಂದೆ ಎನ್‌.ಆರ್‌. ಚೌಕದಲ್ಲಿ ಅಳವಡಿಕೆ • ನೆನಪಿಗಾಗಿ ಹಳೆ ಸಿಗ್ನಲ್ ಉಳಿಸಿಕೊಳ್ಳಲಾಗಿದೆ

ಮೊದಲ ಸಂಚಾರ ಸಿಗ್ನಲ್ ಯಾವುದು ಬಲ್ಲಿರಾ?

• ಸಚ್ಚಿದಾನಂದ ಕುರಗುಂದ

ಬೆಂಗಳೂರು ನಮ್ಮ ಹೆಮ್ಮೆ...

ಮುಖ್ಯಾಂಶಗಳು
- ನಗರದಲ್ಲಿರುವ ದ್ವಿಚಕ್ರ ವಾಹನಗಳ ಸಂಖ್ಯೆ 66 ಲಕ್ಷಕ್ಕೂ ಅಧಿಕ
- ಪ್ರತಿವರ್ಷ ಶೇ 10–20ರಷ್ಟು ಹೊಸ ವಾಹನಗಳು ರಸ್ತೆಗೆ

ಬೆಂಗಳೂರು: ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರ ಈಗ ವಾಹನಗಳ ದಟ್ಟಣೆಗೂ ಪ್ರಸಿದ್ಧಿ. ಅಲ್ಲಲ್ಲಿ ಸಂಚಾರ ಸಿಗ್ನಲ್‌ಗಳನ್ನು ನಿರ್ಮಿಸಿದರೂ ದಟ್ಟಣೆ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಸಿಗ್ನಲ್‌ಗಳನ್ನು ಸ್ಥಾಪಿಸುವ ಮೂಲಕ ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸುವ ಪರಿಪಾಟ ಯಾವಾಗ ಆರಂಭವಾಯಿತು? ನಗರದ ಮೊದಲ ಸಂಚಾರ ಸಿಗ್ನಲ್ ಯಾವುದು ಎಂದು ಯಾರಾದರೂ ಬಲ್ಲಿರಾ?

ವಾಹನಗಳ ಸುಗಮ ಸಂಚಾರಕ್ಕೆ ನಗರದಲ್ಲಿ 'ಸಿಗ್ನಲ್' ಅಳವಡಿಸಬೇಕು ಎನ್ನುವ ಚಿಂತನೆ ಮೊದಲು ಮೊಳಕೆಯೊಡೆದಿದ್ದು 1963ರಲ್ಲಿ. ಎನ್. ಆರ್. ಚೌಕದಲ್ಲಿ ವಾಹನಗಳ ದಟ್ಟಣೆ ಆಗ ಹೆಚ್ಚಾಗತೊಡಗಿತ್ತು. ದಿನೇ ದಿನೇ ವಾಹನ ಸಂಚಾರ ದುಸ್ತರವಾಗತೊಡಗಿತ್ತು. ಅಂದಿನ ನಗರ ಪೊಲೀಸ್ ಕಮಿಷನರ್ ಸಿ.ಚಾಂಡಿ ಮತ್ತು ಸಂಚಾರ ಡಿಸಿಪಿಯಾಗಿದ್ದ ಬಿ.ಎನ್. ಗರುಡಾಚಾರ್ ಅವರ ಮುತುವರ್ಜಿಯಿಂದ ಎನ್. ಆರ್. ರಸ್ತೆಯಲ್ಲಿ ಮೊದಲ ಬಾರಿಗೆ ಸಂಚಾರ ಸಿಗ್ನಲ್ ಅಳವಡಿಸಲಾಯಿತು.

'ಆಗ ವಾಹನಗಳು ವ್ಯವಸ್ಥಿತವಾಗಿ ಚಲಿಸುತ್ತಿರಲಿಲ್ಲ. ಅಡ್ಡಾದಿಡ್ಡಿಯಾಗಿ ಚಲಿಸುತ್ತಿದ್ದ ವಾಹನಗಳಿಂದ ಸಮಸ್ಯೆಗಳು ಎದುರಾಗುತ್ತಿದ್ದವು. ಅವುಗಳನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾಗತೊಡಗಿತು. ಕಾರು, ಆಟೊ ಚಾಲಕರು ಸಹ ಈ ವಿಷಯವನ್ನು ಪೊಲೀಸ್ ಇಲಾಖೆ ಗಮನಕ್ಕೆ ತಂದಿದ್ದರು. ಆಗ ಸಿಗ್ನಲ್ ಅಳವಡಿಸಬೇಕು ಎನ್ನುವ ಯೋಜನೆ ರೂಪಿಸಲಾಯಿತು. ಎನ್.ಆರ್. ಚೌಕದಲ್ಲಿ ಅಳವಡಿಸಿದ ಸಿಗ್ನಲ್ ಬೆಂಗಳೂರು ನಗರದಲ್ಲೇ ಮೊದಲು. ಈ ಸಿಗ್ನಲ್ ಅಳವಡಿಸಿದ ಬಳಿಕ ವಾಹನಗಳ ಸಂಚಾರದಲ್ಲಿ ಭಾರಿ ಸುಧಾರಣೆಯಾಯಿತು' ಎಂದು ಆಗ ಸಂಚಾರ ಡಿಸಿಪಿಯಾಗಿದ್ದ ಗರುಡಾಚಾರ್ ನೆನಪಿಸಿಕೊಂಡರು.

ನಗರದ ಎನ್‌.ಆರ್‌.ಚೌಕದಲ್ಲಿ 1963ರಲ್ಲಿ ಮೊದಲ ಟ್ರಾಫಿಕ್ ಸಿಗ್ನಲ್‌ಅಳವಡಿಸಿದ್ದನ್ನು ನೆನಪಿಸುವ ಮಾಹಿತಿ ಫಲಕ
ಪ್ರಜಾವಾಣಿ ಚಿತ್ರ/ ರಂಜು ಪಿ.

'ಮೊದಲ ಬಾರಿ ಟ್ರಾಫಿಕ್ ಸಿಗ್ನಲ್ ಅಳವಡಿಸಲು ನನ್ನ ತಂದೆ ಮುಂಬೈಗೆ ತೆರಳಿ ಹಲವಾರು ಸಾಮಗ್ರಿಗಳನ್ನು ತಂದಿದ್ದು ನನಗೆ ಈಗಲೂ ನೆನಪಿದೆ. ವಾಹನಗಳ ಸಂಖ್ಯೆ ಹೆಚ್ಚಾದಂತೆ 2005ರಲ್ಲಿ ಸಮೀಪದಲ್ಲೇ ಮತ್ತೊಂದು ಸಿಗ್ನಲ್ ಅಳವಡಿಸಲಾಯಿತು. ಹಳೆಯ ಸಿಗ್ನಲ್ ಅನ್ನು ನೆನಪಿಗಾಗಿ ಉಳಿಸಿಕೊಳ್ಳುವ ಕಾರ್ಯವನ್ನು ಪೊಲೀಸ್ ಇಲಾಖೆ ಕೈಗೊಂಡಿರುವುದು ಶ್ಲಾಘನೀಯ. ಈಗಲೂ ಹಳೆಯ ಸಿಗ್ನಲ್‌ನ ಕಬ್ಬಿಣದ ಕಂಬವೊಂದನ್ನು ಪೊಲೀಸ್ ಠಾಣೆಯೊಂದರಲ್ಲಿ ಸಂಗ್ರಹಿಸಿಡಲಾಗಿದೆ' ಎಂದು ಶಾಸಕ ಉದಯ ಬಿ.ಗರುಡಾಚಾರ್ ಮೆಲುಕು ಹಾಕಿದರು. ಉದಯ್ ಗರುಡಾಚಾರ್ ಅವರು ಪ್ರತಿನಿಧಿಸುವ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲೇ ಈ ಸಂಚಾರ ಸಿಗ್ನಲ್ ಇದೆ.

ಮೊದಲ ಸಂಚಾರ ಸಿಗ್ನಲ್ ಅಳವಡಿಸಿ ಈಗ 58 ವರ್ಷಗಳೇ ಉರುಳಿವೆ. ಆ ಬಳಿಕ ನಗರದಾದ್ಯಂತ ಸಾವಿರಾರು ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ರಾಜಧಾನಿಯ ಪ್ರಥಮ ಟ್ರಾಫಿಕ್ ಸಿಗ್ನಲ್ ಬಳಸಲಾದ ಸವಿ ನೆನಪನ್ನು ಪೊಲೀಸ್ ಇಲಾಖೆ ಮಾರ್ಚ್ ತಿಂಗಳಲ್ಲಿ ಕಾರ್ಯಕ್ರಮ ಆಯೋಜಿಸುವ ಮೂಲಕ ಮೆಲುಕು ಹಾಕಿತ್ತು.

ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳ ಉದ್ಯಮಗಳ ಸ್ಥಾಪನೆಯಿಂದ ಈ ಮಹಾನಗರವು ವಿಸ್ತಾರವಾಗಿ ಬೆಳೆಯುತ್ತಿದೆ. ನಗರದ ಜನಸಂಖ್ಯೆ ಹಾಗೂ ವಿಸ್ತೀರ್ಣ ಬೆಳದಂತೆ ವಾಹನಗಳ ಸಂಖ್ಯೆಯೂ ಹೆಚ್ಚುತ್ತಿದೆ. ನಗರದಲ್ಲಿ ಈಗ ವಾಹನಗಳ ಸಂಖ್ಯೆ 1 ಕೋಟಿ ದಾಟಿದೆ. ಅದರಲ್ಲೂ ದ್ವಿಚಕ್ರ ವಾಹನಗಳ ಸಂಖ್ಯೆ 66 ಲಕ್ಷ ದಾಟಿದೆ. ಪ್ರತಿ ವರ್ಷ ಶೇ 10ರಿಂದ ಶೇ 20ರಷ್ಟು ಹೊಸ ವಾಹನಗಳು ಸೇರ್ಪಡೆಯಾಗುತ್ತಿವೆ. ವಾಹನಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದ್ದಂತೆಯೇ ಸಂಚಾರ ಸಮಸ್ಯೆ ಬೇರೆ ಬೇರೆ ಆಯಾಮ ಪಡೆದುಕೊಳ್ಳುತ್ತಿದೆ. ವಾಹನಗಳ ದಟ್ಟಣೆಯಿಂದ ವಾಹನಗಳ ವೇಗದ ಮಿತಿ ಈಗ ಗಂಟೆಗೆ 15 ಕಿ.ಮೀ.ಗೆ ಕುಸಿದಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

ಸುದ್ದಿ 2 ನಿಮಿಷ

ರಫೇಲ್ ಹಗರಣಕ್ಕೆ ಪುರಾವೆಗಳಿದ್ದರೂ ಪ್ರಕರಣ ಏಕಿಲ್ಲ: ಪವನ್ ಖೇರಾ ಪ್ರಶ್ನೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಇತರ ನಾಯಕರ ಮೇಲೆ ದಾಳಿ ಮಾಡುವ ಇಡಿ, ಸಿಬಿಐ, ರಫೇಲ್ ಹಗರಣದಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಾಕಷ್ಟು ಪುರಾವೆಗಳಿದ್ದರೂ ಪ್ರಕರಣ ದಾಖಲಿಸುತ್ತಿಲ್ಲ ಯಾಕೆ' ಎಂದು ಎಐಸಿಸಿ ವಕ್ತಾರರಾದ ಪವನ್ ಖೇರಾ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಈ ಸಂಸ್ಥೆಗಳು ಭ್ರಷ್ಟಾಚಾರದ ವಿರುದ್ಧ ಹೋರಾಡುವುದಿಲ್ಲವೇ? ರಫೇಲ್ ಹಗರಣದಲ್ಲಿ ನಡೆದಿರುವ ಭ್ರಷ್ಟಾಚಾರ, ಲಂಚ, ಒಳಸಂಚನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಪದೇ ಪದೇ ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದೆ' ಎಂದು ಆರೋಪಿಸಿದರು.

'ಈ ಪ್ರಕರಣದಲ್ಲಿ ನಾವು ತಪ್ಪು ಮಾಡಿದ್ದೇವೆ ಎಂದಾದರೆ ನಾವು ತನಿಖೆಗೆ ಆಗ್ರಹಿಸುತ್ತಿರುವಾಗ ಸರ್ಕಾರ ಪಲಾಯನ ಮಾಡುತ್ತಿರುವುದೇಕೆ. ವಿಚಾರಣೆಗೆ ಜಂಟಿ ಸಂಸದೀಯ ಸಮಿತಿ ರಚಿಸುವ ಬದಲು ಪ್ರಧಾನಿ ಓಡಿ ಹೋಗುತ್ತಿರುವುದೇಕೆ. ನಾವು ತಪ್ಪು ಮಾಡಿದ್ದರೆ ನಾವು ಹೆದರಬೇಕಿತ್ತಲ್ಲವೇ. ನಾವು ಯಾವುದೇ ತನಿಖೆಗೆ ಹೆದರುತ್ತಿಲ್ಲ. ಹಾಗಾದರೆ ಇಲ್ಲಿ ತಪ್ಪಿತಸ್ಥರು ಯಾರು. ಯಾವುದೇ ಜನಸಾಮಾನ್ಯನ ಕೈಗೆ ಸಿಗಬಾರದಂಥ ಸೂಕ್ಷ್ಮ ದಾಖಲೆಗಳು ಮಧ್ಯವರ್ತಿಗೆ ಸಿಕ್ಕಿದ್ದಾದರೂ ಹೇಗೆ' ಎಂದೂ ಅವರು ಪ್ರಶ್ನಿಸಿದರು.

'ರಾಷ್ಟ್ರೀಯ ಭದ್ರತೆಗೆ ವಿರುದ್ಧವಾಗಿ ಕೇಂದ್ರ ಸರ್ಕಾರ ರಫೇಲ್ ಒಪ್ಪಂದಕ್ಕೆ ಮುಂದಾಗಿದೆ. ಹೀಗಾಗಿ, ಈ ಪ್ರಕರಣದ ವಿಚಾರಣೆಯನ್ನು ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ನಡೆಸಬೇಕು' ಎಂದೂ ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ಡಾ.ಬಿ.ಎಲ್.ಶಂಕರ್, ಪದಾಧಿಕಾರಿಗಳಾದ ಐಶ್ವರ್ಯ ಮಹದೇವ್, ಲಾವಣ್ಯ ಬಲ್ಲಾಳ್, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಇದ್ದರು.



ನಕಲಿ ಛಾಪಾ ಕಾಗದ ತಯಾರಿಕೆ: ಐದು ಮಂದಿಯ ಸೆರೆ

ಬೆಂಗಳೂರು: ನಗರದಲ್ಲಿ ನಕಲಿ ಛಾಪಾ ಕಾಗದ ತಯಾರಿಸುತ್ತಿದ್ದ ಆರೋಪದ ಮೇಲೆ ಐವರನ್ನು ಪೂರ್ವ ವಿಭಾಗದ ಡಿಸಿಪಿ ಎಸ್.ಡಿ.ಶರಣಪ್ಪ ನೇತೃತ್ವದ ಪೊಲೀಸರ ತಂಡವು ಶನಿವಾರ ಬಂಧಿಸಿದೆ.

'ವಿವೇಕ ನಗರ ಹಾಗೂ ಬ್ಯಾಟರಾಯನಪುರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಾಲ್ಕು ಕಡೆ ದಾಳಿ ನಡೆಸಿ ಐವರನ್ನು ಬಂಧಿಸಲಾಗಿದೆ. ಆರೋಪಿಗಳ ಮನೆಗಳಲ್ಲಿ ಸಾವಿರಾರು ರೂಪಾಯಿ ಮೌಲ್ಯದ ನಕಲಿ ಛಾಪಾ ಕಾಗದಗಳು, ಠಸ್ಸೆಗಳು (ಸೀಲ್‌ಗಳು), ಪೆನ್‌ಡ್ರೈವ್‌ಗಳು ಹಾಗೂ ಇತರ ದಾಖಲೆಗಳು ಸಿಕ್ಕಿವೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಅವರಿಂದ ಮತ್ತಷ್ಟು ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ. ಈ ಜಾಲದಲ್ಲಿ ಇನ್ನಷ್ಟು ಮಂದಿ ಭಾಗಿಯಾಗಿರುವ ಸಾಧ್ಯತೆ ಇದೆ. ಆ ದಿಸೆಯಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದೂ ಮಾಹಿತಿ ನೀಡಿದ್ದಾರೆ.

ಸುಚಿತ್ರ ಫಿಲ್ಮ್ ಸೊಸೈಟಿ: ಇಂದು ಮೌನ ಪ್ರತಿಭಟನೆ

ಬೆಂಗಳೂರು: ಸುಚಿತ್ರ ಫಿಲ್ಮ್ ಸೊಸೈಟಿಯ ಭವಿಷ್ಯ ಅತಂತ್ರವಾಗುತ್ತಿದೆ. ಈ ಸಂಸ್ಥೆಯನ್ನು ರಕ್ಷಿಸಬೇಕು ಎಂದು ಒತ್ತಾಯಿಸಿ ಇದೇ 14ರಂದು ಬೆಳಿಗ್ಗೆ 10.30ರಿಂದ ಮೌನ ಪ್ರತಿಭಟನೆ ನಡೆಸಲಾಗುವುದು ಎಂದು ಸೊಸೈಟಿಯ ಕಾರ್ಯಕಾರಿ ಸಮಿತಿ ಸದಸ್ಯರು ತಿಳಿಸಿದ್ದಾರೆ.

ಸುಚಿತ್ರ ಟ್ರಸ್ಟ್‌ನ ಹುಟ್ಟಿಗೆ ಕಾರಣವಾದ ಸುಚಿತ್ರ ಫಿಲ್ಮ್ ಸೊಸೈಟಿಯು ಯಾವುದೇ ಅಡೆ ತಡೆ ಇಲ್ಲದೆಯೇ ಸುಚಿತ್ರ ಪ್ರಾಂಗಣದಲ್ಲಿ ಚಟುವಟಿಕೆ ನಡೆಸುವಂತಾಗಬೇಕು. ಫಿಲ್ಮ್ ಸೊಸೈಟಿಯ ಅಧ್ಯಕ್ಷರು ಟ್ರಸ್ಟ್‌ನ ಶಾಶ್ವತ ಸದಸ್ಯರಾಗಿಯೇ ಮುಂದುವರಿಸಬೇಕು ಎಂದು ಆಗ್ರಹಿಸಿದ್ದಾರೆ.

ಇದೇ ವರ್ಷ ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಸುಚಿತ್ರ ಫಿಲ್ಮ್ ಸೊಸೈಟಿಯ ಭವಿಷ್ಯ ಡೋಲಾಯಮಾನವಾಗಿದೆ. ಟ್ರಸ್ಟಿಗಳಲ್ಲಿ ಹೆಚ್ಚಿನ ಭಾಗ ಫಿಲ್ಮ್ ಸೊಸೈಟಿಯ ಸದಸ್ಯರೇ ಇದ್ದರು. ಆದರೆ, ಕಾರ್ಪೊರೇಟ್ ಹಿಡಿತಕ್ಕೆ ಸಿಲುಕುತ್ತಿರುವ ಸುಚಿತ್ರ ಟ್ರಸ್ಟ್, ಸೊಸೈಟಿಯ ಅಸ್ತಿತ್ವಕ್ಕೆ ಅಡ್ಡಿಪಡಿಸಲು ಹೊರಟಿದೆ ಎಂದು ಸದಸ್ಯರು ಆರೋಪಿಸಿದ್ದಾರೆ.

ವಾರ್ಡ್ ಸಮಿತಿಗಳ ಅಧ್ಯಯನ: ವರದಿ ಬಿಡುಗಡೆ ಮಾಡಿದ 'ಜನಾಗ್ರಹ'

ವರ್ಷದಲ್ಲಿ 4,219 ವಾರ್ಡ್ ಸಮಿತಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 198 ವಾರ್ಡ್‌ಗಳಲ್ಲಿ 2020ರ ಆ.1ರಿಂದ 2021ರ ಸೆ. 4ರವರೆಗೆ ಒಟ್ಟು 4,219 ವಾರ್ಡ್ ಸಮಿತಿ ಸಭೆಗಳು ನಡೆದಿವೆ.

ವಾರ್ಡ್ ಸಮಿತಿ ಸಭೆಗಳ ಕುರಿತು ಜನಾಗ್ರಹ ಸಂಸ್ಥೆ ವಿಶ್ಲೇಷಣೆ ನಡೆಸಿದೆ. ಈ ವಿಶ್ಲೇಷಣೆಯ ಮುಖ್ಯಾಂಶಗಳನ್ನು ಶನಿವಾರ ಏರ್ಪಡಿಸಿದ್ದ ವಾರ್ಡ್ ಸಮಿತಿ ಕಾರ್ಯಾಗಾರದಲ್ಲಿ ಬಿಡುಗಡೆ ಮಾಡಲಾಯಿತು.

ಪ್ರತಿಯೊಂದು ವಾರ್ಡ್ ಸಮಿತಿಗೆ ನೀಡಲಾದ ತಲಾ ₹60 ಲಕ್ಷ ಅನುದಾನವನ್ನು ಹೇಗೆ ಬಳಸಬಹುದು ಎನ್ನುವ ಮಾಹಿತಿಯನ್ನು ಕಾರ್ಯಾಗಾರದಲ್ಲಿ ಒದಗಿಸಲಾಯಿತು. ವಾರ್ಡ್ ಸಮಿತಿಯಲ್ಲಿ ಭಾಗವಹಿಸಿದ ಅನುಭವಗಳನ್ನು ನಾಗರಿಕರು ಹಂಚಿಕೊಂಡರು.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, 'ನಾಗರಿಕರ ಸಹಭಾಗಿತ್ವದಿಂದ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗಲಿದೆ. ಬಿಬಿಎಂಪಿಯು ಪ್ರತಿ ವಾರ್ಡ್‌ಗೆ ₹60 ಲಕ್ಷ ಅನುದಾನ ನೀಡಿದೆ. ಇದನ್ನು ರಸ್ತೆ ಗುಂಡಿಗಳನ್ನು ಮುಚ್ಚಲು, ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಮತ್ತು ಕೊಳವೆಬಾವಿಗಳ ನಿರ್ಮಾಣಕ್ಕೆ ಬಳಸಲಾಗಿದೆ' ಎಂದು ವಿವರಿಸಿದರು.

ವಾರ್ಡ್ ಸಮಿತಿ ಸಭೆ–ಪ್ರಮುಖ ಅಂಶಗಳು
- ಶೇಕಡ 40ರಷ್ಟು ನೋಡಲ್ ಅಧಿಕಾರಿಗಳು ಮಾತ್ರ ವಾರ್ಡ್ ಸಮಿತಿ ಸಭೆಗಳಿಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳಿಗೆ ಪರಿಣಾಮಕಾರಿ ಉತ್ತರ ನೀಡಿದ್ದಾರೆ.
- ಪ್ರತಿ ತಿಂಗಳಲ್ಲಿ ಸರಾಸರಿ 181ರಂತೆ ಸಭೆಗಳು ನಡೆದಿವೆ.
- 33 ವಾರ್ಡ್‌ಗಳಲ್ಲಿ ಪ್ರತಿ ತಿಂಗಳು ಕಡ್ಡಾಯವಾಗಿ ಎರಡು ಸಭೆಗಳನ್ನು ನಡೆಸಲಾಗಿದೆ.
- 72 ವಾರ್ಡ್‌ಗಳಲ್ಲಿ ತಿಂಗಳಿಗೆ ಒಂದು ವಾರ್ಡ್ ಸಮಿತಿ ಸಭೆ ನಡೆಸಲಾಗಿದೆ.
- ಹೊಂಬೇಗೌಡ ನಗರ ಮತ್ತು ಗೊಟ್ಟಿಗೆರೆ ವಾರ್ಡ್‌ಗಳಲ್ಲಿ ಮಾತ್ರ ಶೇಕಡ 100ರಷ್ಟು ಸಭೆಗಳನ್ನು ನಡೆಸಿ ನಡಾವಳಿಗಳನ್ನು ನಿರಂತರವಾಗಿ ಅಪ್‌ಲೋಡ್ ಮಾಡಲಾಗಿದೆ
- ವಸಂತನಗರ, ಕುಮಾರಸ್ವಾಮಿ ಲೇಔಟ್, ದಯಾನಂದನಗರಗಳಲ್ಲಿ 25ಕ್ಕೂ ಹೆಚ್ಚು ಸಭೆಗಳನ್ನು ನಡೆಸಿದ್ದರೂ ಒಂದೇ ಒಂದು ಸಭೆಯ ವಿವರಗಳನ್ನು ಅಪ್‌ಲೋಡ್ ಮಾಡಿಲ್ಲ.
- 54 ವಾರ್ಡ್‌ಗಳಲ್ಲಿ 21ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ.

ವಾರ್ಡ್ ಸಮಿತಿ ಸಭೆಗಳ ಮೂಲಕ ನಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು ಸಾಧ್ಯವಾಯಿತು. ಹೆಚ್ಚು ಜನರು ಸಭೆಗಳಲ್ಲಿ ಭಾಗವಹಿಸಬೇಕು. ಆಗ ಮಾತ್ರ ವಾರ್ಡ್ ಸಮಿತಿಗಳು ಕ್ರಿಯಾಶೀಲವಾಗಿರಲು ಸಾಧ್ಯ
ಶ್ರೀನಿವಾಸ್ ಥಣಿಸಂದ್ರ ವಾರ್ಡ್ ನಿವಾಸಿ

ನಮ್ಮ ವಾರ್ಡ್ ಸಮಿತಿಯು ಕೇವಲ ವೈಯಕ್ತಿಕ ಸಮಸ್ಯೆಗಳಿಗೆ ಸೀಮಿತಗೊಂಡಿದೆ. ಅನೇಕ ಜನರಿಗೆ ವಾರ್ಡ್ ಸಮಿತಿಗಳ ಬಗ್ಗೆ ಅರಿವು ಇಲ್ಲ. ಈ ಬಗ್ಗೆ ಗಮನಹರಿಸಬೇಕಾಗಿದೆ.
ಲಲಿತಾ 18ನೇ ವಾರ್ಡ್ ನಿವಾಸಿ

ಬಿಬಿಎಂಪಿ ಮಾಹಿತಿ ತಂತ್ರಜ್ಞಾನ ಉಪ ಆಯುಕ್ತರಾಗಿರುವ ಗೊಟ್ಟಿಗೆರೆ ವಾರ್ಡ್‌ನ ನೋಡಲ್ ಅಧಿಕಾರಿ ರಮಾಮಣಿ, 'ಯಾವುದೇ ಸಭೆ ನಡೆಯುವ ಮೊದಲು ಕಾರ್ಯಸೂಚಿ ತಯಾರಿಸಬೇಕು. ಸಭೆಗಳನ್ನು ನಿಯಮಿತವಾಗಿ ನಡೆಸಿದರೆ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಲು ಅನುಕೂಲವಾಗುತ್ತದೆ' ಎಂದು ತಿಳಿಸಿದರು.

ಸಮೀಕ್ಷೆ ಬಗ್ಗೆ ವಿವರಿಸಿದ ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ ಶ್ರೀನಿವಾಸ್ ಅಲವಿಲ್ಲಿ, 'ವಾರ್ಡ್ ಸಮಿತಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಸಾವಿರಾರು ಸಭೆಗಳು ಈಗಾಗಲೇ ನಡೆದಿವೆ. ಅನೇಕ ನೋಡಲ್ ಅಧಿಕಾರಿಗಳು ಅತ್ಯುತ್ತಮ ಕೆಲಸ ಮಾಡಿದ್ದಾರೆ. ಕೆಲವೆಡೆ ಮಾತ್ರ ವಾರ್ಡ್ ಸಮಿತಿ ಸಭೆಗಳು ನಡೆದಿಲ್ಲ. ಈ ಮಾಹಿತಿಯು ವಾರ್ಡ್ ಸಮಿತಿಗಳನ್ನು ಬಲಪಡಿಸಲು ಬಿಬಿಎಂಪಿಗೆ ಸಹಕಾರಿಯಾಗಲಿದೆ' ಎಂದು ತಿಳಿಸಿದರು.

ವಾರ್ಡ್ ಸಮಿತಿಗೆ ಹಂಚಿಕೆ ಮಾಡಲಾದ ₹ 60 ಲಕ್ಷ ಅನುದಾನವನ್ನು ವ್ಯವಸ್ಥಿತವಾಗಿ ಹೇಗೆ ಬಳಸಿಕೊಳ್ಳಬಹುದು ಎನ್ನುವ ಬಗ್ಗೆ ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥೆ ಸಪ್ನಾ ಕರೀಂ ವಿವರಿಸಿದರು.

ಪಿಎಸ್‌ಐ ಹುದ್ದೆ: 'ತಪ್ಪು' ಉತ್ತರವೂ 'ಸರಿ'!

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ 545 ಹುದ್ದೆಗಳಿಗೆ ನೇಮಕಾತಿಗೆ ಪೊಲೀಸ್ ನೇಮಕಾತಿ ಮಂಡಳಿ ಅ. 3ರಂದು ನಡೆಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಶ್ನೆಯೊಂದಕ್ಕೆ ಆಯ್ಕೆಗಾಗಿ ನೀಡಿದ್ದ ನಾಲ್ಕು ಉತ್ತರಗಳ ಪೈಕಿ ಎರಡು ಉತ್ತರಗಳು 'ಸರಿ' ಎಂದು ಪರಿಗಣಿಸಿರುವುದಕ್ಕೆ ಹುದ್ದೆ ಆಕಾಂಕ್ಷಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಡಿ' ಸರಣಿಯ ಪ್ರಶ್ನೆ ಪತ್ರಿಕೆಯಲ್ಲಿ 71ನೇ ಪ್ರಶ್ನೆಯಾಗಿ 'ಲೋಕ ಅದಾಲತ್ ಬಗ್ಗೆ ಕೆಳಗಿನ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ ಎಂದು (1) ಲೋಕ ಅದಾಲತ್ ಅವಾರ್ಡನ್ನು ಸಿವಿಲ್ ನ್ಯಾಯಾಲಯದ ತೀರ್ಪು ಅಥವಾ ಯಾವುದೇ ಇತರ ನ್ಯಾಯಾಲಯದ ಆದೇಶವೆಂದು ಪರಿಗಣಿಸಲಾಗುತ್ತದೆ (2) ಲೋಕಾ ಅದಾಲತ್‌ನ ಅವಾರ್ಡ್ ವಿರುದ್ಧ ಸಂಬಂಧಪಟ್ಟ ಪಕ್ಷಗಳು (ಕಕ್ಷಿದಾರರು) ಮೇಲ್ಮನವಿ ಸಲ್ಲಿಸಬಹುದು ಎಂಬ ಪ್ರಶ್ನೆ ಕೇಳಲಾಗಿತ್ತು. ಇದಕ್ಕೆ (ಎ) 1 ಮಾತ್ರ, (ಬಿ) 2 ಮಾತ್ರ, (ಸಿ) 1 ಮತ್ತು 2 ಎರಡೂ, (ಡಿ) 1 ಮತ್ತು 2 ಎರಡೂ ಅಲ್ಲ ಎಂಬ ಆಯ್ಕೆಗಳನ್ನು ನೀಡಲಾಗಿತ್ತು.

ನೇಮಕಾತಿ ಮಂಡಳಿ ನ. 5ರಂದು ತಾತ್ಕಾಲಿಕ ಕೀ ಉತ್ತರಗಳನ್ನು ಪ್ರಕಟಿಸಿತ್ತು. ಅದರಲ್ಲಿ 'ಎ' ಸರಿಯಾದ ಆಯ್ಕೆ ಎಂದು ಹೇಳಲಾಗಿತ್ತು.

ಆದರೆ, ಇದೇ 12ರಂದು ಪ್ರಕಟಿಸಿರುವ ಅಂತಿಮ ಕೀ ಉತ್ತರದಲ್ಲಿ 'ಎ' ಮತ್ತು 'ಸಿ' ಎರಡೂ ಆಯ್ಕೆಗಳು ಸರಿ ಎಂದು ತಿಳಿಸಲಾಗಿದೆ. ಆದರೆ, ತಾತ್ಕಾಲಿಕ ಕೀ ಉತ್ತರದಲ್ಲಿ ತಿಳಿಸಿದಂತೆ 'ಎ' ಮಾತ್ರ ಸರಿ ಉತ್ತರ.

'ಸಿ' ಕೂಡಾ ಸರಿ ಉತ್ತರ ಎಂದು ಪರಿಗಣಿಸಿರುವುದು ತಪ್ಪು ಎಂದು ಪರೀಕ್ಷೆ ಬರೆದಿರುವವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ತಾತ್ಕಾಲಿಕ ಕೀ ಉತ್ತರದಲ್ಲಿ ಸರಿಯಾಗಿದ್ದ ಅಂಶ, ಅಂತಿಮ ಕೀ ಉತ್ತರ ನೀಡುವ ವೇಳೆ ಬದಲಾಗಲು ಕಾರಣವೇನು' ಎಂದು ಪ್ರಶ್ನಿಸಿರುವ ಪರೀಕ್ಷಾರ್ಥಿಗಳು, ಈ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಇಲ್ಲದೇ ಇರುವುದರಿಂದ ನೇಮಕಾತಿ ಮಂಡಳಿ ಸ್ವಯಂಪ್ರೇರಿತವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದೂ ಆಗ್ರಹಿಸಿದ್ದಾರೆ.

ಪತ್ರಕರ್ತನಿಗೆ ₹ 6 ಲಕ್ಷ ದಂಡ ವಿಧಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾನು ಪರಿಶಿಷ್ಟ ಜಾತಿಗೆ ಸೇರಿದ್ದೇನೆ ಅಥವಾ ಪತ್ರಕರ್ತನಿದ್ದೇನೆ ಎಂದು ಪುಂಡಾಟಿಕೆ ಮೂಲಕ ಸಾರ್ವಜನಿಕ ಆಸ್ತಿಗಳನ್ನು ಅತಿಕ್ರಮಿಸಿ ದೌರ್ಜನ್ಯ ಮೆರೆಯುತ್ತಾ ಹೋದರೆ ಸಾಮಾನ್ಯ ಜನರು ಇಂತಹ ವರ್ಗದವರ ಜೊತೆ ಹೊಂದಿರುವ ಸೌಹಾರ್ದ ಭಾವನೆಗಳಿಗೆ ಧಕ್ಕೆ ಉಂಟಾಗುತ್ತದೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ (ಎಸ್ಸಿ-ಎಸ್ಟಿ) ಹಂಚಿಕೆ ಮಾಡಬೇಕಿದ್ದ ಮನೆಯಲ್ಲಿ ಅನಧಿಕೃತವಾಗಿ 21 ವರ್ಷ ಕಾಲ ವಾಸ ಮಾಡಿದ್ದಲ್ಲದೆ, ರಾಜ್ಯ ಎಸ್ಸಿ-ಎಸ್ಟಿ ಆಯೋಗಕ್ಕೆ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಮುಡಾ ಅಧಿಕಾರಿಗಳು ಖುದ್ದಾಗಿ ಹಾಜರಾಗಿ ವರ್ಷಗಟ್ಟಲೆ ಅಲೆಯುವಂತೆ ಮಾಡಿದ ಮೈಸೂರಿನ ಪತ್ರಕರ್ತ ಜಿ.ಎಂ. ಮಹದೇವ ಅವರಿಗೆ ಹೈಕೋರ್ಟ್ ಏಕ ಸದಸ್ಯ ನ್ಯಾಯಪೀಠ ₹ 6 ಲಕ್ಷ ದಂಡ ವಿಧಿಸಿದೆ.

'ಈ ದಂಡದ ಮೊತ್ತವನ್ನು ಮುಡಾಕ್ಕೆ 6 ವಾರಗಳಲ್ಲಿ ಪಾವತಿಸಬೇಕು. ವಿಳಂಬವಾದರೆ ಗಡುವು ಮೀರಿದ ದಿನದಿಂದ ಪ್ರತಿದಿನ ₹ 1 ಸಾವಿರ ಹೆಚ್ಚುವರಿ ದಂಡ ನೀಡುತ್ತಾ ಹೋಗಬೇಕಾಗುತ್ತದೆ' ಎಂದು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತೀರ್ಪು ನೀಡಿದೆ. 'ಇಂತಹ ಪ್ರಕರಣಗಳಿಂದ ನಮ್ಮ ಸಂವಿಧಾನದ ನಿರ್ಮಾತೃಗಳು ತಮ್ಮ ಗೋರಿಗಳಲ್ಲೇ ನರಳಾಡಬಲ್ಲರು. ನಿಜಕ್ಕೂ ಇದು ಸಮಾಜವನ್ನು ತಲ್ಲಣ ಗೊಳಿಸುವ ಸಂಗತಿ' ಎಂದು ಪೀಠ ಹೇಳಿದೆ.

ಏನಿದು ಪ್ರಕರಣ?: ಮೈಸೂರಿನ 'ರಾಷ್ಟ್ರ ಕ್ರಾಂತಿ' ಹೆಸರಿನ ಪತ್ರಿಕೆ ಸಂಪಾದಕ ಹಾಗೂ ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ಸಂಘದ ಅಧ್ಯಕ್ಷ ಜಿ.ಎಂ.ಮಹದೇವ ಅವರು ಪರಿಶಿಷ್ಟ ಜಾತಿ-ವರ್ಗಕ್ಕೆ ಮುಡಾದಿಂದ ಹಂಚಿಕೆ ಮಾಡಬೇಕಿದ್ದ ಮನೆಯಲ್ಲಿ 2000 ಇಸವಿಯ ಜ. 25ರಿಂದ ವಾಸ ಮಾಡುತ್ತಿದ್ದರು. 'ಮಹದೇವ ಅವರಿಗೆ ಮನೆ ಹಂಚಿಕೆಯಾಗಿಲ್ಲ. ಹಾಗಾಗಿ ಅದನ್ನು ತೆರವುಗೊಳಿಸಬೇಕು' ಎಂದು ಮುಡಾ ಆದೇಶಿಸಿತ್ತು. ಆದರೆ, ಈ ಆದೇಶವನ್ನು ಪ್ರಶ್ನಿಸಿ ಮಹದೇವ ಅವರು, ಪ್ರಕರಣವನ್ನು ರಾಜ್ಯ ಮತ್ತು ಕೇಂದ್ರದ ಎಸ್ಸಿ-ಎಸ್ಟಿ ಆಯೋಗದಲ್ಲಿ ಪ್ರಶ್ನೆ ಮಾಡಿದ್ದರು. ಕಡೆಗೆ ರಿಟ್ ಅರ್ಜಿ ಹಾಕಿ ತಮ್ಮ ಪ್ರತಿಕೂಲ ಸ್ವಾಧೀನಾನುಭವವನ್ನು ಕಾಯಂಗೊಳಿಸುವಂತೆ ಹೈಕೋರ್ಟ್ ಕದ ಬಡಿದಿದ್ದರು.

ವಿಚಾರಣೆ ನಡೆಸಿ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಪೀಠ, 'ಅರ್ಜಿದಾರ ಮಹದೇವ ಅವರು ಪುಂಡಾಟಿಕೆ ಮೆರೆದಿದ್ದಾರೆ. ಇವರಿಗೆ ಮುಡಾ ವಸತಿಯು ಕಾನೂನು ಬದ್ಧವಾಗಿ ಹಂಚಿಕೆ ಆಗದಿದ್ದರೂ ತಾನೊಬ್ಬ ಪತ್ರಕರ್ತ ಹಾಗೂ ಎಸ್ಸಿ ಎಂದು ಸಾಂವಿಧಾನಿಕ ಸಂಸ್ಥೆಗಳು ಹಾಗೂ ಸರ್ಕಾರಿ ಆಡಳಿತ ಯಂತ್ರದ ಅಮೂಲ್ಯ ಸಮಯ, ಶ್ರಮ ಹಾಗೂ ಹಣವನ್ನು ವ್ಯರ್ಥಗೊಳಿಸಿದ್ದಾರೆ' ಎಂದು ಅನುಕರಣೀಯ ದಂಡ ವಿಧಿಸಿ ತೀರ್ಪು ನೀಡಿದೆ.

'ಅರ್ಜಿದಾರರು ತಾವೊಬ್ಬ ಎಸ್ಸಿ ಹಾಗೂ ಮನೆಯಲ್ಲಿ ವಾಸ ಮಾಡಲು ಎಂಜಿನಿಯರ್‌ಗಳು ಅನುಮತಿ ನೀಡಿದ್ದಾರೆ ಎಂಬುದಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಿಲ್ಲ' ಎಂದೂ ನ್ಯಾಯಪೀಠ ಹೇಳಿದೆ. ಅಂತೆಯೇ ಇದೇ ರೀತಿ ಸರ್ಕಾರಿ ಆಸ್ತಿಗಳನ್ನು ಕಾನೂನು ಬಾಹಿರವಾಗಿ ಕಬ್ಜಾ ಮಾಡಿರುವವರ ವಿರುದ್ಧ ಸರ್ಕಾರ ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದೆ.

ಸಂಜೆಯ ನಂತರ ಸುರಿದ ಮಳೆ

ಬೆಂಗಳೂರು: ವಾಯುಭಾರ ಕುಸಿತದಿಂದಾಗಿ ನಗರದ ಹಲವೆಡೆ ಶನಿವಾರ ರಾತ್ರಿ ಧಾರಾಕಾರ ಮಳೆ ಸುರಿಯಿತು. ಮುಂಜಾನೆಯಿಂದಲೇ ಆಗಸದಲ್ಲಿ ಕಾರ್ಮೋಡಗಳು ದಟ್ಟೈಸಿದ್ದವು. ಹೀಗಾಗಿ ಚಳಿಯ ವಾತಾವರಣವೂ ನಿರ್ಮಾಣವಾಗಿತ್ತು.

ಸಂಜೆಯವರೆಗೂ ಮೋಡ ಕವಿದ ವಾತಾವರಣವೇ ಇತ್ತು. ರಾತ್ರಿ 7 ಗಂಟೆಯ ನಂತರ ಅಲ್ಲಲ್ಲಿ ಜೋರು ಮಳೆ ಶುರುವಾಯಿತು. ಅದು ಮಧ್ಯರಾತ್ರಿಯವರೆಗೂ ಮುಂದುವರಿದಿತ್ತು. ದ್ವಿಚಕ್ರ ವಾಹನ ಸವಾರರು ರಸ್ತೆ ಬದಿಯಲ್ಲೇ ಬೈಕ್‌ಗಳನ್ನು ನಿಲ್ಲಿಸಿ ಅಂಗಡಿ ಹಾಗೂ ಮಳಿಗೆಗಳ ಬಳಿ ಆಶ್ರಯ ಪಡೆದುಕೊಳ್ಳುತ್ತಿದ್ದ ದೃಶ್ಯ ಅಲ್ಲಲ್ಲಿ ಕಂಡುಬಂತು. ವಾರಾಂತ್ಯದ ದಿನವಾಗಿದ್ದರಿಂದ ಸಂಜೆಯಿಂದಲೇ ಯುವಕ ಯುವತಿಯರು ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಕಮರ್ಷಿಯಲ್ ಸ್ಟ್ರೀಟ್‌ನತ್ತ ಧಾವಿಸುತ್ತಿದ್ದರು. ಕೆಲವರು ಅಗತ್ಯ ವಸ್ತುಗಳ ಖರೀದಿಗಾಗಿ ಬಂದಿದ್ದರು. ಅವರೆಲ್ಲಾ ಮಳೆಯಲ್ಲಿ ಸಿಲುಕಿಕೊಂಡರು.

ಬಿಟ್ ಕಾಯಿನ್ ಮಾಹಿತಿ ಕಲೆ ಹಾಕುತ್ತಿದ್ದೇವೆ: ಡಿಕೆಶಿ

ಬೆಂಗಳೂರು: 'ಬಿಟ್ ಕಾಯಿನ್ ಪ್ರಕರಣದ ಬಗ್ಗೆ ನಾವು ಸಾಧ್ಯವಾದಷ್ಟು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದೇವೆ. ಸಮಯ ಬಂದಾಗ ಆ ಬಗ್ಗೆ ಮಾತನಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಈ ಪ್ರಕರಣದ ವಿಚಾರವಾಗಿ ಒಂದೊಂದೇ ಮಾಹಿತಿ ಹೊರಬರುತ್ತಿದೆ. ಸರ್ಕಾರ ತನ್ನ ನಿಲುವು ಬದಲಿಸಿದೆ. ಅವರು ಏನೆಲ್ಲ ವಶಪಡಿಸಿಕೊಂಡಿದ್ದಾರೋ ಈಗ ಅದರ ದಾಖಲೆಯೇ ಇಲ್ಲವೆಂದು ಮಾಹಿತಿ ತಿರುಚುತ್ತಿದ್ದಾರೆ ಎಂಬ ಮಾಧ್ಯಮ ವರದಿ ನೋಡಿದ್ದೇನೆ' ಎಂದರು.

ಈ ಪ್ರಕರಣವನ್ನು ಕಾಂಗ್ರೆಸ್ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತದೆಯೇ ಎಂಬ ಪ್ರಶ್ನೆಗೆ, 'ನಾನು ಎಲ್ಲಿಗೂ ಓಡಿ ಹೋಗುವುದಿಲ್ಲ. ನಾವೆಲ್ಲರೂ ಇಲ್ಲೇ ಇರುತ್ತೇವೆ' ಎಂದರು.

ಕಾಂಗ್ರೆಸ್‌ನವರು ದಾಖಲೆ ಕೊಟ್ಟು ಮಾತನಾಡಲಿ ಎಂಬ ಬಿಜೆಪಿ ಹೇಳಿಕೆಗೆ, 'ಮಾಹಿತಿ, ದಾಖಲೆಗಳನ್ನು ಜನರ ಮುಂದಿಡುವುದು ಸರ್ಕಾರದ ಕೆಲಸ. ಅವರು ಯಾವ ದಾಖಲೆ ಕೊಟ್ಟಿದ್ದಾರೋ ಅದರ ಆಧಾರದ ಮೇಲೆ ನಾವು ಮಾತನಾಡುತ್ತಿದ್ದೇವೆ' ಎಂದರು.

'ಈಗ ಅವರು (ಬಿಜೆಪಿಯವರು) ನಮ್ಮ ಬಳಿ ದಾಖಲೆ ಇಲ್ಲ ಎಂದು ಹೇಳುತ್ತಿದ್ದಾರೆ. ಪ್ರಕರಣದಲ್ಲಿ ದಾಖಲಾಗಿರುವ ದೋಷಾರೋಪ ಪಟ್ಟಿಯ ದಾಖಲೆ ಕೇಳಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

ಬಿಟ್ ಕಾಯಿನ್ ವಿಚಾರವನ್ನು ನಿರ್ಲಕ್ಷಿಸಿ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ ಎಂಬುದಕ್ಕೆ, 'ನಾನು ಸರಿಯಾದ ಮಾಹಿತಿ ಇಲ್ಲದೆ ಮಾತನಾಡುವುದಿಲ್ಲ. ಬೇರೆಯವರ ಬಗ್ಗೆ ನನಗೆ ಗೊತ್ತಿಲ್ಲ. ಕೆಪಿಸಿಸಿ ಸರಿಯಾದ ದಾಖಲೆ ಇದ್ದರೆ ಮಾತ್ರ ಮಾತನಾಡುತ್ತದೆ' ಎಂದರು.

ಕೋವಿಡ್: 24 ಜಿಲ್ಲೆಗಳಲ್ಲಿ 100ರೊಳಗೆ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದ 24 ಜಿಲ್ಲೆಗಳಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು 100ರ ಗಡಿಯೊಳಗೆ ಇದ್ದು, ಸದ್ಯ 8,027 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ ಗರಿಷ್ಠ (6,637) ಸಕ್ರಿಯ ಪ್ರಕರಣಗಳಿವೆ. ಇಲ್ಲಿ ಮೂವರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 1.22ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,143ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಒಂದು ದಿನದಲ್ಲಿ 1.01 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 251 ಕೋವಿಡ್ ಪ್ರಕರಣಗಳು ದೃಢಪಟ್ಟಿದೆ.

ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 154 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.91 ಲಕ್ಷ ದಾಟಿದೆ. ಸೋಂಕಿತರಲ್ಲಿ 251 ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,53,823 ಒಟ್ಟು ಸೋಂಕಿತರು
(12,53,669 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,637	12,30,875	16,310

ದಿನದ ಏರಿಕೆ	
ಹೊಸ ಪ್ರಕರಣ	154
ಗುಣಮುಖ	160
ಸಾವು	03

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಗೂಂಡಾ ಕಾಯ್ದೆಯಡಿ ರೌಡಿ ಬಂಧನ

ಬೆಂಗಳೂರು: ಪಶ್ಚಿಮ ವಿಭಾಗದ ರೌಡಿ ರಫೀ (31) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಪೊಲೀಸರು ಬಂಧಿಸಿದ್ದಾರೆ.

'ಬಸವೇಶ್ವರನಗರ ಪೊಲೀಸ್ ಠಾಣೆಯ ರೌಡಿ ಶೀಟರ್ ಆಗಿರುವ ರಫೀ, ತನ್ನ ಸಹಚರರ ಜೊತೆ ಸೇರಿಕೊಂಡು ಹಲವು ಅಪರಾಧಗಳಲ್ಲಿ ಭಾಗಿಯಾಗಿದ್ದ. ಕೊಲೆ, ಕೊಲೆ ಯತ್ನ ಸೇರಿದಂತೆ ಅನೇಕ ಪ್ರಕರಣಗಳು ಈತನ ಮೇಲಿದ್ದವು' ಎಂದು ಪೊಲೀಸರು ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ
ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.35 ಕೋಟಿ	3.44 ಕೋಟಿ
ಸಕ್ರಿಯ ಪ್ರಕರಣ	1.92 ಕೋಟಿ	1.36 ಲಕ್ಷ
ಗುಣಮುಖ	22.92 ಕೋಟಿ	3.38 ಕೋಟಿ
ಸಾವು	51.08 ಲಕ್ಷ	4.63 ಲಕ್ಷ

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	5.28 ಲಕ್ಷ	11,850
ಗುಣಮುಖ	4.07 ಲಕ್ಷ	12,403
ಸಾವು	7,665	555

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 90,208 ಅಮೆರಿಕ; 40,375 ಬ್ರಿಟನ್; 48,184 ಜರ್ಮನಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 92.05 ಅಮೆರಿಕ; 15.85 ಬ್ರಿಟನ್; 10.18 ರಷ್ಯಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,259 ತಮಿಳುನಾಡು; 35,511 ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.22 ಮಹಾರಾಷ್ಟ್ರ; 50.48 ಕೇರಳ; 27.13 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದಲ್ಲೂ 'ಹರ್ ಘರ್ ದಸ್ತಕ್' ಅಭಿಯಾನ

ಬೆಂಗಳೂರು: ಕೋವಿಡ್ ಲಸಿಕೆಯ ಮೊದಲ ಹಾಗೂ ಎರಡನೇ ಡೋಸ್ ಪಡೆದುಕೊಳ್ಳುವಂತೆ ಉತ್ತೇಜಿಸಲು ರಾಜ್ಯದಲ್ಲಿಯೂ 'ಹರ್ ಘರ್ ದಸ್ತಕ್' ಅಭಿಯಾನವನ್ನು ಇದೇ 30ರವರೆಗೆ ಆರೋಗ್ಯ ಇಲಾಖೆ ಹಮ್ಮಿಕೊಂಡಿದೆ.

ಈ ಬಗ್ಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಅವರು ಸುತ್ತೋಲೆ ಹೊರಡಿಸಿದ್ದಾರೆ. 'ಮುಂಚೂಣಿ ಆರೋಗ್ಯ ಕಾರ್ಯಕರ್ತರು ಈ ಅಭಿಯಾನದಡಿ ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯದವರ ಮನೆಗಳಿಗೆ ಭೇಟಿ ನೀಡಬೇಕು. ಲಸಿಕೆ ಪಡೆಯುವುದರಿಂದ ಆಗುವ ಉಪಯೋಗದ ಬಗ್ಗೆ ಜಾಗೃತಿ ಮೂಡಿಸಬೇಕು. ಲಸಿಕೆ ವಿತರಣೆಗೆ ಸೂಕ್ತ ಸ್ಥಳವನ್ನು ಗುರುತಿಸಿ, ಮುಂದಿನ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

'ಲಸಿಕೆ ಬಗ್ಗೆ ಜಾಗೃತಿ ಮೂಡಿಸಲು ಧಾರ್ಮಿಕ ಗುರು, ಪ್ರಖ್ಯಾತ ವೈದ್ಯರು, ಕ್ರೀಡಾಪಟುಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರನ್ನು ಬಳಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

ಬಿಟ್ ಕಾಯಿನ್ ಪ್ರಕರಣ: ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ– ಕೆ. ಸುಧಾಕರ್

'ಪ್ರಧಾನಿ ಕಚೇರಿ ಪತ್ರ: ಕಾಂಗ್ರೆಸ್ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿ ಪ್ರಧಾನಿ ಕಚೇರಿಯಿಂದ ಪತ್ರ ಬರೆಯಲಾಗಿದೆ ಎಂಬುದು ಕಾಂಗ್ರೆಸ್ ಸೃಷ್ಟಿ. ಪತ್ರ ಬಂದಿದೆ ಎಂದರೆ ಯಾರಿಗೂ ಸಿಗದೇ ಇರುತ್ತದೆಯೇ. ಅದನ್ನು ಮುಚ್ಚಿಡಲು ಆಗುತ್ತದೆಯೇ' ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಪ್ರಶ್ನಿಸಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ದೆಹಲಿಯಲ್ಲಿ ಶನಿವಾರ ಬೆಳಿಗ್ಗೆ ನಡೆಸಿದ ಸುದ್ದಿಗೋಷ್ಠಿಗೆ ರಾತ್ರಿ 9 ಗಂಟೆಗೆ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ಸುಧಾಕರ್, ಪ್ರಕರಣದ ಬಗ್ಗೆ ಸುದೀರ್ಘವಾಗಿ ಮಾತನಾಡಿದರು.

'ಬಿಟ್ ಕಾಯಿನ್ ಪ್ರಕರಣವನ್ನು ಬೆಳಕಿಗೆ ತಂದಿದ್ದು ನಮ್ಮ ಸರ್ಕಾರ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಸತ್ಯವನ್ನು ಜನರ ಮುಂದಿಡಲು ಸರ್ಕಾರ ಬದ್ಧವಾಗಿದೆ' ಎಂದೂ ಹೇಳಿದರು. ಸುರ್ಜೇವಾಲಾ ಪ್ರಶ್ನೆಗಳಿಗೆ ಸುಧಾಕರ್ ನೀಡಿದ ಉತ್ತರಗಳು ಇಲ್ಲಿದೆ.

ಡಾ.ಸುಧಾಕರ್

ಸುರ್ಜೇವಾಲಾ: ಬಿಟ್ ಕಾಯಿನ್ ಮುಚ್ಚಿಹಾಕುವ ಪ್ರಹಸನದ ಪಾತ್ರಧಾರಿಗಳು ಯಾರು?
ಉತ್ತರ: ಈ ಹಗರಣದಲ್ಲಿ ಯಾವುದೇ ಪಾತ್ರಧಾರಿಗಳ ಪ್ರಶ್ನೆಯೇ ಉದ್ಭವಿಸದು. ಅದೊಂದು ವಿಕೃತಿ ಅಷ್ಟೇ. ನಿರಾಧಾರ ಆರೋಪಗಳನ್ನು ಮಾಡುತ್ತಿದ್ದಾರೆ. ವಿಷಯ ತಿರುಚಿ ತಪ್ಪುದಾರಿಗೆ ಎಳೆಯುತ್ತಿದ್ದಾರೆ.

ಸುರ್ಜೇವಾಲಾ: ಕಳುವಾದ ಬಿಟ್ ಕಾಯಿನ್‌ಗಳನ್ನು ಹ್ಯಾಕರ್ ಶ್ರೀಕೃಷ್ಣ ಅವರ ವ್ಯಾಲೆಟ್‌ನಿಂದ ರವಾನಿಸಲಾಗಿತ್ತೇ?
ಉತ್ತರ: ಶ್ರೀಕೃಷ್ಣನ ಖಾತೆಯಿಂದ ಯಾವುದೇ ಬಿಟ್ ಕಾಯಿನ್‌ಗಳನ್ನು ವರ್ಗಾಯಿಸಿಲ್ಲ. ಯಾವುದೇ ಬಿಟ್ ಕಾಯಿನ್ ಕಳುವಾಗಿಲ್ಲ. ಸೈಬರ್ ತಜ್ಞರ ಪ್ರಕಾರ ಅದು ಆರೋಪಿಯ ವೈಯಕ್ತಿಕ ಖಾತೆ ಅಲ್ಲ. ಬದಲಿಗೆ, ಬಿಟ್ ಕಾಯಿನ್ ವಿನಿಮಯ ಕೇಂದ್ರದ ವ್ಯಾಲೆಟ್ ಆಗಿತ್ತು. ಹೀಗಾಗಿ, ಈ ಖಾತೆಯನ್ನು ಮುಟ್ಟಲಿಲ್ಲ. ಆರೋಪಗಳು ಸತ್ಯಕ್ಕೆ ದೂರವಾದವುಗಳು.

ಸುರ್ಜೇವಾಲಾ: ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಮತ್ತು ಇತರರ ಪಾತ್ರ, ಹೊಣೆಗಾರಿಕೆ ಏನು?
ಉತ್ತರ: ತನಿಖೆಯನ್ನು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಮೇಲ್ವಿಚಾರಣೆಯಲ್ಲಿ ಪಾರದರ್ಶಕವಾಗಿ ಕೈಗೊಳ್ಳಲಾಗಿದೆ. ತನಿಖೆಯ ಮಾಹಿತಿಯನ್ನು ವಿವರವಾಗಿ ದಾಖಲಿಸಿ ಕಾಲ ಕಾಲಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಸುರ್ಜೇವಾಲಾ: ಇಂಟರ್‌ಪೋಲ್‌ಗೆ ಯಾಕೆ ಮಾಹಿತಿ ನೀಡಿಲ್ಲ. ವಿಳಂಬ ಮಾಡಿದ್ದು ಯಾಕೆ?
ಉತ್ತರ: ಆರೋಪಿಯ ಸ್ವಯಂಪ್ರೇರಿತ ಹೇಳಿಕೆಯಲ್ಲಿ ಎಲ್ಲವನ್ನೂ ಹೇಳಿದ್ದರೂ ನಿಖರ ವಿವರಗಳನ್ನು ನೀಡಿರಲಿಲ್ಲ. ಸೈಬರ್ ತಜ್ಞರು ಡಿಜಿಟಲ್ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಆತನ ಹೇಳಿಕೆಗಳಲ್ಲಿ ಬಹುಪಾಲು ಆಧಾರರಹಿತ ಎಂದರು. ಈ ಪ್ರಕ್ರಿಯೆಗೆ ಸಮಯ ಹಿಡಿಯಿತು. ಬಳಿಕ ಇಂಟರ್ ಪೋಲ್‌ಗೆ ಕಳುಹಿಸಲಾಯಿತು.

ಸುರ್ಜೇವಾಲಾ: ಎನ್‌ಐಎ, ಇ.ಡಿಗೆ ಯಾಕೆ ಮಾಹಿತಿ ನೀಡಿಲ್ಲ?
ಉತ್ತರ: ಯಾವುದೇ ದೇಶದಿಂದ ಈ ಪ್ರಕರಣದ ಮಾಹಿತಿ ಕೋರಿ ಮನವಿ ಬಂದಿಲ್ಲ. ಆರೋಪಿ ಶ್ರೀಕೃಷ್ಣನ ಹೇಳಿಕೆಯಲ್ಲಿ ಹಲವು ಕ್ರಿಪ್ಟೊ ಕರೆನ್ಸಿ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿರುವುದಾಗಿ ತಿಳಿಸಿದ ಕಾರಣ ಸಂಬಂಧಿಸಿದ ದೇಶಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಇಂಟರ್ ಪೋಲ್ ವಿಭಾಗಕ್ಕೆ ಮಾಹಿತಿ ನೀಡಲಾಗಿತ್ತು. ಇದೇ ಮಾಹಿತಿಯನ್ನು ಜಾರಿ ನಿರ್ದೇಶನಾಲಯಕ್ಕೂ ನೀಡಲಾಗಿದೆ.

ಮಳೆಗೆ ಬಿಡುವು: ಕೃಷಿ ಮೇಳಕ್ಕೆ ಲಕ್ಷಾಂತರ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ನಡೆಯುತ್ತಿರುವ ಕೃಷಿ ಮೇಳದ ಮೊದಲೆರಡು ದಿನಗಳಿಗೆ ಹೋಲಿಸಿದರೆ, ಶನಿವಾರ ಮಳೆಯ ಕಾಟ ಇರಲಿಲ್ಲ. ಹಾಗಾಗಿ, ಜನರ ದಂಡು ಜಿಕೆವಿಕೆ ಆವರಣದಲ್ಲಿ ತುಂಬಿ ತುಳುಕಾಡುತ್ತಿತ್ತು. ಮೇಳಕ್ಕೆ ಮೂರನೇ ದಿನವಾದ ಶನಿವಾರ ಲಕ್ಷಾಂತರ ಜನ ಭೇಟಿ ನೀಡಿದರು.

ಮೊದಲ ದಿನ ಮಳೆಯು ಎಡೆಬಿಡದೆ ಸುರಿದ ಕಾರಣ ಮೇಳ ವೀಕ್ಷಿಸಲು ಬಂದ ಜನರ ಸಂಖ್ಯೆ ಕಡಿಮೆ ಇತ್ತು. ಎರಡನೇ ದಿನ ಹನಿಯುತ್ತಿದ್ದ ಮಳೆಯ ನಡುವೆಯೂ ಜನ ಮೇಳದತ್ತ ಹೆಜ್ಜೆಹಾಕಿದ್ದರು. ಮೂರನೇ ದಿನ ಭೇಟಿ ನೀಡಿದವರ ಸಂಖ್ಯೆ ಲಕ್ಷ ದಾಟಿತು.

ಮಳೆಯಿಂದ ಪ್ರದರ್ಶನ ಮಳಿಗೆಗಳು, ಭೋಜನಾಲಯ ಹಾಗೂ ಪ್ರದರ್ಶನ ತಾಕುಗಳು ಕೆಸರುಮಯವಾಗಿವೆ. ಕೆಸರಿನ ನಡುವೆಯೇ ಜನ ಮೇಳವನ್ನು ವೀಕ್ಷಿಸಿದರು. ತೋಟದಲ್ಲಿದ್ದ ತರಹೇವಾರಿ ಹೂವಿನ ಗಿಡಗಳ ಬಳಿ ನಿಂತು ಹಲವರು ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಮೇಳದಲ್ಲಿರುವ 550 ಮಳಿಗೆಗಳಲ್ಲಿ ಕೃಷಿ ಉತ್ಪನ್ನಗಳ ಖರೀದಿ ಭರಾಟೆಯೂ ಜೋರಾಗಿತ್ತು. ಜನಸಂದಣಿ ಹೆಚ್ಚಾಗಿದ್ದರಿಂದ ಅವರನ್ನು ನಿಯಂತ್ರಿಸಲು ಪೊಲೀಸರೂ ಹರ ಸಾಹಸಪಟ್ಟರು. ಜಿಕೆವಿಕೆ ಆವರಣದಿಂದ ಮೇಳದವರೆಗೆ ಕಲ್ಪಿಸಲಾಗಿದ್ದ ಉಚಿತ ಸಾರಿಗೆ ವ್ಯವಸ್ಥೆ ಬಳಕೆಗೆ ನೂಕುನುಗ್ಗಲು ಕಂಡುಬಂತು.

ಮೇಳಕ್ಕೆ ವಿವಿಧ ಜಿಲ್ಲೆಗಳ ರೈತರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಕೃಷಿ ತಜ್ಞರೊಂದಿಗೆ ನೇರವಾಗಿ ಚರ್ಚಿಸಿ, ಕೃಷಿ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಲು ತಜ್ಞರಿಂದ ಸಲಹೆ ಪಡೆದುಕೊಂಡರು. ಮೇಳದಲ್ಲಿದ್ದ ವಿಶೇಷ ಕೋಳಿ ತಳಿಗಳು, ಅಲಂಕಾರಿಕ ಮೀನುಗಳು, ಕೃಷಿ ವಸ್ತು ಪ್ರದರ್ಶನಗಳ ಬಳಿ ಹೆಚ್ಚು ಜನ ಸೇರಿದ್ದರು.

ಅಲಂಕಾರಿಕ, ತೋಟಗಾರಿಕೆ ಹಾಗೂ ವಿವಿಧ ಸಸಿಗಳ ಮಾರಾಟ ಮಳಿಗೆಗಳ ಬಳಿಯೂ ಜನ ಮುಗಿಬಿದ್ದಿದ್ದರು. ತಮಗೆ ಬೇಕಾದ ಸಸಿಗಳನ್ನು ವಾಹನಗಳಲ್ಲಿ ಕೊಂಡೊಯ್ದರು. ಔಷಧ ಸಿಂಪಡಣೆಗಾಗಿ ಬಾಡಿಗೆ ಡ್ರೋನ್, ವಿವಿಧ ಗಾತ್ರಗಳ ಟ್ರ್ಯಾಕ್ಟರ್, ಕೃಷಿ ಯಂತ್ರೋಪಕರಣಗಳ ಬಗ್ಗೆ ರೈತರು ಮಾಹಿತಿ ಪಡೆದುಕೊಂಡರು.

48 ರೈತ ಸಾಧಕರಿಗೆ ಪ್ರಶಸ್ತಿ: ಹಾಸನ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳ ಅತ್ಯುತ್ತಮ ರೈತ, ರೈತ ಮಹಿಳೆ, ಪ್ರಗತಿಪರ ರೈತ, ಯುವ ರೈತ, ಯುವರೈತ ಮಹಿಳೆ ಹಾಗೂ ಅತ್ಯುತ್ತಮ ವಿಜ್ಞಾನ ಲೇಖನಗಳಿಗೆ ಆರ್. ದ್ವಾರಕೀನಾಥ್ ಮತ್ತು ಪ್ರೊ.ಬಿ.ವಿ. ವೆಂಕಟರಾವ್ ಪ್ರಶಸ್ತಿ ಸೇರಿ 48 ಸಾಧಕರಿಗೆ ಕೃಷಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಎತ್ತಿನ ಬಂಡಿ ಸವಾರಿ ಮಾಡಿದ ಸಚಿವೆ: ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಕೃಷಿ ಮೇಳಕ್ಕೆ ಶನಿವಾರ ಮಧ್ಯಾಹ್ನ ಭೇಟಿ ನೀಡಿದರು. ಮೇಳದ ಆಕರ್ಷಣೆಯಾಗಿದ್ದ ಎತ್ತಿನ ಬಂಡಿಯಲ್ಲಿ ಕುಳಿತು ಸವಾರಿ ಮಾಡಿದರು. ಅಲ್ಲಿ ವೇದಿಕೆ ಕಾರ್ಯಕ್ರಮ ನಡೆಯುತ್ತಿದ್ದ ಸಭಾಂಗಣಕ್ಕೆ ಅವರು ತೆರಳಲಿಲ್ಲ. ಮೇಳದಲ್ಲಿದ್ದ ಪ್ರದರ್ಶನ ಮಳಿಗೆಗಳಿಗೆ ಭೇಟಿ ನೀಡಿ ಅವುಗಳ ಮಾಹಿತಿ ಪಡೆದುಕೊಂಡರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಸಮಯ ಕಳೆದರು.

ಕೃಷಿ ಮೇಳದಲ್ಲಿ ಶನಿವಾರ ಕಂಡು ಬಂದ ಜನಸಮೂಹ (ಎಡ ಚಿತ್ರ) ಹೊಲ ಉಳುವ ಯಂತ್ರಗಳ ಬಗ್ಗೆ ರೈತರು ಮೇಳದಲ್ಲಿ ಮಾಹಿತಿ ಪಡೆದುಕೊಂಡರು –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ರೇಷ್ಮೆ ಕೃಷಿ ಮಾರ್ಗದರ್ಶಿ ಬಿಡುಗಡೆ ಇಂದು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 'ರೇಷ್ಮೆಕೃಷಿ ಆಧುನಿಕ ಬೇಸಾಯ ಪದ್ಧತಿಗಳು' ಎಂಬ ಮಾರ್ಗದರ್ಶಿಯನ್ನು ಹೊರ ತಂದಿದ್ದು ನ.14ರಂದು ನಡೆಯಲಿರುವ ಕೃಷಿ ಮೇಳದ ಸಮಾರೋಪದಲ್ಲಿ ಬಿಡುಗಡೆಗೊಳ್ಳಲಿದೆ.

ರೇಷ್ಮೆ ಕೃಷಿಯಲ್ಲಿ ಬೆಂಗಳೂರು ಕೃಷಿ ವಿ.ವಿ.ಯ ಸಂಶೋಧನೆಗಳು, ತಲಘಟ್ಟಪುರದ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳ ಸಂಶೋಧನೆಗಳನ್ನು ಒಗ್ಗೂಡಿಸಿ ರೇಷ್ಮೆ ಇಲಾಖೆಯ ಉಪಯುಕ್ತ ಮಾಹಿತಿಯನ್ನು ಒಂದೇ ಮಾರ್ಗದರ್ಶಿಯಲ್ಲಿ ಒದಗಿಸಿದೆ.

ಹಿಪ್ಪುನೇರಳೆ ಬೇಸಾಯ, ರೇಷ್ಮೆಹುಳು ಸಾಕಣೆ ತಂತ್ರಜ್ಞಾನ, ಹಿಪ್ಪುನೇರಳೆ ತೋಟದಲ್ಲಿ ಮಣ್ಣಿನ ನಿರ್ವಹಣೆ, ವಿವಿಧ ಕಚೇರಿಗಳ ಮಾಹಿತಿಯನ್ನು ಈ ಮಾರ್ಗದರ್ಶಿ ಒಳಗೊಂಡಿದೆ. ಆಸಕ್ತರು ಈ ಪುಸ್ತಕವನ್ನು ಜಿಕೆವಿಕೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದಿಂದ ಪಡೆಯಬಹುದು.

ಪಿಡಿಎಫ್ ಮೂಲಕವೂ ಈ ಮಾರ್ಗದರ್ಶಿಯನ್ನು ರೇಷ್ಮೆ ಬೆಳೆಗಾರರ ಮೊಬೈಲ್‌ಗೆ ವಾಟ್ಸ್‌ಆ್ಯಪ್ ಮೂಲಕ ರವಾನಿಸಲಾಗುವುದು. ಆಸಕ್ತರು 9535355329 ಸಂಖ್ಯೆಗೆ ಮನವಿ ಸಲ್ಲಿಸಬಹುದು. ವಿಶ್ವವಿದ್ಯಾಲಯದ ವೆಬ್‌ಸೈಟ್ www.uasbangalore.edu.in ಹಾಗೂ 'e-Krishi AGRI Portal'ನಲ್ಲೂ ಇದು ಲಭ್ಯ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಂಕಿ–ಅಂಶ

3 ಲಕ್ಷ
ಮೇಳಕ್ಕೆ ಶನಿವಾರ ಭೇಟಿ ನೀಡಿದವರು

12.96 ಲಕ್ಷ
ಆನ್‌ಲೈನ್ ಮೂಲಕ ವೀಕ್ಷಿಸಿದವರು

8 ಸಾವಿರ
ರಿಯಾಯಿತಿ ದರದಲ್ಲಿ ಪೂರೈಸಿದ ಭೋಜನ ಸ್ವೀಕರಿಸಿದವರು

703
ಕೃಷಿ ಸಂಬಂಧಿತ ಸಲಹೆ ಪಡೆದ ರೈತರು

ಮೇಳದಲ್ಲಿ ವಾಹನ ದಟ್ಟಣೆ

ಮೇಳಕ್ಕೆ ಶನಿವಾರ ಹೆಚ್ಚು ಜನ ಬಂದಿದ್ದರಿಂದ ಜಿಕೆವಿಕೆ ಆವರಣದ ರಸ್ತೆಗಳಲ್ಲಿ ವಾಹನದಟ್ಟಣೆ ಅಧಿಕವಾಗಿತ್ತು. ಮೋಡ ಕವಿದ ವಾತಾವರಣ ಇದ್ದಿದ್ದರಿಂದ ಹಲವರು ಕಾರುಗಳಲ್ಲೇ ಮೇಳಕ್ಕೆ ಬಂದಿದ್ದರು. ಇದರಿಂದ ಕಾರುಗಳ ಸಂಚಾರ ಅಧಿಕವಾಗಿತ್ತು. ಆವರಣದ ಪ್ರವೇಶದ್ವಾರದ ಸಮೀಪವೇ ಇರುವ ಮೈದಾನದಲ್ಲಿ ಕಾರು ನಿಲುಗಡೆಗೆ ಸ್ಥಳ ನಿಗದಿ ಮಾಡಲಾಗಿತ್ತು.

ವಾಹನ ದಟ್ಟಣೆ ನಿಯಂತ್ರಿಸಲು ಪೊಲೀಸರು ಹಾಗೂ ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿ ಹರಸಾಹಸ ಪಟ್ಟರು.

ಲಸಿಕೆಗೆ ನಕಾರ: ನೀರು, ವಿದ್ಯುತ್ ಸ್ಥಗಿತ!

ಪ್ರಜಾವಾಣಿ ವಾರ್ತೆ

ಪಾವಗಡ (ತುಮಕೂರು): ಕೋವಿಡ್ ಲಸಿಕೆ ಪಡೆಯಲು ಹಿಂಜರಿದ ಕನುಮಲಚೆರುವು ಬಡಾವಣೆಯ 40ಕ್ಕೂ ಹೆಚ್ಚಿನ ಮನೆಗಳಿಗೆ ಅಧಿಕಾರಿಗಳು ಕುಡಿಯುವ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ.

ಕೂಲಿಕಾರ್ಮಿಕರು, ಪರಿಶಿಷ್ಟ ಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಬಡಾವಣೆ 20 ದಿನಗಳಿಂದ ಕತ್ತಲಲ್ಲಿ ಮುಳುಗಿದೆ. ಕುಡಿಯುವ ನೀರಿಲ್ಲದೆ ಪರದಾಡುತ್ತಿರುವ ನಿವಾಸಿಗಳು ಪುರಸಭೆ ಮುಂಭಾಗ ಪ್ರತಿಭಟನೆಗೆ ಮುಂದಾಗಿದ್ದಾರೆ.

> **ಬಡಾವಣೆಯ ಜನತೆ ಈಗಾಗಲೇ ಲಸಿಕೆ ಹಾಕಿಸಿಕೊಂಡಿದ್ದರೆ ನೀರು ಪೂರೈಸುವಂತೆ ಮುಖ್ಯಾಧಿಕಾರಿಗೆ ಸೂಚಿಸಲಾಗುವುದು**
> **ಕೆ.ಆರ್. ನಾಗರಾಜು**
> ತಹಶೀಲ್ದಾರ್, ಪಾವಗಡ

'20 ದಿನದ ಹಿಂದೆ ಅಧಿಕಾರಿಗಳ ತಂಡ ಲಸಿಕೆ ಹಾಕಲು ಬಂದಿತ್ತು. ಸಮಯ ನೀಡುವಂತೆ ಕೋರಲಾಗಿತ್ತು. ಪುರಸಭೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಏಕಾಏಕಿ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ' ಎಂದು ಬಡಾವಣೆ ನಿವಾಸಿಗಳು ಆರೋಪಿಸಿದ್ದಾರೆ.

'ಕೂಲಿ ಮಾಡಿ ಜೀವನ ಸಾಗಿಸಬೇಕು. ಶನಿವಾರ ಲಸಿಕೆ ಹಾಕಿಸಿಕೊಂಡು ಭಾನುವಾರ ಕೆಲಸಕ್ಕೆ ರಜೆ ಹಾಕುತ್ತೇವೆ ಎಂದು ಅಧಿಕಾರಿಗಳಿಗೆ ಮನವರಿಕೆ ಮಾಡಲಾಗಿತ್ತು. ಆದರೂ ನೀರು, ವಿದ್ಯುತ್ ಸ್ಥಗಿತಗೊಳಿಸಿದ್ದಾರೆ' ಎಂದರು.

'ಕೋವಿಡ್ ಲಸಿಕೆಗೂ, ನೀರಿನ ಸಂಪರ್ಕ ಕಡಿತಕ್ಕೂ ಸಂಬಂಧವಿಲ್ಲ. ಡೆಪಾಸಿಟ್ ಪಾವತಿಸದೆ ನೀರಿನ ಸಂಪರ್ಕ ಪಡೆದಿರುವ ಕಾರಣ ಪೈಪ್ ಲೈನ್ ಸಂಪರ್ಕ ಕಡಿತಗೊಳಿಸಲಾಗಿದೆ. ಡೆಪಾಸಿಟ್ ಹಣ ಪಾವತಿಸಿದ ನಂತರ ಸಂಪರ್ಕ ಕಲ್ಪಿಸಲಾಗುವುದು' ಎಂದು ಪುರಸಭೆ ಮುಖ್ಯಾಧಿಕಾರಿ ಬಿ.ಸಿ. ಅರ್ಚನಾ ಸ್ಪಷ್ಟಪಡಿಸಿದ್ದಾರೆ.

ವಿದ್ಯುತ್ ಅಥವಾ ನೀರಿನ ಸಂಪರ್ಕ ಕಡಿತಗೊಳಿಸಿದ್ದರೆ ಪುನಃ ಸಂಪರ್ಕ ಕಲ್ಪಿಸಲಾಗುವುದು ಎಂದು ಮಧುಗಿರಿ ಉಪ ವಿಭಾಗಾಧಿಕಾರಿ ಸೋಮಪ್ಪ ಕಡಕೋಳ ಭರವಸೆ ನೀಡಿದ್ದಾರೆ. 'ಬಡಾವಣೆಗೆ ಬೆಸ್ಕಾಂ ಸಿಬ್ಬಂದಿಯನ್ನು ತಹಶೀಲ್ದಾರ್ ಕರೆದೊಯ್ದಿದ್ದರು. ಅಂದು ಸಂಜೆಯೇ ಮತ್ತೆ ಸಂಪರ್ಕ ನೀಡಲಾಗಿದೆ' ಎಂದು ಬೆಸ್ಕಾಂ ಸಹಾಯಕ ಎಂಜಿನಿಯರ್ ಅಂಜಿಬಾಬು ತಿಳಿಸಿದರು.

ಕೂಳೆ ನಿರ್ವಹಣೆಯ ಯಂತ್ರ ಸರ್ಕಾರವೇ ಒದಗಿಸಬಾರದೇಕೆ?

ಬಡರೈತರ ಕಷ್ಟ ಗೊತ್ತು: ಸುಪ್ರೀಂ ಕೋರ್ಟ್

ನವದೆಹಲಿ(ಪಿಟಿಐ): ಕೂಳೆ ನಿರ್ವಹಣೆಗಾಗಿ ಯಂತ್ರಗಳನ್ನು ಖರೀದಿಸುವುದು ಬಡರೈತರಿಗೆ ಸಾಧ್ಯವಾಗದು ಎಂದು ಸುಪ್ರೀಂ ಕೋರ್ಟ್ ಶನಿವಾರ ಅಭಿಪ್ರಾಯಪಟ್ಟಿದೆ.

'ನಾನೂ ರೈತ. ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರೂ ಕೃಷಿ ಕುಟುಂಬದಿಂದಲೇ ಬಂದವರು. ರೈತರ ಕಷ್ಟ ಏನೆಂಬುದರ ಅರಿವು ನಮಗಿದೆ. ಬೆಳೆ ಕಟಾವಿನ ನಂತರದ ಕೂಳೆ ನಿರ್ವಹಣೆಗಾಗಿ ಉತ್ತರದ ರಾಜ್ಯಗಳ ಬಡ ಹಾಗೂ ಸಣ್ಣ ರೈತರಿಗೆ ಯಂತ್ರಗಳನ್ನು ಖರೀದಿಸುವುದು ಆಗದ ಮಾತು' ಎಂದು ನ್ಯಾಯಮೂರ್ತಿ ಸೂರ್ಯಕಾಂತ ಹೇಳಿದರು.

ಕೂಳೆ ತೆಗೆಯುವ ಯಂತ್ರಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಚಿತವಾಗಿ ಒದಗಿಸುವಂತೆ ನಿರ್ದೇಶನ ನೀಡುವಂತೆ ಕೋರಿ, ಪರಿಸರ ಕಾರ್ಯಕರ್ತ ಆದಿತ್ಯ ದುಬೆ ಹಾಗೂ ಕಾನೂನು ವಿದ್ಯಾರ್ಥಿ ಅಮನ್ ಬಂಕಾ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನ ಸುಪ್ರೀಂ ಕೋರ್ಟ್ ನಡೆಸಿತು.

'ಎರಡು ಲಕ್ಷ ಯಂತ್ರಗಳು ಲಭ್ಯವಿರುವುದಾಗಿ ನೀವು ಹೇಳುತ್ತಿದ್ದೀರಿ. ಆದರೆ, ಅವುಗಳನ್ನು ಕೊಳ್ಳುವ ಶಕ್ತಿ ಬಡ ರೈತರಿಗೆ ಇಲ್ಲ. ಕೃಷಿ ಕಾನೂನುಗಳ ನಂತರದಲ್ಲಿ ಉತ್ತರಪ್ರದೇಶ, ಪಂಜಾಬ್ ಹಾಗೂ ಹರಿಯಾಣದಲ್ಲಿ ಮೂರು ಎಕರೆಗಿಂತ ಕಡಿಮೆ ಭೂಮಿ ಉಳ್ಳವರಿದ್ದಾರೆ. ಅಂಥವರಿಂದ ಯಂತ್ರ ಖರೀದಿಯನ್ನು ನಿರೀಕ್ಷಿಸಲಾಗದು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಹೇಳಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ ಯಂತ್ರಗಳನ್ನು ಒದಗಿಸಬಾರದೇಕೆ? ಕಾಗದ ಕಾರ್ಖಾನೆಗಳಲ್ಲಿ ಅಥವಾ ಬೇರೆ ಉದ್ದೇಶಕ್ಕೆ ಕೂಳೆಯನ್ನು ಬಳಕೆ ಮಾಡಿ. ರಾಜಸ್ಥಾನದಲ್ಲಿ ಚಳಿಗಾಲದಲ್ಲಿ ಆಡುಗಳಿಗೆ ಮೇವಾಗಿಯೂ ಬಳಸಬಹುದು' ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಮೆಹ್ತಾ, ಈ ಯಂತ್ರಗಳು ಶೇ 80 ಸಬ್ಸಿಡಿ ದರದಲ್ಲಿ ಲಭ್ಯ ಇರುವುದಾಗಿ ನ್ಯಾಯಾಲಯಕ್ಕೆ ತಿಳಿಸಿದರು.

'ಹಾಗಿದ್ದರೆ, ಸಬ್ಸಿಡಿ ನಂತರದಲ್ಲಿ ಈ ಯಂತ್ರಗಳ ನಿಜವಾದ ದರ ಎಷ್ಟು ಎಂಬುದನ್ನು ನಿಮ್ಮ ಅಧಿಕಾರಿಗಳು ಹೇಳುತ್ತಾರೆಯೇ? ಅಷ್ಟು ದರ ಕೊಟ್ಟು ರೈತರಿಗೆ ಖರೀದಿಸುವುದು ಸಾಧ್ಯವಾಗುತ್ತದೆಯೇ' ಎಂದು ನ್ಯಾಯಮೂರ್ತಿ ಸೂರ್ಯಕಾಂತ ಪ್ರಶ್ನಿಸಿದರು.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ ಅವರೂ ಇದ್ದ ವಿಶೇಷ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಿತು.

ದೆಹಲಿ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ರಾಹುಲ್ ಮೆಹ್ರಾ, ರೈತರು ಕೂಳೆ ಸುಡುವ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದರು.

ಆಗ, 'ವಾಯು ಮಾಲಿನ್ಯಕ್ಕೆ ರೈತರನ್ನು ದೂರುವುದು ಫ್ಯಾಶನ್ ಆಗಿಬಿಟ್ಟಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ಪಟಾಕಿ ನಿಷೇಧ ಮತ್ತು ವಾಹನಗಳ ಇಂಗಾಲ ಹೊರಸೂಸುವಿಕೆಯನ್ನು ನಿಯಂತ್ರಿಸುವುದು ಸೇರಿದಂತೆ ಬೇರೆ ಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದೆಯೇ ಎಂದೂ ಪ್ರಶ್ನಿಸಿತು.

'ಅರ್ಜಿದಾರರು, ದೆಹಲಿ ಸರ್ಕಾರ ಅಥವಾ ಇನ್ನಾರೇ ಆಗಿರಲಿ. ರೈತರನ್ನು ದೂರುವುದೇ ಫ್ಯಾಶನ್ ಆಗಿದೆ. ದೆಹಲಿಯಲ್ಲಿ ಕಳೆದ ಏಳು ದಿನಗಳಲ್ಲಿ ಪಟಾಕಿ ಸುಟ್ಟಿದ್ದನ್ನು ನೋಡಿದಿರಾ? ದೆಹಲಿ ಪೊಲೀಸರು ಏನು ಮಾಡುತ್ತಿದ್ದರು?' ಎಂದು ತರಾಟೆಗೆ ತೆಗೆದುಕೊಂಡಿತು.ಈ ಬಗ್ಗೆ ಸಂಬಂಧಿಸಿದವರೊಂದಿಗೆ ಸಭೆ ನಡೆಸಿ, ಸೋಮವಾರ ಪ್ರತಿಕ್ರಿಯೆ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

ಮಹಾರಾಷ್ಟ್ರ: 26 ನಕ್ಸಲರ ಹತ್ಯೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಗಡ್‌ಚಿರೋಲಿ ಜಿಲ್ಲೆಯಲ್ಲಿ ಬಂಡುಕೋರರ ವಿರುದ್ಧ ಪೊಲೀಸರು ಶನಿವಾರ ನಡೆಸಿದ ಎನ್‌ಕೌಂಟರ್‌ನಲ್ಲಿ 26 ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅರಣ್ಯದಿಂದ ಈವರೆಗೆ 26 ಮೃತದೇಹಗಳನ್ನು ಹೊರತೆಗೆಯಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಅಂಕಿತ್ ಗೋಯಲ್ ತಿಳಿಸಿದ್ದಾರೆ. ಮೃತರ ಗುರುತು ಇನ್ನಷ್ಟೇ ಪತ್ತೆಯಾಗಬೇಕಿದೆ. ಆ ಪೈಕಿ ಒಬ್ಬ ಪ್ರಮುಖ ಬಂಡುಕೋರ ಮುಖಂಡ ಇದ್ದಾನೆ ಎಂದು ಮೂಲಗಳು ತಿಳಿಸಿವೆ. ಘಟನೆಯಲ್ಲಿ ನಾಲ್ವರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದು, ನಾಗಪುರದ ಆಸ್ಪತ್ರೆಗೆ ರವಾನಿಸಲಾಗಿದೆ.

ಜಿಲ್ಲೆಯ ಮರ್ದಿಂತೋಲಾ ಅರಣ್ಯ ವ್ಯಾಪ್ತಿಯ ಕೋರ್ಚಿ ಎಂಬಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಪೊಲೀಸ್ ಕಮಾಂಡೊ ಪಡೆ ಶನಿವಾರ ಬೆಳಿಗ್ಗೆ ಶೋಧ ಕಾರ್ಯಾಚರಣೆಗೆ ಮುಂದಾಗಿತ್ತು. ಈ ಸಂದರ್ಭದಲ್ಲಿ ಬಂಡುಕೋರರು ಗುಂಡು ಹಾರಿಸಿದರು. ಪ್ರತಿಯಾಗಿ ಕಮಾಂಡೊ ಪಡೆಯೂ ಗುಂಡು ಹಾರಿಸಿತು.

ಸೇನಾ ವಾಹನದ ಮೇಲೆ ಉಗ್ರರ ದಾಳಿ: ಐವರು ಯೋಧರು ಹುತಾತ್ಮ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂ ರೈಫಲ್ಸ್‌ಗೆ ಸೇರಿದ ಸೇನಾ ಬೆಂಗಾವಲು ವಾಹನದ ಮೇಲೆ ಶನಿವಾರ ಬೆಳಿಗ್ಗೆ ಉಗ್ರರು ದಾಳಿ ನಡೆಸಿದ್ದಾರೆ.

ಘಟನೆಯಲ್ಲಿ ನಾಲ್ವರು ಯೋಧರು, ಸೇನಾಧಿಕಾರಿ ವಿಪ್ಲವ್ ತ್ರಿಪಾಠಿ, ಅವರ ಪತ್ನಿ ಮತ್ತು ಮಗ ಸೇರಿದಂತೆ 7 ಮಂದಿ ಮೃತಪಟ್ಟಿದ್ದಾರೆ.

'ಮಣಿಪುರದ ಚುರಚಾಂದ್‌ಪುರ ಜಿಲ್ಲೆಯಲ್ಲಿ ನಡೆದಿರುವ ದಾಳಿ ತುಂಬಾ ನೋವು ತರಿಸಿದೆ. 46 ಅಸ್ಸಾಂ ರೈಫಲ್ಸ್‌ನ ಕಮಾಂಡಿಂಗ್ ಅಧಿಕಾರಿ ಸೇರಿ ಐವರು ವೀರ ಯೋಧರನ್ನು ದೇಶ ಕಳೆದುಕೊಂಡಿದೆ. ಅಧಿಕಾರಿಯ ಕುಟುಂಬದ ಇಬ್ಬರು ಸದಸ್ಯರೂ ಮೃತಪಟ್ಟಿದ್ದಾರೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವೀಟ್ ಮಾಡಿದ್ದಾರೆ.

ದಾಳಿಯನ್ನು ಖಂಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಹುತಾತ್ಮ ಯೋಧರ ಕುಟುಂಬದವರಿಗೆ ಸಂತಾಪ ಹೇಳಿದ್ದಾರೆ. ಯೋಧರ ಬಲಿದಾನವನ್ನು ಎಂದಿಗೂ ಮರೆಯುವುದಿಲ್ಲ ಎಂದು ಟ್ವೀಟ್ ಮಾಡಿದ್ದಾರೆ.

ಬಂಡುಕೋರರ ದಾಳಿಯಲ್ಲಿ ಗಾಯಗೊಂಡ ಯೋಧರನ್ನು ಹೆಲಿಕಾಪ್ಟರ್ ಮೂಲಕ ಕರೆದೊಯ್ಯಲಾಯಿತು – ಪಿಟಿಐ ಚಿತ್ರ

ಈ ದಾಳಿಯಲ್ಲಿ ಮಣಿಪುರದ ನಿಷೇಧಿತ ಬಂಡುಕೋರ ಸಂಘಟನೆಯಾದ ಪೀಪಲ್ಸ್ ಲಿಬರೇಷನ್ಸ್ ಆರ್ಮಿಯ (ಪಿಎಲ್‌ಎ) ಕೈವಾಡ ಇರಬಹುದು ಎಂದು ಶಂಕಿಸಲಾಗಿದೆ.

ದಾಳಿಯಲ್ಲಿ ಮೃತಪಟ್ಟ ಕರ್ನಲ್ ವಿಪ್ಲವ್ ತ್ರಿಪಾಠಿ ದಂಪತಿ

ಕೃಷಿ ಮೇಳ: ರೈತರನ್ನು ಆಕರ್ಷಿಸುತ್ತಿದೆ ಪ್ರಾತ್ಯಕ್ಷಿಕೆ

ಮೇವಿಗೂ ಬಂತು ಮಣ್ಣುರಹಿತ ಕೃಷಿ

• ಮನೋಹರ್ ಎಂ.

ಬೆಂಗಳೂರು: 'ಮಣ್ಣು ರಹಿತ ಕೃಷಿ' ಅಥವಾ 'ಜಲಕೃಷಿ' (ಹೈಡ್ರೊಪೋನಿಕ್ಸ್) ವಿಧಾನ ಬಳಸಿ ತೋಟ ಹಾಗೂ ಮನೆಯ ತಾರಸಿಯಲ್ಲೇ ಮಣ್ಣನ್ನು ಬಳಸದೆಯೇ ವಿವಿಧ ರೀತಿಯ ಸಸಿಗಳನ್ನು ಈಗಾಗಲೇ ಬೆಳೆಸಲಾಗುತ್ತಿದೆ. ಆದರೆ, ಜಾನುವಾರುಗಳಿಗೆ ನೀಡುವ ಮೇವನ್ನೂ ಈ ವಿಧಾನದಲ್ಲೇ ಕಡಿಮೆ ಸ್ಥಳದಲ್ಲಿ ಬೆಳೆಸಬಹುದಾದ ಪ್ರಾತ್ಯಕ್ಷಿಕೆ 'ಕೃಷಿ ಮೇಳ'ದಲ್ಲಿ ರೈತರ ಗಮನ ಸೆಳೆಯುತ್ತಿದೆ.

ಜಾನುವಾರುಗಳ ಮೇವನ್ನು ಜಮೀನಿನ ಬಯಲಿನ ಬದಲಿಗೆ ಕಡಿಮೆ ಜಾಗದಲ್ಲಿ ಸುಲಭವಾಗಿ ಬೆಳೆಸುವ ವಿಧಾನವನ್ನು ಬೆಂಗಳೂರಿನ ಬಯೋಗ್ರೀನ್ ಅಗ್ರಿ ಲಿಂಕ್ಸ್ ಎಂಬ ಸಂಸ್ಥೆ ರೈತರಿಗೆ ಪರಿಚಯಿಸಿದೆ. ಕೃಷಿ ಮೇಳದಲ್ಲಿ ಈ ಸಂಸ್ಥೆಯ ಮಳಿಗೆಯಲ್ಲಿ ಮಣ್ಣು ರಹಿತವಾಗಿ ಮೇವು ಬೆಳೆಸುವ ವಿಧಾನವನ್ನು ಪ್ರದರ್ಶಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ರೈತರು ಮುಗಿಬಿದ್ದರು.

'ಜಾನುವಾರುಗಳಿಗೆ ಬೇಕಾದ ಮೇವನ್ನು ಜಮೀನಿನಲ್ಲಿ ಬೆಳೆಯುತ್ತಾರೆ. ಆದರೆ, ಕಡಿಮೆ ಸ್ಥಳದಲ್ಲೇ ಸುಲಭವಾಗಿ ಮೇವನ್ನು ಬೆಳೆಯಬಹುದು. ಸಾಮಾನ್ಯ ಮೇವಿಗೆ ಹೋಲಿಸಿದರೆ, ಜಲಕೃಷಿ ವಿಧಾನದ ಮೇವು ಹೆಚ್ಚು ಪ್ರೊಟೀನ್ ಅಂಶಗಳನ್ನು ಹೊಂದಿರುತ್ತದೆ' ಎಂದು ಬಯೋಗ್ರೀನ್ ಅಗ್ರಿ ಲಿಂಕ್ಸ್ ಸಂಸ್ಥೆಯ ಮಾಲೀಕ ಪಿ.ದಿಲೀಪ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಡಿಮೆ ಸ್ಥಳದಲ್ಲಿ ಮೇವು ಬೆಳೆಯಲು 32 ಪ್ಲಾಸ್ಟಿಕ್ ಟ್ರೇಗಳನ್ನು ಇಡಬಹುದಾದ ಸ್ಟ್ಯಾಂಡ್ ತಯಾರಿಸಿದ್ದೇವೆ. ಪ್ರತಿ ಟ್ರೇನಲ್ಲೂ ಒಂದು ಕೆ.ಜಿಯಷ್ಟು ಜೋಳದ ಮೇವನ್ನು ಬೆಳೆಸಿದ್ದೇವೆ. ಬಯಲಿನಲ್ಲಿ ಬೆಳೆದರೆ ಎರಡು ಅಥವಾ ಮೂರು ತಿಂಗಳಿಗೆ ಮೇವು ಸಿಗುತ್ತದೆ. ಈ ಟ್ರೇಗಳಲ್ಲಿ 10 ದಿನಗಳಿಗೇ ಮೇವು ಸಿದ್ಧಗೊಳ್ಳುತ್ತದೆ' ಎಂದು ವಿವರಿಸಿದರು.

ಹೈಡ್ರೊಪೋನಿಕ್ಸ್ ವಿಧಾನದಲ್ಲಿ ಬೆಳೆದಿರುವ ಜೋಳದ ಮೇವು –ಪ್ರಜಾವಾಣಿ ಚಿತ್ರ

'32 ಟ್ರೇಗಳ ಮಾದರಿಯಲ್ಲಿ ರೈತನೊಬ್ಬ ನಾಲ್ಕು ಹಸುಗಳಿಗೆ ಬೇಕಾದ ಮೇವನ್ನು ಕಡಿಮೆ ಜಾಗದಲ್ಲಿ ಬೆಳೆದುಕೊಳ್ಳಬಹುದು. ತಲಾ ನಾಲ್ಕು ಟ್ರೇಗಳಲ್ಲಿ ಹಂತ ಹಂತವಾಗಿ ಮೇವು ಬೆಳೆಯಬೇಕು. ಇದನ್ನೇ ಪುನರಾವರ್ತನೆ ಮಾಡಿಕೊಂಡರೆ, ದಿನಕ್ಕೆ ನಾಲ್ಕು ಹಸುವಿಗೆ ಬೇಕಾದ ಮೇವು ಸಿದ್ಧವಾಗುತ್ತದೆ' ಎಂದರು.

'ಮೇವು ಬೆಳೆಯಲು ಹನಿ ನೀರಾವರಿ ಮೂಲಕ ಎಲ್ಲ ಟ್ರೇಗಳಿಗೆ ನಿಗದಿತ ಪ್ರಮಾಣದಲ್ಲಿ ನೀರು ಹರಿಸಬಹುದು. ಇದರ ರಕ್ಷಣೆಗೆ ಸ್ಟ್ಯಾಂಡ್ ಸುತ್ತಲೂ ಪರದೆಯನ್ನು ಅಳವಡಿಸುವುದು ಸೂಕ್ತ. ಆಗ ಕೀಟಗಳ ಕಾಟ ಇರುವುದಿಲ್ಲ' ಎಂದು ಮಾಹಿತಿ ನೀಡಿದರು.

'ಈ ಮೇವಿನಿಂದ ಹೆಚ್ಚು ಹಾಲು ಉತ್ಪಾದನೆ'

'ಜಲಕೃಷಿ ವಿಧಾನದ ಮೇವು ತಿನ್ನುವ ಹಸು ಸಾಮಾನ್ಯ ಮೇವು ತಿನ್ನುವ ಹಸುವಿಗಿಂತ 1.5 ಲೀಟರ್‌ಗಳಷ್ಟು ಹೆಚ್ಚುವರಿ ಹಾಲು ನೀಡುತ್ತದೆ . ಇದರಲ್ಲಿನ ಪ್ರೊಟೀನ್ ಅಂಶವೂ ಶೇ 18ರಷ್ಟು ಅಧಿಕವಾಗಿರುತ್ತದೆ. ಜೋಳದ ಮೇವು ಮಾತ್ರವಲ್ಲದೇ, ಗೋಧಿ, ರಾಗಿ, ಹುರುಳಿ ಸೇರಿದಂತೆ ವಿವಿಧ ರೀತಿಯ ಮೇವುಗಳನ್ನು ಈ ವಿಧಾನದಲ್ಲಿ ಬೆಳೆಯಬಹುದು' ಎಂದು ದಿಲೀಪ್ ಕುಮಾರ್ ವಿವರಿಸಿದರು.

ಪಿ.ದಿಲೀಪ್ ಕುಮಾರ್

'ರೈತರ ಅನುಕೂಲಕ್ಕಾಗಿ 36 ಟ್ರೇಗಳ ಮಾದರಿಯನ್ನು ಸಂಸ್ಥೆಯೇ ಸಿದ್ಧಪಡಿಸಿ ಕೊಡುತ್ತದೆ. ಇದಕ್ಕೆ ₹26 ಸಾವಿರ ವೆಚ್ಚ ಆಗಲಿದೆ. ಇನ್ನೂ ಕಡಿಮೆ ಸಾಮರ್ಥ್ಯಕ್ಕೆ ಬೇಕಾದಂತೆಯೂ ಸ್ಟ್ಯಾಂಡ್ ಸಿದ್ಧಪಡಿಸಿಕೊಡಲಾಗುವುದು. ಆಸಕ್ತರು ಸಂಸ್ಥೆಯ ದೂರವಾಣಿ 9901769546 ಅಥವಾ ಇಮೇಲ್– biogreendv@gmail.com ಅನ್ನು ಸಂಪರ್ಕಿಸಬಹುದು' ಎಂದರು.

ನಗರದಲ್ಲಿ ಇಂದು

ಜೀವ ಮತ್ತು ದೃಷ್ಟಿ ಉಳಿಸುವ ಜಾಗೃತಿ ಕಾರ್ಯಕ್ರಮ: ಆಯೋಜನೆ–ಆದಿತ್ಯ ನೇತ್ರಾಲಯ, ಸ್ಥಳ–ದೊಡ್ಡರಂಗೇಗೌಡ ರಂಗಮಂದಿರ, ಬನಶಂಕರಿ 3ನೇ ಹಂತ, ಬೆಳಿಗ್ಗೆ 9

ನಟ ಪುನೀತ್‌ರಾಜ್ ಕುಮಾರ್ ಅವರಿಗೆ ನುಡಿನಮನ, ಬಂಜಾರ ದೀಪಾವಳಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಉತ್ಸವ, ವಧು–ವರರ ಅನ್ವೇಷಣೆ: ಸಾನ್ನಿಧ್ಯ–ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಬಳಿರಾಮ ಮಹಾರಾಜ ಸ್ವಾಮೀಜಿ, ದೇನಾ ಭಗತ್ ಸ್ವಾಮೀಜಿ, ಉದ್ಘಾಟನೆ–ಕಂದಾಯ ಸಚಿವ ಆರ್.ಅಶೋಕ, ಅಧ್ಯಕ್ಷತೆ–ರಂಗತಜ್ಞ ಎ.ಆರ್.ಗೋವಿಂದಸ್ವಾಮಿ, ಅತಿಥಿಗಳು–ಪಶುಸಂಗೋಪನೆ ಸಚಿವ ಪ್ರಭು ಚವಾಣ್, ಶಾಸಕ ಸತೀಶ್ ರೆಡ್ಡಿ, ಸಾಹಿತಿ ಬಿ.ಟಿ.ಲಲಿತಾ ನಾಯಕ್, ಆಯೋಜನೆ–ಬಂಜಾರ ಜನಸೇವಾ ಸಂಘ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.30

ಮಹಿಳೆಯರು ಮತ್ತು ಮಕ್ಕಳಿಗಾಗಿ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ: ಆರೋಗ್ಯ ಸಚಿವ ಕೆ.ಸುಧಾಕರ್, ಸಾನ್ನಿಧ್ಯ–ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು–ಸಂಸದ ಪಿ.ಸಿ. ಮೋಹನ್, ಶಾಸಕರಾದ ಶಾಮನೂರು ಶಿವಶಂಕರಪ್ಪ, ಜಗದೀಶ್ ಶೆಟ್ಟರ್, ಎನ್.ಎ.ಹ್ಯಾರಿಸ್, ರಿಜ್ವಾನ್ ಅರ್ಷದ್, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ.ಪಾಟೀಲ, ಸ್ಥಳ–ಸ್ಪರ್ಶ್ ಆಸ್ಪತ್ರೆ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 11

ಬಾಳೆಹಣ್ಣಿನ ಹಬ್ಬ: ಆಯೋಜನೆ–ಗ್ರಾಮ ಸೇವಾ ಸಂಘ ಮತ್ತು ಹುಲ್ಕುಲ್ ಮುನಿಸ್ವಾಮಪ್ಪ–ಮುನಿವೆಂಕಟಮ್ಮ ಚಾರಿಟಬಲ್ ಟ್ರಸ್ಟ್, ಸ್ಥಳ–ರಾಗಿ ಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

ಯುವಜನ ಸಮ್ಮೇಳನ: ಅತಿಥಿಗಳು–ಬಾಬು ಮ್ಯಾಥ್ಯು, ಎಂ.ಎನ್. ಶ್ರೀರಾಮ್, ಜಿ.ಎಸ್.ಕುಮಾರ್, ಆಯೋಜನೆ–ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ), ಸ್ಥಳ–ಮಹಾರಾಷ್ಟ್ರ ಮಂಡಳಿ ಸಭಾಂಗಣ, ಕಾಳಿದಾಸ ವೃತ್ತ, ಗಾಂಧಿನಗರ, ಬೆಳಿಗ್ಗೆ 10.30

ಎಚ್.ಎಸ್.ಶಿವಪ್ರಕಾಶ್ ಅವರ 'ಹೋಗಿಬನ್ನಿ ಋತುಗಳೇ' ಪುಸ್ತಕ ಬಿಡುಗಡೆ: ಚಿಂತಕ ಚಿರಂಜೀವಿ ಸಿಂಗ್, ಅತಿಥಿಗಳು–ಅಜಯ್‌ಕುಮಾರ್ ಸಿಂಗ್, ಖಲೀಲ್ ಉರ್ ರೆಹಮಾನ್, ಎಚ್.ಎಲ್.ಪುಷ್ಪಾ, ಕೆ.ವೈ.ನಾರಾಯಣಸ್ವಾಮಿ, ಅಧ್ಯಕ್ಷತೆ–ಎಚ್.ಆರ್. ಸುಜಾತಾ, ಆಯೋಜನೆ–ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ, ಸ್ಥಳ–ಬಾಪು ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

ಲೇಖಕಿ ಹೇಮಾ ಹಟ್ಟಂಗಡಿ ಅವರ 'ಗೂಡಿನಿಂದ ಬಾನಿಗೆ' ಪುಸ್ತಕದ ಆಡಿಯೊ, ಮುದ್ರಣ ಹಾಗೂ ಇ–ಪುಸ್ತಕ ಬಿಡುಗಡೆ: ಅತಿಥಿಗಳು– ಕನ್ನಡ ಅನುವಾದಕಿ ಸಂಯುಕ್ತಾ ಪುಲಿಗಲ್, ಲೇಖಕಿ ಹೇಮಲತಾ ಮಹಿಷಿ, ತಕ್ಷಶಿಲಾ ಸಂಸ್ಥೆಯ ನಿತಿನ್ ಪೈ, ಮೈಲ್ಯಾಂಗ್ ಬುಕ್ಸ್‌ನ ವಸಂತ ಶೆಟ್ಟಿ ಹಾಗೂ ಪವಮಾನ್ ಅಥಣಿ, ಆಯೋಜನೆ–ಮೈಲ್ಯಾಂಗ್ ಬುಕ್ಸ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಶಾಲಿನಿ ಮೂರ್ತಿ ಅವರ 'ಕಥೆಗಳ ತೋರಣ' ಪುಸ್ತಕ ಬಿಡುಗಡೆ: ಗೌರಿ ಮತ್ತು ಮಾನ್ಯತಾ, ಅತಿಥಿಗಳು–ಕಿರಣ್ ಪ್ರಸಾದ್ ರಾಜನಹಳ್ಳಿ, ರಮೇಶ್ ಉಡುಪ, ಗುಜ್ಜಾರಪ್ಪ, ಆಯೋಜನೆ–ಬುಕ್‌ಬ್ರಹ್ಮ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಪುಸ್ತಕ ಪ್ರದರ್ಶನ ಮತ್ತು ಸಾಕ್ಷರತೆ ಕಾರ್ಯಕ್ರಮ: ಉದ್ಘಾಟನೆ–ಮನು ಬಳಿಗಾರ್, ಆಯೋಜನೆ ಮತ್ತು ಸ್ಥಳ–ಸಾಹಿತ್ಯ ಅಕಾಡೆಮಿ, ಮಂತ್ರಿಮಾಲ್ ಹತ್ತಿರ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11

ನಾಟ್ಯ ಸಂಭ್ರಮ: 'ಶಿವಪುತ್ರ ಅಯ್ಯಪ್ಪ' ನೃತ್ಯರೂಪಕ–ರೋಶನ್, ಸಂಯೋಜನೆ–ಸಂಜಯ್ ಶಾಂತಾರಾಂ, ಆಯೋಜನೆ–ಶಿವಪ್ರಿಯ ನೃತ್ಯಶಾಲೆ, ಸ್ಥಳ–ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 5.30

ಕೃಷಿ ಮೇಳ ಸಮಾರೋಪ ಮತ್ತು ರಾಜ್ಯಮಟ್ಟದ ಕೃಷಿ ಪ್ರಶಸ್ತಿಗಳ ಪ್ರದಾನ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಅತಿಥಿಗಳು–ಕೃಷಿ ಸಚಿವ ಬಿ.ಸಿ.ಪಾಟೀಲ, ಸಂಸದ ಡಿ.ವಿ.ಸದಾನಂದಗೌಡ, ಅಧ್ಯಕ್ಷತೆ–ಶಾಸಕ ಕೃಷ್ ಣಬೈರೇಗೌಡ, ಸ್ಥಳ–ಜಿಕೆವಿಕೆ, ಮಧ್ಯಾಹ್ನ 2.30

'ಭಾವವರ್ಣ–ಭಾವಯಾನ' ಕಲೆ ಮತ್ತು ಸಂಗೀತ ಕಾರ್ಯಕ್ರಮ: ಅತಿಥಿಗಳು–ಪಿ.ನಾಗರಾಜ್, ಅಂಜಲಿ ಶೆಟ್ಟಿ, ಗಣೇಶ್ ದೇಸಾಯಿ, ನಮಿತಾ ದೇಸಾಯಿ, ಗಣಪತಿ ಎಸ್. ಹೆಗಡೆ, ಆಯೋಜನೆ, ಸ್ಥಳ–ಕೊಬಾಲ್ಟ್ ಆರ್ಟ್ ಗ್ಯಾಲರಿ, ರಾಜರಾಜೇಶ್ವರಿನಗರ, ಸಂಜೆ 4.30

ಕಾರ್ತಿಕ ಸಂಗೀತೋತ್ಸವ: ಆಯೋಜನೆ–ಚಿಂತಲಪಲ್ಲಿ ಕೃಷ್ಣಮೂರ್ತಿ ಸಂಗೀತ ಅಕಾಡೆಮಿ, ಸ್ಥಳ–ಭವಾನಿ ಕ್ಷೇತ್ರ, ಅಂಬಾಭವಾನಿ ದೇವಸ್ಥಾನ, ಭುವನೇಶ್ವರಿ ನಗರ, ಟಿ.ದಾಸರಹಳ್ಳಿ, ಸಂಜೆ 4.30

ಸ್ವರ ಸಂಜೆ: ತಬಲಾ ವಾದಕ ರವೀಂದ್ರ ಯಾವಗಲ್ ಅವರಿಗೆ ಸನ್ಮಾನ:ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಆಯೋಜನೆ–ಸಪ್ತಕ, ಸ್ಥಳ–ಟಿ.ಎಸ್.ಆರ್ ಹಾಲ್, ಕೆನರಾ ಯೂನಿಯನ್, 8ನೇ ಮುಖ್ಯ ರಸ್ತೆ, ಮಲ್ಲೇಶ್ವರ, ಸಂಜೆ 5

'ರಂಗವಿಠಲ' ನೃತ್ಯ, ಸಂಗೀತ, ನಾಟಕರಂಗ ನೂತನ ಶಾಲೆ ಉದ್ಘಾಟನೆ: ಕೊಳಲು ವಾದಕ ಎಚ್.ಎಸ್.ವೇಣುಗೋಪಾಲ್, ಸಾನ್ನಿಧ್ಯ–ಮೋಹನ್ ಗುರೂಜಿ, ಅಧ್ಯಕ್ಷತೆ–ಪಲ್ಲವಿ ಮಣಿ, ಆಯೋಜನೆ–ರಂಗವಿಜಯಾ, ಸ್ಥಳ–ರಂಗವಿಠಲ, ವೈಯಾಲಿಕಾವಲ್, ಸಂಜೆ 6.30

ರೇನ್ ಬೋ ಪೀಡಿಯಾಟ್ರಿಕ್ ತುರ್ತು ಸೇವೆಗಳ ಲೋಕಾರ್ಪಣೆ: ಅತಿಥಿಗಳು–ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರೂಪಾ ಮೌದ್ಗಿಲ್, ನಟಿ ಶ್ವೇತಾ ಶ್ರೀವಾತ್ಸವ್, ಸ್ಥಳ–ತಾಜ್, ಟ್ರಿನಿಟಿ ವೃತ್ತದ ಹತ್ತಿರ, ಸಂಜೆ 5.15



ಶ್ವೇತಾ ಶ್ರೀವಾತ್ಸವ್

ಕಾವೇರಿ–ವೈಗೈ–ಗುಂಡಾರು ಜೋಡಣೆ: 'ಸುಪ್ರೀಂ' ವಿಚಾರಣೆ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿಯ 45 ಟಿಎಂಸಿ ಅಡಿ ಹೆಚ್ಚುವರಿ ನೀರಿನ ಬಳಕೆಯ ಉದ್ದೇಶದೊಂದಿಗೆ ತಮಿಳುನಾಡು ಸರ್ಕಾರ ಪುದುಕೋಟ್ಟಯಿ ಜಿಲ್ಲೆಯ ಕುಣತ್ತೂರು ಬಳಿ ನಿರ್ಮಿಸುತ್ತಿರುವ ಕಾವೇರಿ–ವೈಗೈ – ಗುಂಡಾರು ಜೋಡಣಾ ಕಾಲುವೆ ನಿರ್ಮಾಣವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ದಾಖಲಿಸಿರುವ ಮೂಲದಾವೆ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ (ನ. 15) ಆರಂಭಿಸಲಿದೆ.

ತಮಿಳುನಾಡಿನ ಕರೂರ ಜಿಲ್ಲೆಯಲ್ಲಿ ಕಟ್ಟಿರುವ ಮಾಯನೂರು ಜಲಾಶಯದಿಂದ ಕಾವೇರಿಯ ಹೆಚ್ಚುವರಿ ನೀರನ್ನು ಗುಂಡಾರಕ್ಕೆ ಕಾಲುವೆ ಮೂಲಕ ವರ್ಗಾಯಿಸಲು ತಮಿಳುನಾಡು ಯೋಜನೆ ರೂಪಿಸಿದೆ. 262 ಕಿ.ಮೀ ಉದ್ದದ ಈ ಕಾಲುವೆ ನಿರ್ಮಾಣವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ 2020ರ ಫೆಬ್ರುವರಿಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.

'ಕಾವೇರಿ ನ್ಯಾಯಮಂಡಳಿ ತಮಿಳುನಾಡಿಗೆ ಹಂಚಿಕೆ ಮಾಡಿರುವ 177.25 ಟಿಎಂಸಿ ಅಡಿ ನೀರನ್ನು ಬಿಳಿಗುಂಡ್ಲುವಿನ ಅಂತರರಾಜ್ಯ ಮಾಪನ ಕೇಂದ್ರದಲ್ಲಿ ನಿಗದಿಪಡಿಸಿದ ಬಳಿಕ, ಒಂದು ಸರಾಸರಿ ವರ್ಷದಲ್ಲಿ ಬಾಕಿ ಉಳಿದ ನೀರು ನಮಗೆ ಸೇರಿದ್ದಾಗಿದೆ. ಅದರಲ್ಲಿ ಕರ್ನಾಟಕದ ಪಾಲಿನ 248.75 ಟಿಎಂಸಿ ಅಡಿ ನೀರು ಮತ್ತು ಕಾವೇರಿಯಲ್ಲಿ ಲಭ್ಯವಾಗಬಹುದಾದ 45 ಟಿಎಂಸಿ ಅಡಿ ನೀರು ನಮಗೆ ಸೇರಿದೆ' ಎಂದು ಕರ್ನಾಟಕ ಸರ್ಕಾರ ವಾದಿಸುತ್ತಿದೆ. ತನ್ನ ಪಾಲಿನ ನ್ಯಾಯಸಮ್ಮತ ನೀರು ಪಡೆದುಕೊಳ್ಳಲು ಕಾನೂನು ಹೋರಾಟಕ್ಕೆ ಮುಂದಾಗಿರುವ ಕರ್ನಾಟಕ ಸರ್ಕಾರ, ಈ ನಿಲುವನ್ನು ಸುಪ್ರೀಂ ಕೋರ್ಟ್‌ನಲ್ಲೂ ಪ್ರತಿಪಾದಿಸಲಿದೆ.

ಪುನೀತ್ ರಾಜ್‌ಕುಮಾರ್ ನಿರ್ಮಾಣ ಸಂಸ್ಥೆಯ ಭವಿಷ್ಯದ ಕುರಿತು ಯುವ ಮನಸ್ಸುಗಳ ಕುತೂಹಲ

ಆ ನಿರ್ವಾತ ತುಂಬುವವರಾರು?

● ಪದ್ಮನಾಭ ಭಟ್

ಬೆಂಗಳೂರು: 'ಸದಾ ಸಿನಿಮಾ ಚಟುವಟಿಕೆಗಳಿಂದ ಜೀವಂತವಾಗಿರುತ್ತಿದ್ದ ಜಾಗವದು. ಈಗ ಹೆಪ್ಪುಗಟ್ಟಿದ ವಿಷಾದ, ಬಿಕ್ಕಳಿಕೆ, ಕಣ್ಣೀರುಗಳಿಂದ ಕೂಡಿದ ಜಾಗವನ್ನು ನೋಡಿ ಕರುಳು ಕಿವುಚಿದಂತಾಯ್ತು'– ಪುನೀತ್ ತೀರಿಕೊಂಡ ಹನ್ನೊಂದನೇ ದಿನ ಅವರ ಮನೆಗೆ ಹೋಗಿದ್ದ ಯುವ ನಿರ್ದೇಶಕರೊಬ್ಬರು ಸಂಕಟದಿಂದ ಆಡಿದ ಮಾತಿದು.

ನಲವತ್ತು ವರ್ಷಗಳಾದ ಮೇಲೆ ಬದುಕಿನ ಕುರಿತು ಮನುಷ್ಯನ ಗ್ರಹಿಕೆ ಬದಲಾಗುತ್ತದಂತೆ. ಪುನೀತ್ ವಿಷಯದಲ್ಲಿ ಇದು ಹಲವು ರೀತಿಗಳಲ್ಲಿ ನಿಜವಾಗಿತ್ತು. ಪುನೀತ್, 'ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣ ಸಂಸ್ಥೆ' (ಪಿಆರ್‌ಕೆ ಪ್ರೊಡಕ್ಷನ್ಸ್) ಪ್ರಾರಂಭಿಸಿದಾಗ (2017) ಅವರಿಗೆ ವಯಸ್ಸು ನಲ್ವತ್ತೆರಡು. ಇದು 'ಹೊಸತೇನಾದರೂ ಮಾಡಬೇಕು' ಎಂಬ ಅವರ ತಹತಹದ ಒಂದು ಮುಖವಷ್ಟೆ.

ಪುನೀತ್ ನಟನೆಯ ಕೊನೆಯ ಸಿನಿಮಾ, ಚೇತನ್ ಕುಮಾರ್ ನಿರ್ದೇಶನದ 'ಜೇಮ್ಸ್'. ಈ ಸಿನಿಮಾದಲ್ಲಿ ಪುನೀತ್ ಭಾಗದ ಚಿತ್ರೀಕರಣ ಮುಗಿದಿದೆ. 'ಜೇಮ್ಸ್' ಸಿನಿಮಾ ಖಂಡಿತ ಬಿಡುಗಡೆಯಾಗುತ್ತದೆ. ಪುನೀತ್ ಪಾತ್ರಕ್ಕೆ ಧ್ವನಿಜೋಡಣೆ ಮಾಡುವ ಬಗ್ಗೆ ಚರ್ಚಿಸುತ್ತಿದ್ದೇವೆ. ಮುಂಬೈ ಮೂಲದ ಕಂಪನಿಯೊಂದು ಪುನೀತ್ ಧ್ವನಿಯನ್ನು ಕೃತಕವಾಗಿ ಸೃಷ್ಟಿಸಿಕೊಡಲು ಮುಂದೆ

ಬಂದಿದೆ. ಶಿವರಾಜ್‌ಕುಮಾರ್ ಕೂಡ ಡಬ್ ಮಾಡಲು ಮುಂದೆ ಬಂದಿದ್ದಾರೆ. ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕಿದೆ. ಮುಂದಿನ ವರ್ಷ, ಪುನೀತ್ ಜನ್ಮದಿನದಂದು (ಮಾರ್ಚ್ 17) ಚಿತ್ರ ಬಿಡುಗಡೆ ಮಾಡಬೇಕು ಎಂದುಕೊಂಡಿದ್ದೇವೆ' ಎನ್ನುತ್ತಾರೆ ಚೇತನ್.

'ಜೇಮ್ಸ್' ನಂತರ ಪವನ್ ಕುಮಾರ್ ನಿರ್ದೇಶನದ 'ದ್ವಿತ್ವ'ದಲ್ಲಿ ಪುನೀತ್ ನಟಿಸಬೇಕಾಗಿತ್ತು. ಸೈಕಾಲಜಿಕಲ್ ಥ್ರಿಲ್ಲರ್ ಕಥಾಹಂದರವಿದ್ದ ಚಿತ್ರವಿದು.

'ವೈಲ್ಡ್ ಕರ್ನಾಟಕ' ಖ್ಯಾತಿಯ ಅಮೋಘವರ್ಷ ಜೆ.ಎಸ್. ಅವರ ಜೊತೆ ಸೇರಿ ಕರ್ನಾಟಕದ ವನ್ಯಸಂಪತ್ತನ್ನು ಕಾಣಿಸುವ ವಿಶಿಷ್ಟ ಡಾಕ್ಯೂಫಿಲ್ಮ್ ನಿರ್ಮಾಣದಲ್ಲಿಯೂ ಪುನೀತ್ ತೊಡಗಿಕೊಂಡಿದ್ದರು. ನಾಗರಹೊಳೆ, ಕಾಳಿನದಿ, ಹೊಸಪೇಟೆ ಸೇರಿ ಕರ್ನಾಟಕದ ಹಲವು ಜಾಗಗಳಲ್ಲಿ ಚಿತ್ರೀಕರಣ ಮಾಡಿದ್ದರು. ಸುಮಾರು ಶೇ 90ರಷ್ಟು ಚಿತ್ರೀಕರಣ ಮುಗಿದಿತ್ತು. ಇದಕ್ಕೆ 'ಗಂಧದ ಗುಡಿ' ಎಂದು ಹೆಸರಿಡಬೇಕು ಎಂದುಕೊಂಡಿದ್ದರು.

ದಿನಕರ್ ತೂಗುದೀಪ ನಿರ್ದೇಶನದ ಸಿನಿಮಾ, 'ಪೈಲ್ವಾನ್' ಕೃಷ್ಣ ನಿರ್ದೇಶನದ ಸಿನಿಮಾಗಳಲ್ಲಿಯೂ ನಟಿಸಲು ಒಪ್ಪಿಕೊಂಡಿದ್ದರು. ಪಿಆರ್‌ಕೆ ಬ್ಯಾನರ್ ಅಡಿಯಲ್ಲಿಯೇ ಜೇಕಬ್ ವರ್ಗೀಸ್ ನಿರ್ದೇಶನದಲ್ಲಿ ತಾವೇ ನಾಯಕನಾಗಿ ನಟಿಸುವ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಇವೆಲ್ಲವೂ ಪುನೀತ್ ಅಭಿನಯಿಸಲಿರುವ ಬಿಗ್ ಬಜೆಟ್ ಸಿನಿಮಾಗಳ ಪಟ್ಟಿಯಾದರೆ, ಅವರ ನಿರ್ಮಾಣ ಸಂಸ್ಥೆಯಡಿ ಚಿಗುರಿಕೊಳ್ಳುತ್ತಿದ್ದ ಸಣ್ಣ ಸಿನಿಮಾಗಳ ಪಟ್ಟಿ ಮತ್ತೊಂದೇ ದಾರಿಯತ್ತ ಬೊಟ್ಟುಮಾಡುತ್ತವೆ.

ಪುನೀತ್ ಅವರಿಗೆ ಒಟಿಟಿ ವೇದಿಕೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ದೂರದೃಷ್ಟಿಯಿತ್ತು. ಪಿಆರ್‌ಕೆ ನಿರ್ಮಾಣ ಸಂಸ್ಥೆಯಡಿಯಲ್ಲಿ ಇದುವರೆಗೆ ಬಿಡುಗಡೆಯಾದ ಮೂರು ಸಿನಿಮಾಗಳಲ್ಲಿ ಎರಡು ಅಮೆಜಾನ್ ಪ್ರೈಮ್‌ನಲ್ಲಿಯೇ ನೇರವಾಗಿ ಬಿಡುಗಡೆಯಾಗಿವೆ. ಡಿ. ಸತ್ಯಪ್ರಕಾಶ್ ನಿರ್ದೇಶನದ 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾ ನ. 12ಕ್ಕೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಬೇಕಾಗಿತ್ತು. ಈಗ ಮುಂದಕ್ಕೆ ಹೋಗಿದೆ. ಈ ಸಿನಿಮಾದ ವ್ಯವಹಾರಗಳೆಲ್ಲವೂ ಪುನೀತ್ ಇರುವಾಗಲೇ ಮುಗಿದಿರುವುದರಿಂದ ಬಿಡುಗಡೆಯಾಗುವುದರಲ್ಲಿ ಸಂದೇಹವಿಲ್ಲ. ಡ್ಯಾನಿಶ್ ಸೇಟ್ ಅವರ 'ಒನ್ ಕಟ್ ಟು ಕಟ್' ಸಿನಿಮಾ ಕೂಡ ಪೂರ್ತಿಗೊಂಡು ಬಿಡುಗಡೆಗೆ ಸಜ್ಜಾಗಿತ್ತು.

ಅರ್ಜುನ್ ಕುಮಾರ್ ಎಸ್. ಅವರ 'ಫ್ಯಾಮಿಲಿ ಪ್ಯಾಕ್', ರಾಘವ ನಾಯಕ್–ಪ್ರಶಾಂತ್ ರಾಜ್ ನಿರ್ದೇಶನದ '02' ಸಿನಿಮಾಗಳು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿವೆ. ಈ ಚಿತ್ರಗಳನ್ನು ಹೊರತುಪಡಿಸಿ ಏಳು ಸಿನಿಮಾಗಳು ನಿರ್ಮಾಣಪೂರ್ವ ಹಂತದಲ್ಲಿದ್ದವು.

'ಈ ಎಲ್ಲ ಸಿನಿಮಾಗಳ ಮುಂದಿನ ಕಥೆ ಏನು?'–ಈ ಪ್ರಶ್ನೆಗೆ ಉತ್ತರದ ಜಾಗದಲ್ಲೀಗ ಪುನೀತ್ ಪತ್ನಿ ಅಶ್ವಿನಿ ನಿಂತಿದ್ದಾರೆ.

ಪಿಆರ್‌ಕೆ ಶುರುಮಾಡಿದಾಗಿನಿಂದಲೂ ಪುನೀತ್, ತಮ್ಮ ಪತ್ನಿ ಅಶ್ವಿನಿ ಅವರಿಗೂ ಸಿನಿಮಾ ಪ್ರಪಂಚವನ್ನು–ಅದರ ಒಳಹೊರಗನ್ನು ಪರಿಚಯಿಸಲು ಪ್ರಾರಂಭಿಸಿದ್ದರು. ಪಿಆರ್‌ಕೆ ಸಂಸ್ಥೆಯ ಸಿನಿಮಾ ಚರ್ಚೆಗಳಲ್ಲಿಯೂ ಅಶ್ವಿನಿಯ ಹಾಜರಿ ಇರಲೇಬೇಕಿತ್ತು. ಕಳೆದ ಆರು ತಿಂಗಳಿಂದಂತೂ ಸಂಸ್ಥೆಯ ಲೆಕ್ಕಾಚಾರಗಳ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಅವರನ್ನು ಸಿದ್ಧಗೊಳಿಸುತ್ತಿದ್ದರು.

ಪುನೀತ್ ಅನುಪಸ್ಥಿತಿಯಲ್ಲಿ ಸಂಸ್ಥೆಯ ಜವಾಬ್ದಾರಿಯನ್ನು ಹೊರಲು ಅಶ್ವಿನಿ ಸಿದ್ಧರಾಗಬಹುದೇ ಎಂಬ ಪ್ರಶ್ನೆ ಇದೆ.

ಸಾಮಾನ್ಯ ಸ್ಥಿತಿಗೆ ಬರಲು ಬೇಕು ಇನ್ನೂ ವರುಷ!

ಬೆಂಗಳೂರು: ಮೈಸೂರಿನಂಥ ದೊಡ್ಡ ನಗರದಲ್ಲೇ ಕಳೆದೊಂದು ವರ್ಷದಲ್ಲಿ ಮೂರು ಖ್ಯಾತ ಚಿತ್ರಮಂದಿರಗಳು ಶಾಶ್ವತವಾಗಿ ಬೀಗ ಹಾಕಿವೆ. ಇನ್ನು ತಾಲ್ಲೂಕು ಮಟ್ಟದಲ್ಲಿರುವ ಏಕಪರದೆಯ ಚಿತ್ರಮಂದಿರಗಳ ಹಾಗೂ ಅದರ ಮಾಲೀಕರ ಸ್ಥಿತಿ ಕೇಳಬೇಕೇ? ಕೋವಿಡ್‌ನಿಂದ ಆಗಿರುವ ಸಮಸ್ಯೆಗಳ ಸುಳಿಯಿಂದ ಚಿತ್ರಮಂದಿರಗಳು ಹೊರಬಂದು ಮತ್ತೆ ಉಸಿರಾಡಲು ಕನಿಷ್ಠ ವರುಷ ಬೇಕು. ಹೀಗಿದೆ ರಾಜ್ಯದ ಪರಿಸ್ಥಿತಿ.

ಕಳೆದೊಂದು ತಿಂಗಳಲ್ಲಿ ಬಿಡುಗಡೆಯಾದ ಬಿಗ್‌ಬಜೆಟ್ ಚಿತ್ರಗಳು ಮೊದಲ ವಾರ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಆದಾಯವನ್ನೇ ಚಿತ್ರಮಂದಿರದ ಮಾಲೀಕರಿಗೆ ತಂದಿದ್ದರೂ, 2–3ನೇ ವಾರದಿಂದ ಪ್ರೇಕ್ಷಕರ ಸಂಖ್ಯೆಯಲ್ಲಾದ ಇಳಿಕೆ ನೋಡಿ ಅವರು ಕಂಗಾಲಾಗಿದ್ದಾರೆ.

ವೀರೇಶ್ ಚಿತ್ರಮಂದಿರದ ಮಾಲೀಕರೂ ಆದ ಕರ್ನಾಟಕ ಚಿತ್ರಪ್ರದರ್ಶಕರ ಸಂಘದ ಅಧ್ಯಕ್ಷರಾದ ಕೆ.ವಿ. ಚಂದ್ರಶೇಖರ್, ಕೋವಿಡ್ ಕಾರಣದಿಂದ ಚಿತ್ರಪ್ರದರ್ಶನಗಳ ಸಮಯದಲ್ಲಾದ ಬದಲಾವಣೆಯೂ ನಷ್ಟಕ್ಕೆ ಕಾರಣವಾಗಿತ್ತು ಎನ್ನುತ್ತಾರೆ.

ರಾತ್ರಿ ಕರ್ಫ್ಯೂ ಆದೇಶ ಹಿಂಪಡೆದಿದ್ದು, ಮತ್ತಷ್ಟು ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಆಕರ್ಷಿಸುವ ಸಾಧ್ಯತೆ ಇದೆ ಎನ್ನುತ್ತಾರೆ ಅವರು.

'ಆದಾಯ ಗಳಿಕೆಯಲ್ಲಿ ನಿರಂತರತೆ ಇಲ್ಲ. ಚಿತ್ರಮಂದಿರಗಳು ಮುಚ್ಚುತ್ತಿರುವುದಕ್ಕೆ ಹೊಸ ತಂತ್ರಜ್ಞಾನವೂ ಕಾರಣ. ಇವುಗಳನ್ನು ಕೆಡವಿ ಹೊಸದು ಕಟ್ಟಿದರೆ ಕಟ್ಟಡ ನಿರ್ವಹಣೆ ಸಾಲುವಷ್ಟು ಆದಾಯ ಬರುತ್ತದೆಯೇ ಗೊತ್ತಿಲ್ಲ' ಎನ್ನುತ್ತಾರೆ.

ಇನ್ನೂ ತೆರೆಯದ 75 ಚಿತ್ರಮಂದಿರಗಳು!

ವಾಣಿಜ್ಯ ತೆರಿಗೆಯ ಹೊರೆ, ಜಿಎಸ್‌ಟಿಯ ಮನರಂಜನಾ ತೆರಿಗೆ, ವಿದ್ಯುತ್ ಬಿಲ್, ಕೆಲಸಗಾರರಿಗೆ ವೇತನ, ಶೇಕಡಾವಾರು ಕಲೆಕ್ಷನ್ ಹಂಚಿಕೆ ಎಲ್ಲವೂ ಚಿತ್ರಮಂದಿರದ ಉಸಿರುಗಟ್ಟಿಸಿದೆ ಎನ್ನುತ್ತಾರೆ ಕೆ.ವಿ. ಚಂದ್ರಶೇಖರ್.

'ಮೈಸೂರಿನಲ್ಲಿ ಕಳೆದೊಂದು ವರ್ಷದಿಂದ ಮೂರು ಚಿತ್ರಮಂದಿರಗಳು ಶಾಶ್ವತವಾಗಿ ಬಾಗಿಲು ಮುಚ್ಚಿವೆ. ಹಲವು ದಶಕಗಳಿಂದ ಚಿತ್ರರಸಿಕರನ್ನು ರಂಜಿಸಿದ್ದ 'ಸರಸ್ವತಿ' ಹಾಗೂ 'ಲಕ್ಷ್ಮಿ' ಚಿತ್ರಮಂದಿರಗಳು ಇತ್ತೀಚೆಗಷ್ಟೇ ಮುಚ್ಚಿದ್ದವು. ಕಳೆದ ಜೂನ್‌ನಲ್ಲಿ 'ಶಾಂತಲಾ' ಚಿತ್ರಮಂದಿರ ಮುಚ್ಚಿತ್ತು. ರಾಜ್ಯದಲ್ಲಿ 630 ಏಕಪರದೆಯ ಚಿತ್ರಮಂದಿರಗಳಿದ್ದು, ಕೋವಿಡ್ ಎರಡನೇ ಲಾಕ್‌ಡೌನ್ ಸಡಿಲಿಕೆಯಾಗಿ ತಿಂಗಳುಗಳೇ ಕಳೆದರೂ ನಷ್ಟದ ಭಯದಿಂದ 70–75 ಚಿತ್ರಮಂದಿರಗಳು ಇನ್ನೂ ತೆರೆದಿಲ್ಲ' ಎನ್ನುತ್ತಾರೆ ಅವರು.

ಪ್ರತಿ ವರ್ಷ ಹೆಚ್ಚಾಗುವ ತೆರಿಗೆ ಹಾಗೂ ಪರ್ಮಿಟ್‌ಗಳೇ ನಮಗೆ ದೊಡ್ಡ ಹೊರೆ. ಇದನ್ನು ಪಾವತಿಸುತ್ತಾ ಚಿತ್ರಮಂದಿರ ನಡೆಸುವುದು ಕಷ್ಟ

ಸಿ.ಜಿ.ನಾರಾಯಣ
ಸರಸ್ವತಿ ಚಿತ್ರಮಂದಿರದ ಮಾಲೀಕ

'ಒಂದೇ ಸಿನಿಮಾ, ಏಕಕಾಲದಲ್ಲೇ 300–350 ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗುತ್ತಿರುವುದರಿಂದಲೂ ಚಿತ್ರಮಂದಿರಗಳಿಗೆ ಹೊಡೆತ ಬೀಳುತ್ತಿದೆ' ಎನ್ನುತ್ತಾರೆ ಕರ್ನಾಟಕ ಚಲನಚಿತ್ರ ಪ್ರದರ್ಶಕರ ಮಹಾಮಂಡಲದ ಅಧ್ಯಕ್ಷ ಆರ್.ಆರ್. ಓದುಗೌಡರ್.

'ವಾಸ್ತವ ಬೇರೆಯೇ ಇದೆ'

'ವಿತರಕರು–ಚಿತ್ರಮಂದಿರಗಳ ಮಾಲೀಕರ ನಡುವೆ ಒಪ್ಪಂದಗಳೂ ವಾರ–ವಾರ ಬದಲಾಗುತ್ತಿವೆ. ಪ್ಯಾನ್ ಇಂಡಿಯಾ ಇಮೇಜ್‌ನಲ್ಲಿ ಹೀರೊಗಳು ಎರಡು ವರ್ಷಕ್ಕೊಂದು ಸಿನಿಮಾ ಮಾಡಿದರೆ ಏನು ಮಾಡುವುದು? ಪರಭಾಷಾ ಚಿತ್ರಗಳ ಹಾವಳಿ ಹೆಚ್ಚುತ್ತದೆ' ಎನ್ನುತ್ತಾರೆ ಗೋವರ್ಧನ ಚಿತ್ರಮಂದಿರದ ಮಾಲೀಕ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್.

ನಮ್ಮತನ ಉಳಿಸಲು ನಮ್ಮದೇ ಒಟಿಟಿ

● ಶರತ್ ಹೆಗ್ಡೆ

ಬೆಂಗಳೂರು: 'ನಾವು ಕನ್ನಡಿಗರಲ್ಲವೇ, ವಿಶಾಲ ಹೃದಯದವರು... ಕನ್ನಡ ಚಿತ್ರಗಳನ್ನು ಬಿಟ್ಟು ಬೇರೆಲ್ಲ ಚಿತ್ರಗಳನ್ನು ನೋಡುತ್ತೇವೆ...'

– 'ಬುದ್ಧಿವಂತ' ಚಿತ್ರದಲ್ಲಿ ಉಪೇಂದ್ರ ಅವರ ಈ ಸಂಭಾಷಣೆ ಕನ್ನಡ ಪ್ರೇಕ್ಷಕರ ಮನೋಭಾವವನ್ನು ಹಲವು ವರ್ಷಗಳ ಹಿಂದೆಯೇ ತೆರೆದಿಟ್ಟಿತ್ತು. ಚಿತ್ರಮಂದಿರವಿರಲಿ, ಒಟಿಟಿ ಇರಲಿ; ಕನ್ನಡ ನಾಡಿನ ಪ್ರೇಕ್ಷಕರ ಒಲವು ಕನ್ನಡಕ್ಕೆ ಆದ್ಯತೆಯಾಗಿ ಇಲ್ಲ. ಅವರು ಯಾವುದನ್ನೂ ಸುಲಭವಾಗಿ ಸ್ವೀಕರಿಸಿಬಿಡುತ್ತಾರೆ. ಇದು ಕನ್ನಡ ಚಿತ್ರೋದ್ಯಮದ ಖಚಿತ ಅಭಿಮತ.

ಒಂದೆಡೆ ಚಿತ್ರಗಳ ಗುಣಮಟ್ಟ ಮತ್ತಿತರ ಕಾರಣಗಳನ್ನು ತೋರಿಸಬಹುದಾದರೂ ಪ್ರೇಕ್ಷಕನ ಸ್ವೀಕಾರ ಮನೋಭಾವವೂ ಅಷ್ಟಕ್ಕಷ್ಟೇ ಇದೆ ಅನ್ನುವುದು ವಾಸ್ತವ.

ಇದೇ ಸೂತ್ರವನ್ನು ಒಟಿಟಿ (ಓವರ್ ದಿ ಟಾಪ್) ಕ್ಷೇತ್ರಕ್ಕೆ ಕಾಲಿಟ್ಟಿರುವ ಬಹುರಾಷ್ಟ್ರೀಯ ಕಂಪನಿಗಳು ಪಾಲಿಸುತ್ತವೆ. ಕನ್ನಡಕ್ಕೆ ಕೇವಲ ಸಾಂಕೇತಿಕವಾದ ಜಾಗ ಕೊಟ್ಟರೆ ಸಾಕು ಎಂಬ ನಿಲುವಿಗೆ ಕಟ್ಟುಬಿದ್ದಿವೆ. ಗ್ರಾಹಕರಿಲ್ಲದ ಸರಕನ್ನು ಎಷ್ಟು ಕಾಲ ಶೋಕೇಸಿನಲ್ಲಿಡಲಿ ಎಂಬ ವ್ಯವಹಾರದ ಲೆಕ್ಕಾಚಾರ ಇಲ್ಲಿನದ್ದು.

ಒಟಿಟಿ ವೇದಿಕೆಗಳ ತಾಂತ್ರಿಕ ಪರಿಣತ, ಮಾಹಿತಿ ತಂತ್ರಜ್ಞಾನ ಕಂಪನಿಯೊಂದರ ವ್ಯವಸ್ಥಾಪಕ ನೂತನ್ ಕಾಮತ್ ಅವರು ಈ ಜಾಲದ ಒಳಹೊರಗನ್ನು ತೆರೆದಿಟ್ಟರು.

'ಬಹುರಾಷ್ಟ್ರೀಯ ಕಂಪನಿಗಳ ಒಟಿಟಿ ವೇದಿಕೆಗಳಲ್ಲಿ ದೇಸಿ ಭಾಷೆಗಳಿಗೆ ಹತ್ತಿಪ್ಪತ್ತು ಶೇಕಡಾದಷ್ಟೇ ಅವಕಾಶ. ಅದರಲ್ಲೂ ದಕ್ಷಿಣ ಭಾರತೀಯ ಭಾಷೆಗಳ ಕಂಟೆಂಟ್ ಪೈಕಿ ಕನ್ನಡ ಚಿತ್ರಗಳಿಗೆ ಶೇ 5ರಷ್ಟು ಮಾತ್ರ ಅವಕಾಶ ಸಿಗುತ್ತದೆ. ಅದೂ ದೊಡ್ಡ ಬ್ಯಾನರ್, ನಾಯಕರು, ಬಜೆಟ್ ಇರುವ ಚಿತ್ರಗಳಾದರೆ ಮಾತ್ರ. ಅದನ್ನೂ ಅಳೆದೂ ತೂಗಿ ಖರೀದಿಸುತ್ತಾರೆ' ಎನ್ನುತ್ತಾರೆ.

ಮೋಸದ ಜಾಲ!

ಅಮೆಜಾನ್, ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ಪ್ರದರ್ಶಿಸಲು ಆಯಾ ಕಂಪನಿಗಳ ಅಗ್ರಿಗೇಟರ್‌ಗಳು (ಪ್ರತಿನಿಧಿಗಳು) ಇರುತ್ತಾರೆ. ಇವರ ಕೈಕೆಳಗೆ ನೂರಾರು ಜನ ಏಜೆಂಟರು ಇರುತ್ತಾರೆ. ಇವರು ನಿರ್ಮಾಪಕರಿಗೆ ಆಮಿಷವೊಡ್ಡುವುದು, ಸಿನಿಮಾ ಅಪ್‌ಲೋಡ್ ಮಾಡುವ ಉಚಿತ ಸೌಲಭ್ಯಕ್ಕೂ ಹಣ ಸುಲಿಯುವುದೂ ನಡೆಯುತ್ತಿದೆ. ಇದು ರಿಯಲ್ ಎಸ್ಟೇಟ್ ದಂಧೆಯ ರೀತಿಯಲ್ಲೇ ನಡೆಯುತ್ತದೆ' ಎಂದು ಕಾಮತ್ ವಿವರಿಸುತ್ತಾರೆ.

'ಸದ್ಯ ಅಮೆಜಾನ್ ಪ್ರೈಮ್‌ನ ಅಗ್ರಿಗೇಟರ್‌ಗಳು, ಮುಂಬೈ, ಚೆನ್ನೈ ಮತ್ತು ಹೈದರಾಬಾದ್‌ನಲ್ಲಿ ಮಾತ್ರ ಇದ್ದಾರೆ. ಹಾಗಾಗಿ ಇಲ್ಲಿಯೂ ಪ್ರತಿ ಹಂತದಲ್ಲಿ ಎಚ್ಚರ ಅಗತ್ಯ' ಎನ್ನುತ್ತಾರೆ ಕಾಮತ್.

ಕನ್ನಡಿಗರ ಒಟಿಟಿ: ಕನ್ನಡದಲ್ಲೊಂದು ಅಸಾಮಾನ್ಯ ಕಂಟೆಂಟ್ ಬಂದರೆ ಖಂಡಿತವಾಗಿ ಅದು ಬಹುರಾಷ್ಟ್ರೀಯ ಕಂಪನಿಗಳ ಒಟಿಟಿ ವೇದಿಕೆಗಳ ಗಮನ ಸೆಳೆಯುತ್ತದೆ. ಇದು ಇಡೀ ಕನ್ನಡ ಚಿತ್ರರಂಗಕ್ಕೆ ಪೂರಕ ಎನ್ನುತ್ತಾರೆ ನಟ, ನಿರ್ದೇಶಕ ರಮೇಶ್ ಅರವಿಂದ್.

'ಸರಿಯಾದ ಆರ್ಥಿಕ, ತಾಂತ್ರಿಕ ಮತ್ತು ವಿಷಯ ಸಂಪನ್ಮೂಲ ಇದ್ದರೆ ಒಟಿಟಿ ಕನ್ನಡ ಮನೋರಂಜನಾ ಕ್ಷೇತ್ರದ ಪಾಲಿಗೆ ಚಿನ್ನದ ಗಣಿ ಆಗಲಿದೆ. ಹೀಗೆ ಕನ್ನಡಿಗರದ್ದೇ ಒಟಿಟಿ ಸೌಧವೊಂದು ನಿರ್ಮಾಣ ಆಗಬೇಕು' ಎಂಬ ಆಶಯವನ್ನು ಅವರು ವ್ಯಕ್ತಪಡಿಸುತ್ತಾರೆ.

ಸಣ್ಣ ಬಜೆಟ್‌ನಲ್ಲೋ, ಸಿನಿಮಾ ಮೇಲಿನ ಪ್ರೀತಿಯಿಂದಲೋ ಬಂದವರ ಚಿತ್ರ ಪ್ರದರ್ಶನಕ್ಕೆ ಚಿತ್ರಮಂದಿರಗಳೂ ಸಿಗುವುದಿಲ್ಲ. ಅಂಥವರಿಗಾಗಿ ಕನ್ನಡಿಗರ ಒಟಿಟಿ ನೆರವಾಗುತ್ತವೆ ಎನ್ನುವುದು ವೆಬ್ ಸರಣಿ ಕ್ಷೇತ್ರದಲ್ಲಿರುವವರ ನಿರೀಕ್ಷೆ.

ಒಟಿಟಿ ಸಿನಿಮಾಕ್ಕೆ ಪೂರಕ

ಸಿನಿಮಾ ಕ್ಷೇತ್ರಕ್ಕೆ ಟಿವಿ, ಒಟಿಟಿ ಎಲ್ಲವೂ ಒಂದಕ್ಕೊಂದು ಪೂರಕ. ಅವು ಸ್ಪರ್ಧಿಗಳಲ್ಲ. ಟಿವಿ ಬಂದ ಮೇಲೆ ಸಿನಿಮಾಗಳ ಪ್ರಚಾರ, ಪ್ರಸಾರ ಆಗಲು ಶುರುವಾಯಿತು. ಹೊಸ ಮಾರುಕಟ್ಟೆ ತೆರೆಯಿತು. ಎಷ್ಟೋ ಸೃಜನಶೀಲರಿಗೆ ತಮ್ಮ ಕೃತಿ ಪ್ರದರ್ಶಿಸಲು ಒಟಿಟಿ ವೇದಿಕೆ ಕೊಟ್ಟಿದೆ. ಹೊಸದೊಂದು ಬಂದಾಗ ಅದನ್ನು ಬಳಸಿಕೊಂಡು ಹೇಗೆ ಮುಂದುವರಿಯಬಹುದು ಎಂದು ಯೋಚಿಸಬೇಕು.

ರಮೇಶ್ ಅರವಿಂದ್, ನಟ, ನಿರ್ದೇಶಕ

ಮೊದಲಿನ ವೈಭವ ನಿಶ್ಚಿತ

ಕನ್ನಡ ಚಿತ್ರರಂಗ ಖಂಡಿತವಾಗಿಯೂ ಮೊದಲಿನ ವೈಭವಕ್ಕೆ ಬರಲಿದೆ. ಕನ್ನಡದಲ್ಲಿ ಯಾವುದೂ ಒಟಿಟಿ ಗಮನಾರ್ಹ ಮಟ್ಟಕ್ಕೆ ಸ್ಥಾಪನೆ ಆಗಿಲ್ಲ. ಅದು ಬೆಳೆಯದೇ ಈ ವೇದಿಕೆಗಳ ಬಗ್ಗೆ ಭರವಸೆ ಇಡುವುದು ಕಷ್ಟ.

ಎನ್.ಎಂ. ಸುರೇಶ್
ಕಾರ್ಯದರ್ಶಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ಪ್ರೇಕ್ಷಕರ ಸಂಖ್ಯೆ ವೃದ್ಧಿಯಾಗದೇ ವೇದಿಕೆ ವ್ಯರ್ಥ

ಒಟಿಟಿ ವೇದಿಕೆಗಳಿಂದ ಕನ್ನಡ ಚಿತ್ರಗಳ ಮೇಲೆ ಯಾವ ಘನವಾದ ಕ್ರಾಂತಿಕಾರಿ ಪರಿಣಾಮಗಳೂ ಆಗುವುದಿಲ್ಲ. ಪ್ರೇಕ್ಷಕರ ಸಂಖ್ಯೆ ವೃದ್ಧಿಯಾಗದ ಹೊರತು ಹೊಸ ವೇದಿಕೆಗಳು ವ್ಯರ್ಥ. ಇರುವ ಪ್ರೇಕ್ಷಕರೇ ಹಂಚಿ ಹರಡಿಕೊಳ್ಳುತ್ತಾರೆ ಅಷ್ಟೆ. ಕನ್ನಡಿಗರು ಎಲ್ಲ ಭಾಷೆಗಳ ಸಿನಿಮಾ ನೋಡುತ್ತಾರೆ. ಆದರೆ ಪರಭಾಷಿಕರು ಕನ್ನಡ ಚಿತ್ರಗಳನ್ನು ನೋಡುವುದಿಲ್ಲ. ಇದಕ್ಕೆ ಗುಣಮಟ್ಟ ಒಂದೇ ಕಾರಣ ಎಂದರೆ ನಾನು ಒಪ್ಪುವುದಿಲ್ಲ. ಕನ್ನಡದ ಗುಣಾತ್ಮಕ ಚಿತ್ರಗಳಿಗೆ ಚಿತ್ರಮಂದಿರಗಳೂ ಇಲ್ಲ; ಒಟಿಟಿಯೂ ಇಲ್ಲ ಎನ್ನುವುದು ಕಠೋರ ವಾಸ್ತವ. ಯಶಸ್ವೀ ತಾರೆ ಅಥವಾ ಯಶಸ್ವೀ ನಿರ್ಮಾಣ ಸಂಸ್ಥೆಗಳ ಹಿನ್ನೆಲೆ ಇದ್ದರೆ ಮಾತ್ರ ವ್ಯಾಪಾರ ಎನ್ನುವುದೇ ಪರಮ ಸತ್ಯ ಎನ್ನುವುದಾದರೆ ಯಾವ ಟಿಟಿ ಬಂದರೂ ನಿಷ್ಪ್ರಯೋಜಕ.

ಡಾ.ನಾಗತಿಹಳ್ಳಿ ಚಂದ್ರಶೇಖರ,
ನಿರ್ಮಾಪಕ, ನಿರ್ದೇಶಕ

ಮಲ್ಟಿಪ್ಲೆಕ್ಸ್: ಕುಟುಂಬ ಪ್ರೇಕ್ಷಕರ ಹರಿವು ಹೆಚ್ಚಳ

● ಓದೇಶ ಸಕಲೇಶಪುರ

ಹುಬ್ಬಳ್ಳಿ: ಏಕ ಪರದೆಯ ಚಿತ್ರಮಂದಿರಗಳಲ್ಲಷ್ಟೇ ತೆರೆಕಾಣುತ್ತಿದ್ದ ಸಿನಿಮಾ ಉದ್ಯಮಕ್ಕೆ ಹೊಸ ಆಯಾಮ ನೀಡಿದ್ದು ಮಲ್ಟಿಪ್ಲೆಕ್ಸ್‌ಗಳು. ವಿವಿಧ ಭಾಷೆಯ ಸಿನಿಮಾಗಳನ್ನು ಒಂದೇ ಕಡೆ ಕಣ್ತುಂಬಿಕೊಳ್ಳಲು ವೇದಿಕೆ ಒದಗಿಸಿರುವ ಇವು, 'ಮಾಸ್' ಪ್ರೇಕ್ಷಕರನ್ನು ಸೆಳೆಯುವಲ್ಲೂ ಯಶಸ್ವಿಯಾಗಿವೆ.

ರಾಜ್ಯದ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಕಲಬುರಗಿ, ಬೆಳಗಾವಿ ಸೇರಿ ವಿವಿಧೆಡೆ ಪಿವಿಆರ್, ಸಿನಿಪೊಲಿಸ್, ಐನಾಕ್ಸ್, ಬಿಗ್ ಸಿನಿಮಾಸ್, ಐಮ್ಯಾಕ್ಸ್, ಮೀರಜ್ ಸಿನಿಮಾಸ್, ಡಿಆರ್‌ಸಿ ಮಲ್ಟಿಪ್ಲೆಕ್ಸ್‌ಗಳಿವೆ. ಕೋವಿಡೋತ್ತರ ಕಾಲಘಟ್ಟದಲ್ಲಿ ಇವುಗಳ ವಹಿವಾಟು ಮಂದಗತಿಯಲ್ಲಿ ಚೇತರಿಸಿಕೊಳ್ಳುತ್ತಿದ್ದು, ಕುಟುಂಬ ಪ್ರೇಕ್ಷಕರ ಹರಿವು ಹೆಚ್ಚಾಗಿರುವುದು ಆಶಾದಾಯಕವೆನಿಸಿದೆ. ಕೋವಿಡ್–19 ನಿಯಮಗಳ ಕಟ್ಟುನಿಟ್ಟಿನ ಪಾಲನೆ ಇದಕ್ಕೆ ಕಾರಣ.

ಪ್ರಮಾಣಪತ್ರ, ಮಾಸ್ಕ್ ಕಡ್ಡಾಯ: 'ಪೂರ್ಣಪ್ರಮಾಣದ ಸೀಟುಗಳೊಂದಿಗೆ ಸಿನಿಮಾ ಪ್ರದರ್ಶನ ಆರಂಭಗೊಂಡರೂ, ಕೋವಿಡ್–19 ನಿಯಮಗಳನ್ನು ಸಡಿಲಿಸಿಲ್ಲ. ಟಿಕೆಟ್ ಪಡೆಯಲು ಕೋವಿಡ್ ಲಸಿಕೆಯ ಪ್ರಮಾಣಪತ್ರ ತೋರಿಸಬೇಕು. ಚೀಟಿ ರೂಪದ ಟಿಕೆಟ್ ಬದಲಿಗೆ, ಪ್ರೇಕ್ಷಕರ ಮೊಬೈಲ್ ಸಂಖ್ಯೆಗೆ ಸೀಟು ನಂಬರ್ ಒಳಗೊಂಡ ಸಂದೇಶ ಬರುತ್ತದೆ' ಎಂದು ಹುಬ್ಬಳ್ಳಿಯ ಪಿವಿಆರ್ ಮ್ಯಾನೇಜರ್ ರಾಜು ಅವರು ಮಲ್ಟಿಪ್ಲೆಕ್ಸ್‌ನಲ್ಲಿ ಕೈಗೊಂಡಿರುವ ಸುರಕ್ಷಾ ಕ್ರಮಗಳನ್ನು ತಿಳಿಸಿದರು.

'ಸುರಕ್ಷತೆಗೆ ಆದ್ಯತೆ ನೀಡುವ ಮಲ್ಟಿಪ್ಲೆಕ್ಸ್‌ಗಳಿಗೆ ಜನ ಬರುತ್ತಿದ್ದಾರೆ. 'ಕೋಟಿಗೊಬ್ಬ–3', 'ಭಜರಂಗಿ–2', ತಮಿಳಿನ 'ಅಣ್ಣಾತ್ತೆ', ಹಿಂದಿಯ 'ಸೂರ್ಯವಂಶಿ' ಸಿನಿಮಾಗಳಿಗೆ ಕುಟುಂಬ ಪ್ರೇಕ್ಷಕರ ಹರಿವು ಹೆಚ್ಚಾಗಿದೆ' ಎಂದರು.

ಅವರ ಮಾತಿಗೆ ಮಂಗಳೂರಿನ ಸಿನಿಪೊಲಿಸ್‌ನ ಕೆ. ಶೆಟ್ಟಿ ಹಾಗೂ ಕಲಬುರಗಿಯ ಮೀರಜ್ ಸಿನಿಮಾಸ್ ವ್ಯವಸ್ಥಾಪಕ ಅಮಿತ್ ಸಹಮತ ವ್ಯಕ್ತಪಡಿಸಿದರು.

ನಷ್ಟ ಭರ್ತಿಗೆ ತಿಂಗಳುಗಳೇ ಬೇಕು: 'ಕೋವಿಡ್‌ನಿಂದಾಗಿ ಮಲ್ಟಿಪ್ಲೆಕ್ಸ್‌ಗಳಿಗೆ ಅಂದಾಜು ₹5 ಸಾವಿರ ಕೋಟಿ ನಷ್ಟವಾಗಿದೆ. ಇದನ್ನು ಭರಿಸಿಕೊಳ್ಳಲು ತಿಂಗಳುಗಳೇ ಬೇಕು. ಜನರನ್ನು ಮಲ್ಟಿಪ್ಲೆಕ್ಸ್‌ಗಳತ್ತ ಕರೆತರುವ ಉತ್ತಮ ಸಿನಿಮಾಗಳು ತೆರೆ ಕಾಣಬೇಕು' ಎಂದು ಅಭಿಪ್ರಾಯಪಟ್ಟ ಐನಾಕ್ಸ್ ಲೀಸರ್ ಲಿಮಿಟೆಡ್‌ನ ಪ್ರಾದೇಶಿಕ (ದಕ್ಷಿಣ) ನಿರ್ದೇಶಕ ಮೋಹಿತ್ ಭಾರ್ಗವ, 'ನಷ್ಟವಾಗಿದ್ದರೂ ಟಿಕೆಟ್ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ' ಎಂದರು.

ಸಿನಿಮಾ ಆಧರಿಸಿ ಸ್ಲಾಟ್: 'ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾಗೆ ಸಿಗುವ ಪ್ರತಿಕ್ರಿಯೆ ಆಧರಿಸಿ, ಪ್ರದರ್ಶನ ಸಮಯದಲ್ಲಿ ವ್ಯತ್ಯಾಸವಾಗುತ್ತದೆ. ಕನ್ನಡ ಸೇರಿ ತಮಿಳು, ತೆಲುಗು, ಮಲಯಾಳಂ, ಹಿಂದಿ ಹಾಗೂ ಇಂಗ್ಲಿಷ್‌ನ ಸ್ಟಾರ್ ನಟರ ಸಿನಿಮಾ, ಪ್ಯಾನ್ ಇಂಡಿಯಾ ಚಿತ್ರಗಳು ಹಾಗೂ ಉತ್ತಮ ಕಥೆಯ ಸಿನಿಮಾಗಳನ್ನು ಆಧರಿಸಿಯೂ ಸ್ಲಾಟ್ ನಿರ್ಧರಿಸಲಾಗುತ್ತವೆ' ಎಂದು ಮೈಸೂರಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್ ಮಾಲೀಕರಾದ ವೈಶಾಲಿ ಪದಕಿ, ಪ್ರದರ್ಶನ ಸಮಯದ ಸಮೀಕರಣವನ್ನು ಬಿಚ್ಚಿಟ್ಟರು.

ಚಿತ್ರಮಂದಿರದ ಅರ್ಥ ವ್ಯವಸ್ಥೆ

630 ಏಕತೆರೆಯ ಚಿತ್ರಮಂದಿರಗಳು	**260** ಮಲ್ಟಿಪ್ಲೆಕ್ಸ್ ತೆರೆಗಳು (150 ಮಾತ್ರ ಚಾಲನೆಯಲ್ಲಿ)	**₹2 ಕೋಟಿ** ಪ್ರತಿ ಚಿತ್ರಮಂದಿರದ ವಾರ್ಷಿಕ ಕನಿಷ್ಠ ವಹಿವಾಟು
₹1,200 ಕೋಟಿ ಪ್ರದರ್ಶನ ಕ್ಷೇತ್ರದ ವಹಿವಾಟು	**₹216 ಕೋಟಿ** ಸರಾಸರಿ ಜಿಎಸ್‌ಟಿ ಪಾವತಿ	**12,000** ಚಿತ್ರಮಂದಿರದ ಉದ್ಯೋಗಿಗಳು

(ಮಾಹಿತಿ: ಕರ್ನಾಟಕ ಚಿತ್ರಪ್ರದರ್ಶಕರ ಸಂಘ)

ಚೇತರಿಸೀತೇ ಚಿತ್ರರಂಗ?

ಒಂದನೇ ಪುಟದಿಂದ...

ಹರಪನಹಳ್ಳಿ, ಜಗಳೂರಿನಂತಹ ತಾಲ್ಲೂಕು ಕೇಂದ್ರಗಳಲ್ಲಿ ಚಿತ್ರಮಂದಿರಗಳನ್ನು ಮುಚ್ಚುತ್ತಿರುವುದು ಭವಿಷ್ಯದ ದಿಕ್ಸೂಚಿ ಎಂದೂ ಉದಾಹರಿಸಿದರು. ಕಾಸ್ಟ್ಯೂಮರ್ ಆಗಿ ಕೆಲಸ ಮಾಡುವ ಬೆಂಗಳೂರಿನ ಎಚ್.ರಾಜು ಕೋವಿಡ್ ಸಂಕಷ್ಟದ ಕಾಲದಲ್ಲಿ ಮಾಸ್ಕ್ ಹೊಲಿದು, ಬಟ್ಟೆ ಆಲ್ಟರ್ ಮಾಡಿಕೊಟ್ಟು ಬದುಕು ನಡೆಸಿದ್ದರು. ಚಿತ್ರಮಂದಿರಗಳಿಗೆ ಜನ ಬಂದರೆ ತಮಗೂ ಹಿಂದಿನಂತೆ ಕೆಲಸ ಸಿಗಲಿದೆ ಎನ್ನುವ ಅವರ ನಿರೀಕ್ಷೆ ಗರಿಗೆದರತೊಡಗಿದೆ.

ತಮ್ಮದೇ ಲೈಟಿಂಗ್ ಯೂನಿಟ್ ಇಟ್ಟುಕೊಂಡಿರುವ ಪ್ರದೀಪ್ ಪ್ರಕಾರ ಮುಂದಿನ ವರ್ಷ ಜನವರಿ ಹೊತ್ತಿಗೆ ಪರಿಸ್ಥಿತಿ ಸುಧಾರಿಸಬಹುದು.

ಲೈಟಿಂಗ್ ಬಾಯ್ ಆಗಿ 2002ರಲ್ಲಿ ಚಿತ್ರರಂಗ ಪ್ರವೇಶಿಸಿದ ಪ್ರಕಾಶ್, ಈಗ ಇದೊಂದೇ ಕೆಲಸವನ್ನು ನೆಚ್ಚಿಕೊಂಡಿಲ್ಲ. ಮನೆಗಳಿಗೆ ಪೇಂಟಿಂಗ್ ಮಾಡುವ ವರೊಟ್ಟಿಗೆ ಕೆಲಸಕ್ಕೆ ಹೋಗುತ್ತಾರೆ. ತಿಂಗಳ ಹಿಂದೆ ಪ್ರಾವಿಷನ್ ಸ್ಟೋರ್ಸ್ ಇಟ್ಟಿದ್ದರೂ ಈಗಲೂ ಅವಕಾಶ ಸಿಕ್ಕರೆ ಲೈಟಿಂಗ್ ಕೆಲಸಕ್ಕೂ ಒಲ್ಲೆ ಎನ್ನುವುದಿಲ್ಲ. ಚಿತ್ರರಂಗದಲ್ಲಿ ಬಹುತೇಕರು ಅದೊಂದೇ ಕೆಲಸವನ್ನು ನೆಚ್ಚಿ ಜೀವನ ಮಾಡಲಾಗದು ಎನ್ನುವುದು ಅವರ ಅನುಭವದ ಮಾತು.

'ಭಜರಂಗಿ 2' ಚಿತ್ರದ ಬಗ್ಗೆ ನೋಡಿದವರಿಂದ ಸಕಾರಾತ್ಮಕ ವಿಶ್ಲೇಷಣೆ ವ್ಯಕ್ತವಾಯಿತು. ಆದರೆ, ಅದು ತೆರೆಕಂಡ ದಿನವೇ ಪುನೀತ್ ರಾಜ್‌ಕುಮಾರ್ ಮೃತಪಟ್ಟಿದ್ದು ಹೊಡೆತ ಕೊಟ್ಟಿತು. 'ನಮ್ಮಲ್ಲಿದ್ದ ಬೆರಳೆಣಿಕೆಯಷ್ಟು ಸ್ಟಾರ್‌ಗಳಲ್ಲಿ ಪವರ್ ಸ್ಟಾರ್ ಹೊರಟುಹೋದರು. ಅದರೊಟ್ಟಿಗೇ ಫ್ಯಾಮಿಲಿ ಆಡಿಯೆನ್ಸನ್ನೂ ಕಳೆದುಕೊಂಡೆವೋ ಏನೋ' ಎಂಬ ರಾಜೇಂದ್ರ ಅವರ ಅನುಮಾನಕ್ಕೂ ಕಾರಣವಿದೆ. ಇನ್ನು ಚಿತ್ರರಂಗದ ಉದ್ಧಾರಕ್ಕೆ ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ ಎಂಬ ನಿರ್ಮಾಪಕ ಜಾಕ್ ಮಂಜು ಅವರ ಆಗ್ರಹದ ಮೇಲಿನ ದೂಳು ಹಾಗೆಯೇ ಉಳಿದಿದೆ. ಅದನ್ನು ಕೊಡವಿದರಷ್ಟೆ ಉಳಿಗಾಲ ಎನ್ನುವುದಂತೂ ಸತ್ಯ.

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 14-11-1996

● **ರಾಜ್ಯ ನೀರಾವರಿ ವ್ಯವಸ್ಥೆ ಆಧುನೀಕರಣ– ಪಟೇಲ್**

ಹರಿಹರ, ನ. 13– ನೀರಾವರಿ ಪ್ರದೇಶಗಳಲ್ಲಿ ರೈತರಿಗೆ ಸಮರ್ಪಕವಾಗಿ ನೀರು ಪೂರೈಸುವ ವ್ಯವಸ್ಥೆಯನ್ನು ಸುಮಾರು 144 ಕೋಟಿ ರೂ. ವೆಚ್ಚದಲ್ಲಿ ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಹಾರಾಷ್ಟ್ರದಲ್ಲಿ ನೀರು ನಿರ್ವಹಣಾ ಕಾರ್ಯ ಸಮರ್ಪಕವಾಗಿ ನಡೆಯುತ್ತಿದೆ ಎಂದು ಮೆಚ್ಚುಗೆ ಸೂಚಿಸಿದ ಅವರು, ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಕೂಡಾ ಜಿಲ್ಲಾಮಟ್ಟದ ಸಮಿತಿಗಳನ್ನು ರಚಿಸಲಾಗುವುದು ಎಂದರು.

50 ವರ್ಷಗಳ ಹಿಂದೆ
ಭಾನುವಾರ, 14-11-1971

● **ಕನ್ನಡದ ಹಿತಸಾಧನೆಯೇ ಪರಮ ಧ್ಯೇಯವಾಗಿರಲಿ**

ಕನಕಪುರ, ನ. 13– 'ಕನ್ನಡವೇ ಕನ್ನಡಿಗರ ನನ್ನಿಯ ನುಡಿಯಾಗಬೇಕು. ಕನ್ನಡ ಭಾಷೆ ಮತ್ತು ಸಾಹಿತ್ಯದ ಪುರೋಭಿವೃದ್ಧಿ ಸಾಧನೆಯೇ ಕನ್ನಡಿಗರ ಜಪವಾಗಬೇಕಲ್ಲದೆ ಅದರ ಸಿದ್ಧಿಗಾಗಿ ಶಕ್ಯವಿರುವ ಸರ್ವ ಪ್ರಯತ್ನಗಳೂ ನಿರಂತರವಾಗಿ ನಡೆಯಬೇಕು' ಎಂದು ಕನ್ನಡದ ಸುಪ್ರಸಿದ್ಧ ಸಾಹಿತಿ ಶ್ರೀ ಸಿ.ಕೆ. ವೆಂಕಟರಾಮಯ್ಯ ಅವರು ಇಂದು ಇಲ್ಲಿ ಆರಂಭವಾದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ ಕರೆಯಿತ್ತರು.

ದಿನ ಭವಿಷ್ಯ
ಭಾನುವಾರ, ನವೆಂಬರ್ 14, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ದಶಮೀ ಗಂ. 5-14 (ಬೆ. 8-28) ಭಾನುವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 32-54 (ರಾ. 7-32) ಹರ್ಷ ನಾಮ ಯೋಗ ಗಂ. 56-36 ಗರಜ ಕರಣ ಗಂ. 5-14 ವಿಷ ಗಂ. 52-24 ಅಮೃತ ಗಂ 13-19 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00 ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-21 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 1 8

ಮೇಷ: ಬಹುದಿನಗಳ ದುಡಿಮೆಯ ನಡುವೆ ವಿಶ್ರಾಂತಿಯ ಅಗತ್ಯತೆ. ಒತ್ತಡದಿಂದ ಹೊರಬರುವ ಸಾಧ್ಯತೆ. ನೌಕಾಯಾನಿಗಳಿಗೆ ಒಳ್ಳೆಯ ಸಮಯ. ದೇವತಾ ದರ್ಶನ ಭಾಗ್ಯದಿಂದಾಗಿ ನೆಮ್ಮದಿ.

ವೃಷಭ: ನಿಮ್ಮ ಕೆಲಸವನ್ನು ಬೇರೆಯವರೊಂದಿಗೆ ಮಾಡುವುದು ಉತ್ತಮ. ಆರ್ಥಿಕ ಪ್ರಗತಿಯತ್ತ ದಾಪುಗಾಲು ಬೇರೆಯವರ ಮಾತುಗಳ ವಿಚಾರದಲ್ಲಿ ತಲೆ ಕೆಡಿಸಿಕೊಳ್ಳದಿರಿ. ಉನ್ನತ ವಿಚಾರಗಳತ್ತ ಒಲವು.

ಮಿಥುನ: ಉತ್ತಮ ವ್ಯವಹಾರದಿಂದಾಗಿ ಲಾಭ ಪ್ರಾಪ್ತಿ. ಪಾರಂಪರಿಕವಾಗಿ ನಡೆದುಬಂದ ವ್ಯವಹಾರವನ್ನು ಕೈ ಬಿಡುವುದು ಬೇಡ. ಸಿನಿಮಾ ರಂಗದವರಿಗೆ ಉತ್ತಮ ಅವಕಾಶ ಲಭಿಸಲಿದೆ. ಮಾಡಿದ ಕೆಲಸಗಳ ಬಗ್ಗೆ ಮತ್ತೊಮ್ಮೆ ಯೋಚಿಸಿ.

ಕರ್ಕಾಟಕ: ಆದಾಯದ ಹೊಸ ದಾರಿ ಗೋಚರಿಸಲಿದೆ. ಅತಿಯಾದ ಖರ್ಚನ್ನು ನಿಯಂತ್ರಣದಲ್ಲಿಡುವುದು ಒಳ್ಳೆಯದು. ಯಂತ್ರಾಗಾರದಲ್ಲಿ ಅಗ್ನಿ ಭಯ ಸಾಧ್ಯತೆ. ದೇವತಾ ಆರಾಧನೆಯಿಂದ ನೆಮ್ಮದಿ.

ಸಿಂಹ: ಕೈಗಾರಿಕೋದ್ಯಮಿಗಳಿಗೆ ಪ್ರಗತಿ ಸಾಧ್ಯತೆ. ಹೊಸ ಉದ್ಯಮದಲ್ಲಿ ಯಶಸ್ಸು. ಮನೆಯಲ್ಲಿ ಬಹಳ ದಿನಗಳ ನಂತರ ನಗುವನ್ನು ಕಾಣಲಿದ್ದೀರಿ. ಬಂಧುಗಳ ಆಗಮನದ ಜೊತೆಗೆ ವ್ಯವಹಾರ ಸಂಬಂಧಗಳ ಬಗ್ಗೆ ಚರ್ಚೆ.

ಕನ್ಯಾ: ಪರಿಶ್ರಮಕ್ಕೆ ಯೋಗ್ಯವಾದ ಪ್ರತಿಫಲ ದೊರೆತು ಉತ್ತಮ ಅವಕಾಶ ನಿಮ್ಮದಾಗಲಿದೆ. ರಾಜಕೀಯ ಮುಖಂಡರಿಗೆ ಮುಖಭಂಗ ಅನುಭವಿಸುವ ಸಾಧ್ಯತೆ. ಪತ್ರಿಕೋದ್ಯಮದವರಿಗೆ ವಿಫಲತೆ ಕಂಡುಬರುತ್ತಿದೆ.

ತುಲಾ: ಉದ್ಯೋಗ ಕ್ಷೇತ್ರದಲ್ಲಿ ಅತಿಯಾದ ಒತ್ತಡ ಕಾಣಿಸಿದರೂ ಸ್ನೇಹಿತರ ಸಹಕಾರದಿಂದ ನಿರಾಳವಾಗಲಿದ್ದೀರಿ. ಮಕ್ಕಳ ಯೋಗಕ್ಷೇಮದ ಬಗ್ಗೆ ನಿಗಾ ಇರಲಿ. ವಿದ್ಯಾರ್ಥಿಗಳಿಗೆ ಎದುರಾಗುವ ಸಂಕಷ್ಟಗಳು ಗೆಲುವಿನ ಸೋಪಾನ.

ವೃಶ್ಚಿಕ: ಯಾವುದೋ ಧನಾಗಮನದ ನಿರೀಕ್ಷೆಯಲ್ಲಿದ್ದ ಮೂಲದಿಂದ ಹಣಕಾಸಿನ ಅನುಕೂಲತೆ ದೊರೆಯುವ ಸಾಧ್ಯತೆ. ಆತಂಕದ ಕ್ಷಣಗಳು ದೂರವಾಗುವ ಸಾಧ್ಯತೆ. ಬಂಧುಗಳ ಸಹಾಯ ನಿಮಗಿದೆ.

ಧನು: ಶೀಘ್ರದಲ್ಲಿ ಉದ್ಯೋಗದಲ್ಲಿ ಉನ್ನತಿಯನ್ನು ಸಾಧಿಸುವಿರಿ. ನಿಮ್ಮ ಪ್ರಾಮಾಣಿಕತೆಯ ಫಲವು ನಿಮ್ಮನ್ನು ಅರಸಿ ಬರಲಿದೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಿದ್ದೀರಿ. ವೃಥಾ ಆರೋಪಗಳ ಬಗ್ಗೆ ಗಮನ ಬೇಡ.

ಮಕರ: ಹಣಕಾಸಿನ ಅನುಕೂಲದ ನಿರೀಕ್ಷೆಯಲ್ಲಿರುವ ನಿಮಗೆ ಶೀಘ್ರಗತಿಯಲ್ಲಿ ಕೈಗೂಡಲಿದೆ. ಬಂಧುಗಳಿಂದ ಸಹಕಾರ ದೊರೆಯಲಿದೆ. ಮಕ್ಕಳ ಪ್ರಗತಿಯಿಂದ ನೆಮ್ಮದಿ. ಹೆಂಡತಿಗೆ ಅನಾರೋಗ್ಯದ ಸಾಧ್ಯತೆ ಕಂಡುಬರುತ್ತಿದೆ.

ಕುಂಭ: ಕಠಿಣ ಪರಿಶ್ರಮದ ಫಲದಿಂದ ಉತ್ತಮ ಸಫಲತೆಯನ್ನು ಪಡೆಯಲಿದ್ದೀರಿ. ಯೋಜನೆಯನ್ನು ರೂಪಿಸುವ ಮುನ್ನ ಪುನಃ ಅವಲೋಕನ ಅಗತ್ಯ. ಸಾಮಾಜಿಕ ಕ್ಷೇತ್ರದಲ್ಲಿ ಹಿನ್ನಡೆಯ ಸಾಧ್ಯತೆ ಕಂಡುಬರುತ್ತಿದೆ.

ಮೀನ: ಸಾಂಸಾರಿಕ ನೆಮ್ಮದಿಯೊಂದಿಗೆ ಆರ್ಥಿಕ ಸಮಸ್ಯೆ ಉತ್ತಮಗೊಳ್ಳಲಿದೆ. ಮಾನಸಿಕ ನೋವನ್ನು ಇತರರಲ್ಲಿ ಹಂಚಿಕೊಳ್ಳಿ. ಅನ್ಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ನೆರವಾಗುವ ಯೋಗ ದೊರಕಲಿದೆ.

ನಿಮ್ಮ ಜನ್ಮದಿನ 14-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ವೈದ್ಯಕೀಯ ವೃತ್ತಿಯವರಿಗೆ ವಿಶೇಷ ಸಹಕಾರ ದೊರೆಯಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ದೊರಕಲಿವೆ. ಮಹಿಳೆಯರಿಗೆ ಹಿತಶತ್ರುಗಳ ವಿಚಾರದಲ್ಲಿ ಎಚ್ಚರಿಕೆ ವಹಿಸುವುದು ಉತ್ತಮ. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿ. ಬಂಧುಗಳಿಂದ ಕಿರಿಕಿರಿ.

ಪದಬಂಧ 4777
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಹಣವನ್ನಿಟ್ಟಾಗಿನ ಬಾಲ್ಯ! (3)
4.ಅರವತ್ತು ಸಂವತ್ಸರಗಳಲ್ಲಿ ಒಂದಾದ ಹೊಂಬಣ್ಣ! (3)
6.ಸರಕು ಮೊದಲಾದುವುಗಳನ್ನು ಕಳುಹಿಸು (4)
8.ಮಹಮ್ಮದೀಯ ಬೈರಾಗಿ (4)
10.ಬೆಳಗಿನ ಜಾವ (3)
13.ಬಣ್ಣದ ದಾರದಿಂದ ಬಟ್ಟೆ ಮೇಲೆ ಹೆಣೆದ ಅಲಂಕಾರ (3)
15.ಹಸುವಿನ ಹತ್ತಿರವಿರುವ ಎಳೆಯ ಮಗು (4)
19.ಕೊಬ್ಬೇರಿದ ಆನೆಯಿದು (4)
21.ಧಾನ್ಯಗಳನ್ನು ಕುಟ್ಟುವ ಸಾಧನ (3)
22.ಲೀಲಾಜಾಲವಾಗಿ ನಡೆದ ಏಲಂ (3)

ಮೇಲಿಂದ ಕೆಳಕ್ಕೆ
1.ಬಿಗಿಯನ್ನು ಕಳೆದುಕೊಂಡಿರುವಿಕೆ! (3)
2.ಮರ್ಯಾದೆಯುಳ್ಳ ಗಳಿಕೆ! (4)
3.ಏನನ್ನೂ ಮಾತಾಡದವನು (2)
5.ನಿಂತು ನಿಂತು ಬರುವ ಅಸ್ಪಷ್ಟ ಮಾತು (3)
7.ಸಮಾಧಾನ,ಸಂತೋಷ ಎಂದರೆ ಇದೇ (2)
9.ಜನರಿರುವಾಗಲೇ ಕವಿದ ಇರುಳು (3)
11.ವಂಚನೆಯೂ ಆಗಿರುವ ಅಪಹಾಸ್ಯ (3)
12.ಕಾಯ ಕೊನೆಗಿದ್ದರೇ ಈ ಅನುಮಾನ! (3)
14.ಎಳ್ಳು ನೀರು ಬಿಡುವಿಕೆ (4)
16.ಒಳ್ಳೆಯ ದಿನ (3)
17.ಸುಗಮವಾಗಿ ಕಿತ್ತು ತಂದಿರುವ ಪುಷ್ಪ (2)
18.ಇದೊಂದು ಬಗೆಯ ಮೆಟ್ಟು (3)
20.ದಾನವಾಗಿ ಕೊಟ್ಟ ಭೂಮಿ,ಹಣ ಇತ್ಯಾದಿ (2)



4776ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಹಾರಾಜ 3.ಹಾಲಾಹಲ 5.ನವಿಲು 7.ಕರುಣೆ 9.ಸ್ಥಾನ 10.ಭವಿಷ್ಯ 11.ಅಂಕ 12.ಕಿಟಕಿ 14.ಕನಸು 16.ರತ್ನಾಕರ 17.ತಟವಟ

ಮೇಲಿಂದ ಕೆಳಕ್ಕೆ: 1.ಮಶಕ 2.ಜನ 3.ಹಾಲು 4.ಲಶುನ 6.ವಿವಾಹವಿಚ್ಛೇದನ 8.ರುದ್ರನಾಟಕ 9.ಸ್ಥಾನಪಲ್ಲಟ 11.ಅಂಬರ 13.ಕಿತ್ತಾಟ 14.ಕರ 15.ಸುತ

ಸುಡೊಕು 5163

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5162 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಟಿಕೆಟ್‌ಗೆ ಹೆಬ್ಬಾಳಕರ ಸಹೋದರ ಲಾಬಿ

ವಿಧಾನ ಪರಿಷತ್ ಚುನಾವಣೆ: ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚುತ್ತಿರುವ ಆಕಾಂಕ್ಷಿಗಳ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಡಿ.10ರಂದು ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ಗೆ ಭಾರಿ ಪೈಪೋಟಿ ಕಂಡುಬಂದಿದೆ.

ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಸಹೋದರ ಚನ್ನರಾಜ ಹಟ್ಟಿಹೊಳಿ ಟಿಕೆಟ್‌ಗೆ ಲಾಬಿ ನಡೆಸುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮೊದಲಾದವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ. ಸಹೋದರಿಯ ಮೂಲಕವೂ ಹೈಕಮಾಂಡ್ ಮೇಲೆ ಒತ್ತಡ ಹಾಕುತ್ತಿದ್ದಾರೆ. ಪಕ್ಷದ ಜಿಲ್ಲಾ ಘಟಕದಿಂದ ಕೆಪಿಸಿಸಿಗೆ ಶಿಫಾರಸು ಮಾಡಿರುವ ಪಟ್ಟಿಯಲ್ಲೂ ಚನ್ನರಾಜ ಹೆಸರಿದೆ ಎಂದು ಮೂಲಗಳು ತಿಳಿಸಿವೆ. ಹಲವು ತಿಂಗಳಿಂದಲೂ ಕ್ಷೇತ್ರದಲ್ಲಿ ಸಂಚರಿಸಿ ಪರೋಕ್ಷವಾಗಿ ಪ್ರಚಾರ ಆರಂಭಿಸಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರೆಲ್ಲರಿಗೂ ಶುಭಾಶಯ ಪತ್ರ ಕಳುಹಿಸಿದ್ದರು ಎಂದು ತಿಳಿದುಬಂದಿದೆ.

ಹೋದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದ ವಿವೇಕರಾವ್ ಪಾಟೀಲ ಈ ಬಾರಿ ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಮುಖಂಡರಾದ ಪ್ರಕಾಶ ಹುಕ್ಕೇರಿ, ವೀರಕುಮಾರ ಪಾಟೀಲ, ಕಿರಣ ಸಾಧುನವರ ಮತ್ತು ಸುನೀಲ ಹನಮಣ್ಣವರ ಕೂಡ ಆಕಾಂಕ್ಷಿಗಳಾಗಿದ್ದಾರೆ.

ಬಿಜೆಪಿಯಿಂದ ಹಾಲಿ ಸದಸ್ಯ ಮಹಾಂತೇಶ ಕವಟಗಿಮಠ ಅವರು 3ನೇ ಬಾರಿಗೆ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. 'ಕಾಡಾ' ಅಧ್ಯಕ್ಷ ಡಾ.ವಿ.ಐ. ಪಾಟೀಲ, ಪಕ್ಷದ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ, ರಾಜ್ಯ ಘಟಕದ ವಕ್ತಾರ ಎಂ.ಬಿ. ಝಿರಲಿ ಹೆಸರುಗಳು ಕೇಳಿಬಂದಿವೆ. ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಸಹೋದರ ಲಖನ್ ಜಾರಕಿಹೊಳಿ ಅವರಿಗೆ ಟಿಕೆಟ್ ಕೊಡಿಸಲು ಯತ್ನಿಸುತ್ತಿದ್ದಾರೆ ಎನ್ನಲಾಗುತ್ತಿದೆ.

ಸಹೋದರಗೆ ಟಿಕೆಟ್ ಕೇಳಿದ ಬಾಲಚಂದ್ರ ಜಾರಕಿಹೊಳಿ

ಗೋಕಾಕ (ಬೆಳಗಾವಿ): 'ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಸಹೋದರ ಲಖನ್ ಜಾರಕಿಹೊಳಿ ಅವರನ್ನು 2ನೇ ಅಭ್ಯರ್ಥಿಯನ್ನಾಗಿ ಘೋಷಿಸಿ, ಬಿಜೆಪಿಯಿಂದ ಸ್ಪರ್ಧಿಸಲು ಅವಕಾಶ ಕೊಡಬೇಕು' ಎಂದು ಕೆಎಂಎಫ್ ಅಧ್ಯಕ್ಷರೂ ಆಗಿರುವ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಕೋರಿದರು.

ಹೊರವಲಯದ ಗೋಕಾಕ ಸಪ್ಲೈಯರ್ಸ್ ಸಭಾಭವನದಲ್ಲಿ ಶನಿವಾರ ನಡೆದ ಬಿಜೆಪಿ ಅರಭಾವಿ ಮಂಡಳದ ಕಾರ್ಯಕಾರಿಣಿಯಲ್ಲಿ ಅವರು ಮಾತನಾಡಿದರು.

'ಲಖನ್‌ಗೆ ಪಕ್ಷವು ಅವಕಾಶ ಕಲ್ಪಿಸಿಕೊಟ್ಟಲ್ಲಿ ಬಿಜೆಪಿಯಿಂದ ನಿಶ್ಚಿತವಾಗಿಯೂ ಎರಡೂ ಸ್ಥಾನಗಳನ್ನು ಗೆಲ್ಲಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಸದೆ ಮಂಗಲಾ ಅಂಗಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಪಾಲ್ಗೊಂಡಿದ್ದರು.

ಶಾಸಕ ಸಾ.ರಾ.ಮಹೇಶ್ ಹೇಳಿಕೆ

ಚುನಾವಣೆಗೆ ಜಿಟಿಡಿ ನೇತೃತ್ವ

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಧಾನಪರಿಷತ್ ಚುನಾವಣೆಯನ್ನು ಮೈಸೂರಿನಲ್ಲಿ ಜಿ.ಟಿ.ದೇವೇಗೌಡ ನೇತೃತ್ವದಲ್ಲೇ ಎದುರಿಸುತ್ತೇವೆ. ಅವರ ಮನೆಯ ಸದಸ್ಯರೊಬ್ಬರು ಅಭ್ಯರ್ಥಿ ಆಗಲೂಬಹುದು' ಎಂದು ಶಾಸಕ ಸಾ.ರಾ.ಮಹೇಶ್ ಅಚ್ಚರಿಯ ಹೇಳಿಕೆ ನೀಡಿದರು.



ಮಹೇಶ್

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಮೈಸೂರು–ಚಾಮರಾಜನಗರ ದ್ವಿಸದಸ್ಯ ಸ್ಥಾನಕ್ಕೆ ಜೆಡಿಎಸ್‌ನಿಂದ ಸ್ಪರ್ಧಿಸಲು ಹಲವು ಆಕಾಂಕ್ಷಿಗಳಿದ್ದಾರೆ. ಪಕ್ಷದ ವರಿಷ್ಠರು ಅವರೆಲ್ಲರನ್ನೂ ಬಿಟ್ಟು, ಅಚ್ಚರಿಯ ಆಯ್ಕೆ ನಡೆಸುವ ಸಾಧ್ಯತೆಯೂ ಇದೆ' ಎಂದರು.

ಜಿ.ಟಿ.ದೇವೇಗೌಡ ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜತೆ ವೇದಿಕೆ ಹಂಚಿಕೊಂಡದ್ದರ ಬಗ್ಗೆ ಪ್ರತಿಕ್ರಿಯಿಸಿ, 'ಕ್ಷೇತ್ರದ ಅಭಿವೃದ್ಧಿಯ ವಿಚಾರದಲ್ಲಿ ಗೆದ್ದವರು, ಸೋತವರು ಒಟ್ಟಿಗೆ ಇರಬೇಕು. ಅದಕ್ಕೆ ಬೇರೆ ಅರ್ಥ ಕಲ್ಪಿಸಬೇಡಿ ಎಂದು ಸ್ವತಃ ಜಿ.ಟಿ. ದೇವೇಗೌಡ ಹೇಳಿದ್ದಾರೆ. ಆದ್ದರಿಂದ ಚುನಾವಣೆಗೆ ಅವರೇ ನೇತೃತ್ವ ವಹಿಸಲಿದ್ದಾರೆ. ಯಾವುದೇ ಗೊಂದಲ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಕಳೆದ ಚುನಾವಣೆಯಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದವರನ್ನೇ ಅವರು ಸೋಲಿಸಿದ್ದಾರೆ. ನಮ್ಮ ಕಾರ್ಯಕರ್ತರ ಸಂಪೂರ್ಣ ಬೆಂಬಲ ಅವರಿಗಿದೆ. ಕಾರ್ಯಕರ್ತರು ಕೂಡಾ ಅವರ ಬೆಂಬಲ ನಿರೀಕ್ಷಿಸುವುದರಲ್ಲಿ ತಪ್ಪಿಲ್ಲ' ಎಂದು ತಿಳಿಸಿದರು.

'ನಮ್ಮ ಕುಟುಂಬದಿಂದ ಸ್ಪರ್ಧಿಸುವುದಿಲ್ಲ'

ದೇವೇಗೌಡ

'ವಿಧಾನ ಪರಿಷತ್ ಚುನಾವಣೆಯಲ್ಲಿ ನನ್ನ ಕುಟುಂಬದವರು ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ' ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಶಾಸಕ ಸಾ.ರಾ.ಮಹೇಶ್ ಹೇಳಿಕೆಯನ್ನು ತಳ್ಳಿಹಾಕಿದ್ದಾರೆ.

ಶನಿವಾರ ಮಾಧ್ಯಮದವರ ಜತೆ ಮಾತನಾಡಿ, 'ಜೆಡಿಎಸ್‌ನವರು ನನ್ನನ್ನು ಬಿಟ್ಟು ಎರಡೂವರೆ ವರ್ಷ ಕಳೆದಿದೆ. ಅದು ಎಲ್ಲರಿಗೂ ತಿಳಿದಿರುವ ವಿಚಾರ. ಚಾಮುಂಡೇಶ್ವರಿ ಕ್ಷೇತ್ರದ ಉಸ್ತುವಾರಿಯನ್ನು ಸಾ.ರಾ.ಮಹೇಶ್ ಅವರೇ ವಹಿಸಿಕೊಂಡಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಬಂದು ಕಾರ್ಯಕ್ರಮ ಮಾಡಿದಾಗಲೂ ನನ್ನನ್ನು ಕರೆದಿಲ್ಲ. ರಾಜಕೀಯ ಮಾಡುವ ಸಂದರ್ಭ ಬಂದಾಗ ಎಲ್ಲವನ್ನೂ ಹೇಳುತ್ತೇನೆ. ಎಂಎಲ್‌ಸಿ ಚುನಾವಣೆಯಲ್ಲಿ ನನ್ನ ಕುಟುಂಬದವರು ಸ್ಪರ್ಧಿಸಲ್ಲ' ಎಂದರು.

ಅರ್ಧಕ್ಕಿಂತ ಹೆಚ್ಚು ಮಹಿಳಾ ಮತದಾರರಿದ್ದರೂ ಕಡೆಗಣನೆ

ಪರಿಷತ್ ಚುನಾವಣೆ: ಮಹಿಳೆಯರಿಗಿಲ್ಲ ಅವಕಾಶ!

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರ ಆಯ್ಕೆಗೆ ನಡೆಯುತ್ತಿರುವ ಚುನಾವಣೆಯ ಒಟ್ಟು ಮತದಾರರ ಪೈಕಿ ಅರ್ಧಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಮತದಾರರಿದ್ದಾರೆ. ಆದರೆ, ಆಕಾಂಕ್ಷಿಗಳ ಪಟ್ಟಿಯಲ್ಲಿ ಅವರ ಹೆಸರು ಕೇಳಿ ಬರುತ್ತಿಲ್ಲ.

ಅವಿಭಜಿತ ಧಾರವಾಡ ಜಿಲ್ಲೆ (ಧಾರವಾಡ, ಗದಗ, ಹಾವೇರಿ), ಬೆಳಗಾವಿ ಜಿಲ್ಲೆ ಹಾಗೂ ಅವಿಭಜಿತ ವಿಜಯಪುರ ಜಿಲ್ಲೆ (ವಿಜಯಪುರ, ಬಾಗಲಕೋಟೆ)ಯಿಂದ ತಲಾ ಎರಡು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್‌ಗಾಗಿ ತೀವ್ರ ಯತ್ನ ನಡೆಸುತ್ತಿರುವವರಲ್ಲಿ ಪುರುಷ ಅಭ್ಯರ್ಥಿಗಳ ಹೆಸರೇ ಮುಂಚೂಣಿಯಲ್ಲಿವೆ.

> **ಅವಿಭಜಿತ ಧಾರವಾಡ ಜಿಲ್ಲೆಯಿಂದ ಒಂದು ಸ್ಥಾನಕ್ಕೆ ಮಹಿಳಾ ನಾಯಕಿಯೊಬ್ಬರಿಗೆ ಟಿಕೆಟ್ ನೀಡಬೇಕು ಎಂದು ಮುಖಂಡರಲ್ಲಿ ಮನವಿ ಮಾಡಿಕೊಂಡಿದ್ದೇವೆ**
> **ದೀಪಾ ಗೌರಿ,** ಅಧ್ಯಕ್ಷೆ, ಹು–ಧಾ ಮಹಾನಗರ ಜಿಲ್ಲಾ ಮಹಿಳಾ ಘಟಕ

'ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನಿಸಿದಾಗ ಮಹಿಳೆಯರು ಯಾರೂ ಅರ್ಜಿ ಸಲ್ಲಿಸಿಲ್ಲ. ಆದರೆ, ಇತ್ತೀಚೆಗೆ ಕೆಲ ಮಹಿಳೆಯರಿಗೆ ಟಿಕೆಟ್ ನೀಡಬೇಕು ಎಂದು ಕೆಲವರು ಮನವಿ ಮಾಡಿದ್ದಾರೆ. ಪಕ್ಷದ ರಾಜ್ಯ ನಾಯಕರು ಈ ವಿಷಯ ತೀರ್ಮಾನಿಸಲಿದ್ದಾರೆ' ಎನ್ನುತ್ತಾರೆ ಕಾಂಗ್ರೆಸ್ ಧಾರವಾಡ ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ಅನಿಲಕುಮಾರ್ ಪಾಟೀಲ.

ಉತ್ತರ ಪ್ರದೇಶದ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಶೇ 40ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ನೀಡಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ. ಆದರೆ, ಇಲ್ಲಿ ಮಹಿಳೆಯರು ಅರ್ಜಿ ಸಲ್ಲಿಸಿಲ್ಲ ಎಂಬ ನೆಪ ಒಡ್ಡಲಾಗುತ್ತಿದೆ ಎನ್ನುವುದು ಪಕ್ಷದ ನಾಯಕಿಯರ ದೂರು.

'ಬಿಜೆಪಿಯು ಬೇರೆ, ಬೇರೆ ಸಂದರ್ಭಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಮಹಿಳೆಯರು ಮುಂಚೂಣಿಯಲ್ಲಿಲ್ಲ' ಎಂದು ಬಿಜೆಪಿ ಹುಬ್ಬಳ್ಳಿ–ಧಾರವಾಡ ಜಿಲ್ಲಾ ಮಹಾನಗರ ವಕ್ತಾರ ರವಿ ನಾಯಕ.

ಸ್ಥಳೀಯ ಸಂಸ್ಥೆಗಳಲ್ಲಿ ಶೇ 50ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಟ್ಟಿರುವುದರಿಂದ ಆ ಚುನಾವಣೆಯಲ್ಲಿ ಪಕ್ಷದ ಮುಖಂಡರ ಪತ್ನಿ, ತಾಯಿ, ಸಹೋದರಿ, ಸೊಸೆ ಸೇರಿದಂತೆ ಅವರ ಕುಟುಂಬ ಸದಸ್ಯರಿಗೆ ಸ್ಪರ್ಧಿಸಲು ಅವಕಾಶ ನೀಡಲಾಗುತ್ತದೆ. ಮೀಸಲಾತಿ ಇಲ್ಲದಿದ್ದರೆ, ನಮಗೆ ಅವಕಾಶ ಸಿಗುವುದೇ ಇಲ್ಲ ಎಂದು ಬಿಜೆಪಿ ನಾಯಕಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಕ್ಷೇತ್ರಗಳ ಮತದಾರರ ವಿವರ

ಕ್ಷೇತ್ರ	ಪುರುಷ	ಮಹಿಳೆ	ಒಟ್ಟು
ಧಾರವಾಡ	3,659	3,843	7,502
ವಿಜಯಪುರ	3,556	3,829	7,385
ಬೆಳಗಾವಿ	4,243	4,268	8,871

'ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಲ್ಲ'

ಶಿರಸಿ: ವಿಧಾನ ಪರಿಷತ್ ಚುನಾವಣೆಗೆ ಈ ಬಾರಿ ಸ್ಪರ್ಧಿಸುವುದಿಲ್ಲ. ಈ ವಿಷಯವನ್ನು ಪಕ್ಷದ ಹಿರಿಯ ನಾಯಕರಿಗೆ ಈಗಾಗಲೇ ಮನವರಿಕೆ ಮಾಡಿದ್ದೇನೆ ಎಂದು ಹಾಲಿ ಸದಸ್ಯ ಕಾಂಗ್ರೆಸ್‌ನ ಎಸ್.ಎಲ್.ಘೋಟ್ನೇಕರ್ ಹೇಳಿದರು.

ಎಸ್.ಎಲ್. ಘೋಟ್ನೇಕರ್

ನಗರದಲ್ಲಿ ಶನಿವಾರ ಮಾಧ್ಯಮವರ ಜತೆ ಅವರು ಮಾತನಾಡಿದರು.

ಎಸ್.ಎಲ್.ಘೋಟ್ನೇಕರ್ ಅವರು ಕಳೆದ ಎರಡು ಅವಧಿಗೆ ಉತ್ತರ ಕನ್ನಡ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದಾರೆ.

22 ರಂದು ರಾಜೇಂದ್ರಕುಮಾರ್ ನಾಮಪತ್ರ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನ ಪರಿಷತ್‌ಗೆ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್ ನಿರ್ಧರಿಸಿದ್ದು, ಇದೇ 22 ರಂದು ನಾಮಪತ್ರ ಸಲ್ಲಿಸಲಿದ್ದಾರೆ.

'ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳನ್ನು ಒಳಗೊಂಡ ದ್ವಿಸದಸ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಸಹಕಾರಿಗಳಿಂದ ಒತ್ತಡ ಬಂದಿತ್ತು. ಅದರಂತೆ ಸ್ಪರ್ಧಿಸಲು ನಿರ್ಧರಿಸಿದ್ದೇನೆ' ಎಂದು ರಾಜೇಂದ್ರಕುಮಾರ್ ತಿಳಿಸಿದ್ದಾರೆ.

ಎಂ.ಎನ್. ರಾಜೇಂದ್ರ ಕುಮಾರ್

ಪ್ರತಿ ಗ್ರಾಮ, ತಾಲ್ಲೂಕು, ಜಿಲ್ಲೆ ಹಾಗೂ ಕ್ಷೇತ್ರ ಮಟ್ಟ ಸೇರಿದಂತೆ ಒಟ್ಟು 17 ಸಮಿತಿಗಳನ್ನು ರಚಿಸಿ, ಈಗಿನಿಂದಲೇ ಪ್ರಚಾರ ಆರಂಭಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ದ್ವಿಸದಸ್ಯ ಸ್ಥಾನದಲ್ಲಿ ಒಂದು ಸ್ಥಾನವನ್ನು ಬಿಜೆಪಿ ನಿರಾಯಾಸವಾಗಿ ಗೆಲ್ಲಲಿದೆ. ಇನ್ನೊಂದು ಸ್ಥಾನ ಉಳಿಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನ ಆರಂಭಿಸಿದೆ. ಈ ಮಧ್ಯೆ, ರಾಜೇಂದ್ರಕುಮಾರ್ ಸ್ಪರ್ಧೆಯಿಂದ ಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆ ಬಿರುಸಾಗಿವೆ.

ಸಾಧಕರ ಸಮಾಗಮ...

ಕಿತ್ತಳೆ ಮಾರಿ ಶಾಲೆ ಕಟ್ಟಿದ ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಅವರ ಮನೆಗೆ ಶನಿವಾರ ಪದ್ಮಶ್ರೀ ಪುರಸ್ಕೃತ ತುಳಸಿಗೌಡ ಅವರು ಭೇಟಿ ನೀಡಿದರು. ಮಂಗಳೂರು ಸಮೀಪದ ನ್ಯೂಪಡ್ಪುವಿನ ಮನೆಗೆ ಅಳಿಯ–ಮಗಳೊಂದಿಗೆ ಬಂದಿದ್ದ ಅವರು, ಪದವಿಪೂರ್ವ ಕಾಲೇಜು ಆರಂಭಿಸಲು ಹಾಜಬ್ಬ ಅವರಿಗೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು

ಕಲಬುರಗಿ ಮಹಾನಗರ ಪಾಲಿಕೆ ಚುನಾವಣೆ: ಅಧಿಕಾರಿಗಳ ಮೇಲೆ ಸಿಎಂ ಒತ್ತಡ – ಆರೋಪ

'7 ಎಂಎಲ್‌ಸಿಗಳ ಹೆಸರು ಸೇರಿಸಿ ಅಧಿಕಾರ ಗಿಟ್ಟಿಸಲು ಬಿಜೆಪಿ ಯತ್ನ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಕಲಬುರಗಿಗೆ ಸಂಬಂಧವೇ ಇಲ್ಲದ ವಿಧಾನ ಪರಿಷತ್ ಸದಸ್ಯರಾದ ಲಕ್ಷ್ಮಣ ಸವದಿ, ಸಾಯಬಣ್ಣ ತಳವಾರ, ಭಾರತಿ ಶೆಟ್ಟಿ, ಲೆಹರ್ ಸಿಂಗ್, ಪ್ರತಾಪಸಿಂಹ ನಾಯಕ, ಮುನಿರಾಜು ಹಾಗೂ ರಘುನಾಥ ಮಲ್ಕಾಪುರೆ ಅವರನ್ನು ಇಲ್ಲಿಯ ಮತದಾರರ ಪಟ್ಟಿಯಲ್ಲಿ ಸೇರಿಸಿ, ಆ ಮೂಲಕ ಮಹಾನಗರ ಪಾಲಿಕೆಯಲ್ಲಿ ಸಂಖ್ಯಾಬಲ ಹೆಚ್ಚಿಸಿಕೊಂಡು ವಾಮ ಮಾರ್ಗದ ಮೂಲಕ ಪಾಲಿಕೆಯ ಅಧಿಕಾರ ಗಿಟ್ಟಿಸಲು ಬಿಜೆಪಿ ಹುನ್ನಾರ ನಡೆಸಿದೆ' ಎಂದು ಕೆಪಿಸಿಸಿ ವಕ್ತಾರ ಡಾ. ಶರಣಪ್ರಕಾಶ ಪಾಟೀಲ ಆರೋಪಿಸಿದರು.

'ಕಲಬುರಗಿ ದಕ್ಷಿಣ ಕ್ಷೇತ್ರದ ವಿವಿಧೆಡೆ ತಾವು ಮನೆ ಬಾಡಿಗೆ ಪಡೆದು ವಾಸವಿರುವುದಾಗಿ ಬಾಡಿಗೆ ಒಪ್ಪಂದ ಪತ್ರವನ್ನು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯೊಂದಿಗೆ ಅವರು ಲಗತ್ತಿಸಿದ್ದಾರೆ. ಇವರ ಹೆಸರು ಸೇರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿಯ ಶಾಸಕರು ಹಾಗೂ ಮುಖಂಡರು ಜಿಲ್ಲಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತರು, ಉಪವಿಭಾಗಾಧಿಕಾರಿಗಳಿಗೆ ಮೇಲಿಂದ ಮೇಲೆ ಕರೆ ಮಾಡಿ ಒತ್ತಡ ಹಾಕುತ್ತಿದ್ದಾರೆ' ಎಂದು ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಬಿಜೆಪಿಯ ಈ ಅಕ್ರಮಕ್ಕೆ ಅಧಿಕಾರಿಗಳು ಅವಕಾಶ ನೀಡಬಾರದು. ಒಂದೊಮ್ಮೆ ಹಾಗೆ ಮಾಡಿದರೆ ಕಾಂಗ್ರೆಸ್ ಹೋರಾಟ ನಡೆಸಲಿದೆ' ಎಂದರು.

ಅತಂತ್ರ: 55 ಸದಸ್ಯ ಬಲದ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ 27, ಬಿಜೆಪಿ 24 (ಒಬ್ಬ ಪಕ್ಷೇತರ ಬಿಜೆಪಿ ಸೇರಿದ್ದಾರೆ), ಜೆಡಿಎಸ್‌ನ ನಾಲ್ವರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಬಿಜೆಪಿ–ಕಾಂಗ್ರೆಸ್‌ಗೆ ಜೆಡಿಎಸ್ ಬೆಂಬಲ ಅನಿವಾರ್ಯ. ತನಗೆ ಮೇಯರ್ ಪಟ್ಟ ಕೊಟ್ಟ ಪಕ್ಷಕ್ಕೆ ಬೆಂಬಲ ಎಂದು ಜೆಡಿಎಸ್ ಪಟ್ಟು ಹಿಡಿದಿದೆ.

ಇದೇ 20ರಂದು ಮೇಯರ್–ಉಪ ಮೇಯರ್ ಚುನಾವಣೆ ನಿಗದಿಯಾಗಿದೆ. ಅಕ್ಟೋಬರ್ 12ರಂದು ಪ್ರಕಟಿಸಿರುವ ಮೇಯರ್ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿ ಒಟ್ಟು 63 ಮತದಾರರು ಇದ್ದಾರೆ. ಈ ಪಟ್ಟಿ ಪ್ರಕಾರ ಚುನಾವಣೆ ನಡೆದರೆ ಅಧಿಕಾರಕ್ಕೆ ಬರಲು 32 ಸದಸ್ಯ ಬಲ ಬೇಕು. ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ಕಲಬುರಗಿ ಉತ್ತರ ಶಾಸಕಿ ಖನೀಜ್ ಫಾತಿಮಾ ಸೇರಿ ಕಾಂಗ್ರೆಸ್ ಸದಸ್ಯ ಬಲ 29. ಸಂಸದ ಡಾ.ಉಮೇಶ ಜಾಧವ, ಕಲಬುರಗಿ ದಕ್ಷಿಣ ಶಾಸಕ ದತ್ತಾತ್ರೇಯ ಪಾಟೀಲ ರೇವೂರ, ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ನಮೋಶಿ, ಸುನೀಲ್ ವಲ್ಲ್ಯಾಪುರೆ, ಬಿ.ಜಿ. ಪಾಟೀಲ ಅವರನ್ನು ಸೇರಿ ಬಿಜೆಪಿ ಸಂಖ್ಯಾಬಲ 30 ಆಗಿದೆ.

'ಬಿಜೆಪಿಗೆ ಮ್ಯಾಜಿಕ್ ನಂಬರ್ ತಲುಪಲು ಆಗುತ್ತಿಲ್ಲ. ಜೆಡಿಎಸ್ ಸಹವಾಸವೇ ಬೇಡ ಎಂದು ಕಲಬುರಗಿಗೆ ಸಂಬಂಧವೇ ಇಲ್ಲದ ತನ್ನ ಏಳು ಜನ ವಿಧಾನ ಪರಿಷತ್ ಸದಸ್ಯರಿಗೆ ಮತಾಧಿಕಾರ ಕೊಡಿಸಲು ಬಿಜೆಪಿ ಈ ಹುನ್ನಾರ ನಡೆಸಿದೆ' ಎಂಬುದು ಕಾಂಗ್ರೆಸ್‌ನ ಆರೋಪ.

ಈ ಬಗ್ಗೆ ಪ್ರತಿಕ್ರಿಯೆಗೆ ಜಿಲ್ಲಾಧಿಕಾರಿ ಲಭ್ಯರಾಗಲಿಲ್ಲ.

> **ಬೀದರ್‌ನಲ್ಲಿಯೇ ವಾಸವಾಗಿದ್ದೇನೆ. ಕಲಬುರಗಿ ಮತದಾರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ**
> **ರಘುನಾಥರಾವ್ ಮಲ್ಕಾಪುರೆ**
> ವಿಧಾನ ಪರಿಷತ್ ಸದಸ್ಯ

> **ಕಲಬುರಗಿ ಮೇಯರ್ ಆಯ್ಕೆಗೆ ಸಂಬಂಧಿಸಿದಂತೆ ಮತದಾನ ಹಕ್ಕು ಕೋರಿ ಅರ್ಜಿ ಹಾಕಿರುವ ಅಥವಾ ಹಾಕದಿರುವ ಬಗ್ಗೆ ನಾನು ಏನನ್ನೂ ಹೇಳಲಾರೆ**
> **ಸಾಯಬಣ್ಣ ತಳವಾರ**
> ವಿಧಾನ ಪರಿಷತ್ ಸದಸ್ಯ

> **ಡಾ.ಪಾಟೀಲ ಅವರು ಮಾಡಿದ ಆರೋಪದಲ್ಲಿ ಹುರುಳಿಲ್ಲ. ಕಾಂಗ್ರೆಸ್‌ನ ಪಾಲಿಕೆ ಸದಸ್ಯರೇ ಚುನಾವಣೆ ದಿನ ಗೈರಾಗುವ ಮೂಲಕ ಬಿಜೆಪಿಯನ್ನು ಗೆಲ್ಲಿಸಲಿದ್ದಾರೆ**
> **ಸಿದ್ದಾಜಿ ಪಾಟೀಲ**
> ಬಿಜೆಪಿ ಶಹರ ಘಟಕದ ಅಧ್ಯಕ್ಷ

> **ಚುನಾವಣೆ ಘೋಷಣೆಯಾದ ಬಳಿಕ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವ ಪ್ರಕ್ರಿಯೆ ಕಾನೂನು ಸಮಸ್ಯೆ ತಂದೊಡ್ಡುವುದು ನಿಶ್ಚಿತ**
> **ಪಿ. ವಿಲಾಸಕುಮಾರ್**
> ಹೈಕೋರ್ಟ್ ವಕೀಲ, ಕಲಬುರಗಿ

'ಹೆಚ್ಚುವರಿ ಶುಲ್ಕ ವಾಪಸ್ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲೆಗಳು 2020–21ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಬೋಧನಾ ಶುಲ್ಕ ಪೂರ್ಣ ಪಡೆದಿದ್ದರೆ, ಅದರಲ್ಲಿ ಶೇ 85ರಷ್ಟು ಮಾತ್ರ ಉಳಿಸಿಕೊಂಡು ಬಾಕಿ ಶೇ 15ರಷ್ಟು ಶುಲ್ಕವನ್ನು ತಕ್ಷಣ ಹಿಂದಿರುಗಿಸಬೇಕು ಎಂದು ರಾಜ್ಯ ಸರ್ಕಾರ ಆದೇಶಿಸಿದೆ.

ಅಲ್ಲದೆ, ಶಾಲಾ ಅಭಿವೃದ್ಧಿ ಶುಲ್ಕ ಸೇರಿದಂತೆ ಇತರ ಯಾವುದೇ ಶುಲ್ಕಗಳನ್ನು, ಟ್ರಸ್ಟ್ ಅಥವಾ ಸೊಸೈಟಿಗೆ ದೇಣಿಗೆ ಸ್ವೀಕರಿಸಬಾರದು ಎಂದೂ ಸೂಚಿಸಿದೆ.

ಹೆಚ್ಚುವರಿ ಶುಲ್ಕವನ್ನು 2021–22ನೇ ಸಾಲಿನ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಒಂದೊಮ್ಮೆ ನಿಗದಿಪಡಿಸಿದ ಶುಲ್ಕಕ್ಕಿಂತಲೂ ಕಡಿಮೆ ಶುಲ್ಕ ಪಡೆಯಲು ಆಡಳಿತ ಮಂಡಳಿಗಳು ಇಚ್ಛಿಸಿದರೆ ಅದಕ್ಕೂ ಅವಕಾಶವಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಕೋವಿಡ್ ಕಾರಣದಿಂದ ಪೋಷಕರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಖಾಸಗಿ ಶಾಲೆಗಳು 2020–21ನೇ ಸಾಲಿನಲ್ಲಿ ಬೋಧನಾ ಶುಲ್ಕದಲ್ಲಿ ಶೇ 30ರಷ್ಟು ಕಡಿತ ಮಾಡುವಂತೆ ಸರ್ಕಾರ 2021ರ ಜ. 29ರಂದು ಆದೇಶ ಹೊರಡಿಸಿತ್ತು. ಆದರೆ, ಈ ಆದೇಶವನ್ನು ಪ್ರಶ್ನಿಸಿ ಕೆಲವು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ ಹೈಕೋರ್ಟ್ ಮೆಟ್ಟಿಲೇರಿತ್ತು.

ಈ ಮಧ್ಯೆ, ಪೂರ್ಣ ಶುಲ್ಕ ವಸೂಲು ಮಾಡಿದ್ದ ಅನೇಕ ಖಾಸಗಿ ಶಾಲೆಗಳು, ಹೈಕೋರ್ಟ್ ಅಂತಿಮ ತೀರ್ಪು ಬಂದ ಬಳಿಕ ಶುಲ್ಕ ಕಡಿತ ಮಾಡುವುದಾಗಿ ಹೇಳಿದ್ದವು. ಸರ್ಕಾರದ ಆದೇಶವನ್ನು ಪರಿಷ್ಕರಿಸಿ ಸೆ. 16ರಂದು ತೀರ್ಪು ನೀಡಿರುವ ಹೈಕೋರ್ಟ್, ಶೇ 15ರಷ್ಟು ಶುಲ್ಕ ಕಡಿತ ಮಾಡುವಂತೆ ಖಾಸಗಿ ಶಾಲೆಗಳಿಗೆ ಸೂಚಿಸಿದೆ. ಆದರೆ, ಅನೇಕ ಶಿಕ್ಷಣ ಸಂಸ್ಥೆಗಳು ಈ ಆದೇಶವನ್ನು ಪಾಲಿಸಿಲ್ಲ. ಹೀಗಾಗಿ, ಸರ್ಕಾರ ಈ ಬಗ್ಗೆ ಆದೇಶ ಹೊರಡಿಸಿದೆ.

ಸರ್ಕಾರದ ಈ ಆದೇಶವನ್ನು ಪೋಷಕರ ಸಂಘಟನೆಗಳು ಸ್ವಾಗತಿಸಿದೆ. ಆದರೆ, ಕೆಲವು ಖಾಸಗಿ ಶಾಲಾ ಆಡಳಿತ ಮಂಡಳಿಗಳು ವಿರೋಧ ವ್ಯಕ್ತಪಡಿಸಿವೆ. 'ವಾರ್ಷಿಕ ಶುಲ್ಕದಲ್ಲಿ ಶೇ 15ರಷ್ಟು ಕಡಿತ ಮಾಡಬೇಕೆಂದು ಹೈಕೋರ್ಟ್ ಸ್ಪಷ್ಟವಾಗಿ ಹೇಳಿದ್ದರೂ, ವಾರ್ಷಿಕ ಶುಲ್ಕವನ್ನು ಬೋಧನಾ ಶುಲ್ಕ ಮತ್ತು ಇತರ ಶುಲ್ಕಗಳು ಎಂದು ಶಿಕ್ಷಣ ಇಲಾಖೆ ಪ್ರತ್ಯೇಕಿಸಿದೆ. ಇದನ್ನು ಒಪ್ಪಲು ಸಾಧ್ಯ ಇಲ್ಲ. ಇದು ಹೈಕೋರ್ಟ್ ತೀರ್ಪಿನ ಉಲ್ಲಂಘನೆ ಆಗಲಿದೆ' ಎಂದು ಅಭಿಪ್ರಾಯಪಟ್ಟಿರುವ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಸರ್ಕಾರದ ಆದೇಶವನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲು ಮುಂದಾಗಿವೆ.

ಸಂಕ್ಷಿಪ್ತ ಸುದ್ದಿ

'ಕಾಲ ಚಕ್ರ' ರಂಗಪ್ರಯೋಗ ಇದೇ 17ರಿಂದ

ಶಿರಸಿ: ಯಲ್ಲಾಪುರ ತಾಲ್ಲೂಕು ಹಾಸಣಗಿ ಸಮೀಪದ ಜೋಗಭಟ್ರಕೇರಿಯ ಜಿ.ಎನ್.ಶಾಸ್ತ್ರಿ ಅವರ ಮನೆಯೊಳಗೆ ಮರಾಠಿ ಮೂಲದ 'ಕಾಲ ಚಕ್ರ' ನಾಟಕ ಪ್ರದರ್ಶನ ಇದೇ 17 ರಿಂದ 20ರವರೆಗೆ ಪ್ರತಿದಿನ ಸಂಜೆ 6.30 ರಿಂದ 8.30ರ ವರೆಗೆ ಏರ್ಪಡಿಸಲಾಗಿದೆ.

ಮಂಚಿಕೇರಿಯ ರಂಗ ಸಮೂಹ ಮೊದಲ ಬಾರಿಗೆ ಮನೆಯೊಳಗೆ ನಾಟಕ ಪ್ರದರ್ಶಿಸುವ ಪ್ರಯತ್ನ ನಡೆಸಲು ನಿರ್ಧರಿಸಲಿದೆ. ಜಯವಂತ ದಳ್ವಿ ರಚಿತ ಮರಾಠಿ ನಾಟಕವನ್ನು ಎಚ್.ಕೆ.ಕರ್ಕೇರಾ ಕನ್ನಡಕ್ಕೆ ಅನುವಾದಿಸಿದ್ದಾರೆ. ಹುಲುಗಪ್ಪ ಕಟ್ಟಿಮನಿ ನಿರ್ದೇಶನ, ಸಾಲಿಯಾನ್ ಉಮೇಶ ನಾರಾಯಣ ಅವರ ಸಹ ನಿರ್ದೇಶನದೊಂದಿಗೆ ರಂಗ ಸಮೂಹದ ಕಲಾವಿದರು ನಾಟಕ ಪ್ರದರ್ಶಿಸಲಿದ್ದಾರೆ.

'ಆಧುನಿಕ ಜೀವನ ಶೈಲಿಯಿಂದ ವೃದ್ಧ ತಂದೆ–ತಾಯಿ ಎದುರಿಸುವ ಸಂಕಟ, ಈಗಿನ ಪೀಳಿಗೆಯ ಮಕ್ಕಳ ಅನಿವಾರ್ಯತೆಯ ಜೀವನ ಬಿಂಬಿಸುವ ನಾಟಕವನ್ನು ಮನೆಯೊಳಗೆ ಪ್ರದರ್ಶಿಸುವ ವಿಶಿಷ್ಟ ಪ್ರಯೋಗ ಇದು' ಎಂದು ಸಂಘಟಕ ದುಂಡಿ ರಾಮಕೃಷ್ಣ ಭಟ್ ತಿಳಿಸಿದ್ದಾರೆ.

ರಾಜ್ಯ ಕಾನೂನು ವಿವಿ ಪರೀಕ್ಷೆಗೆ ಹೈಕೋರ್ಟ್ ತಡೆ

ಬೆಂಗಳೂರು: ಇದೇ 15ರಿಂದ ನಡೆಯಬೇಕಿದ್ದ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಡಿಸೆಂಬರ್ 15ರವರೆಗೆ ತಡೆಯಾಜ್ಞೆ ಇರುವುದರಿಂದ ಅಲ್ಲಿಯವರೆಗೂ ವಿಶ್ವವಿದ್ಯಾಲಯದ ಪರೀಕ್ಷೆಗಳು ರದ್ದಾದಂತಾಗಿದೆ.

ಯುಜಿಸಿ ನಿರ್ದೇಶನದ ಅನುಸಾರ ಕೋವಿಡ್ ಸಂದರ್ಭದಲ್ಲಿ ತರಗತಿಗಳು ಸರಿಯಾಗಿ ನಡೆಯದೇ ಇರುವುದರಿಂದ ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದೆಲ್ಲ ವಿದ್ಯಾರ್ಥಿಗಳನ್ನು ಮುಂದಿನ ಸೆಮಿಸ್ಟರ್ ಗಳಿಗೆ ಬಡ್ತಿ ನೀಡಬೇಕಿತ್ತು. ಆದರೆ ವಿವಿ ಪರೀಕ್ಷೆ ನಡೆಸಲು ಮುಂದಾಗಿದ್ದು, ಈ ಕ್ರಮ ಸರಿಯಲ್ಲ ಎಂದು ನವೀನ್ ಕುಮಾರ್ ಸೇರಿದಂತೆ 10 ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ 15ರಿಂದ ನಡೆಯಬೇಕಿದ್ದ ಪರೀಕ್ಷಾ ವೇಳಾಪಟ್ಟಿಗೆ ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ಮೊರಾರ್ಜಿ ಶಾಲೆಯ 148 ವಿದ್ಯಾರ್ಥಿಗಳು ಅಸ್ವಸ್ಥ

ಹೊಳಲ್ಕೆರೆ: ತಾಲ್ಲೂಕಿನ ಹನುಮಂತದೇವರ ಕಣಿವೆಯ ಅಲೆಮಾರಿ ಮೊರಾರ್ಜಿ ವಸತಿ ಶಾಲೆಯ 148 ವಿದ್ಯಾರ್ಥಿಗಳು ಶುಕ್ರವಾರ ರಾತ್ರಿ ಅಸ್ವಸ್ಥಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಕ್ಕಳಲ್ಲಿ ವಾಂತಿ, ಭೇದಿ, ಜ್ವರ, ಹೊಟ್ಟೆನೋವು, ಸುಸ್ತು ಕಾಣಿಸಿಕೊಂಡಿದ್ದು, ಚಿಕಿತ್ಸೆ ನೀಡಲಾಗಿದೆ. ಕೆಲವು ವಿದ್ಯಾರ್ಥಿಗಳು ಚೇತರಿಸಿಕೊಂಡಿದ್ದಾರೆ. 23 ವಿದ್ಯಾರ್ಥಿಗಳು ಇನ್ನೂ ಆಸ್ಪತ್ರೆಯಲ್ಲಿದ್ದು, ಐವರು ವಿದ್ಯಾರ್ಥಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗಕ್ಕೆ ಕಳುಹಿಸಲಾಗಿದೆ. ಕಲುಷಿತ ಆಹಾರ ಸೇವನೆಯಿಂದ ಮಕ್ಕಳು ಅಸ್ವಸ್ಥಗೊಂಡಿರಬಹುದು ಎಂದು ಶಂಕಿಸಲಾಗಿದೆ.

'ರಾಹುಲ್ ಗಾಂಧಿ ಪಾರ್ಟ್ ಟೈಂ ರಾಜಕಾರಣಿ'

ಮಂಗಳೂರು: 'ರಾಹುಲ್ ಗಾಂಧಿ ಪಾರ್ಟ್ ಟೈಂ ರಾಜಕಾರಣಿ. ಅವರಿಗೆ ರಾಜಕಾರಣದ ಅನುಭವ ಇಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ ಹೇಳಿದರು.

ನಗರದ ಟಿ.ವಿ.ರಮಣ ಪೈ ಸಭಾಂಗಣದಲ್ಲಿ ಶನಿವಾರ ನಡೆದ ಬಿಜೆಪಿ ರಾಜ್ಯ ಪ್ರಕೋಷ್ಠಗಳ ಚಿಂತನಾ ವರ್ಗದ ಸಮಾರೋಪದಲ್ಲಿ ಮಾತನಾಡಿದ ಅವರು,'ದೇಶದಲ್ಲಿ ಕಾಂಗ್ರೆಸ್ ಚಿಂತನೆಗಳನ್ನು ಮುಕ್ತ ಮಾಡುವ ಮೂಲಕ ಕಾಂಗ್ರೆಸ್ ಮುಕ್ತ ಭಾರತ ನಿರ್ಮಾಣ ಮಾಡುವುದು ನಮ್ಮ ಗುರಿಯೇ ಹೊರತು, ಕಾಂಗ್ರೆಸ್ ಪಕ್ಷವನ್ನು ಮುಕ್ತ ಮಾಡುವುದಲ್ಲ. ಉತ್ತಮ ಆಡಳಿತ ನಡೆಸಲು ವಿರೋಧ ಪಕ್ಷ ಇರಲೇಬೇಕು' ಎಂದು ತಿಳಿಸಿದರು.

ಇನ್ಸುಲಿನ್ ಸಂಶೋಧನೆಗೆ ನೂರು ವರ್ಷ!

• ಡಾ. ವಿ. ಲಕ್ಷ್ಮೀನಾರಾಯಣ್

ನವೆಂಬರ್ 14. ವಿಶ್ವ ಮಧುಮೇಹ ದಿನ. ಇನ್ಸುಲಿನ್ ಕಂಡು ಹಿಡಿದ ಡಾ.ಫ್ರೆಡರಿಕ್ ಬ್ಯಾಂಟಿಂಗ್ ಜನ್ಮದಿನ. ಆತ ಚಾರ್ಲ್ಸ್ ಬೆಸ್ಟ್ ಜೊತೆಗೂಡಿ 1921-22 ರಲ್ಲಿ ಮಧುಮೇಹಕ್ಕೆ ಔಷಧಿ ಕಂಡುಹಿಡಿದ ಸುದೀರ್ಘ ಸಾಹಸಗಾಥೆಗೆ ನೂರು ವರ್ಷ ತುಂಬಿದೆ.

1889ರಲ್ಲಿ ಫಿಸಿಶಿಯನ್ ಆಸ್ಕರ್ ಮಿಂಕೋವ್‌ಸ್ಕಿ, ಮೇದೋಜೀರಕಾಂಗವನ್ನು ದೇಹದಿಂದ ಬೇರ್ಪಡಿಸಿದಾಗ ಮಧುಮೇಹ ಬರಬಹುದೆಂದು ಹೇಳಿದ್ದರು. 1900ರಲ್ಲಿ ನಾಯಿಯ ದೇಹದಿಂದ ಮೇದೋಜೀರಕಾಂಗವನ್ನು ಬೇರ್ಪಡಿಸಿ ಅದನ್ನು ಸಾಬೀತುಗೊಳಿಸಿದ್ದರು.

1908ರಲ್ಲಿ ಅವರು ಯುಜೀನ್ ಓಪಿ ಎಂಬುವರೊಂದಿಗೆ ಮೇದೋಜೀರಕಾಂಗದ ಸಾರವನ್ನು ಸಂಸ್ಕರಿಸಿ ಅದರಲ್ಲಿರುವ ಚೋದಕಸ್ರಾವ (ಹಾರ್ಮೋನ್) ದಿಂದ ಮಧುಮೇಹವನ್ನು ನಿಯಂತ್ರಿಸುವುದರ ಕುರಿತ ಸಂಶೋಧನೆಗಳನ್ನು ನಡೆಸಿದರು. ಆಗ ತರಬೇತಿನಿರತ ವೈದ್ಯನಾಗಿದ್ದ ಜಾರ್ಜ್ ಲುಡ್‌ವಿಗ್, ಚೋದಕಸ್ರಾವಕ್ಕೆ ಅಕೋಮೆಟ್ರಾಲ್ ಎಂದು ಹೆಸರಿಟ್ಟು ಐವರು ಮಧುಮೇಹಿಗಳ ಮೇಲೆ ಪ್ರಯೋಗಿಸಿದ ಬಳಿಕ, ಅದರಲ್ಲಿ ಗ್ಲೂಕೋಸನ್ನು ಕಡಿಮೆ ಮಾಡುವ ಅಂಶವಿದೆ ಎಂಬುದು ಗೊತ್ತಾಯಿತು.

1921ರಲ್ಲಿ ಬ್ಯಾಂಟಿಂಗ್, ನಾಯಿಯ ಮೇದೋಜೀರಕಾಂಗವನ್ನು ಹೊರತೆಗೆದು ಕಚ್ಚಾಸಾರವನ್ನು ಬೇರ್ಪಡಿಸಿದಾಗ ಮಧುಮೇಹ ಬಂದಿದ್ದನ್ನು ಗುರುತಿಸಿದರು. ಸಾರವನ್ನು ಸಂಸ್ಕರಿಸಿ ಚುಚ್ಚುಮದ್ದಿನ ಮೂಲಕ ನೀಡಿದಾಗ ಮಧುಮೇಹ ಕಡಿಮೆಯಾಗಿದ್ದನ್ನು ವಿಶ್ಲೇಷಿಸಿದರು.

1922ರ ಜನವರಿ 11ರಂದು ಟೋರಾಂಟೋನಲ್ಲಿ ಸಾವಿನ ದವಡೆಯಲ್ಲಿದ್ದ 14 ವರ್ಷದ ಬಾಲಕ ಲಿಯೋನಾರ್ಡ್ ಥಾಮ್ಸನ್‌ನಿಗೆ ಇನ್ಸುಲಿನ್ ನೀಡಲಾಯಿತು. ಥಾಮ್ಸನ್ 13 ವರ್ಷ ಬದುಕಿದ್ದ. ಅಂದಿನಿಂದ ಇನ್ಸುಲಿನ್ ಜೀವರಕ್ಷಕ ಔಷಧಿಯಾಯಿತು.

ಈ ಸಂಶೋಧನೆಗಾಗಿ ನೋಬೆಲ್ ಪ್ರಶಸ್ತಿ ಪಡೆದ ಅತ್ಯಂತ ಕಿರಿಯ ವಯಸ್ಸಿನ ಬ್ಯಾಂಟಿಂಗ್, ಜಾನ್ ಮೆಕ್ಲಾಯ್ಡ್ ಜೊತೆ ಅದನ್ನು ಹಂಚಿಕೊಂಡರು.

ಎರಡನೇ ಹಂತದ ಸಂಶೋಧನೆಯಿಂದ ಮಾನವ ಇನ್ಸುಲಿನ್ ಹುಟ್ಟಿ, ಪ್ರಾಣಿಗಳ ಮೇದೋಜೀರಕಾಂಗಗಳ ಸಾರವುಳ್ಳ ಇನ್ಸುಲಿನ್‌ನಿಂದ ಎದುರಾಗುತ್ತಿದ್ದ 'ಇನ್ಸುಲಿನ್ ಅಲರ್ಜಿ'ಯೂ ಕೊನೆಯಾಯಿತು.

(ಲೇಖಕರು ಮಧುಮೇಹ ತಜ್ಞರು, ಮೈಸೂರು)

ಅಂಕಿ–ಅಂಶ

- **790** ಕೋಟಿ — ವಿಶ್ವದ ಜನಸಂಖ್ಯೆ
- **46.3** ಕೋಟಿ — ಮಧುಮೇಹಿಗಳು
- **12.3** ಕೋಟಿ — ಇನ್ಸುಲಿನ್ ಅಗತ್ಯವುಳ್ಳವರು

ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್‌ಗಳಲ್ಲಿ ರೋಗಿಗಳ ಸಂಖ್ಯೆ ಏರಿಕೆ

ಕೋವಿಡ್ ನಿಯಂತ್ರಣ: ಮಧುಮೇಹ ಉಲ್ಬಣ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಬರುತ್ತಿದ್ದಂತೆ ಮಧುಮೇಹ ತಪಾಸಣೆಗೆ ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್‌ಗಳಿಗೆ (ಎನ್‌ಸಿಡಿ) ಭೇಟಿ ನೀಡುವವರ ಸಂಖ್ಯೆ ಏರಿಕೆಕಂಡಿದೆ. ಈ ವರ್ಷ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ 12.80 ಲಕ್ಷ ಮಂದಿ ತಪಾಸಣೆಗೆ ಒಳಗಾಗಿದ್ದು, 27,990 ಮಂದಿಯಲ್ಲಿ ಮಧುಮೇಹ ಪತ್ತೆಯಾಗಿದೆ.

ಇಂದು ವಿಶ್ವ ಮಧುಮೇಹ ದಿನ

ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದವು. ವರ್ಷಾಂತ್ಯದಲ್ಲಿ ನಿಯಂತ್ರಣಕ್ಕೆ ಬಂದ ಸೋಂಕು, ಈ ವರ್ಷ ಮಾರ್ಚ್ ಬಳಿಕ ಏರುಗತಿ ಪಡೆದುಕೊಂಡಿತ್ತು. ಇದರಿಂದಾಗಿ ಕೋವಿಡೇತರ ಕಾಯಿಲೆಗಳ ತಪಾಸಣೆ ಸಂಬಂಧ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿತ್ತು. ಜುಲೈ ಬಳಿಕ ಕೋವಿಡ್ ಎರಡನೇ ಅಲೆ ನಿಯಂತ್ರಕ್ಕೆ ಬಂದಿರುವುದರಿಂದ ಕೋವಿಡೇತರ ಸಮಸ್ಯೆಗಳ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಮಧುಮೇಹ ಸಮಸ್ಯೆ ಹೆಚ್ಚಿನವರಲ್ಲಿ ಪತ್ತೆಯಾಗುತ್ತಿದೆ.

> **ಮಧುಮೇಹದ ಬಗ್ಗೆ ಅಸಡ್ಡೆ ತೋರಬಾರದು. ಇದು ಬಹು ಅಂಗಾಂಗಗಳನ್ನು ವ್ಯಾಪಿಸುವ ರೋಗವಾಗಿದ್ದು, ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆ ಇರುತ್ತದೆ**
> **ಡಾ.ವಿ. ಮೋಹನ್,** ಮಧುಮೇಹ ತಜ್ಞ

ಆರೋಗ್ಯ ಇಲಾಖೆಯು ರಾಷ್ಟ್ರೀಯ ಮಧುಮೇಹ ನಿಯಂತ್ರಣ ಕಾರ್ಯಕ್ರಮದಡಿ 30 ವರ್ಷ ಮೇಲ್ಪಟ್ಟ ಎಲ್ಲ ವಯಸ್ಕರಿಗೂ ಎನ್‌ಸಿಡಿ ಕ್ಲಿನಿಕ್‌ಗಳಲ್ಲಿ ತಪಾಸಣೆ ನಡೆಸುತ್ತಿದೆ. ರಾಜ್ಯದಲ್ಲಿ ಜಿಲ್ಲಾ ಹಂತದ 30 ಎನ್‌ಸಿಡಿ ಕ್ಲಿನಿಕ್‌ಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 347 ಸಿ.ಎಚ್.ಸಿ–ಎನ್.ಸಿ.ಡಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಕ್ಲಿನಿಕ್‌ಗಳಿಗೆ 2019–20ನೇ ಸಾಲಿನಲ್ಲಿ 36.07 ಲಕ್ಷ ಮಂದಿ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಂಡಿದ್ದರು. ಕಳೆದ ಸಾಲಿನಲ್ಲಿ ಈ ಸಂಖ್ಯೆ 20.09 ಲಕ್ಷಕ್ಕೆ ಇಳಿಕೆ ಕಂಡಿತ್ತು.

ಪ್ರಸಕ್ತ ಸಾಲಿನಲ್ಲಿ ಮೊದಲ ಮೂರು ತಿಂಗಳು 4 ಲಕ್ಷ ಮಂದಿ ಮಾತ್ರ ಕ್ಲಿನಿಕ್‌ಗಳಿಗೆ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಂಡಿದ್ದರು. ಆ ಸಂಖ್ಯೆ ಮುಂದಿನ ಮೂರು ತಿಂಗಳಲ್ಲಿ ದುಪ್ಪಟ್ಟಾಗಿದೆ.

ಇನ್ನಷ್ಟು ಹೆಚ್ಚಳ ಸಾಧ್ಯತೆ: 'ಕೋವಿಡ್ ಕಾಣಿಸಿಕೊಂಡ ಬಳಿಕ ಬದಲಾದ ಜೀವನ ವಿಧಾನದಿಂದ ಮಧುಮೇಹ ಪ್ರಕರಣಗಳು ಹೆಚ್ಚಳವಾಗಿವೆ. ವ್ಯಾಯಾಮದ ಕೊರತೆ, ಬದಲಾದ ಆಹಾರಾಭ್ಯಾಸ, ಅತಿಯಾದ ಬೊಜ್ಜಿನ ಸಮಸ್ಯೆ ಮಧುಮೇಹಕ್ಕೆ ಪ್ರಮುಖ ಕಾರಣ. ಕೋವಿಡ್ ಪೀಡಿತರು ಹೆಚ್ಚಾಗಿ ಈ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಕೊರೊನಾ ಸೋಂಕು ದೇಹದಲ್ಲಿನ ಮೇದೋಜೀರಕಾಂಗ (ಪ್ಯಾಂಕ್ರಿಯಾ) ಗ್ರಂಥಿಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಿ, ಮಧುಮೇಹಕ್ಕೆ ಕಾರಣವಾಗುತ್ತದೆ. ಮಧುಮೇಹಿಗಳ ಸಂಖ್ಯೆ ಮುಂದಿನ ದಿನಗಳಲ್ಲಿ ಹೆಚ್ಚಳವಾಗುವ ಸಾಧ್ಯತೆಯಿದೆ' ಎಂದು ಮಧುಮೇಹ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

'ಪ್ರಾರಂಭಿಕ ಹಂತದಲ್ಲಿಯೇ ಈ ಸಮಸ್ಯೆಯನ್ನು ಪತ್ತೆ ಮಾಡಿದಲ್ಲಿ ನಿಯಂತ್ರಣ ಸಾಧ್ಯ. ಸಮತೋಲನ ಆಹಾರ ಸೇವನೆ, ದೈಹಿಕ ಚಟುವಟಿಕೆ ಜೊತೆಗೆ ಉತ್ತಮ ಜೀವನ ವಿಧಾನ ಅಳವಡಿಸಿಕೊಳ್ಳಬೇಕು. ರಕ್ತದಲ್ಲಿನ ಸಕ್ಕರೆ ಪ್ರಮಾಣದ ಏರಿಳಿತದ ಮೇಲೆ ಈ ಕಾಯಿಲೆ ನಿರ್ಧರಿತವಾಗುತ್ತದೆ' ಎಂದು ನಾರಾಯಣ ಹೆಲ್ತ್ ಸಿಟಿಯ ಡಾ.ಸುಬ್ರಹ್ಮಣ್ಯನ್ ಕಣ್ಣನ್ ತಿಳಿಸಿದರು.

ಎನ್‌ಸಿಡಿ ಕ್ಲಿನಿಕ್‌ನಲ್ಲಿ ನಡೆದ ತಪಾಸಣೆ

ವರ್ಷ	ಭೇಟಿ ನೀಡಿದವರು	ಪ್ರಕರಣ ಪತ್ತೆ	ಚಿಕಿತ್ಸೆ ಪಡೆದವರು	ಚಿಕಿತ್ಸೆ ಮುಂದುವರಿಕೆ
2019-2020	36.07 ಲಕ್ಷ	96,989	87,055	5.18 ಲಕ್ಷ
2020-21	20.94 ಲಕ್ಷ	49,392	42,603	3.41 ಲಕ್ಷ
2021-22 (ಸೆಪ್ಟೆಂಬರ್ ಅಂತ್ಯಕ್ಕೆ)	12.80 ಲಕ್ಷ	27,990	25,031	1.93 ಲಕ್ಷ

‘ಬಿಟ್‌ಕಾಯಿನ್: ರಫೇಲ್‌ನಂತೆ ಕಾಂಗ್ರೆಸ್ ಸುಳ್ಳಿನ ಕಂತೆ’

ಸುರ್ಜೇವಾಲಾಗೆ ಕುಟುಕಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ವಿಚಾರ ರಫೇಲ್‌ನಂತೆಯೇ ಕಾಂಗ್ರೆಸ್ ಸೃಷ್ಟಿಸಿದ ಒಂದು ಸುಳ್ಳಿನ ಕಂತೆ. ಎಲ್ಲವೂ ನಡೆದಿದ್ದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ. ಇಲ್ಲಿ ಆರಂಭಿಸುವವರೂ ಅವರೇ ಬಳಿಕ ಸಿಕ್ಕಿ ಬೀಳುವವರು ಅವರೇ ಎಂದು ಬಿಜೆಪಿ ಟೀಕಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾಡಿರುವ ಆರೋಪಗಳಿಗೆ ಟ್ವಿಟರ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಬಿಜೆಪಿಯ ಕರ್ನಾಟಕದ ಘಟಕ, ನಿಮ್ಮ ಮ್ಯಾಜಿಕ್ ಶೋ ಹೆಚ್ಚು ದಿನ ಓಡುವುದಿಲ್ಲ ಎಂದು ವ್ಯಂಗ್ಯವಾಡಿದೆ.

‘ಸ್ಫೋಟಕ ಸುದ್ದಿ ಕೊಡುತ್ತೇನೆ ಸುರ್ಜೇವಾಲಾ ಅವರು ಪತ್ರಿಕಾಗೋಷ್ಠಿಯಲ್ಲಿ ಏನು ಹೇಳಿದಂತಾಯ್ತು? ಈಗಾಗಲೇ ಬಹಿರಂಗವಾಗಿರುವ ದಾಖಲೆಗಳನ್ನೇ ತಿರುಗು–ಮುರುಗು ಮಾಡಿ ಸುಳ್ಳನ್ನೇ ಸತ್ಯವಾಗಿಸುವ ಯತ್ನ ಮಾಡಿದ್ದಾರೆ. ರಫೇಲ್ ಪ್ರಕರಣದಲ್ಲೂ ಕಾಂಗ್ರೆಸ್ ನಾಯಕರು ಅದನ್ನೇ ಮಾಡಿ, ಈಗ ಸಿಕ್ಕಿಬಿದ್ದಿದ್ದಾರೆ ಎಂದು ಕುಟುಕಿದೆ.

‘ಇದರ ಹಿಂದೆ ಯಾರಿದ್ದಾರೆ ಎಂದು ಪ್ರಶ್ನಿಸಿರುವ ಸುರ್ಜೇವಾಲಾ, ದಾಖಲೆಗಳೇ ಇಲ್ಲದ ಕಲ್ಪಿತ ವಿಚಾರಗಳಿಗೆ ಸತ್ಯದ ಮುಖವಾಡ ತೊಡಿಸುವ ವಿಫಲ ಯತ್ನ ಮಾಡಿದ್ದಾರೆ. ಟಾಪ್ ಸಿಕ್ರೇಟ್–ಬಾಟಮ್ ಓಪನ್ ಎಂಬಂತಾಗಿದೆ ಕಾಂಗ್ರೆಸ್ ಆರೋಪ’ ಎಂದು ಬಿಜೆಪಿ ಹೇಳಿದೆ.

‘ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾದ ಬಳಿಕ ಕಾಂಗ್ರೆಸ್ ಹಡಗು ಮುಳುಗಿ ಹೋಯ್ತು. ಹಾಗಾದರೆ ಕಾಂಗ್ರೆಸ್ ಮುಕ್ತ ಭಾರತಕ್ಕೆ ರಾಹುಲ್ ಗಾಂಧಿಯೇ ಹೊಣೆ ಎಂದು ಹೇಳುವುದಕ್ಕೆ ಸಾಧ್ಯವೇ ಸುರ್ಜೇವಾಲಾ ಅವರೇ? ದೇಶವ್ಯಾಪಿ ನಡೆದ ಉಪಚುನಾವಣೆಗಳಲ್ಲಿ ಹಿನ್ನಡೆ ಅನುಭವಿಸಿದ್ದ ಕಾಂಗ್ರೆಸ್ ಪಕ್ಷ ಈಗ ಬಿಟ್‌ಕಾಯಿನ್ ವಿಚಾರ ಹಿಡಿದುಕೊಂಡು ಉಸಿರಾಡುವ ಪ್ರಯತ್ನ ಮಾಡುತ್ತಿದೆ’ ಎಂದು ಬಿಜೆಪಿ ಹಂಗಿಸಿದೆ.

‘ಸುಪ್ರೀಂ’ ನ್ಯಾಯಮೂರ್ತಿ ನೇತೃತ್ವದ ತನಿಖೆಗೆ ಆಗ್ರಹ

ಬಿಟ್ ಕಾಯಿನ್: ಹ್ಯಾಕಿಂಗ್ ವಿವರ ನೀಡಿದ ಕಾಂಗ್ರೆಸ್ ಮುಖಂಡ ಸುರ್ಜೇವಾಲಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಹು ಕೋಟಿ ಮೌಲ್ಯದ ಬಿಟ್ ಕಾಯಿನ್ ಹಗರಣದ ತನಿಖೆಯನ್ನು ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ)ಕ್ಕೆ ವಹಿಸಬೇಕು ಎಂದು ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಪ್ರಧಾನಿ ನರೇಂದ್ರ ಮೋದಿ ಅವರು, ‘ಭಾರಿ ಮೊತ್ತದ ಈ ಹಗರಣದ ಸಮಗ್ರ ತನಿಖೆಗೆ ಕ್ರಮ ಕೈಗೊಳ್ಳುವ ಬದಲು, ‘ಈ ಕುರಿತ ಆರೋಪ ನಿರ್ಲಕ್ಷಿಸಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಯಹಸ್ತ ನೀಡಿ ಇಡೀ ಹಗರಣವನ್ನೇ ಮುಚ್ಚಿಹಾಕುತ್ತಿದ್ದಾರೆ’ ಎಂದು ದೂರಿದರು.

ಜಾಗತಿಕ ಆರ್ಥಿಕತೆಯನ್ನೇ ಬುಡ ಮೇಲು ಮಾಡಬಹುದಾದ ಅತಿ ದೊಡ್ಡ ಹಗರಣ ಇದಾಗಿದ್ದರೂ, ಕರ್ನಾಟಕ ಸರ್ಕಾರವು ಐದು ತಿಂಗಳ ವರೆಗೆ ಇಂಟರ್ ಪೋಲ್‌ಗೆ ಮಾಹಿತಿ ನೀಡಿರಲಿಲ್ಲ ಎಂದು ಆರೋಪಿಸಿದರು.

‘ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಹಾಗೂ ಸಹಚರ ರಾಬಿನ್ ಖಂಡೇಲ್‌ವಾಲ್ ಅವರನ್ನು 2020ರ ನವೆಂಬರ್‌ನಲ್ಲೇ ಬಂಧಿಸಿದ್ದ ಬೆಂಗಳೂರು ಪೊಲೀಸರು, ಶ್ರೀಕಿಯನ್ನು ಅಂದಾಜು 100 ದಿನಗಳ ಕಾಲ ತಮ್ಮ ವಶದಲ್ಲಿರಿಸಿಕೊಂಡು ವಿಚಾರಣೆಗೆ ಒಳಪಡಿಸಿದ್ದಾರೆ. 5 ತಿಂಗಳ ನಂತರ, 2021ರ ಏಪ್ರಿಲ್ 17ರಂದು ಆರೋಪಿ ಜಾಮೀನು ಪಡೆದಿದ್ದಾನೆ’ ಎಂದು ಅವರು ವಿವರಿಸಿದರು.

ಬಿಟ್ ಕಾಯಿನ್ ವ್ಯವಹಾರವು ಭಾರತದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಪ್ರಧಾನಿಯವರೇ ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡಿದ್ದಾರೆ. ಅಲ್ಲದೆ, ಅವರು ಅಮೆರಿಕ ಪ್ರವಾಸ ಕೈಗೊಂಡಾಗ ಹಗರಣದಿಂದಾಗಿ ಮುಜುಗರ ಅನುಭವಿಸಿದ್ದಾರೆ ಎಂದರು.

‘ವಿವಿಧ ದೇಶಗಳ ಬಿಟ್ ಕಾಯಿನ್ ಎಕ್ಸ್‌ಚೇಂಜ್ ಸರ್ವರ್‌ಗಳು ಹಾಗೂ ರಾಜ್ಯ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸರ್ವರ್‌ಗಳಿಗೂ ಕನ್ನ ಹಾಕಿದ್ದಾಗಿ ತಿಳಿಸಿರುವ ಆರೋಪಿ, ಬಿಟ್ ಕಾಯಿನ್ ಕದ್ದಿದ್ದಾಗಿ ಒಪ್ಪಿದ್ದಾನೆ. ಆದರೆ, ಬಿಜೆಪಿ ನೇತೃತ್ವದ ಕರ್ನಾಟಕ ಹಾಗೂ ಕೇಂದ್ರ ಸರ್ಕಾರಗಳು ಹಗರಣದ ಪ್ರಮುಖ ಸಾಕ್ಷ್ಯಗಳನ್ನು ಮುಚ್ಚಿಟ್ಟಿವೆ’ ಎಂದು ಅವರು ಆರೋಪಿಸಿದರು.

‘ಒಟ್ಟು ಎಂಟು ಕಂಪನಿಗಳ ಕ್ರಿಪ್ಟೊ ಕರೆನ್ಸಿ ಎಕ್ಸ್‌ಚೇಂಜ್‌ಗಳ ಸರ್ವರ್‌ಗಳು ಹಾಗೂ ವಿಶ್ವದ ಅನೇಕ ಹಣಕಾಸು ಸಂಸ್ಥೆಗಳ ಸರ್ವರ್‌ಗಳನ್ನೂ ಹ್ಯಾಕ್ ಮಾಡಿದ್ದಾಗಿ ಶ್ರೀಕಿ ಹೇಳಿಕೆ ನೀಡಿದ್ದಾನೆ. ಪ್ರತಿ ಬಿಟ್ ಕಾಯಿನ್‌ನ ಮೊತ್ತ ಈಗ ಅಂದಾಜು ₹ 51 ಲಕ್ಷದಷ್ಟಿದೆ ಎನ್ನಲಾಗುತ್ತಿದೆ. ಎರಡು ಬಾರಿಯ ಹ್ಯಾಕಿಂಗ್ ಮೂಲಕ ಒಟ್ಟು 5,000 ಬಿಟ್ ಕಾಯಿನ್ ಕದ್ದಿದ್ದಾಗಿ ಆರೋಪಿ ಹೇಳಿದ್ದು, ಇತರ ಆರು ಹ್ಯಾಕಿಂಗ್ ಮೂಲಕ ಎಷ್ಟು ಬಿಟ್ ಕಾಯಿನ್ ಕದ್ದ ಎಂಬ ಮಾಹಿತಿ ದೊರೆತಿಲ್ಲ’ ಎಂದು ವಿವರ ನೀಡಿದರು.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಈ ಪ್ರಕರಣ ಬೆಳಕಿಗೆ ಬಂದಾಗ ಕರ್ನಾಟಕದ ಗೃಹ ಸಚಿವರಾಗಿದ್ದರು ಎಂಬುದು ಗಮನಾರ್ಹ. ಆರೋಪಿಯಿಂದ ವಶಕ್ಕೆ ಪಡೆದಿದ್ದ ₹ 9 ಕೋಟಿ ಮೌಲ್ಯದ 31 ಬಿಟ್ ಕಾಯಿನ್‌ಗಳು ನಾಪತ್ತೆಯಾಗಿವೆ ಎಂದು ಬೆಂಗಳೂರು ಪೊಲೀಸರು 2021ರ ಜನವರಿ 12ರಂದು ಹೇಳಿಕೆ ನೀಡಿದ್ದರು. ಆದರೂ ಸರ್ಕಾರ ಏಕೆ ಸಮಗ್ರ ತನಿಖೆಗೆ ಆದೇಶ ನೀಡಲಿಲ್ಲ?’ ಎಂದು ಅವರು ಸವಾಲೆಸೆದರು.

ಆರೋಪಿಗಳನ್ನು ಬಂಧಿಸಿರುವ ಪೊಲೀಸ್ ಅಧಿಕಾರಿಗಳನ್ನು ದಿಢೀರ್ ವರ್ಗಾವಣೆ ಮಾಡಲಾಗಿದೆ. ಒಟ್ಟು ₹5,240 ಕೋಟಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು ಎರಡು ಬಾರಿ ಪ್ರತ್ಯೇಕವಾಗಿ ವರ್ಗಾಯಿಸಿಕೊಳ್ಳಲಾಗಿದೆ ಎಂದು ಅವರು ದೂರಿದರು.

ಈ ಮೊತ್ತ ಯಾರ ಖಾತೆಗೆ ವರ್ಗಾವಣೆಯಾಗಿದೆ ಎಂಬುದರ ಕುರಿತು ತನಿಖೆಗೆ ಸೂಚಿಸುವ ಬದಲು, ‘ಬಿಟ್ ಕಾಯಿನ್ ಹಗರಣದ ಬಗ್ಗೆ ತಲೆ ಕಡೆಸಿಕೊಳ್ಳಬೇಡಿ’ ಎಂದು ಎರಡು ದಿನಗಳ ಹಿಂದಷ್ಟೇ ಪ್ರಧಾನಿಯವರೇ ಬೊಮ್ಮಾಯಿ ಅವರಿಗೆ ಅಭಯ ನೀಡಿರುವುದು ಹಾಸ್ಯಾಸ್ಪದ. ಹಗರಣದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಶಾಸಕರ ಮಕ್ಕಳು ಭಾಗಿಯಾಗಿದ್ದಾರೆ ಎಂದು ಸಿ.ಎಂ ಆರೋಪಿಸಿದ್ದಾರೆ. ಹಾಗಾದರೆ, ಅವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ? ಎಂದು ಸುರ್ಜೇವಾಲಾ ಪ್ರಶ್ನಿಸಿದರು.

ಯಡಿಯೂರಪ್ಪ ಭೇಟಿಯಾದ ಬೊಮ್ಮಾಯಿ

ಬಿಟ್‌ಕಾಯಿನ್ ಹಗರಣ ದೊಡ್ಡ ಮಟ್ಟದ ಸದ್ದು ಮಾಡುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದಾರೆ.

ಶುಕ್ರವಾರ ತಡರಾತ್ರಿ ಯಡಿಯೂರಪ್ಪ ಅವರ ‘ಕಾವೇರಿ’ ನಿವಾಸಕ್ಕೆ ಭೇಟಿ ಕೊಟ್ಟ ಬೊಮ್ಮಾಯಿ ಕೆಲ ಹೊತ್ತು ಚರ್ಚೆ ನಡೆಸಿದರು. ಕಾಂಗ್ರೆಸ್ ನಾಯಕರು ಮಾಡುತ್ತಿರುವ ಆರೋಪಗಳು ಸುಳ್ಳು. ಅಂತಹ ಯಾವುದೇ ಪ್ರಕರಣಗಳೂ ನಡೆದಿಲ್ಲ. ರಾಜಕೀಯ ಕಾರಣಕ್ಕೆ ಅವರು ಗುಲ್ಲು ಎಬ್ಬಿಸುತ್ತಿದ್ದಾರೆ ಎಂದು ಬೊಮ್ಮಾಯಿ ಅವರು ತಮ್ಮ ನಾಯಕರಿಗೆ ಮನವರಿಕೆ ಮಾಡಿಕೊಟ್ಟರು ಎಂದು ಗೊತ್ತಾಗಿದೆ.

ಸುದ್ದಿ 2 ನಿಮಿಷ

ಕಾಂಗ್ರೆಸ್‌ನವರು ಭಾಗಿಯಾಗಿದ್ದರೆ ಬಂಧಿಸಲಿ: ಸಿದ್ದರಾಮಯ್ಯ ಸವಾಲು

ಬಾಗಲಕೋಟೆ: ’ಬಿಟ್ ಕಾಯಿನ್ ಹಗರಣದಲ್ಲಿ ಕಾಂಗ್ರೆಸ್‌ನವರು ಇದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಿದ್ದಾರೆ. ಹಾಗಿದ್ದರೆ ಅವರ ಹೆಸರು ಬಹಿರಂಗಪಡಿಸಿ ಬಂಧಿಸಲಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ಬಾದಾಮಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಗರಣದಲ್ಲಿ ಬಿಜೆಪಿಯ ಇಬ್ಬರು ಪ್ರಭಾವಿ ನಾಯಕರು ಇದ್ದಾರೆ ಅನ್ನೋ ಮಾಹಿತಿ ನಮಗೆ ಇದೆ. ಹಗರಣದ ತನಿಖೆ ಮಾಡಿಸುವ ಅಧಿಕಾರ ಇರೋದು ಮುಖ್ಯಮಂತ್ರಿಗೆ. ಹೀಗಾಗಿ ಅವರೇ ಹೆಸರು ಬಹಿರಂಗಪಡಿಸಲಿ. ಆಗ ಹಗರಣದಲ್ಲಿ ಕಾಂಗ್ರೆಸ್‌ನವರು, ಬಿಜೆಪಿಯವರು ಇಲ್ಲವೇ ಜೆಡಿಎಸ್‌ನವರು ಇದ್ದರೆ ಗೊತ್ತಾಗಲಿದೆ’ ಎಂದು ಹೇಳಿದರು.

‘ಪೊಲೀಸರು ಆರೋಪಿ ಶ್ರೀಕಿಯಿಂದ ಬಿಟ್ ಕಾಯಿನ್ ವಶಪಡಿಸಿಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ಹಾಗೆ ವಶಕ್ಕೆ ಪಡೆದ ಬಿಟ್ ಕಾಯಿನ್ ಯಾರ ಬಳಿ ಹೋಗಿದೆ. ಯಾರ ಖಾತೆಗೆ ವರ್ಗಾವಣೆ ಆಗಿದೆ. ಪೊಲೀಸರಿಗೆ ಹೋಗಿದೆಯಾ? ರಾಜಕಾರಣಿಗಳಿಗೆ ಹೋಗಿದೆಯಾ ಎಂಬುದನ್ನು ಸಿ.ಎಂ ಬಸವರಾಜ ಬೊಮ್ಮಾಯಿ ಹೇಳಬೇಕಲ್ವಾ. ಪೊಲೀಸರು ರಾಜ್ಯ ಸರ್ಕಾರದ ಅಡಿಯಲ್ಲಿ ಬರುವುದರಿಂದ ಈ ವಿಚಾರದಲ್ಲಿ ಸ್ವತಂತ್ರವಾಗಿ ತನಿಖೆ ಮಾಡಲಿದ್ದಾರೆ ಎಂಬುದರ ಬಗ್ಗೆಯೂ ನಮಗೆ ಅನುಮಾನವಿದೆ’ ಎಂದರು.

ಈಡಿಗ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯ

ಧಾರವಾಡ: ‘ಆರ್ಯ ಈಡಿಗ ಸಮಾಜದ ರಾಷ್ಟ್ರೀಯ ಮಹಾ ಮಂಡಳಿಯ ರಾಷ್ಟ್ರೀಯ ಪ್ರತಿನಿಧಿ ಸಭೆಯು ಇದೇ 17ರಂದು ಗೋವಾದ ಡೋನಾಪೌಲಾದಲ್ಲಿ ನಡೆಯಲಿದ್ದು, ಇದರಲ್ಲಿ ಆರ್ಯ ಈಡಿಗ ಅಭಿವೃದ್ಧಿ ನಿಗಮ ಸ್ಥಾಪಿಸುವಂತೆ ಒತ್ತಾಯಿಸಲಾಗುವುದು’ ಎಂದು ಮಹಾ ಮಂಡಳಿಯ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಹೇಳಿದರು.

‘ಸರ್ಕಾರ ನಿಗಮ ಸ್ಥಾಪನೆಗೆ ಮುಂದಾಗದಿದ್ದರೆ ಮುಂದಿನ ಹೋರಾಟದ ರೂಪುರೇಷೆಗಳನ್ನು ಚರ್ಚಿಸಲಾಗುವುದು’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈಡಿಗ ಸಮುದಾಯವನ್ನು ಏಕೀಕರಣಗೊಳಿಸುವುದಕ್ಕೆ ರೂಪುರೇಷೆ ಕುರಿತು ಚರ್ಚಿಸಲಾಗುವುದು. 108 ಅಡಿ ಎತ್ತರದ ಬ್ರಹ್ಮಶ್ರೀ ನಾರಾಯಣ ಗುರುಗಳ ಪುತ್ಥಳಿಯನ್ನು ರಾಜ್ಯದಲ್ಲಿ ಸ್ಥಾಪಿಸಬೇಕು. ಗುರುಗಳ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು’ ಎಂದು ಹೇಳಿದರು.

‘ಸಾಗರ ತಾಲ್ಲೂಕಿನ ಸಿಗಂಧೂರು ಚೌಡೇಶ್ವರಿ ದೇವಸ್ಥಾನದ ಆಡಳಿತದಲ್ಲಿ ಮುಜರಾಯಿ ಇಲಾಖೆ ಹಸ್ತಕ್ಷೇಪ ಮಾಡಿದರೆ ಉಗ್ರ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದರು.

‘ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ಹೆಸರನ್ನು ಇಡುವಂತೆ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ತಿಳಿಸಿದರು.

ಕಾಂಗ್ರೆಸ್‌ನ ಆರೋಪ ಖಾಲಿ ಡಬ್ಬಿಯ ಸದ್ದಿನಂತೆ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಬಿಟ್ ಕಾಯಿನ್ ವಿಷಯದಲ್ಲಿ ಕಾಂಗ್ರೆಸ್ ನಾಯಕರು ಖಾಲಿ ಡಬ್ಬ ಅಲ್ಲಾಡಿಸುತ್ತಿದ್ದಾರೆ. ಸದ್ದೇನೋ ಜೋರಾಗಿ ಬರುತ್ತಿದೆ. ಆದರೆ, ಒಳಗೆ ಏನೂ ಇಲ್ಲ’ ಎಂದು ಸಚಿವ ಕೆ.ಎಸ್. ಈಶ್ವರಪ್ಪ ವ್ಯಂಗ್ಯವಾಡಿದರು.

ಶನಿವಾರ ಸುದ್ದಿಗಾರರರೊಂದಿಗೆ ಮಾತನಾಡಿದ ಅವರು, ‘ಬಿಟ್ ಕಾಯಿನ್ ಹಗರಣದಲ್ಲಿ ಬಿಜೆಪಿಯ ಯಾವ ನಾಯಕ, ಪದಾಧಿಕಾರಿಯೂ ಇಲ್ಲ. ಮುಖ್ಯಮಂತ್ರಿ, ಸಚಿವರು, ಶಾಸಕರೂ ಇಲ್ಲ. ಕಾಂಗ್ರೆಸ್‌ಗೆ ತಾಕತ್ತಿದ್ದರೆ ಒಂದು ತುಣುಕು ಕಾಗದದ ದಾಖಲೆ ನೀಡಲಿ’ ಎಂದು ಸವಾಲು ಎಸೆದರು.

‘ಬಿಟ್ ಕಾಯಿನ್: ವಿದೇಶಿ ಸಂಸ್ಥೆ ಕೋರಿಕೆ ಇಲ್ಲ’

ಪ್ರಜಾವಾಣಿ ವಾರ್ತೆ

ಕಮಲ್ ಪಂತ್

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಭಾಗಿಯಾಗಿರುವ ಬಿಟ್‌ಕಾಯಿನ್ ಹ್ಯಾಕಿಂಗ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ವಿದೇಶಿ ತನಿಖಾ ಸಂಸ್ಥೆ ಅಥವಾ ಉದ್ಯಮ ಸಂಸ್ಥೆಗಳಿಂದ ಈವರೆಗೆ ಕೋರಿಕೆ ಬಂದಿಲ್ಲ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದ್ದಾರೆ.

‘ಬಿಟ್‌ಕಾಯಿನ್ ಹ್ಯಾಕಿಂಗ್ ಹಗರಣ’ದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಶನಿವಾರ ಸಂಜೆ ಸಭೆ ನಡೆಸಿದರು. ಆ ಬಳಿಕ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಪೊಲೀಸ್ ಕಮಿಷನರ್, ‘ಶ್ರೀಕೃಷ್ಣ ಭಾಗಿಯಾಗಿರುವ ಪ್ರಕರಣಗಳ ಕುರಿತು ಯಾವುದೇ ರಾಷ್ಟ್ರವೂ ಮಾಹಿತಿ ಕೋರಿಲ್ಲ. ಬೆಂಗಳೂರಿನಿಂದ ಹ್ಯಾಕಿಂಗ್ ನಡೆದಿದೆ ಎಂಬುದರ ಕುರಿತು ಮಾಹಿತಿಯನ್ನೂ ಹಂಚಿಕೊಂಡಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

14,682 ಬಿಟ್‌ಕಾಯಿನ್‌ಗಳನ್ನು ವರ್ಗಾವಣೆ ಮಾಡಿರುವ ಕುರಿತು ಬಿಟ್‌ಫಿನೆಕ್ಸ್ ಕಂಪನಿಗೆ ಮಾಹಿತಿ ಲಭಿಸಿ ವರ್ಷ ಕಳೆದರೂ ಬೆಂಗಳೂರು ಪೊಲೀಸರನ್ನು ಸಂಪರ್ಕಿಸಿಲ್ಲ. ಬಿಟ್‌ಕಾಯಿನ್‌ಗಳ ವರ್ಗಾವಣೆ ಬೆಂಗಳೂರಿನಿಂದ ನಡೆದಿದೆ ಎಂಬುದಕ್ಕೆ ಯಾವ ಆಧಾರಗಳೂ ಇಲ್ಲ ಎಂದು ಹೇಳಿದ್ದಾರೆ.

ಮಾದಕವಸ್ತು ಪ್ರಕರಣದಲ್ಲಿ 2020ರ ನವೆಂಬರ್ 4ರಂದು ಶ್ರೀಕಿಯನ್ನು ವಶಕ್ಕೆ ಪಡೆಯಲಾಗಿತ್ತು. ಆತನ ವಿಚಾರಣೆ ವೇಳೆ, ಹ್ಯಾಕಿಂಗ್ ಕುರಿತು ಮಾಹಿತಿ ಲಭ್ಯವಾಗಿತ್ತು. ಆತನ ಬಳಿ ಇದ್ದ ಬಿಟ್‌ಕಾಯಿನ್‌ಗಳನ್ನು ವಶಕ್ಕೆ ಪಡೆಯಲು ಸರ್ಕಾರದ ಅನುಮತಿ ಪಡೆದು ಪ್ರತ್ಯೇಕ ವ್ಯಾಲೆಟ್ ತೆರೆಯಲಾಗಿತ್ತು. ಆರಂಭದಲ್ಲಿ 31.8 ಬಿಟ್‌ಕಾಯಿನ್ ಆರೋಪಿಯ ವ್ಯಾಲೆಟ್‌ನಲ್ಲಿದ್ದವು. ನಂತರ ತೆರೆದು ನೋಡಿದಾಗ 186.81 ಬಿಟ್ ಕಾಯಿನ್‌ಗಳಿದ್ದವು. ಆದರೆ, ಖಾಸಗಿ ಕೀ ಲಭಿಸದ ಕಾರಣ ಅವುಗಳನ್ನು ಪೊಲೀಸ್ ವ್ಯಾಲೆಟ್‌ಗೆ ವರ್ಗಾಯಿಸಲು ಸಾಧ್ಯವಾಗಿರಲಿಲ್ಲ. ಇದನ್ನು ನ್ಯಾಯಾಲಯದ ಗಮನಕ್ಕೂ ತರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಿಟ್‌ಕಾಯಿನ್ ಮತ್ತು ಕ್ರಿಪ್ಟೋ ಕರೆನ್ಸಿ ಸರ್ವರ್‌ಗಳನ್ನು ಹ್ಯಾಕ್ ಮಾಡಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದ. ವಿಚಾರಣೆ ವೇಳೆ ಆತನ ಯಾವುದೇ ಹೇಳಿಕೆಗಳಿಗೂ ಆಧಾರಗಳು ಲಭಿಸಿರಲಿಲ್ಲ. ಆದರೂ, 2021ರ ಏಪ್ರಿಲ್ 28ರಂದು ಇಂಟರ್‌ಪೋಲ್‌ಗೆ ಮಾಹಿತಿ ನೀಡಲಾಗಿತ್ತು. ಜಾರಿ ನಿರ್ದೇಶನಾಲಯದೊಂದಿಗೂ ದಾಖಲೆಗಳನ್ನು ಹಂಚಿಕೊಳ್ಳಲಾಗಿತ್ತು ಎಂದಿದ್ದಾರೆ.

ಪೊಲೀಸರು ಅತ್ಯಂತ ವೃತ್ತಿಪರತೆಯಿಂದ ತನಿಖೆ ನಡೆಸಿದ್ದಾರೆ. ಯಾವ ಲೋಪಗಳೂ ಆಗಿಲ್ಲ. ಶ್ರೀಕೃಷ್ಣನಿಗೆ ಪೊಲೀಸ್ ವಶದಲ್ಲಿದ್ದಾಗ ಮಾದಕವಸ್ತು ನೀಡಲಾಗಿತ್ತು ಎಂಬ ಆರೋಪದಲ್ಲಿ ಹುರುಳಿಲ್ಲ. ವೈದ್ಯಕೀಯ ತಪಾಸಣೆಯಲ್ಲೂ ಇದು ಸಾಬೀತಾಗಿದೆ. ಬಿಟ್‌ಕಾಯಿನ್ ಪ್ರಕರಣದ ತನಿಖೆ ವಿಚಾರದಲ್ಲಿ ಕೇಳಿಬರುತ್ತಿರುವ ಆರೋಪಗಳು ನಿರಾಧಾರ ಎಂದು ಕಮಿಷನರ್ ಕಮಲ್ ಪಂತ್ ಹೇಳಿದ್ದಾರೆ.

ಅಮೆರಿಕದಲ್ಲಿ ಪ್ರಧಾನಿಗೆ ಮುಜುಗರ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಹ್ಯಾಕಿಂಗ್ ಪ್ರಕರಣದಿಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕದಲ್ಲಿ ಮುಜುಗರವಾಗಿದೆ. ಈ ಕಾರಣದಿಂದಾಗಿಯೇ ಹಗರಣ ಹೊರಬಂದಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಪಕ್ಷದ ಕೇಂದ್ರ ಕಚೇರಿಯಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪ್ರಧಾನಿಯವರು ಅಮೆರಿಕಕ್ಕೆ ಭೇಟಿ ನೀಡಿದ್ದಾಗ ಅಲ್ಲಿನ ತನಿಖಾ ಸಂಸ್ಥೆಗಳು ಈ ಹಗರಣದ ಬಗ್ಗೆ ಪ್ರಸ್ತಾಪಿಸಿವೆ. ಇದರಿಂದ ಪ್ರಧಾನಿಗೆ ಮುಜುಗರವಾಗಿದೆ. ಹೀಗಾಗಿ ಅವರು ಇಡೀ ಪ್ರಕರಣವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ’ ಎಂದರು.

2020ರ ನವೆಂಬರ್‌ನಿಂದ ಹಲವು ಬಾರಿ ಹ್ಯಾಕರ್ ಶ್ರೀಕೃಷ್ಣನನ್ನು ಬಂಧಿಸಿ, ವಿಚಾರಣೆ ನಡೆಸಲಾಗಿದೆ. ಈ ಪ್ರಕರಣದ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಬಿಟ್‌ಕಾಯಿನ್ ಹ್ಯಾಕಿಂಗ್ ಹಗರಣದ ಸಮಗ್ರ ಮಾಹಿತಿಯನ್ನು 15 ದಿನಗಳಲ್ಲಿ ಬಹಿರಂಗಪಡಿಸಲಾಗುವುದು ಎಂದರು.

ಹಾದಿ ತಪ್ಪಿಸಬಾರದು: ಪ್ರಕರಣದ ತನಿಖೆ ನಡೆಯುತ್ತಿದೆ. ಈ ವೇಳೆ ಕಾಂಗ್ರೆಸ್ ನಾಯಕರು ಮನಸ್ಸಿಗೆ ಬಂದಂತೆ ಹೇಳಿಕೆ ನೀಡಿ ತನಿಖೆಯ ಹಾದಿ ತಪ್ಪಿಸಬಾರದು. ಈ ಹಗರಣದಲ್ಲಿ ನಿಖರವಾಗಿ ಯಾವ ವ್ಯಕ್ತಿಗಳಿಗೆ ಹಣ ವರ್ಗಾವಣೆ ಆಗಿದೆ ಎಂಬುದಕ್ಕೆ ಕಾಂಗ್ರೆಸ್ ನಾಯಕರು ದಾಖಲೆ ನೀಡುವುದು ಉತ್ತಮ ಎಂದು ಕುಮಾರಸ್ವಾಮಿ ಹೇಳಿದರು.

ಜನಧನ್ ಖಾತೆಯಿಂದ ಹಣ ದೋಚಿರುವ ಮಾಹಿತಿ ಇದೆ. ಆದ್ದರಿಂದ ಕೇಂದ್ರ ಸರ್ಕಾರ ಕೂಡ ಗಂಭೀರ ಕ್ರಮ ಕೈಗೊಳ್ಳುವ ನಿರೀಕ್ಷೆ ಇದೆ.2016 ರಿಂದಲೇ ಬಿಟ್‌ಕಾಯಿನ್ ಹ್ಯಾಕಿಂಗ್ ದಂಧೆ ನಡೆಯುತ್ತಿತ್ತು. 2018ರಲ್ಲಿ ಯುಬಿ ಸಿಟಿಯಲ್ಲಿ ನಡೆದ ಹಲ್ಲೆ ಪ್ರಕರಣಕ್ಕೂ ಇದೇ ನಂಟು ಇತ್ತು ಎಂದರು.

ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಮಾಹಿತಿ

ಹುಬ್ಬಳ್ಳಿ: ಕೆಎಲ್‌ಇ ವೈದ್ಯಕೀಯ ಕಾಲೇಜು ಪ್ರವೇಶ ಆರಂಭ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯಿಂದ ಹುಬ್ಬಳ್ಳಿಯಲ್ಲಿ ನೂತನ ವೈದ್ಯಕೀಯ ಮಹಾವಿದ್ಯಾಲಯ ಆರಂಭಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದ್ದು, ಪ್ರವೇಶ ಪ್ರಕ್ರಿಯೆ ಆರಂಭಿಸಲಾಗಿದೆ’ ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ತಿಳಿಸಿದರು.

ಇಲ್ಲಿನ ನೆಹರೂ ನಗರದ ಜೆಎನ್‌ಎಂಸಿ ಆವರಣದಲ್ಲಿರುವ ಕೆಎಲ್‌ಇ ಶತಮಾನೋತ್ಸವ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಕೆಎಲ್‌ಇ ಸಂಸ್ಥೆಯ 106ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಪ್ರಭಾಕರ ಕೋರೆ

‘ಜೆಜಿಎಂಎಂಎಂಸಿ (ಜಗದ್ಗುರು ಗಂಗಾಧರ ಮಹಾಸ್ವಾಮಿಗಳು ಮೂರು ಸಾವಿರ ಮಠ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ) ಎಂದು ಹೆಸರಿಟ್ಟಿರುವ ಈ ಕಾಲೇಜಿನಲ್ಲಿ ಒಟ್ಟು 150 ಸೀಟುಗಳಿವೆ. ಈ ಪೈಕಿ 37 ಸೀಟುಗಳನ್ನು ಕನ್ನಡಿಗರಿಗೆ ಮೀಸಲಿಟ್ಟಿದ್ದೇವೆ. ಇತರ ಕಾಲೇಜುಗಳಂತೆ ಅಲ್ಲೂ ಗುಣಾತ್ಮಕ ಶಿಕ್ಷಣ ನೀಡಲಾಗುವುದು’ ಎಂದು ಹೇಳಿದರು.

‘ಕೋವಿಡ್ ಪರಿಸ್ಥಿತಿಯ ನಂತರ ವೈದ್ಯಕೀಯ ಮಹಾವಿದ್ಯಾಲಯ ಆರಂಭಿಸಲು ದೇಶದಾದ್ಯಂತ ಹಲವು ಸಂಸ್ಥೆಗಳು ಅರ್ಜಿ ಸಲ್ಲಿಸಿದ್ದವು. ಆದರೆ, ನಮ್ಮ ಸಂಸ್ಥೆಯ ಕಾಲೇಜಿಗೆ ಮಾತ್ರ ಮಾನ್ಯತೆ ಸಿಕ್ಕಿರುವುದು ಹೆಮ್ಮೆಯ ಸಂಗತಿ. ಹುಬ್ಬಳ್ಳಿ ಸಮೀಪದ ಕೊಟ್ಟಗುಂದಹುಣಸಿ ಬಳಿಯ ಸಂಸ್ಥೆಯ ಕಟ್ಟಡದಲ್ಲಿ ಕಾಲೇಜು ತಾತ್ಕಾಲಿಕವಾಗಿ ಆರಂಭಗೊಳ್ಳಲಿದೆ. ಗಬ್ಬೂರ ಕ್ರಾಸ್ ಸಮೀಪದಲ್ಲಿ ನಿರ್ಮಾಣದ ಹಂತದಲ್ಲಿರುವ ಕಟ್ಟಡ ಕಾಮಗಾರಿ ಪೂರ್ಣಗೊಂಡ ಬಳಿಕ ಅಲ್ಲಿಗೆ ಸ್ಥಳಾಂತರಿಸಲಾಗುವುದು’ ಎಂದು ಮಾಹಿತಿ ನೀಡಿದರು.

‘ಮಹಾರಾಷ್ಟ್ರದ ಪುಣೆಯಲ್ಲಿ ಸಂಸ್ಥೆಯ ಆಸ್ಪತ್ರೆ ನಿರ್ಮಾಣ ಹಂತದಲ್ಲಿದ್ದು, ಎರಡು ತಿಂಗಳಲ್ಲಿ ಉದ್ಘಾಟನೆಗೊಳ್ಳಲಿದೆ. ವಾಣಿಜ್ಯ ನಗರಿ ಮುಂಬೈನಲ್ಲಿ ಕಾನೂನು ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಆರಂಭಿಸಲಾಗುವುದು. ಮಹಾರಾಷ್ಟ್ರ ಸರ್ಕಾರವು ಅತ್ಯಂತ ಪ್ರಮುಖ ಸ್ಥಳವಾದ ಪಾಮ್‌ಬೀಚ್‌ನಲ್ಲಿ ನಾಲ್ಕು ಎಕರೆ ಜಾಗ ನೀಡಿದ್ದು, ಅಲ್ಲಿ ₹ 18 ಕೋಟಿ ವೆಚ್ಚದಲ್ಲಿ ಕೆಎಲ್‌ಇ ಶಾಲೆಯ ಕಟ್ಟಡ ಪ್ರಾರಂಭಿಸಲಿದ್ದೇವೆ’ ಎಂದು ಅವರು ತಿಳಿಸಿದರು.

ಪೊಲೀಸ್ ‘ವ್ಯಾಲೆಟ್’ ಮಾಹಿತಿ ನಿಗೂಢ!

ಒಂದನೇ ಪುಟದಿಂದ...

ಪೊಲೀಸರ ಹೆಸರಿನಲ್ಲಿ ಡಿಜಿಟಲ್ ವ್ಯಾಲೆಟ್ ಹಾಗೂ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲು ಅನುಮತಿ ನೀಡುವಂತೆ ನಗರ ಪೊಲೀಸ್ ಕಮಿಷನರ್, ರಾಜ್ಯ ಪೊಲೀಸ್ ಮಹಾನಿರ್ದೇಶಕರನ್ನು ಕೋರಿದ್ದರು. ಅವರು ಗೃಹ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದರು. 2020ರ ಡಿಸೆಂಬರ್ 7ರಂದು ಆರ್ಥಿಕ ಇಲಾಖೆ ಈ ಪ್ರಸ್ತಾವಕ್ಕೆ ಸಹಮತ ಸೂಚಿಸಿತ್ತು. ಡಿಜಿಟಲ್ ವ್ಯಾಲೆಟ್ ಮತ್ತು ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ತೆರೆಯಲು ಅನುಮತಿ ನೀಡಿ ಗೃಹ ಇಲಾಖೆ ಡಿ.8ರಂದು ಆದೇಶ ಹೊರಡಿಸಿತ್ತು.

ಆರೋಪಪಟ್ಟಿಯಲ್ಲಿ ಉಲ್ಲೇಖವೇ ಇಲ್ಲ: ಪ್ರತ್ಯೇಕ ವ್ಯಾಲೆಟ್ ಮತ್ತು ಬ್ಯಾಂಕ್ ಖಾತೆ ತೆರೆಯಲು ಅನುಮತಿ ಪಡೆದ ಎರಡೂವರೆ ತಿಂಗಳ ಬಳಿಕ ಪೊಲೀಸರು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ಶ್ರೀಕಿಯಿಂದ ಎಷ್ಟು ಬಿಟ್‌ಕಾಯಿನ್‌ಗಳನ್ನು ವಶಕ್ಕೆ ಪಡೆಯಲಾಗಿತ್ತು? ಅವುಗಳನ್ನು ನಗದೀಕರಿಸಿ ಯಾವ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿತ್ತು? ಎಂಬ ಮಾಹಿತಿಯೇ ಸಿಸಿಬಿಯು ಕೋರ್ಟ್‌ಗೆ ಸಲ್ಲಿಸಿರುವ 757 ಪುಟಗಳ ದೋಷಾರೋಪಪಟ್ಟಿಯಲ್ಲಿ ಇಲ್ಲ.

ಪೊಲೀಸರು ಯಾವ ಬಿಟ್‌ಕಾಯಿನ್ ಎಕ್ಸ್‌ಚೇಂಜ್ ಮೂಲಕ ಡಿಜಿಟಲ್ ವ್ಯಾಲೆಟ್ ತೆರೆದಿದ್ದರು? ಅವುಗಳಿಗೆ ವರ್ಗಾಯಿಸಿದ ಬಿಟ್‌ಕಾಯಿನ್‌ಗಳನ್ನು ನಗದೀಕರಿಸಲು ಯಾವ ಬ್ಯಾಂಕ್‌ನಲ್ಲಿ ಖಾತೆ ತೆರೆಯಲಾಗಿತ್ತು? ಯಾವ ಅಧಿಕಾರಿಗಳು ಈ ಖಾತೆಗಳನ್ನು ನಿರ್ವಹಿಸಿದ್ದರು? ಎಂಬ ವಿವರಗಳೂ ಇಲ್ಲ.

2021ರ ಫೆಬ್ರುವರಿ 22ರಂದು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ. ಆರೋಪಿಗಳ ಹೇಳಿಕೆಗಳು, ಸಾಕ್ಷಿದಾರರ ಹೇಳಿಕೆಗಳು, ಆರೋಪಿಗಳ ಬ್ಯಾಂಕ್ ಖಾತೆಗಳ ವಿವರ, ಮೊಬೈಲ್ ಕರೆ ಮತ್ತು ವಿವಿಧ ಆ್ಯಪ್‌ಗಳ ಮೂಲಕ ನಡೆಸಿದ್ದ ಸಂವಹನದ ವಿವರ, ಸೈಬರ್ ತಂತ್ರಜ್ಞರ ಹೇಳಿಕೆಗಳು ಸೇರಿದಂತೆ 50 ದಾಖಲೆಗಳನ್ನು ಆರೋಪಪಟ್ಟಿಯೊಂದಿಗೆ ಸಲ್ಲಿಸಲಾಗಿತ್ತು. ಪೊಲೀಸ್ ಅಧಿಕಾರಿಗಳು, ಮಹಜರು ವೇಳೆ ಹಾಜರಿದ್ದ ಸರ್ಕಾರಿ ನೌಕರರು, ಖಾಸಗಿ ವ್ಯಕ್ತಿಗಳು ಸೇರಿದಂತೆ 36 ಮಂದಿ ಸಾಕ್ಷಿಗಳ ಪಟ್ಟಿಯೂ ಇದೆ. ಎಲ್ಲಿಯೂ ಪೊಲೀಸರ ಡಿಜಿಟಲ್ ವ್ಯಾಲೆಟ್ ಮತ್ತು ಅದಕ್ಕೆ ಪೂರಕವಾದ ಬ್ಯಾಂಕ್ ಖಾತೆಯ ಮಾಹಿತಿಯೇ ಇಲ್ಲ.

ಐಎಸ್‌ಡಿಯಲ್ಲೂ ಹ್ಯಾಕಿಂಗ್ ಪ್ರಕರಣ ದಾಖಲು

ರಾಜ್ಯದ ಆಂತರಿಕ ಭದ್ರತಾ ವಿಭಾಗದಲ್ಲೂ (ಐಎಸ್‌ಡಿ) ಹ್ಯಾಕಿಂಗ್ ಆರೋಪಕ್ಕೆ ಸಂಬಂಧಿಸಿದಂತೆ 2020ರ ಡಿಸೆಂಬರ್ 21ರಂದು ಎಫ್‌ಐಆರ್ ದಾಖಲಿಸಲಾಗಿತ್ತು ಎಂಬ ಮಾಹಿತಿ ಲಭ್ಯವಾಗಿದೆ.

‘ಈ ಪ್ರಕರಣದಲ್ಲೂ ಶ್ರೀಕಿಯನ್ನು ವಶಕ್ಕೆ ಪಡೆಯಲು ಅಂದು ಐಎಸ್‌ಡಿಯಲ್ಲಿದ್ದ ಪ್ರಭಾವಿ ಅಧಿಕಾರಿಯೊಬ್ಬರು ಆಸಕ್ತಿ ತೋರಿದ್ದರು. ಆದರೆ, ನಂತರ ಯಾವುದೇ ಬೆಳವಣಿಗೆಗಳು ನಡೆಯಲಿಲ್ಲ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ದಿನವಿಡೀ ಮಳೆ; ಮನೆ ಕುಸಿತ

ಪ್ರಜಾವಾಣಿ ವಾರ್ತೆ

ಮೈಸೂರು/ಹಾಸನ/ಕೊಡಗು/ಚಾಮರಾಜನಗರ: ಮೈಸೂರು ಭಾಗದಲ್ಲಿ ಮಳೆ ಮುಂದುವರಿದಿದ್ದು, ಹಲವೆಡೆ ಮನೆಗಳು ಕುಸಿದಿವೆ, ಬೆಳೆ ಹಾನಿ ಸಂಭವಿಸಿದೆ.

ಅಕಾಲಿಕ ಮಳೆಯಿಂದಾಗಿ ಹಾಸನ ಜಿಲ್ಲೆಯಲ್ಲಿ ರಾಗಿ, ಜೋಳ, ಭತ್ತ, ಕಾಫಿ ಫಸಲಿಗೆ ಹಾನಿಯಾಗಿದ್ದು, ಭಾರಿ ನಷ್ಟ ಉಂಟಾಗಿದೆ.

ಚನ್ನರಾಯಪಟ್ಟಣ, ಹಿರೀಸಾವೆ, ಹೊಳೆನರಸೀಪುರ, ಅರಕಲಗೂಡು, ಅರಸೀಕೆರೆ ತಾಲ್ಲೂಕುಗಳಲ್ಲಿ ರಾಗಿ ಮತ್ತು ಜೋಳ ಕಟಾವಿಗೆ ಬಂದಿದ್ದು, ಕೊಯ್ಲು ಸಾಧ್ಯವಾಗುತ್ತಿಲ್ಲ. ಮಳೆ ಬಿರುಸಿಗೆ ಹಲವೆಡೆ ರಾಗಿ ಪೈರು ನೆಲ ಕಚ್ಚಿದೆ.

ಕೊಡಗು ಜಿಲ್ಲೆಯಲ್ಲಿ ಜಡಿಮಳೆಯಾಗುತ್ತಿದ್ದು, ಕಾಫಿ ಒಣಗಿಸಲು ಬೆಳೆಗಾರರು ಪರದಾಡುತ್ತಿದ್ದಾರೆ. ಕಾಫಿ ಕೊಯ್ಲಿಗೂ ತೊಂದರೆ ಅನುಭವಿಸುತ್ತಿದ್ದಾರೆ.

ಚಾಮರಾಜನಗರ ಜಿಲ್ಲೆಯ ಯಳಂದೂರು, ಹನೂರು ಹಾಗೂ ಗುಂಡ್ಲುಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಜಿಟಿ ಜಿಟಿ ಮಳೆಯಾಗುತ್ತಿರುವುದರಿಂದ ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ.

ಯಳಂದೂರು ತಾಲ್ಲೂಕಿನ ಮಾಂಬಳ್ಳಿಯಲ್ಲಿ 3 ಮನೆಗಳು ಕುಸಿದಿವೆ. ಬಿಳಿಗಿರಿ ರಂಗನಬೆಟ್ಟದ ಸುತ್ತಮುತ್ತ ಕೆರೆಗಳು ತುಂಬಿವೆ. ಬೆಲ್ಲ ತಯಾರಿಕೆಗೆ ತೊಂದರೆ ಎದುರಾಗಿದೆ. ಚಿಂಚಳ್ಳಿ ಗ್ರಾಮದಲ್ಲಿ ಮನೆ ಛಾವಣಿ, ಗೋಡೆ ಕುಸಿದಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಜಿಟಿಜಿಟಿ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	124.80	6,395	5,640
ಹಾರಂಗಿ	2,859	2,857.45	515	950
ಕಬಿನಿ	2284	2,283.86	1,800	700
ಹೇಮಾವತಿ	2,922	2,908.55	1,889	3,556
ಲಿಂಗನಮಕ್ಕಿ	1,819	1,813.55	531	-
ಸೂಪಾ (ಮೀ)	564	555.53	419.29	3475.01
ಮಾಣಿ	594.36	586.68	35	-
ತುಂಗಭದ್ರಾ	1,633	1,632.32	5,443	9,334
ಮಲಪ್ರಭಾ	2079.50	2,076.65	-	2,444
ಘಟಪ್ರಭಾ	2175	2,167.98	-	2,567
ಭದ್ರಾ	186	185.40	3,173	2,861
ಆಲಮಟ್ಟಿ (ಮೀ)	519.60	518.71	-	5,428
ನಾರಾಯಣಪುರ (ಮೀ)	492.25	491.14	800	190

*ನೆಲಮಟ್ಟದಿಂದ

ಮೆಟ್ಟೂರು ಜಲಾಶಯ ಬಹುತೇಕ ಭರ್ತಿ

ಮಹದೇಶ್ವರ ಬೆಟ್ಟ: ರಾಜ್ಯದಲ್ಲಿ ಉತ್ತಮ ಮಳೆಯಾಗಿ ಕೆಆರ್‌ಎಸ್, ಕಬಿನಿ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಕಾವೇರಿ ನದಿಗೆ ಬಿಡುತ್ತಿರುವುದರಿಂದ, ತಮಿಳುನಾಡಿನ ಮೆಟ್ಟೂರು ಜಲಾಶಯ ಬಹುತೇಕ ಭರ್ತಿಯಾಗಿದೆ. 120 ಅಡಿ ಗರಿಷ್ಠ ಮಟ್ಟದ ಅಣೆಕಟ್ಟಿನಲ್ಲಿ ಈಗ 119 ಅಡಿಗಳಷ್ಟು ನೀರು ತುಂಬಿದೆ.

ಮೆಟ್ಟೂರು ಜಲಾಶಯದ ನೀರು ಸಂಗ್ರಹ ಸಾಮರ್ಥ್ಯ 93.4 ಟಿಎಂಸಿ ಅಡಿ. ಸದ್ಯ 91.8 ಟಿಎಂಸಿ ಅಡಿಗಳಷ್ಟು ನೀರಿನ ಸಂಗ್ರಹವಿದೆ. ಜಲಾಶಯದ ಒಳಹರಿವು 12,396 ಕ್ಯುಸೆಕ್‌ಗಳಷ್ಟಿದೆ. 12,150 ಕ್ಯುಸೆಕ್‌ಗಳಷ್ಟು ಹೊರಹರಿವು ಇದೆ.

ರಾಜ್ಯದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುತೇಕ ಭಾಗದಲ್ಲಿ ಶನಿವಾರ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಇತ್ತು. ಹಲವೆಡೆ ಉತ್ತಮ ಮಳೆ ಆಗಿದೆ. ಕೆಲವು ಭಾಗಗಳಲ್ಲಿ ತುಂತುರು ಮಳೆಯಾದರೆ, ಕೆಲವು ಕಡೆ ಬಿರುಸಿನಿಂದ ಸುರಿದಿದೆ.

ಕಲಬುರಗಿ ನಗರ ಹಾಗೂ ಚಿಂಚೋಳಿಯಲ್ಲಿ ಮಧ್ಯಾಹ್ನ ಅರ್ಧಗಂಟೆಗೂ ಅಧಿಕ ಕಾಲ ಬಿರುಸಿನ ಮಳೆ ಸುರಿಯಿತು. ಬೀದರ್ ಜಿಲ್ಲೆಯ ಹುಲಸೂರಲ್ಲಿ ಜಿಟಿ ಜಿಟಿ ಮಳೆಯಾಗಿದೆ.

ತುಂತುರು ಮಳೆ: ಧಾರವಾಡ, ಬಾಗಲಕೋಟೆ, ಗದಗ, ವಿಜಯನಗರ ಹಾಗೂ ಬೆಳಗಾವಿ ಜಿಲ್ಲೆಯ ಕೆಲವೆಡೆ ತುಂತುರು ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಭಟ್ಕಳದಲ್ಲಿ ಉತ್ತಮ ಮಳೆಯಾಗಿದೆ.

ಭತ್ತ, ಮೆಕ್ಕೆಜೋಳ ಕಟಾವಿಗೆ ಅಡ್ಡಿ: ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯ ಪರಿಣಾಮ ಭತ್ತ ಹಾಗೂ ಮೆಕ್ಕೆಜೋಳದ ಬೆಳೆ ಕಟಾವಿಗೆ ಹಿನ್ನಡೆಯಾಗಿದೆ.

ಜಿಲ್ಲೆಯಲ್ಲಿ 1,33,931 ಹೆಕ್ಟೇರ್ ಕೃಷಿ ಬೆಳೆ ಕ್ಷೇತ್ರವಿದೆ. 78,100 ಹೆಕ್ಟೇರ್ ಭತ್ತ, 52 ಸಾವಿರ ಹೆಕ್ಟೇರ್ ಮೆಕ್ಕೆಜೋಳ ಬೆಳೆಯಲಾಗಿದೆ. ಕಟಾವಿಗೆ ಇನ್ನೂ ಸಮಯವಿದೆ. ಮಳೆ ಮುಂದುವರಿದರೆ ನಷ್ಟದ ಪ್ರಮಾಣ ಅಧಿಕವಾಗಬಹುದು ಎನ್ನುತ್ತಾರೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಎಂ.ಕಿರಣ್ ಕುಮಾರ್.

92 ಸಾವಿರ ಹೆಕ್ಟೇರ್ ಅಡಿಕೆ ಕ್ಷೇತ್ರವಿದೆ. ಮಳೆಯ ಪರಿಣಾಮ ಮರಗಳಿಗೆ ಕೊಳೆರೋಗ, ಎಲೆಚುಕ್ಕಿರೋಗ ಕಾಣಿಸಿಕೊಂಡಿದೆ. ಮಳೆ ಅಧಿಕವಾಗಿರುವ ಹೊಸನಗರ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅಡಿಕೆ ಕೊಯ್ಲು ವಿಳಂಬವಾಗಿದೆ. 25 ಸಾವಿರ ಹೆಕ್ಟೇರ್‌ನಲ್ಲಿ ಶುಂಠಿ ಬೆಳೆಯಲಾಗಿದ್ದು, ಅಧಿಕ ಮಳೆ ಪರಿಣಾಮ ದಂಡುಕೊಳೆ ರೋಗ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ.

ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಲ್ಲೂ ತುಂತುರು ಮಳೆಯಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ರಾಗಿ ಕೊಯ್ಲಿಗೆ ಹಿನ್ನಡೆಯಾಗಿದೆ. ತೇವಾಂಶದಿಂದ ಮೆಕ್ಕೆಜೋಳ ಕಪ್ಪಾಗುವ ಆತಂಕ ಎದುರಾಗಿದೆ. ಮೊಳಕಾಲ್ಮುರು ತಾಲ್ಲೂಕಿನಲ್ಲಿ ಶೇಂಗಾ ಬೆಳೆಗೆ ಹಾನಿಯಾಗಿದೆ. ಮೂರು ದಿನಗಳಿಂದ ಸುರಿಯುತ್ತಿರುವ ಜಿಟಿಜಿಟಿ ಮಳೆಗೆ ಹಿರಿಯೂರಿನ ಸರ್ಕಾರಿ ಆಸ್ಪತ್ರೆ ರಸ್ತೆಯಲ್ಲಿ ಮನೆಯ ಗೋಡೆ ಶುಕ್ರವಾರ ರಾತ್ರಿ ಕುಸಿದು ಬಿದ್ದಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಶುಕ್ರವಾರ ಸುರಿದ ಮಳೆಗೆ 5 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಕಲಬುರಗಿಯಲ್ಲಿ ಶನಿವಾರ ಸುರಿದ ಮಳೆಯಲ್ಲೇ ವಾಹನಗಳು ಸಂಚರಿಸಿದವು –ಪ್ರಜಾವಾಣಿ ಚಿತ್ರ

ಹಳ್ಳದಲ್ಲಿ ಕೊಚ್ಚಿ ಹೋದ ಗ್ರಾ.ಪಂ ಸದಸ್ಯ

ಚಿಕ್ಕಬಳ್ಳಾಪುರ: ತಾಲ್ಲೂಕಿನ ರಾಮಪಟ್ಟಣ–ನವಿಲುಗುರ್ಕಿ ಗ್ರಾಮದ ಬಳಿಯ ಯದಾರ್ಲಹಳ್ಳಿ ಹಳ್ಳದಲ್ಲಿ ಶುಕ್ರವಾರ ರಾತ್ರಿ ಕಮ್ಮಗುಟ್ಟಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಕೊಚ್ಚಿ ಹೋಗಿದ್ದಾರೆ.

ಬೈಕ್ ಆಯತಪ್ಪಿ ಜಾರಿ ಬಿದ್ದ ಕಾರಣ ಗ್ರಾ.ಪಂ ಸದಸ್ಯ ಗಂಗಾಧರ್ (45) ತುಂಬಿ ಹರಿಯುತ್ತಿದ್ದ ಯದಾರ್ಲಹಳ್ಳಿ ಹಳ್ಳದಲ್ಲಿ ಕೊಚ್ಚಿಹೋಗಿದ್ದಾರೆ. ಈ ಹಳ್ಳದ ನೀರು ಗುಡಿಬಂಡೆ ಕೆರೆಯನ್ನು ತಲುಪುತ್ತದೆ.

ಬೈಕ್ ಹಳ್ಳದಲ್ಲಿಯೇ ಸಿಕ್ಕಿದೆ. ಅಗ್ನಿಶಾಮಕದ ದಳದ ಸಿಬ್ಬಂದಿ ಶನಿವಾರ ಸಂಜೆಯವರೆಗೂ ಗಂಗಾಧರ್ ಅವರಿಗಾಗಿ ಹಳ್ಳದಲ್ಲಿ ಶೋಧ ನಡೆಸಿದರೂ ಪತ್ತೆ ಆಗಲಿಲ್ಲ. ದೋಣಿಗಳ ಮೂಲಕ ಗುಡಿಬಂಡೆ ಕೆರೆಯಲ್ಲಿ ಶೋಧ ನಡೆಸಲಾಗುತ್ತಿದೆ. ಪೆರೇಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರ್‍ಯಾಲಿ ವಿರೋಧಿಸಿ ಮತ್ತೊಂದು ರ್‍ಯಾಲಿ; ಎರಡು ದಿನಗಳಿಂದ ಕಲ್ಲುತೂರಾಟ

ಅಮರಾವತಿ: ಹಿಂಸಾಚಾರ– ಕರ್ಫ್ಯೂ

ಪ್ರಜಾವಾಣಿ ವಾರ್ತೆ

ಮುಂಬೈ: ಸತತ ಎರಡು ದಿನಗಳಿಂದ ಕಲ್ಲುತೂರಾಟ ಹಾಗೂ ಹಿಂಸಾಚಾರ ಪ್ರಕರಣಗಳು ವರದಿಯಾಗಿರುವುದರಿಂದ, ಮಹಾರಾಷ್ಟ್ರದ ಅಮರಾವತಿ ನಗರದಲ್ಲಿ ಶನಿವಾರ ಕರ್ಫ್ಯೂ ವಿಧಿಸಲಾಗಿದೆ.

ಸಂಭಾವ್ಯ ಗಲಭೆಯನ್ನು ತಡೆಯುವ ನಿಟ್ಟಿನಲ್ಲಿ, 4 ದಿನ ನಗರ ವ್ಯಾಪ್ತಿಯಲ್ಲಿ ಕರ್ಫ್ಯೂ ಜಾರಿಯಲ್ಲಿರಲಿದೆ ಎಂದು ಪೊಲೀಸ್ ಆಯುಕ್ತರು ಆದೇಶಿಸಿದ್ದಾರೆ. ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ.

ವೈದ್ಯಕೀಯ ತುರ್ತು ಕೆಲಸ ಹೊರತುಪಡಿಸಿ, ಜನರು ಮನೆಗಳಿಂದ ಹೊರ ಬರದಂತೆ ಸೂಚಿಸಲಾಗಿದೆ. ಐದಕ್ಕಿಂತ ಹೆಚ್ಚು ಜನರು ಒಂದೆಡೆ ಸೇರುವುದನ್ನೂ ನಿರ್ಬಂಧಿಸಲಾಗಿದೆ.

ಸ್ಥಳದಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿದ್ದು, ಭದ್ರತೆ ಹಾಗೂ ಕಣ್ಗಾವಲನ್ನು ಹೆಚ್ಚಿಸಲಾಗಿದೆ. ಗೃಹಸಚಿವ ದಿಲೀಪ್ ವಾಲ್ಸೆ ಪಾಟೀಲ್ ಹಾಗೂ ಡಿಜಿಪಿ ಸಂಜಯ್ ಪಾಂಡೆ ಅವರು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಹಿಂಸಾಚಾರ ಕುರಿತಂತೆ ಆಡಳಿತಾರೂಢ ಮಹಾವಿಕಾಸ ಅಘಾಡಿ ಸರ್ಕಾರ ಹಾಗೂ ಬಿಜೆಪಿ ನಡುವೆ ವಾಕ್ಸಮರ ನಡೆಯುತ್ತಿದೆ.

ಕರ್ಫ್ಯೂಗೆ ಕಾರಣವೇನು?: ಬಿಜೆಪಿ ಕರೆ ನೀಡಿತ್ತು ಎನ್ನಲಾದ ಬಂದ್‌ನಲ್ಲಿ ಅಮರಾವತಿ ನಗರದ ರಾಜಕಮಲ್ ಚೌಕದಲ್ಲಿ ಪ್ರತಿಭಟನಕಾರರು ಶನಿವಾರ ಕೇಸರಿ ಧ್ವಜ ಹಿಡಿದು ಘೋಷಣೆಗಳನ್ನು ಕೂಗಿದರು. ಗುಂಪಿನ ಕೆಲವು ಸದಸ್ಯರು ಅಂಗಡಿಗಳ ಮೇಲೆ ಕಲ್ಲು ಎಸೆದರು ಎಂದು ಆರೋಪಿಸಲಾಗಿದೆ. ರಾಜಕಮಲ್ ಚೌಕ ಮತ್ತು ಇತರ ಕೆಲವು ಸ್ಥಳಗಳಲ್ಲಿ ಅಂಗಡಿಗಳಿಗೆ ಹಾನಿಯಾಯಿತು. ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಪ್ರತಿಭಟನಕಾರರ ಮೇಲೆ ಲಾಠಿ ಪ್ರಹಾರ ನಡೆಸಿದರು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇದಕ್ಕೂ ಮುನ್ನ, ತ್ರಿಪುರಾದಲ್ಲಿನ ಹಿಂಸಾಚಾರ ಖಂಡಿಸಿ ಮುಸ್ಲಿಂ ಸಂಘಟನೆಗಳು ಶುಕ್ರವಾರ ಅಮರಾವತಿ ನಗರದಲ್ಲಿ ಪ್ರತಿಭಟನೆ ನಡೆಸಿದ್ದವು. ಈ ಸಮಯದಲ್ಲಿ ಕಲ್ಲುತೂರಾಟ ಹಾಗೂ ಹಿಂಸಾಚಾರ ನಡೆದಿತ್ತು. ನಾಂದೇಡ್, ಮಾಲೆಗಾಂವ್, ವಾಶಿಮ್ ಮತ್ತು ಯವತ್ಮಾಲ್ ಜಿಲ್ಲೆಗಳಲ್ಲೂ ಈ ಘಟನೆ ವರದಿಯಾಗಿದ್ದವು. ಹಿಂಸಾಚಾರ ಖಂಡಿಸಿ ಶನಿವಾರ ಬಂದ್‌ಗೆ ಕರೆ ನೀಡಲಾಗಿತ್ತು ಎನ್ನಲಾಗಿದೆ.

ತ್ರಿಪುರಾದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆದ ದೌರ್ಜನ್ಯ ನಿಲ್ಲಬೇಕು ಎಂದು ಒತ್ತಾಯಿಸುವ ಮನವಿ ಪತ್ರವನ್ನು ನೀಡಲು ಮುಸ್ಲಿಂ ಸಂಘಟನೆಗಳ 8 ಸಾವಿರಕ್ಕೂ ಹೆಚ್ಚು ಪ್ರತಿಭಟನಕಾರರು ಅಮರಾವತಿ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಜಮಾಯಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಮನವಿ ಪತ್ರ ಸಲ್ಲಿಸಿದ ಬಳಿಕ ಕೋಟ್ವಾಲಿ ಪೊಲೀಸ್ ಠಾಣೆ ವ್ಯಾಪ್ತಿಯ ಚಿತ್ರಚೌಕದಿಂದ ಕಾಟನ್ ಮಾರ್ಕೆಟ್ ನಡುವಿನ ಪ್ರದೇಶಗಳಲ್ಲಿ ಕಲ್ಲುತೂರಾಟ ಹಾಗೂ ಹಿಂಸಾಚಾರ ನಡೆದಿತ್ತು. ಘಟನೆ ಸಂಬಂಧ ಕೋಟ್ವಾಲಿ ಪೊಲೀಸರು ಇದುವರೆಗೆ 20 ಪ್ರಕರಣ ದಾಖಲಿಸಿದ್ದು, 20 ಜನರನ್ನು ಬಂಧಿಸಿದ್ದಾರೆ.

ಅಮರಾವತಿ ಬಂದ್ ವೇಳೆ, ಹಿಂಸಾಚಾರದಲ್ಲಿ ತೊಡಗಿರುವ ಯುವಕರ ಗುಂಪು– ಪಿಟಿಐ ಚಿತ್ರ

> **ಸಮಾಜ ವಿರೋಧಿಗಳು ಕಲ್ಲೆಸೆದು ವಾತಾವರಣ ಹಾಳುಗೆಡುವುತ್ತಿದ್ದಾರೆ. ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಕೆಲವರು ಇದರಿಂದ ರಾಜಕೀಯ ಲಾಭ ಪಡೆಯುತ್ತಿದ್ದಾರೆ**
> **ಯಶೋಮತಿ ಠಾಕೂರ್,** ಅಮರಾವತಿ ಜಿಲ್ಲಾ ಉಸ್ತುವಾರಿ ಸಚಿವೆ

‘ಸರ್ಕಾರ ಅಸ್ಥಿರಗೊಳಿಸಲು ಯತ್ನ’

ಅಮರಾವತಿ ಮತ್ತು ಇತರ ಸ್ಥಳಗಳಲ್ಲಿ ನಡೆದ ಹಿಂಸಾಚಾರವು ಮಹಾರಾಷ್ಟ್ರದ ಆಡಳಿತಾರೂಢ ಮಹಾವಿಕಾಸ ಅಘಾಡಿ ಮೈತ್ರಿಕೂಟ ಸರ್ಕಾರವನ್ನು ಅಸ್ಥಿರಗೊಳಿಸುವ ಯತ್ನ ಎಂದು ಶಿವಸೇನಾ ವಕ್ತಾರ ಸಂಜಯ್ ರಾವುತ್ ಆರೋಪಿಸಿದ್ದಾರೆ.

ಹಿಂಸಾಚಾರಕ್ಕೆ ಕಾರಣರಾದ ದುಷ್ಕರ್ಮಿಗಳ ನೈಜ ಮುಖವನ್ನು ಶೀಘ್ರದಲ್ಲೇ ಬಹಿರಂಗಪಡಿಸಲಾಗುವುದು ಎಂದೂ ಹೇಳಿದ್ದಾರೆ.

‘ಬಿಜೆಪಿಯು ಜಾತೀಯತೆ ಮತ್ತು ಕೋಮುಗಲಭೆಯನ್ನು ಪ್ರಚೋದಿಸುತ್ತಿದೆ. ಮಹಾರಾಷ್ಟ್ರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿದೆ ಎಂದು ಆರೋಪಿಸಿ ರಾಜ್ಯಪಾಲರನ್ನು ಭೇಟಿಯಾಗಲಿದೆ ಮತ್ತು ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆಯಲಿದೆ. ಆದರೆ, ರಾಜ್ಯ ಸರ್ಕಾರ ಮಾತ್ರ ಗಟ್ಟಿಯಾಗಿ ನಿಂತಿದೆ’ ಎಂದು ರಾವುತ್ ಹೇಳಿದ್ದಾರೆ. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವದಷ್ಟೇ ಬಿಜೆಪಿ ಗುರಿ ಎಂದು ಅವರು ಆರೋಪಿಸಿದ್ದಾರೆ.

ರ್‍ಯಾಲಿ ನಡೆಸಿದ್ದು ಸರಿಯಲ್ಲ: ಫಡಣವೀಸ್

‘ತ್ರಿಪುರಾದಲ್ಲಿ ನಡೆಯದೇ ಇರುವ ಘಟನೆಯನ್ನು ಖಂಡಿಸಿ ಮಹಾರಾಷ್ಟ್ರದಲ್ಲಿ ರ್‍ಯಾಲಿ ನಡೆಸಿದ್ದು ಸರಿಯಲ್ಲ’ ಎಂದು ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಹೇಳಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದ ಯಾವುದೇ ಧಾರ್ಮಿಕ ಸ್ಥಳವನ್ನು ಸುಟ್ಟಿಲ್ಲ ಎಂದು ತ್ರಿಪುರಾ ಸರ್ಕಾರ ಸ್ಪಷ್ಟಪಡಿಸಿದೆ. ಇದಕ್ಕೆ ಸಂಬಂಧಿಸಿದ ಚಿತ್ರಗಳನ್ನೂ ಬಿಡುಗಡೆ ಮಾಡಿದೆ. ಹೀಗಾಗಿ, ಇಲ್ಲಿಯ ಹಿಂಸಾಚಾರ ಪೂರ್ವ ನಿಯೋಜಿತ ಸಂಚು ಎಂಬಂತೆ ಕಾಣುತ್ತಿದ್ದು, ಹಿಂದೂ ಸಮುದಾಯಕ್ಕೆ ಸೇರಿದವರ ಅಂಗಡಿಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ.

ವಾಯು ಮಾಲಿನ್ಯ: ಎರಡು ದಿನ ‘ಲಾಕ್‌ಡೌನ್’ ಘೋಷಣೆಗೆ ಸಲಹೆ

ದೆಹಲಿ: ಶಾಲೆಗಳಿಗೆ ಒಂದು ವಾರ ರಜೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಅಪಾಯಕಾರಿ ಮಟ್ಟಕ್ಕೆ ತಲುಪಿರುವ ವಾಯುಮಾಲಿನ್ಯ ನಿಯಂತ್ರಣಕ್ಕಾಗಿ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ತುರ್ತು ಕ್ರಮಗಳನ್ನು ಘೋಷಿಸಿದ್ದಾರೆ.

ಶಾಲೆಗಳಿಗೆ ಒಂದು ವಾರ ರಜೆ, ಕಟ್ಟಡ ಕಾಮಗಾರಿಗಳಿಗೆ ನಿಷೇಧ ಮತ್ತು ಸರ್ಕಾರಿ ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಆದೇಶಿಸಿದ್ದಾರೆ.

ಮಾಲಿನ್ಯದ ಪರಿಸ್ಥಿತಿ ಸುಧಾರಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಶನಿವಾರ ತಾಕೀತು ಮಾಡಿತ್ತು. ದೆಹಲಿಯಲ್ಲಿನ ವಾಯು ಗುಣಮಟ್ಟದ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದ ಕೋರ್ಟ್, ದೆಹಲಿಯಲ್ಲಿ ವಾಯು ಮಾಲಿನ್ಯ ಮಿತಿಮೀರಿದ್ದು, ಗಾಳಿಯ ಗುಣಮಟ್ಟ ಸುಧಾರಣೆಗಾಗಿ ಅಗತ್ಯವಿದ್ದಲ್ಲಿ ನಗರದಲ್ಲಿ ಎರಡು ದಿನ ಲಾಕ್‌ಡೌನ್ ಘೋಷಿಸುವಂತೆ ಸಲಹೆ ನೀಡಿತ್ತು.

ಈ ಬೆನ್ನಲ್ಲೇ ಶನಿವಾರವೇ ತುರ್ತು ಸಭೆ ನಡೆಸಿದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಈ ಕ್ರಮಗಳನ್ನು ಘೋಷಿಸಿದ್ದಾರೆ.

ಲಾಕ್‌ಡೌನ್ ಬಗ್ಗೆಯೂ ಸುಪ್ರೀಂ ಕೋರ್ಟ್ ಮುಂದೆ ಪ್ರಸ್ತಾಪ ಇಡುವುದಾಗಿ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಲಾಕ್‌ಡೌನ್ ಜಾರಿಗೊಳಿಸುವ ಎರಡು ದಿನ ನಗರದಲ್ಲಿ ವಾಹನಗಳ ಸಂಚಾರ, ಬೆಳೆ ತ್ಯಾಜ್ಯ ಸುಡುವುದು, ಕೈಗಾರಿಕೆಗಳು, ಪಟಾಕಿ ಬಳಕೆಯ ಮೇಲೆ ನಿಷೇಧ ವಿಧಿಸುವುದರಿಂದ ಸ್ವಲ್ಪಮಟ್ಟಿಗೆ ಗಾಳಿಯ ಗುಣಮಟ್ಟ ಸುಧಾರಿಸಬಹುದೆಂದು ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ನೇತೃತ್ವದ ಪೀಠ ಶನಿವಾರ ಅಭಿಪ್ರಾಯಪಟ್ಟಿತ್ತು.

‘ಬೆಳೆ ತ್ಯಾಜ್ಯ ಸುಡುವುದು ಶೇ25ರಷ್ಟು ಮಾಲಿನ್ಯಕ್ಕೆ ಕಾರಣವಾದರೆ, ಉಳಿದ ಶೇ75ರಷ್ಟು ಮಾಲಿನ್ಯವು ಪಟಾಕಿ ಸುಡುವುದು, ವಾಹನಗಳಿಂದ ಹೊರಹೊಮ್ಮುವ ಹೊಗೆ ಮತ್ತು ದೂಳಿನಿಂದ ಆಗುತ್ತಿದೆ. ಸದ್ಯ ದೆಹಲಿಯ ಪರಿಸ್ಥಿತಿ ತುಂಬಾ ಕೆಟ್ಟದಾಗಿದೆ. ನಾವು ಮನೆಯಲ್ಲಿ ಮಾಸ್ಕ್ ಧರಿಸುತ್ತಿದ್ದೇವೆ. ಇದು ಅತ್ಯಂತ ಕೆಟ್ಟ ಪರಿಸ್ಥಿತಿ. ಜನರು ಬದುಕುವುದು ಹೇಗೆ?’ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಕೇಂದ್ರದ ಪ್ರತಿನಿಧಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿದ್ದರು.

ವಾಯು ಮಾಲಿನ್ಯ ನಿಯಂತ್ರಿಸಲು ಬೆಳೆ ತ್ಯಾಜ್ಯ ಸುಡುವುದನ್ನು ನಿಲ್ಲಿಸುವಂತೆ ರೈತರಿಗೆ ಸೂಚಿಸಲಾಗಿದೆ ಎಂದು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತುಷಾರ್ ಮೆಹ್ತಾ ನೀಡಿದ ವಿವರಣೆಗೆ ಅತೃಪ್ತಿ ವ್ಯಕ್ತಪಡಿಸಿದ್ದ ತ್ರಿಸದಸ್ಯ ಪೀಠದಲ್ಲಿದ್ದ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ‘ರೈತರನ್ನು ದೂಷಿಸುವ ಬದಲು, ಕೇಂದ್ರ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು ವಾಯು ಮಾಲಿನ್ಯ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಸೂಚಿಸಿದ್ದರು.

ಚತುರ ವಾಗ್ಮಿಯಲ್ಲ: ವಾಯುಮಾಲಿನ್ಯಕ್ಕೆ ರೈತರಷ್ಟೇ ಕಾರಣ ಎಂಬುದು ತಮ್ಮ ಮಾತಿನ ಅರ್ಥವಾಗಿರಲಿಲ್ಲ ಎಂದು ಮೆಹ್ತಾ ಅವರು, ವಿಚಾರಣೆ ಸಂದರ್ಭದಲ್ಲಿ ನ್ಯಾಯಪೀಠಕ್ಕೆ ಸ್ಪಷ್ಟಪಡಿಸಲು ಮುಂದಾದರು.

ಆಗ ಸಿಜೆಐ ರಮಣ ಅವರು, ‘ನಾನು ಚತುರ ವಾಗ್ಮಿಯಲ್ಲ. ನಾನು ಎಂಟನೇ ತರಗತಿಯಲ್ಲಷ್ಟೇ ಇಂಗ್ಲಿಷ್ ಕಲಿತಿದ್ದು ಕಾನೂನು ಅಧ್ಯಯನವನ್ನು ಇಂಗ್ಲಿಷ್‌ನಲ್ಲಿ ಮಾಡಿದ್ದೇನೆ. ಪದಗಳನ್ನು ಅಭಿವ್ಯಕ್ತಿಪಡಿಸುವ ಒಳ್ಳೆಯ ಇಂಗ್ಲಿಷ್ ನನ್ನಲ್ಲಿಲ್ಲ’ ಎಂದರು.

ಆಗ ಮೆಹ್ತಾ, ತಾವಿಬ್ಬರೂ ಒಂದೇ ದೋಣಿಯ ಪಯಣಿಗರು ಎಂದು ಪ್ರತಿಕ್ರಿಯಿಸಿದರು.

ತಾವು ಕೂಡ ಎಂಟನೇ ತರಗತಿಗೆ ಇಂಗ್ಲಿಷ್ ಕಲಿತಿದ್ದಾಗಿ ಹಾಗೂ ಪದವಿಯನ್ನು ಗುಜರಾತಿ ಮಾಧ್ಯಮದಲ್ಲೇ ಓದಿದ್ದಾಗಿ ಹೇಳಿದರು.

ಭಾರಿ ಮಳೆ: ಕೇರಳದ 6 ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’

ತಿರುವನಂತಪುರ (ಪಿಟಿಐ): ಭಾರಿ ಮಳೆ ಮುನ್ಸೂಚನೆ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಕೇರಳದ ಆರು ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’ ಘೋಷಿಸಿದೆ. ರಾಜ್ಯದ ವಿವಿಧೆಡೆ ಶುಕ್ರವಾರ ರಾತ್ರಿಯಿಂದ ನಿರಂತರ ಮಳೆ ಸುರಿಯುತ್ತಿದೆ. ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿ, ಕೆಲವೆಡೆ ಸಣ್ಣ ಪ್ರಮಾಣದ ಭೂಕುಸಿತ ಉಂಟಾಗಿದೆ.

ತಿರುವನಂತಪುರ, ಕೊಲ್ಲಂ, ಪತ್ತನಂತಿಟ್ಟ, ಅಲಪ್ಪುಳ, ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ಭಾರಿ ಮಳೆ ಮುನ್ಸೂಚನೆ ನೀಡಿದೆ. ಎರ್ನಾಕುಲಂ, ತ್ರಿಶೂರ್, ಪಾಲಕ್ಕಾಡ್, ಮಲಪ್ಪುರಂ, ಕೋಳಿಕ್ಕೋಡ್, ಕಣ್ಣೂರು, ವಯನಾಡ್, ಕಾಸರಗೋಡು ಜಿಲ್ಲೆಗಳಿಗೆ ‘ಯೆಲ್ಲೋ ಅಲರ್ಟ್’ ಘೋಷಿಸಿದೆ.

ಇದೇ 16ರವರೆಗೆ ಗುಡುಗು ಸಹಿತ ಮಳೆಯ ಆಗ ಬಹುದು ಎಂದು ಇಲಾಖೆ ತಿಳಿಸಿದೆ. ಮಳೆಯಿಂದಾಗಿ ತಿರುವನಂತಪುರ–ನಾಗರಕೊಯಿಲ್ ರೈಲ್ವೆ ಹಳಿಗಳ ಮೇಲೆ ಮಣ್ಣು ಸುರಿದಿದೆ. ನೆಯ್ಯತ್ತಿನಕರದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಸೇತುವೆ ಭಾಗಶಃ ಕೊಚ್ಚಿ ಹೋಗಿದೆ. ವಿಳಿಂಜಂನ ಕರಾವಳಿ ತೀರದಲ್ಲಿ ಅಂಗಡಿಗಳಿಗೆ ನೀರು ನುಗ್ಗಿದೆ.

ಅರುವಿಕ್ಕರ ಮತ್ತು ಪೆಪ್ಪಾರ ಅಣೆಕಟ್ಟೆಯಿಂದ ನೀರು ಹೊರಬಿಡಲಾಗುತ್ತಿದೆ ಎಂದು ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿನ ಅಚ್ಚುಕಟ್ಟು ಪ್ರದೇಶದಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ತಮಿಳುನಾಡಿನಲ್ಲಿ ಶನಿವಾರವೂ ಮಳೆ ಮುಂದುವರಿದಿದ್ದು, ಕನ್ಯಾಕುಮಾರಿ ಜಿಲ್ಲೆ ನಾಗರಕೊಯಿಲ್‌ನ ರೈಲ್ವೆ ಕಾಲೋನಿ ಪ್ರದೇಶದಲ್ಲಿ ಪ್ರವಾಹದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಸ್ಥಳೀಯರನ್ನು ದೋಣಿ ಮೂಲಕ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಯಿತು –ಪಿಟಿಐ ಚಿತ್ರ

ಒಡಿಶಾ, ಆಂಧ್ರ: ಭಾರಿ ಮಳೆ ಮುನ್ಸೂಚನೆ

ಭುವನೇಶ್ವರ (ಪಿಟಿಐ): ಮುಂದಿನ ವಾರ ಒಡಿಶಾ ಮತ್ತು ಆಂಧ್ರ ಪ್ರದೇಶದ ಕೆಲ ಭಾಗಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಅಂಡಮಾನ್ ಮತ್ತು ಥಾಯ್ಲೆಂಡ್‌ನ ಸಮೀಪದ ಕರಾವಳಿಯಲ್ಲಿ ಕಡಿಮೆ ಒತ್ತಡದ ಪ್ರದೇಶ ನಿರ್ಮಾಣಗೊಂಡಿದೆ. ಕೆಲ ದಿನಗಳಲ್ಲಿ ಮತ್ತಷ್ಟು ತೀವ್ರವಾಗಬಹುದು ಎಂದು ಇಲಾಖೆ ಹೇಳಿದೆ. ಸೋಮವಾರದೊಳಗೆ ಉತ್ತರ ಅಂಡಮಾನ್ ಪ್ರದೇಶ, ಆಗ್ನೇಯ ಬಂಗಾಳ ಕೊಲ್ಲಿಯತ್ತ ಇದು ಧಾವಿಸುವ ಸಾಧ್ಯತೆಯಿದೆ. ಆಂಧ್ರ ಪ್ರದೇಶದ ಕರಾವಳಿ ಭಾಗದಲ್ಲೂ ಬುಧವಾರದಿಂದ ಭಾರಿ ಮಳೆಯಾಗುವ ಸಾಧ್ಯತೆ ಇದೆ.

ಆಂಧ್ರ ಪ್ರದೇಶದ ಕರಾವಳಿ ಭಾಗದಲ್ಲೂ ಬುಧವಾರದಿಂದ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಗಾಳಿಯ ವೇಗ ಗಂಟೆಗೆ 65 ಕಿ.ಮೀ ಇರಬಹುದು ಎಂದು ಹವಾಮಾನ ಇಲಾಖೆ ಹೇಳಿದೆ.

ಚಳಿಗಾಲದ ಪೂರ್ವದಲ್ಲೇ ಕನಿಷ್ಠ ತಾಪಮಾನ ದಾಖಲು

ಶ್ರೀನಗರ: ಕಾಶ್ಮೀರ ಕಣಿವೆಯಲ್ಲಿ ಪ್ರತಿ ವರ್ಷ ಡಿಸೆಂಬರ್ 21ರಿಂದ ಕಾಣಿಸಿಕೊಳ್ಳುತ್ತಿದ್ದ ತೀವ್ರತರ ಚಳಿಯು ನವೆಂಬರ್ ತಿಂಗಳ ಆರಂಭದಲ್ಲೇ ಕಾಣಿಸಿಕೊಂಡಿದೆ. ಶನಿವಾರ ಕಣಿವೆಯ ಹಲವಾರು ಪ್ರದೇಶಗಳಲ್ಲಿ ದಟ್ಟನೆಯ ಮಂಜಿನ ವಾತಾವರಣವಿದ್ದು ತಾಪಮಾನವು ಶೂನ್ಯಕ್ಕಿಂತ ಕೆಳಗಿಳಿದಿದೆ.

ಶ್ರೀನಗರದಲ್ಲಿ ಶುಕ್ರವಾರ ರಾತ್ರಿ ತಾಪಮಾನ 0.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಚಳಿಗಾಲದ ಅತ್ಯಂತ ತೀವ್ರ ಚಳಿಯ ರಾತ್ರಿ ಇದಾಗಿದೆ ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಮರನಾಥ ಯಾತ್ರೆ ನಡೆಯುವ ಪಹಲ್ಗಾಮ್‌ನಲ್ಲಿ –3.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ಕಾಶ್ಮೀರ ಕಣಿವೆಯಲ್ಲೇ ಅತ್ಯಂತ ಕಡಿಮೆ ತಾಪಮಾನ ದಾಖಲಾದ ಶೀತ ಪ್ರದೇಶವಾಗಿದೆ.

ಸಂಕ್ಷಿಪ್ತ ಸುದ್ದಿ

ಬುಡಕಟ್ಟು ಜನರ ಸಮಾವೇಶ ವಾಹನಕ್ಕೆ ಟೋಲ್ ವಿನಾಯಿತಿ

ಶಿವರಾಜ್ ಸಿಂಗ್

ಭೋಪಾಲ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇದೇ 15ರಂದು ನಡೆಯುವ ‘ಜನ್‌ಜಾತಿಯ ಗೌರವ ದಿವಸ’ ಬುಡಕಟ್ಟು ಜನರ ಸಮಾವೇಶಕ್ಕೆ ಬರುವ ವಾಹನಗಳಿಗೆ ಟೋಲ್ ಶುಲ್ಕ ಸಂಗ್ರಹದಿಂದ ಮಧ್ಯಪ್ರದೇಶ ಸರ್ಕಾರ ವಿನಾಯಿತಿ ನೀಡಿದೆ.

ಭೋಪಾಲ್‌ನಲ್ಲಿ ನಡೆಯುವ ಸಮಾವೇಶಕ್ಕೆ ಬರುವ, ಜನರನ್ನು ಕರೆತರುವ ವಾಹನಗಳಿಗೆ ಟೋಲ್ ಶುಲ್ಕ ಇರುವುದಿಲ್ಲ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ಸರ್ಕಾರ ಅಧಿಕೃತ ಹೇಳಿಕೆ ನೀಡಿದೆ.

ಕಾಂಗ್ರೆಸ್‌ನಿಂದಲೂ ಸಮಾವೇಶ: ಕಾಂಗ್ರೆಸ್ ಸಹ ಇದೇ 15ರಂದು ಜಬಲ್‌ಪುರದಲ್ಲಿ ಬುಡಕಟ್ಟು ಸಮಾವೇಶವೊಂದನ್ನು ಆಯೋಜಿಸಿದೆ.

19ರಂದು 580 ವರ್ಷಗಳಲ್ಲೇ ಸುದೀರ್ಘವಾದ ಪಾರ್ಶ್ವ ಚಂದ್ರಗ್ರಹಣ ಗೋಚರ

ಕೋಲ್ಕತ್ತ (ಪಿಟಿಐ): ಇದೇ 19ರಂದು ಈಶಾನ್ಯ ಭಾರತದಲ್ಲಿ 580 ವರ್ಷಗಳಲ್ಲೇ ಸುದೀರ್ಘವಾದ ಪಾರ್ಶ್ವ ಚಂದ್ರಗ್ರಹಣವು ಗೋಚರಿಸಲಿದೆ ಎಂದು ಖಗೋಳಶಾಸ್ತ್ರಜ್ಞರು ಶನಿವಾರ ತಿಳಿಸಿದ್ದಾರೆ.

ಅರುಣಾಚಲ ಪ್ರದೇಶ ಮತ್ತು ಅಸ್ಸಾಂನ ಕೆಲವು ಪ್ರದೇಶಗಳಲ್ಲಿ ಈ ಅಪರೂಪದ ವಿದ್ಯಮಾನವು ಗೋಚರಿಸಲಿದೆ ಎಂದು ಎಂಪಿ ಬಿರ್ಲಾ ತಾರಾಲಯದ ಸಂಶೋಧನಾ ಮತ್ತು ಶೈಕ್ಷಣಿಕ ನಿರ್ದೇಶಕ ಡೆಬಿ ಪ್ರೋಸಾದ್ ದುವಾರಿ ತಿಳಿಸಿದ್ದಾರೆ.

ಭಾಗಶಃ ಗ್ರಹಣ ಮಧ್ಯಾಹ್ನ 12.48ಕ್ಕೆ ಆರಂಭವಾಗಿ ಸಂಜೆ 4.17ಕ್ಕೆ ಅಂತ್ಯವಾಗಲಿದೆ. ಗ್ರಹಣದ ಅವಧಿ 3 ಗಂಟೆ 28 ನಿಮಿಷ 24 ಸೆಕೆಂಡ್‌ಗಳಾಗಿದ್ದು, ಇದು 580 ವರ್ಷಗಳಲ್ಲೇ ಸುದೀರ್ಘವಾದುದು ಎಂದು ದುವಾರಿ ಹೇಳಿದ್ದಾರೆ.

ಹಬೀಬ್‌ಗಂಜ್ ರೈಲು ನಿಲ್ದಾಣ ಮರುನಾಮಕರಣ

ಭೋಪಾಲ್ (ಪಿಟಿಐ): ಇಲ್ಲಿನ ಅತ್ಯಂತ ಆಧುನಿಕ ಸೌಕರ್ಯಗಳನ್ನೊಳಗೊಂಡಿರುವ ಹಬೀಬ್‌ಗಂಜ್ ರೈಲು ನಿಲ್ದಾಣದ ಹೆಸರನ್ನು ಬದಲಾಯಿಸಲಾಗಿದ್ದು, ಗೊಂಡ ಸಮುದಾಯದ ರಾಣಿ ಕಮಲಾಪತಿ ಅವರ ಹೆಸರನ್ನು ಮರುನಾಮಕರಣ ಮಾಡಲಾಗಿದೆ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಶನಿವಾರ ಹೇಳಿದ್ದಾರೆ.

ಮರುನಾಮಕರಣದ ನಿರ್ಧಾರ ತೆಗೆದುಕೊಂಡಿದ್ದಕ್ಕಾಗಿ ಪ್ರಧಾನಿ ಮೋದಿಗೆ ಅವರು ಧನ್ಯವಾದ ಅರ್ಪಿಸಿದ್ದಾರೆ. ಪ್ರಧಾನಿ ಮೋದಿ ಅವರು ನವೆಂಬರ್ 15 ರಂದು, ವಿಮಾನ ನಿಲ್ದಾಣದಲ್ಲಿ ಇರುವಂತಹ ಸೌಕರ್ಯಗಳೊಂದಿಗೆ ಮರುನಾಮಕರಣಗೊಂಡ ರೈಲು ನಿಲ್ದಾಣವನ್ನು ಲೋಕಾರ್ಪಣೆ ಮಾಡಲಿದ್ದಾರೆ ಎಂದರು.

ಆರೋಗ್ಯ ವಲಯಕ್ಕೆ ₹8,454 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಾಥಮಿಕ ಆರೋಗ್ಯ ಹಂತದಲ್ಲಿ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಕರ್ನಾಟಕ ಸೇರಿದಂತೆ 19 ರಾಜ್ಯಗಳಿಗೆ ಕೇಂದ್ರ ಸರ್ಕಾರ ₹8,454 ಕೋಟಿ ಅನುದಾನ ಬಿಡುಗಡೆ ಮಾಡಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಈ ಅನುದಾನ ಬಿಡುಗಡೆ ಮಾಡಲಾಗಿದೆ. ಬಿಹಾರವು ಅತಿಹೆಚ್ಚು ಅನುದಾನ ಪಡೆದಿದೆ. ಬಿಹಾರ ₹1,116 ಕೋಟಿ, ಮಧ್ಯಪ್ರದೇಶ ₹923 ಕೋಟಿ, ತಮಿಳುನಾಡು ₹850 ಕೋಟಿ ಹಾಗೂ ಕರ್ನಾಟಕ ₹551.53 ಕೋಟಿ ಅನುದಾನ ಪಡೆದಿವೆ. ಉಳಿದ 9 ರಾಜ್ಯಗಳಿಂದ ಪ್ರಸ್ತಾವನೆ ಬಂದ ನಂತರ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.

15ನೇ ಹಣಕಾಸು ಆಯೋಗವು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ₹4.28 ಲಕ್ಷ ಕೋಟಿ ಆರೋಗ್ಯ ಅನುದಾನ ಬಿಡುಗಡೆಗೆ ಶಿಫಾರಸು ಮಾಡಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಬಲಪಡಿಸುವುದು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರೋಗಪತ್ತೆ ವ್ಯವಸ್ಥೆಯನ್ನು ಸ್ಥಾಪಿಸುವುದು, ಉಪಕೇಂದ್ರಗಳಿಗೆ ಕಟ್ಟಡ ನಿರ್ಮಾಣ ಸೇರಿದಂತೆ ಹಲವು ಕ್ರಮಗಳಿಗೆ ಈ ಅನುದಾನ ಬಳಕೆ ಮಾಡಲು ಶಿಫಾರಸು ಮಾಡಲಾಗಿದೆ.

ಇಬ್ಬರು ಗ್ರಾಮಸ್ಥರನ್ನು ಕೊಂದ ನಕ್ಸಲರು

ಬಾಲಘಾಟ್ (ಪಿಟಿಐ): ‘ಪೊಲೀಸ್ ಮಾಹಿತಿದಾರರೆಂಬ ಶಂಕೆಯಲ್ಲಿ ಇಬ್ಬರು ಗ್ರಾಮಸ್ಥರನ್ನು ನಕ್ಸಲರ ಗುಂಪೊಂದು ಗುಂಡಿಕ್ಕಿ ಕೊಂದ ಘಟನೆ ಮಧ್ಯಪ್ರದೇಶದ ಬಾಲಘಾಟ್ ಜಿಲ್ಲೆಯಲ್ಲಿ ನಡೆದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

‘ಶುಕ್ರವಾರ ಮಧ್ಯರಾತ್ರಿ ಬೈಹಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಮಲಿಖೇಡಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಗ್ರಾಮಸ್ಥರಾದ ಸಂತೋಷ್ (48) ಮತ್ತು ಜಗದೀಶ್ ಯಾದವ್ (45) ಅವರನ್ನು ನಕ್ಸಲರ ಗುಂಪೊಂದು ಗುಂಡಿಕ್ಕಿ ಕೊಂದಿದೆ’ ಎಂದು ಬೈಹಾರ್‌ನ ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಆದಿತ್ಯ ಪ್ರತಾಪ್ ಮಿಶ್ರಾ ಹೇಳಿದ್ದಾರೆ.

ಪರಿಹಾರ: ‘ಮೃತರ ಕುಟುಂಬಗಳಿಗೆ ತಲಾ ₹ 5 ಲಕ್ಷ ಆರ್ಥಿಕ ನೆರವು ನೀಡಲಾಗುವುದು’ ಎಂದು ಘೋಷಿಸಿರುವ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ‘ಮೃತರ ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ನೌಕರಿ ನೀಡಲಾಗುವುದು. ನಕ್ಸಲೀಯರ ವಿರುದ್ಧದ ಅಭಿಯಾನ ಹುರುಪಿನಿಂದ ಮುಂದುವರಿಯಲಿದೆ’ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ತಾಂಶಾಖೆ/ಕ್ರಿಯೋ/164/2019–20 ದಿನಾಂಕ: 11–11–2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ಹಾಸನದಲ್ಲಿ ಬಾಲಕಿಯರಿಗೆ ಕ್ರೀಡಾ ವಸತಿ ನಿಲಯವನ್ನು ನಿರ್ಮಿಸುವ ಕಾಮಗಾರಿ ಕುರಿತು.	ರೂ. 131.58 ಲಕ್ಷಗಳು	ರೂ. 1,97,000/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **http://eproc.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **26–11–2021ರಂದು ಸಮಯ: 16.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29–11–2021ರಂದು ಸಮಯ: 16.30 ಗಂಟೆಗೆ.** 3) ಹಣಕಾಸು ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ಬೆಂ.ನ/ಅಡ್ವರ್ಟೋ/2155/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 14 ನವೆಂಬರ್ 2021

ಮುದ್ದು ಮಕ್ಕಳಿಗೆ ನಲ್ಮೆಯ ಕೊಡುಗೆ

ಮಕ್ಕಳೆಂದರೆ ಹೂತೋಟದಲ್ಲಿನ ಮೊಗ್ಗುಗಳಿದ್ದಂತೆ. ಅವರನ್ನು ತುಂಬಾ ಜಾಗೃತಿಯಿಂದ ಮತ್ತು ಅಷ್ಟೇ ಪ್ರೀತಿಯಿಂದ ನಿಭಾಯಿಸಬೇಕು. ಏಕೆಂದರೆ, ಅವರೇ ದೇಶದ ಭವಿಷ್ಯ ಹಾಗೂ ನಾಳಿನ ಪ್ರಜೆಗಳು ಕೂಡ. ಸರಿಯಾದ ಶಿಕ್ಷಣದಿಂದ ಮಾತ್ರ ಸದೃಢ ಸಮಾಜ ಕಟ್ಟಲು ಸಾಧ್ಯ

–ಜವಾಹರಲಾಲ್ ನೆಹರೂ

ಅರೆರೆ... ಅನವ ಏನೀ ಸರ್ಕಸ್?

ಅಪ್ಪ ಅಮ್ಮನ ಒದೆ ತಪ್ಪಿತು

ಧನರಾಜ್

ಕೋವಿಡ್ ಕಾರಣದಿಂದ ಮನೆಯಲ್ಲಿ ಇದ್ದಾಗ ಪಾಠಗಳು ಮರೆತು ಹೋಗುತ್ತಿದ್ದವು. ಆನ್‌ಲೈನ್ ಪಾಠ ನಡೆದರೂ ತರಗತಿಯಲ್ಲಿ ಹೇಳಿದ ಹಿತದ ಅನುಭವ ಆಗುತ್ತಿರಲಿಲ್ಲ.

ಕೋವಿಡ್ ಸಂದರ್ಭದಲ್ಲಿ ಮನೆಯಲ್ಲಿದ್ದ ವೇಳೆ ಅಪ್ಪ, ಅಮ್ಮನಿಂದ ತಿಂದಷ್ಟು ಒದೆಯನ್ನು ನಾನು ಈ ಮುಂಚೆ ಎಂದೂ ತಿಂದಿಲ್ಲ. ಪಾಠಗಳು ಮರೆತುಹೋದ ಕಾರಣ ಒದೆ ಕೊಡುತ್ತಿದ್ದರು. ಸಣ್ಣ ಪುಟ್ಟದ್ದಕ್ಕೂ ಒದೆ ಬೀಳುತ್ತಿದ್ದವು. ಆ ಕಾರಣದಿಂದ ಶಾಲೆ ಆರಂಭವಾಗಿದ್ದು ಒಳ್ಳೆಯದೇ ಆಯಿತು.

ಹಿಂದೆ ಶಾಲೆಯಲ್ಲಿ ನೋಟ್ಸ್ ಬರೆಸುತ್ತಿದ್ದರು. ವಿಷಯಗಳು ಗಟ್ಟಿಯಾಗಿ ತಲೆಯಲ್ಲಿ ಉಳಿದುಕೊಳ್ಳುತ್ತಿದ್ದವು. ಮನೆಯಲ್ಲಿ ನಾನೇ ಓದಿಕೊಳ್ಳುತ್ತಿದ್ದೆ. ಕೆಲವು ಅಂಶಗಳು ಮರೆತು ಹೋಗುತ್ತಿದ್ದವು. 9ನೇ ತರಗತಿಯ ನನ್ನ ಅಕ್ಕ ನಾನು ಓದಿದ್ದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದಳು. ಭಯದಿಂದಲೇ ಉತ್ತರಿಸುತ್ತಿದ್ದೆ. ತಪ್ಪಾದರೆ ಅವಳೂ ಒದೆ ಕೊಡುತ್ತಿದ್ದಳು.

ಸೈಕಲ್ ಓಡಿಸುವುದು, ಆಟವಾಡುವುದು, ಟಿ.ವಿ. ನೋಡುವುದು... ಹೀಗೆ ಪಾಠಕ್ಕಿಂತ ಆಟಕ್ಕೆ ಹೆಚ್ಚು ಸಮಯ ಕೊಡುತ್ತಿದ್ದೆ. ಇದು ನನ್ನ ಓದಿನ ಮೇಲೆ ಪರಿಣಾಮ ಬೀರುತ್ತಿತ್ತು. ಶಾಲೆಗೆ ಬಂದ ನಂತರ ಓದಿಗೆ ಹೆಚ್ಚು ಸಮಯವಿದೆ. ಬೆಳಿಗ್ಗೆ 10ಕ್ಕೆ ಬಂದರೆ ಸಂಜೆ 5ಕ್ಕೆ ಮನೆಗೆ ಹೋಗಬೇಕು.

ಗಣಿತ ನನಗೆ ಕಠಿಣವಾದ ವಿಷಯ. ಶಾಲೆಯಲ್ಲಿ ಪಾಠಗಳು ನಡೆಯುವಾಗ ಅವುಗಳು ಮನವರಿಕೆ ಆಗುತ್ತಿದ್ದವು. ಆದರೆ ಮನೆಯಲ್ಲಿ ಎಷ್ಟೇ ಪ್ರಯತ್ನಪಟ್ಟರೂ ಮರೆತು ಹೋಗುತ್ತಿದ್ದವು. ಶಿಕ್ಷಕರು ವಿಸ್ತಾರವಾಗಿ ಹೇಳುತ್ತಿದ್ದ ಕಾರಣ ಮತ್ತು ಅಲ್ಲಿಯೇ ಲೆಕ್ಕಗಳನ್ನು ನೀಡುತ್ತಿದ್ದರಿಂದ ಶಾಲೆಯಲ್ಲಿ ಗಣಿತ ಸುಲಭವಾಗಿತ್ತು. ಮನೆಯಲ್ಲಿ ಇದ್ದಾಗ ಕಲಿತಿದ್ದು ಮರೆತು ಹೋಗುವ ಭಯ ಹೆಚ್ಚು ಆವರಿಸಿತ್ತು. ಅಷ್ಟರಲ್ಲಿ ಶಾಲೆ ಆರಂಭವಾಯಿತು. ಈಗ ಖುಷಿಯೋ ಖುಷಿ. ಒಮ್ಮೊಮ್ಮೆ ಅಪ್ಪ ಮೊಬೈಲ್ ಹೊರಗೆ ತೆಗೆದುಕೊಂಡು ಹೋಗುತ್ತಿದ್ದರು. ಆಗ ಆನ್‌ಲೈನ್ ಕ್ಲಾಸ್ ಸಹ ದೊರೆಯುತ್ತಿರಲಿಲ್ಲ.

ಮನೆಯಲ್ಲಿದ್ದಾಗ ಆಟದ ಬಗ್ಗೆ ಹೆಚ್ಚು ಗಮನ ಇರುತ್ತಿತ್ತು. ನೋಟ್ಸ್ ಬರೆಯುತ್ತಿರಲಿಲ್ಲ. ಆದರೆ ಶಾಲೆಗೆ ಬಂದ ನಂತರ ಮರೆಯುವ, ಒದೆ ತಿನ್ನುವ ಅವಕಾಶಗಳು ಕಡಿಮೆ. ಪ್ರಶ್ನೆಗಳಿಗೆ ಧೈರ್ಯವಾಗಿ ಉತ್ತರಿಸುವೆ. ಶಾಲೆಯಲ್ಲಿ ಎಲ್ಲ ಸ್ನೇಹಿತರು ಕಣ್ಣಮುಂದೆ ಇದ್ದಾಗ ಒದೆ ತಿನ್ನುವುದಕ್ಕೆ ಮುಜುಗರ ಅಲ್ಲವೇ?. ಎಲ್ಲರಿಗಿಂತ ನಾನೂ ಶಾಲೆಯಲ್ಲಿ ಓದಬೇಕು ಎನ್ನುವ ಛಲ ಬಂದೇ ಬರುತ್ತದೆ.

6ನೇ ತರಗತಿ ವಿದ್ಯಾರ್ಥಿ, ಕರ್ನಾಟಕ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕಬಳ್ಳಾಪುರ

(ನಿರೂಪಣೆ: ಡಿ.ಎಂ. ಪ್ರಶಾಂತ್ ಕುರ್ಕೆ)

ಕಲಬುರಗಿಯ ಜೇವರ್ಗಿ ಕಾಲೊನಿ ಸರ್ಕಾರಿ ಶಾಲಾ ಮಕ್ಕಳ ಈ ಸಂಭ್ರಮ ನಾಡಿನ ಎಲ್ಲ ಮಕ್ಕಳ ಸಂಭ್ರಮವೂ ಹೌದು...

ಚಿತ್ರ: ತಾಜುದ್ದೀನ್ ಆಜಾದ್

ಪಾಪ, ಕಬ್ಬನ್ ಪಾರ್ಕಿನ ಕಾಡುಪಾಪ

ಮಕ್ಕಳ ಕಥೆ

ನಾಗೇಶ ಹೆಗಡೆ

ಬೆಂಗಳೂರಿನ ಕಬ್ಬನ್ ಪಾರ್ಕಿನ ಬಾಲಭವನದಲ್ಲಿ ಪುಟಾಣಿ ರೈಲು ಉಸ್ಸಂತ ನಿಂತಿತ್ತು. ಪುಟ್ಟ ಹುಡುಗಿ ನೀಲಿ ಒಂದು ಕೈಯಲ್ಲಿ ಚಪ್ಪಲ್ ಹಿಡಿದು ಇನ್ನೊಂದನ್ನ ಹುಡುಕ್ತಾ ಪೊದೆಯ ಹತ್ರ ಬಂದ್ಲು. ನೋಡಿದ್ರೆ ಅವಳ ಕಣ್ಣೆದುರೇ ಠಪ್ ಅಂತ ಒಂದು ಅಳಿಲು ಪಲ್ಟಿ ಹೊಡೆದು ಬಿತ್ತು.

ಅರೆ, ಇದಕ್ಕೇನಾಯ್ತು ಅಂತ ಹತ್ತರ ಹೋಗಿದ್ದೇ ತಡ, ಅದು ಕುಂಟ್‌ತಾ ಕುಂಟ್‌ತಾ ದೂರ ಹೋಯ್ತು. 'ಅಯ್ಯೋ ಪಾಪ ಎತ್ಕೊಳೋಣ' ಅನ್ಕೊಂಡು ನೀಲಿ ಅದರ ಹತ್ರ ಹೋದ್ಲು. ಅಳಿಲು ಇನ್ನೂ ಕೊಂಚ ದೂರ, ಮತ್ತೂ ಕೊಂಚ ದೂರ ಹೋಯ್ತು. ಹೋಗಿ ಹೋಗಿ ಒಂದು ಪುಟ್ಟ ಹಳ್ಳಕ್ಕೆ ಇಳೀತು.

ಅಲ್ಲಿ ನೋಡಿದ್ರೆ ಜಾತ್ರೆ! ಅಳಿಲು, ಅದರ ಅಮ್ಮ, ಬೆಳ್ಳಕ್ಕಿ, ಗೂಬೆ, ಬಾವಲಿ, ನೀರ್‌ಕಾಗೆ ಎಲ್ಲ ಸೇರಿ ಅಕಾ ಅಕ್ಕಾ ಬಾ ಬಾ ಅಂತ ನೀಲೀನ ಕರೆದವು. ಇನ್ನೂ ಹತ್ರ ಹೋದರೆ ದೊಡ್ಡ ಕಣ್ಣುಗಳ ಪುಟಾಣಿ ಕಾಡುಪಾಪ ಅಳ್ತಾ ಇತ್ತು. ನೀಲಿಗೆ ಗಾಬರಿ ಆಯ್ತು.

'ಏನಾಯ್ತು ಕಾಡುಪಾಪಂಗೆ? ಯಾಕೆ ನೀವೆಲ್ಲ ಸಪ್ಪಗಿದೀರಿ?' ಅಂತ ನೀಲಿ ಕೇಳಿದಳು.

ಕಾಡುಪಾಪ ಮೂಗು ಒರೆಸಿಕೊಂಡು, 'ನನಗೆ ಏನೂ ಆಗಿಲ್ಲಮ್ಮ; ಆದರೆ ನಮ್ ಪುಟಾಣಿಗೆ ಮೈಯೆಲ್ಲ ಸುಟ್ಟು ಹೋಗಿದೆ. ಸಹಾಯ ಬೇಕು' ಅಂದ್ಲು. ನೀಲಿ ತುಸು ಬಗ್ಗಿ ನೋಡಿದ್ಲು. ಪುಟ್ಟ ಕಾಡುಪಾಪ ಅತ್ತು ಅತ್ತು ಸುಸ್ತಾಗಿ ನಡುಗ್ತಾ ಅಮ್ಮನ ಮಡಿಲಲ್ಲಿ ಮಲಗಿತ್ತು. ಅಲ್ಲೇ ಪಕ್ಕದಲ್ಲಿ ಒಂದು ರಾಕೆಟ್ ಬಿದ್ದಿತ್ತು.

ನೀಲಿ ಸುತ್ತ ನೋಡಿದ್ಲು. ಅಲ್ಲೇ ಕೊಂಬೆ ಮೇಲೆ ನೇತಾಡ್ಕಂಡಿದ್ದ ಬಾವಲಿ ಮಾತಾಡ್ತು.

'ದೀಪಾವಳಿ ಅಂತ ಯಾರೋ ಪಟಾಕಿ ಹಾರಿಸಿದ್ದು ಇವನ ಮೇಲೆ ಬಿದ್ದಿದೆ; ಮೈ ಸುಟ್ಟುಹೋಗಿದೆ. ಎರಡು ದಿನ ಆಯ್ತು. ಯಾರೂ ಏನೂ ಸಹಾಯ ಮಾಡಕೆ ಆಗ್ತಾ ಇಲ್ಲ. ನಮಗೂ ಪಟಾಕಿ ಗಲಾಟೇಲಿ ಉಸಿರಾಡಕೆ ಆಗ್ತಾ ಇಲ್ಲ. ಬೆಂಕಿ, ಹೊಗೆ, ಢಾಂ ಢಾಮ್ ಸದ್ದು, ಆಕಾಶದಿಂದ ಕಿಡಿ ಬೀಳೋದು. ನನಗೂ, ಗೂಬಣ್ಣಂಗೂ ಊಟಕ್ಕೆ ಹೋಗೋ ಹಾಗೂ ಇಲ್ಲ. ಮಿಕ್ಕ ಯಾರಿಗೂ ರಾತ್ರಿ ಇಡೀ ನಿದ್ದೆ ಇಲ್ಲ. ನೀರ್‌ಕಾಗೆ, ಬೆಳ್ಳಕ್ಕಿ, ಮೈನಾ, ಕೋಗಿಲೆ... ನಾವೆಲ್ಲ ಉಪವಾಸ ಇದ್ದೀವಿ, ಮೂರು ದಿನ ಆಯ್ತು; ಯಾರೂ ಸಹಾಯಕ್ಕೆ ಬರ್ತಾನೂ ಇಲ್ಲ' ಅಂತು ಬಾವಲಿ.

ನೀಲಿಗೆ ಕಣ್ಣೀರೇ ಬಂದಂತಾಯ್ತು. ಏನಾದ್ರೂ ತಿಂಡಿ ಕೊಡೋಣ ಅಂದ್ರೆ ಟಿಫಿನ್ ಬಾಕ್ಸೂ ಬಾಲಭವನದಲ್ಲೇ ಉಳೀತು. ಪುಟ್ಟ ಕಾಡುಪಾಪನ ಎತ್ತಿ ಗಾಯದ ಮೇಲೆ ಉಫ್ ಅಂತ ಊದಿದ್ಲು. 'ನೀವು ಯಾರ ಹತ್ರ ಸಹಾಯ ಕೇಳಕ್ಕೆ ಹೋದ್ರಿ?' ಅಂತ ಕೇಳಿದ್ಲು.

'ಎಲ್ಲರನ್ನೂ ಹುಡುಕ್ಕೊಂಡು ಹೋದ್ವಿ. ಕಬ್ಬನ್ ಪಾರ್ಕಿನ ಆ ಮೂಲೆಯಿಂದ ಈ ಮೂಲೇವರೆಗೆ ಎಷ್ಟೊಂದು ದೊಡ್ ದೊಡ್ ಆಫೀಸರ್ ಕಚೇರಿ ಇದಾವಲ್ಲ...' ಬೆಳ್ಳಕ್ಕಿ ಹೇಳಿತು.

'ಮೊದ್ಲು ಪೊಲೀಸ್ ಮಹಾನಿರ್ದೇಶಕರ ಕಚೇರಿಗೆ ಹೋಗಿ ರಕ್ಷಣೆ ಕೊಡೀ ಅಂತ ಕೇಳಿದ್ವಿ: ದೊಡ್ಡೋರೆಲ್ಲ ರಜಾ; ನಾಡಿದ್ದು ಬನ್ನಿ ಅಂದ್‌ಬಿಟ್ರು' ಮುಂಗುಸಿ ಹೇಳಿತು.

'ಆಮೇಲೆ ಹೈಕೋರ್ಟಿಗೆ ಹೋದ್ವಿ; ನ್ಯಾಯ ಕೊಡಿ ಅಂತ ಕೇಳಿದ್ವಿ. ಅಲ್ಲೂ ರಜಾನೇ. ಆದರೂ ಒಬ್ಬರು ಅದೇನೋ ಗ್ರೀನ್ ಪಟಾಕಿ ಮಾತ್ರ ಹಚ್‌ಬೇಕು; ರಾಕೆಟ್ ಹಾರಿಸಿದ್ರೆ ಕೇಸ್ ಹಾಕ್‌ಬೌದು. ಆದರೆ ಇದು ದೊಡ್ ಕೋರ್ಟು. ನೀವು ಮೊದ್ಲು ಮುಂಗುಸಿ ಕೋರ್ಟಿಗೆ ಹೋಗಬೇಕು ಅಂದ್ರು. ಏನಮ್ಮಾ ಅದು ಮುಂಗುಸಿ ಕೋರ್ಟು?' ಅಳಿಲಿನ ಅಮ್ಮ ಕೇಳ್ತು.

ನೀಲಿಗೆ ಬೇಸರದಲ್ಲೂ ನಗು ಬಂತು. 'ಮುಂಗುಸಿ ಅಲ್ಲ ಮಾರಾಯ್ತೀ, ಅದು ಮುನ್ಸೀಫ್ ಕೋರ್ಟು; ದೂರ ಇದೆ; ಆದರೆ ಅಲ್ಲಿಗೆ ಹೋಗೋಕ್ ಮುಂಚೆ ಪೊಲೀಸ್ ಎಫ್‌ಐಆರ್ ಆಗಬೇಕು' ಅಂದ್ಲು.

'ಪೊಲೀಸ್ ಫಾಯರರ್ರಾ? ಯಾಕಮ್ಮಾ?' ಗಡಬಡಿಸಿ ಕೇಳಿದ ಗೂಬೆರಾಯ.

ಮುಂದಿನ ಪುಟಕ್ಕೆ...



ಕಲೆ: ಎಂ.ಜಿ. ಬಂಗ್ಲೇವಾಲೆ

ಚಿಣ್ಣರ ಚಿನ್ನ

ಹಸಿರು ಸೇನೆಯ ನಾಯಕಿ

ಪರಿಸರ ರಕ್ಷಣೆಗೆ ಪಣತೊಟ್ಟಿರುವ ನೂರಾರು ಸ್ವಯಂ ಸೇವಕರ ಜತೆಗೆ ತನ್ನೆರಡು ಪುಟ್ಟ ಕೈಗಳನ್ನು ಸೇರಿಸಬೇಕೆಂದು ಹಂಬಲಿಸಿ ಈ ಬಾಲಕಿ ಮಕ್ಕಳ ಸೈನ್ಯ ಕಟ್ಟಿಕೊಂಡು ಪ್ರಕೃತಿಗೆ ಹಸಿರು ಹೊದಿಕೆ ಹೊಲಿಯುತ್ತಿದ್ದಾಳೆ. ಮಂಗಳೂರಿನ ಜಪ್ಪಿನಮೊಗರು ನಿವಾಸಿ ಹನಿ ಎಚ್.ಆರ್., ಬಾಲ್ಯದಿಂದಲೇ ಪರಿಸರ ಕಾಳಜಿ ಹೊಂದಿದವಳು. 'ಯಾಕಿಷ್ಟು ಸುಡುಬಿಸಿಲು' ಎಂದು ಪ್ರಶ್ನಿಸಿದ ಹನಿಗೆ, ಪರಿಸರದ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ಅಪ್ಪ-ಅಮ್ಮ ತಿಳಿಸಿದರು. ಆಗಿನಿಂದ ಪ್ರಕೃತಿ ಪೂರಕ ಕಾಯಕಕ್ಕೆ ಮುಂದಾಗಿರುವ ಈಕೆ, ಮೂರನೇ ತರಗತಿಯಲ್ಲಿರುವಾಗ ತನ್ನ ಪಾಕೆಟ್ ಮನಿಯಲ್ಲಿ ನರ್ಸರಿ ಗಿಡಗಳನ್ನು ಖರೀದಿಸಿ, ನೆರೆಹೊರೆಯವರಿಗೆ ಹಂಚಿದಳು. ಅಕ್ಕಪಕ್ಕದ ಮಕ್ಕಳನ್ನು ಸೇರಿಸಿ 'ಗ್ರೀನ್ ವಾರಿಯರ್ಸ್' ತಂಡ ಕಟ್ಟಿದಳು.

ಮಾಲಿನ್ಯರಹಿತ ದೀಪಾವಳಿ ಆಚರಿಸಲು ವಿನಂತಿಸಿದ ಈ ತಂಡವು ಮಣ್ಣಿನ ಹಣತೆ ಹಂಚಿತು. ಬಸ್ ನಿಲ್ದಾಣಕ್ಕೆ ಹೋಗಿ, ಪ್ಲಾಸ್ಟಿಕ್ ಬಾಟಲಿ, ಕವರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ ಎಂದು ಪ್ರಯಾಣಿಕರ ಬಳಿ ಕೋರಿಕೊಂಡಿತು. 'ಹಾರ್ದಿಕಾ, ಅನನ್ಯಾ, ಜಿತೇಶ್ ಇನ್ನೂ ಹಲವರು ಸೇರಿ ಈ ಬಾರಿ ಗಣೇಶ ಚತುರ್ಥಿಗೆ ಹಣ್ಣಿನ ಬೀಜ ಹಾಕಿ ಮಣ್ಣಿನ ಗಣೇಶ ಮಾಡಿದ್ದೆವು. ವಿಸರ್ಜಿತ ಗಣೇಶ ಗಿಡವಾಗಿ ಮೂಡಿಬರುತ್ತಾನೆ ಎಂಬುದು ನಮ್ಮ ಕಲ್ಪನೆಯಾಗಿತ್ತು' ಎನ್ನುತ್ತಾಳೆ ಹನಿ.

ಕೋವಿಡ್ ತಬ್ಬಲಿಗೆ ಸಮಾಜವೇ ಪೋಷಕ...

ಎಂ.ಎನ್.ಯೋಗೇಶ್

ಆಶ್ರಯದ ಅವಶ್ಯಕತೆಯುಳ್ಳ ಮಗುವಿಗೆ ಈ ಕೋರ್ಟ್ ಪೋಷಕ ಸ್ಥಾನದಲ್ಲಿ ನಿಲ್ಲುತ್ತದೆ...

ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಹೇಳಿದ ಮಾತಿದು. ಮಕ್ಕಳ ರಕ್ಷಣೆಯ ವಿಚಾರದಲ್ಲಿ ಸಮಾಜದ ಜವಾಬ್ದಾರಿಯನ್ನು ಉನ್ನತ ನ್ಯಾಯಾಲಯ ಹಲವು ಬಾರಿ ನೆನಪಿಸಿದೆ.

ಬಾಲಕ, ಬಾಲಕಿಯರ ರಕ್ಷಣೆಯ ಬಗ್ಗೆ 'ಭಾರತೀಯ ಉತ್ತರಾಧಿಕಾರತ್ವ ಅಧಿನಿಯಮ'ದಲ್ಲಿ ವಿಸ್ತೃತವಾದ ನಿಯಮಗಳಿವೆ. ಪೋಷಕರಿಂದ ತ್ಯಜಿಸಲ್ಪಟ್ಟ ಮಕ್ಕಳು, ಅಪಘಾತದಿಂದ ಮೃತಪಟ್ಟ, ವಿಚ್ಛೇದನ ಪಡೆದ ಪೋಷಕರ ಮಕ್ಕಳ ಆಶ್ರಯ ಹಾಗೂ ರಕ್ಷಣೆಗೆ ಕಾನೂನಾತ್ಮಕ ಪ್ರಕ್ರಿಯೆಗಳಿವೆ.

ಆದರೆ, ಈ ಕೋವಿಡ್ ಸಂಕಷ್ಟದಲ್ಲಿ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡು 'ತಬ್ಬಲಿ'ಯಾದ ಮಕ್ಕಳ ರಕ್ಷಣೆ ಹಾಗೂ ಆಶ್ರಯಕ್ಕೆ ಕಾನೂನಿಗೂ ಮೀರಿದ ಭಾವನಾತ್ಮಕ ಬಾಂಧವ್ಯ ಮುನ್ನೆಲೆಗೆ ಬಂದಿದೆ. ಈ ಮಕ್ಕಳ ಪೋಷಣೆಗಾಗಿ ಸರ್ಕಾರ ಪ್ರತಿ ತಿಂಗಳು ಹಣ ನೀಡುತ್ತದೆ, ಜೊತೆಗೆ ಎಲ್ಲಾ ರೀತಿಯ ಅಗತ್ಯ ಸೌಲಭ್ಯಗಳನ್ನು ನೀಡುತ್ತದೆ ನಿಜ. ಆದರೆ, ಅದಕ್ಕೆ ಹೊರತಾಗಿ ಇಡೀ ಸಮಾಜ ಕೋವಿಡ್ ತಬ್ಬಲಿಯ ಪೋಷಣೆಗೆ ನಿಲ್ಲುತ್ತದೆ ಎಂಬ ಧ್ವನಿ ಹಲವು ಪ್ರಕರಣಗಳಲ್ಲಿ ಪ್ರತಿಧ್ವನಿಸುತ್ತಿದೆ.

ನಾಗಮಂಗಲ ತಾಲ್ಲೂಕಿನ ಗ್ರಾಮವೊಂದರಲ್ಲಿ ಮಗು ಹುಟ್ಟಿದ 3ನೇ ದಿನಕ್ಕೆ ತಾಯಿ ಕೋವಿಡ್‌ಗೆ ಬಲಿಯಾದರು. 15 ದಿನದ ಹಿಂದೆಯಷ್ಟೇ ತಂದೆಯನ್ನೂ ಕೋವಿಡ್ ಬಲಿ ಪಡೆದಿತ್ತು. ಮಂಡ್ಯದ ಮಿಮ್ಸ್ ಆಸ್ಪತ್ರೆಯ ವೈದ್ಯರು ಹಸುಳೆಯನ್ನು ಕೋವಿಡ್‌ನಿಂದ ರಕ್ಷಿಸುವಲ್ಲಿ ಸಫಲರಾದರು. ಹುಟ್ಟಿದ ತಕ್ಷಣ ತಂದೆ-ತಾಯಿಯನ್ನು ಕಳೆದುಕೊಂಡ ಮಗುವಿಗಾಗಿ ಇಡೀ ಸಮಾಜ ಮಿಡಿಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಮಗುವನ್ನು ಕಾಣಲು ಬಂದರು, ಸಂರಕ್ಷಣೆ, ಪೋಷಣೆಯ ಎಲ್ಲಾ ವ್ಯವಸ್ಥೆ ಮಾಡಿಸಿದರು.

ಮಗುವನ್ನು ದತ್ತು ಪಡೆಯಲು ಹಲವರು ಮುಂದೆ ಬಂದಿದ್ದರು. ಸಂಬಂಧಿಗಳ ಇಚ್ಛೆಯಂತೆ ಮಗುವನ್ನು ದೊಡ್ಡಪ್ಪನ ಬಳಿ ಇರಿಸಲಾಯಿತು. ಈಗ ಮಗುವಿಗೆ 6 ತಿಂಗಳಾಗಿದ್ದು ಪೋಷಣೆ ಮುಂದುವರಿದಿದೆ. ತಬ್ಬಲಿ ಎಂಬ ಭಾವ ಮೂಡದಂತೆ ದೊಡ್ಡಪ್ಪ ತಮ್ಮ ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಾರೆ. ಜೊತೆಗೆ ಮಗುವಿಗೆ ಇಡೀ ಗ್ರಾಮದ ಪ್ರೀತಿ ಸಿಕ್ಕಿದ್ದು ಎಲ್ಲರೂ ತಮ್ಮ ಸ್ವಂತ ಮಗುವಿನಂತೆಯೇ ಕಾಣುತ್ತಿದ್ದಾರೆ. ಆ ಪುಟಾಣಿ ಊರಿನ ಕಣ್ಮಣಿಯಾಗಿದ್ದಾಳೆ.

'ಅಧಿಕಾರಿಗಳು, ವೈದ್ಯರು ಆಗಾಗ ಬಂದು ಮಗುವಿನ ಯೋಗಕ್ಷೇಮ ವಿಚಾರಿಸುತ್ತಾರೆ. 6 ತಿಂಗಳವರೆಗೂ ಪೌಡರ್ ಹಾಲು ಕುಡಿಸಿದ್ದೇವೆ. ಇನ್ನುಮುಂದೆ ಹಸುವಿನ ಹಾಲು ನೀಡುತ್ತೇವೆ. ಸ್ವಂತ ತಂದೆ-ತಾಯಿ ಪ್ರೀತಿ ನೀಡಲು ಯಾರಿಂದರೂ ಸಾಧ್ಯವಿಲ್ಲ. ಆದರೆ ಅಷ್ಟೇ ಪ್ರೀತಿ ಕೊಡಲು ನಾವು ಪ್ರಯತ್ನಿಸುತ್ತಿದ್ದೇವೆ' ಎಂದು ಮಗುವಿನ ದೊಡ್ಡಪ್ಪ ಹೇಳುತ್ತಾರೆ.

ಅಜ್ಜಿ ಮನೆಯೇ ಖಾತ್ರಿ: ಹುಬ್ಬಳ್ಳಿಯ ಮಿಮ್ಸ್ ಆಸ್ಪತ್ರೆಯಲ್ಲಿ ಜೀವ ಬಿಟ್ಟ ಮಹಿಳೆಗೆ ಕೋವಿಡ್ ದೃಢಪಟ್ಟಿರಲಿಲ್ಲ. ನಂತರ ಕೋವಿಡ್ ಪಾಸಿಟಿವ್ ಎಂದು ಗೊತ್ತಾದ ಗಂಟೆಯೊಳಗೆ ಪ್ರಾಣ ಪಕ್ಷಿ ಹಾರಿಹೋಯಿತು. ವಾರದ ನಂತರ ಧಾರವಾಡದ ಎಸ್‌ಡಿಎಂ ಆಸ್ಪತ್ರೆಯಲ್ಲಿ ಮಹಿಳೆಯ ಪತಿಯೂ ಕೋವಿಡ್‌ಗೆ ಬಲಿಯಾದರು. ಅವರ 13 ವರ್ಷದ ಮಗನಿಗೆ ಕೋವಿಡ್ ಪರಿಣಾಮ ಗೊತ್ತಿತ್ತು, ದಿನಗಳು ಉರುಳಿದಂತೆ ಆತ ಸಹಜ ಸ್ಥಿತಿಗೆ ಬಂದಿದ್ದಾನೆ. ಆದರೆ, ಐದು ವರ್ಷದ ಮಗಳು ಏನೂ ತಿಳಿಯದ ಮುಗ್ಧೆ, 'ದವಾಖಾನಿಯೊಳಗ ಅಪ್ಪ- ಅವ್ವ ಅದಾರ' ಎನ್ನುತ್ತಿರುವ ಆ ಬಾಲಕಿ ತಂದೆ-ತಾಯಿಯ ನಿರೀಕ್ಷೆಯಲ್ಲೇ ಇದ್ದಾಳೆ. ಮೊದಲಿನಿಂದಲೂ ಅಜ್ಜಿ ಮನೆಯಲ್ಲೇ ಇದ್ದ ಈ ಇಬ್ಬರೂ ಮಕ್ಕಳಿಗೆ ಈಗ ಅದೇ ಶಾಶ್ವತವಾಗಿದೆ.

ಅಗಾಧ ಪ್ರೀತಿಯ ಗೊಂದಲ: ಮೈಸೂರಿನ ದಂಪತಿಗಳಿಬ್ಬರು ತಮ್ಮಿಬ್ಬರೂ ಮಕ್ಕಳ ಮದುವೆ ಮಾಡಿದ್ದಾರೆ. ಮಕ್ಕಳು ಅವರವರ ದಾರಿಯಲ್ಲಿದ್ದಾರೆ. ಆದರೆ ಈಗ ಆ ದಂಪತಿ ಮತ್ತೆ ಇಬ್ಬರು ಪುಟಾಣಿಗಳಿಗೆ ತಂದೆ-ತಾಯಿಯಾಗಿದ್ದಾರೆ. ತಂದೆಯ ತಂಗಿಯ ಮಕ್ಕಳ ಪೋಷಕರು ಕೋವಿಡ್‌ನಿಂದ ಮೃತಪಟ್ಟಿದ್ದು ಇಬ್ಬರೂ ಮಕ್ಕಳು ಇವರ ಪೋಷಣೆಯಲ್ಲಿದ್ದಾರೆ.

'ಈ ಮಕ್ಕಳಿಗೆ ಸ್ವಂತ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿ ತೋರಿಸುತ್ತಿದ್ದೇವೆ. ಆದರೂ ನಮ್ಮನ್ನು ಭಯ ಕಾಡುತ್ತಿದೆ. ಮಕ್ಕಳಿಗೆ ರೇಗಲು, ಗದರಲು ಭಯ. ಅವರ ತಂದೆ-ತಾಯಿ ಇದ್ದರೆ ಗದರುತ್ತಿದ್ದರೇ ಎಂಬ ಗೊಂದಲ ಕಾಡುತ್ತದೆ. ಮಕ್ಕಳು ಅತ್ತಾಗ ಅಕ್ಕಪಕ್ಕದ ಮನೆಯವರು ಏನಂದುಕೊಂಡಾರು ಎಂಬ ಭಯ ಕಾಡುತ್ತದೆ. ಪ್ರೀತಿ ಹೆಚ್ಚಾಗಿ ಈ ಗೊಂದಲ ಮೂಡಿರಬಹುದು' ಎನ್ನುತ್ತಾರೆ ಆ ಪೋಷಕರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಕ್ಕಳಿಬ್ಬರ ಶೈಕ್ಷಣಿಕ ಜವಾಬ್ದಾರಿಯನ್ನು ಕಂಪನಿಯೊಂದು ವಹಿಸಿಕೊಂಡಿದೆ. ಬೆಂಗಳೂರಿನ ವಸತಿ ಶಾಲೆಯಲ್ಲಿದ್ದುಕೊಂಡು ಆ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.

ಕೋವಿಡ್‌ನಿಂದ ತಂದೆ-ತಾಯಿಯನ್ನು ಕಳೆದುಕೊಂಡ ಪ್ರತಿ ಮಗುವಿನ ಹಿಂದೆಯೂ ಒಂದೊಂದು ಕತೆ ಇದೆ. ಜೀವ ತೆಗೆದ ಸೋಂಕಿಗೆ ಕರುಣೆ ಇಲ್ಲ ಎಂಬ ಭಾವ ಮನದಲ್ಲಿ ಮೂಡುತ್ತದೆ. ಇಡೀ ರಾಜ್ಯದಲ್ಲಿ 4,217 ಮಕ್ಕಳು ಕೋವಿಡ್‌ನಿಂದ ತೊಂದರೆ ಅನುಭವಿಸಿದ್ದಾರೆ. ಅವರಲ್ಲಿ 479 ಮಕ್ಕಳು ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡಿದ್ದರೆ 3,725 ಮಕ್ಕಳು ತಂದೆ ಅಥವಾ ತಾಯಿಯನ್ನು (ಸಿಂಗಲ್ ಪೇರೆಂಟ್) ಕಳೆದುಕೊಂಡಿದ್ದಾರೆ. ತಂದೆ-ತಾಯಿ ಕಳೆದುಕೊಂಡ ಮಕ್ಕಳ ಲಾಲನೆ-ಪಾಲನೆಗೆ ಪ್ರತಿ ತಿಂಗಳು ಸರ್ಕಾರ ತಲಾ ₹ 3 ಸಾವಿರ ನೀಡುತ್ತದೆ. ಜೊತೆಗೆ ಇತರ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ರಾಜ್ಯದ 13 ಮಕ್ಕಳ ಪೋಷಣೆಗೆ ಅವರ ಸಂಬಂಧಿಕರು ಯಾರೂ ಮುಂದೆ ಬಂದಿಲ್ಲ. ಅವರನ್ನು ತ್ಯಜಿಸಲ್ಪಟ್ಟ ಮಕ್ಕಳು ಎಂದು ಪರಿಗಣಿಸಲಾಗಿದ್ದು ಬಾಲಮಂದಿರಗಳಲ್ಲಿ ಪೋಷಣೆ ಮಾಡಲಾಗುತ್ತಿದೆ.

ನಕ್ಷತ್ರಲೋಕಕ್ಕೊಂದು ಟ್ರಿಪ್ಪು

ಈ ಕಥೆಯನ್ನು ಕಟ್ಟಿದವರು **ನಂಜನಗೂಡು ತಾಲ್ಲೂಕು ಹೆಗ್ಗಡಹಳ್ಳಿ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿ 'ಬಿ' ವಿಭಾಗದ ಮಕ್ಕಳು.** ತಮ್ಮ ನೆಚ್ಚಿನ ಸಂತೋಷ ಗುಡ್ಡಿಯಂಗಡಿ ಮೇಷ್ಟ್ರು ಕೊಟ್ಟ ಮೊದಲ ಸಾಲಿಗೆ ಒಬ್ಬೊಬ್ಬರು ಒಂದೊಂದು ಸಾಲು ಸೇರಿಸುತ್ತಾ ರೂಪುಗೊಂಡಿದ್ದು ಈ ಕಥೆ. ಮನುಷ್ಯರ ಪಾತ್ರ ಬರಬಾರದು, ನಮ್ಮ ಸುತ್ತಲಿನ ಯಾವುದು ಬೇಕಾದರೂ ಪಾತ್ರವಾಗಬಹುದು ಮತ್ತು ಎಲ್ಲ ಪಾತ್ರಗಳಿಗೂ ಮಾತು ಬರುತ್ತದೆ ಎಂಬ ಮೇಷ್ಟ್ರು ಕೊಟ್ಟ ನಿಯಮಗಳನ್ನು ಎಚ್ಚರಿಕೆಯಿಂದ ಗಮನಿಸಿ ಮಕ್ಕಳು ಒಂದೊಂದೇ ಸಾಲು ಪೋಣಿಸಿದ ಕಥೆ ಇದು

ಮಕ್ಕಳೇ ಬರೆದ ಕಥೆ

ಒಂಜಿನ ಸ್ವಾಮಾರ ಹೆಗ್ಗಳ್ಳಿ ಇಸ್ಕೂಲ್ನ ಒಂಬತ್ನೇ 'ಬಿ' ತರಗತಿಯ ಕ್ಲಾಸ್ ರೂಮು, ಡೆಸ್ಕು, ಬೆಂಚು, ಕಿಟ್ಕಿ, ಬಾಕ್ಲು, ಚಾಕ್ಪೀಸು, ಡಸ್ಟ್ ಬಿನ್, ಪೊರ್ಕೆ, ಡಸ್ಟರು ಎಲ್ಲಾವಿ ಟೂರ್ಗ ಹೋಗೋದು ಅಂದ್ಕ ಪ್ಲ್ಯಾನು ಮಾಡ್ತಾರ. ಆದ್ರ ಎಲ್ಲಿಗ ಹೋಗೋದು! ಅಂದ್ಕ ಎಲ್ರೂವಿ ಯೋಚಿಸ್ತಿರೋವಾಗ ಡೆಸ್ಟರು 'ನಾವೆಲ್ಲ ನಕ್ಷತ್ರಲೋಕಕ್ಕ ಹೋಗೋಣ' ಅಂತಾದ.

'ನಾವ್ ಹೆಂಗ್ ಹೋಗೋದು' ಅಂತ ಡೆಸ್ಕು ಕೇಳ್ತದ. ಆಗ ಡಸ್ಟ್ ಬಿನ್ನು 'ನಾವೆಲ್ಲಾವಿ ಸೇರ್ಕಂಡು ಕಾಗಸ್ವಾಮಿ ನೆನಸ್ಗಂಡು ತಪಸ್ಸು ಮಾಡೋಣ' ಅಂತಾದ. ಅದ್ಕ ಎಲ್ಲಾರೂ ಒಪ್ಗಂಡು ತಪಸ್ಸು ಮಾಡ್ತಾರ. ಕಾಗಸ್ವಾಮಿ ತಪಸ್ಗ ಮೆಚ್ಕಂಡು ಬಂದು 'ತನ್ನಿಂದ ಯಾನ್ ಆಗ್ಬೇಕು' ಅಂತ ಕೇಳ್ತಾನ. ಆಗ ಇವ್ರೆಲ್ಲಾವಿ ಸೇರ್ಕಂಡು 'ನಾವು ಟೂರ್ಗ ಹೋಗ್ತೀವಿ. ಹಾರ್ಕಂಡೋಗಾಕ ನಮ್ಗ ದೊಡ್ಡ ರೆಕ್ಕೆ ಕೊಟ್ಬುಬುಡಿ ಕಾಗಸ್ವಾಮಿ' ಅಂತ ಕೇಳ್ತಾರ. 'ಹಂಗೆ ಆಗ್ಲಿ' ಅಂತ ಕಾಗಸ್ವಾಮಿಯು ಆ ರೂಮ್ಗ ಎಲ್ಡು ದೊಡ್ಡ ರೆಕ್ಕೆ ಕೊಟ್ಟು ವೊಯ್ತನ.

ರೂಮು ದೊಡ್ಡ ರೆಕ್ಕಯ ಬೀಸ್ಗಂಡು ಮೇಲಕ್ಕ ಹಾರ್ಕಂಡು ಹೋಗ್ತಿರಬೇಕಾರ ಜೋರಾಗಿ ಮಳ ಬತ್ತದ. ಆ ಮಳ ಹೂದು ರೂಮು ಸೋರ್ತದ. ಆಗ ಬೆಂಚು ಡೆಸ್ಕು ತಾವು ತ್ಯಾವ ಆಯ್ತಿವಿ ಅಂದ್ಕಂಡು ಹೆದ್ರಕತವ. ಎಲ್ರಿಗೂ ಭಯ ಆಗಿ ಕಾಗಸ್ವಮಿನ ಕೂಗ್ತಾರ. ಕಾಗಸ್ವಾಮಿ ಬಂದು ಯಾನಾಯ್ತು ಅಂದ್ರ, ಇವ್ರೆಲ್ಲಾವಿ 'ಮಳ ಹೂದು ರೂಮು ಸೋರ್ತದ. ನಮ್ಗ ಇನ್ನೂ ಬಲಿಷ್ಠವಾದ ರೆಕ್ಕೆ ಕೊಡು, ಬೇಗ ಬೇಗ ಹಾರಿ ಮಳೆಯಿಂದ ತಪ್ಪಿಸ್ಕಂತೀವಿ' ಅಂತ ಬೇಡ್ತಾರ.

'ಈಗ ಕೊಟ್ಟಿರೋ ರೆಕ್ಕೆ ಅಲ್ದೆಯಾ ಬ್ಯಾರೆದು ಕೊಡ್ಬೇಕಾ ನಿಮ್ಗ' ಅಂತ ಕೋಪ ಮಾಡ್ಕಂಡು ಇರೋ ರೆಕ್ಕೆನೂ ಕಿತ್ಗಂಡೋಯ್ತನ. ಆವಾಗ ಎಲ್ರೂವಿ ಕಿಟ್ಕಿಯ ಕಲ್ದು ಮೊಳ ಹೊಡ್ದು ರೆಕ್ಕೆ ಮಾಡ್ತಾರ. ಕಿಟ್ಗಿಗ 'ಜೋರಾಗಿ ರೆಕ್ಕೆಯ ಬೀಸು, ಇಲ್ಲಾಂದ್ರ ನಾವೆಲ್ಲಾವಿ ಬಿದ್ದೋಯ್ತಿವಿ' ಅಂದಿದ್ದೆ ಕಿಟ್ಕಿ ರೆಕ್ಕೆಯಾಗಿ ಬೀಸ್ತದ. ಮತ್ತೂ ಮೇಲಕ್ಕ ಹಾರ್ತರ.

ಮುಂದಕ್ಕ ವೋಯ್ತಾ ವೋಯ್ತ ಕಿಟ್ಕಿಗ ಸುಸ್ತಾಗತ್ತ. ಆಗ ಗಾಳಿ ಇವ್ರು ಹಾರೋದ್ನ ನೋಡಿ 'ವಿಮಾನ, ಹಕ್ಕಿ, ಹೆಲಿಕಾಪ್ಟ್ರು ಹಾರೋದ್ನ ನೋಡಿನಿ. ಇದ್ಯಾನ ರೂಮು ಹಾರ್ತದ! ಎಲ್ಲಿಗೋಯ್ತಿರಿ?' ಅಂತ ಕೇಳ್ತು. ಎಲ್ರೂವಿ 'ನಾವು ನಕ್ಷತ್ರಲೋಕಕ್ಕ ಟೂರ್ಗ ಒಯ್ತಿವಿ. ನಮ್ಗ ಹಾರಕ ಕಷ್ಟ ಆಯ್ತದ ವಸಿ ಹೆಲ್ಪ್ ಮಾಡು' ಅಂತ ಕೇಳ್ಕತರ. ಗಾಳಿ ಅವ್ರಿಗ ಹೆಲ್ಪ್ ಮಾಡಾಕ ಬತ್ತು. ಆಗ ಕಾಗಸ್ವಾಮಿ ಬಂದ್ಬುಟ್ಟು 'ನೀನು ಅವ್ರಗ ಹೆಲ್ಪು ಮಾಡ್ ಬ್ಯಾಡ' ಅಂದ್ರೂ ಗಾಳಿ ಕಾಗಸ್ವಾಮಿ ಮಾತ್ನ ಕೇಳ್ದೆ ಹೆಲ್ಪ್ ಮಾಡ್ತದ.

ಮೇಲೆ ಮೇಲೆ ಹಾರ್ತ ನಕ್ಷತ್ರಲೋಕಕ್ಕ ಹತ್ರ ಆಗ್ತರ. ಆವಾಗ ಚಾಕ್ಪೀಸು ಇಣ್ಕಿ ನೋಡ್ವಾಗ ಕೆಳ್ಕ ಬೀಳತ್ತ. ಕಾಗಸ್ವಾಮಿ ಆ ಚಾಕ್ಪೀಸ್ನ ದೆಯ್ಯ ಮಾಡಿ 'ಅವ್ರ್ ಟೂರ್ನ ಕೆಡ್ಸು' ಅಂತಾನ. ಆ ದೆಯ್ಯ ಹೋಗಿ ರೆಕ್ಕಗ ಅಗತ್ಕಂಡು ಎತ್ತೆತ್ತಗೋ ಹಾರಿಸ್ತದ. ಅವ್ರು ನಕ್ಷತ್ರಲೋಕಕ್ಕ ಮತ್ತ ದೂರ ಆಗ್ಬುಡ್ತರ. ಎಲ್ರಿಗೂ ಭಯ ಆಗುತ್ತ. ಆಗ ಪೊರಕೆ ಹೋಗಿ ರೆಕ್ಕೆಗ ಚೆನ್ನಾಗ್ ಬಾರಿಸ್ತದ. ಆ ಏಟ್ಗ ಚಾಕ್ಪೀಸಿನ ದೆಯ್ಯ ಬುಟ್ಹೋಗಿ ಸರಿ ಆಗಿ ತಿರ್ಗ ನಕ್ಷತ್ರಲೋಕಕ್ಕ ಫಾಸ್ಟಾಗಿ ಹಾರ್ತರ.

ಎಲ್ರೂವಿ ಬಂದು ನಕ್ಷತ್ರಲೋಕದ ಮೇಲ ಲ್ಯಾಂಡ್ ಅಯ್ತರ. ಒಂದ್ಕಡ ಚಿನ್ನದ ಗಿಡ ಮರ್ಗಳು ಓಡಾಡ್ತವ. ಇನ್ನೊಂದ್ಕಡ ವಜ್ರದ ಬೆಟ್ಟ. ಅಲ್ಲೇ ಹಾಲಿನ ಹೊಳೆ ಹರಿತದ. ಅದ್ರ ಪಕ್ಕಕ್ಕ ಜೇನಿನ ಕೊಳ ಅದ. ಅಲ್ಲೊಂದ್ ಕೇಳಿದ್ನ ಕೊಡೋವಂತ ಬಾವಿ ಇತ್ತು. ಇದ್ನೆಲ್ಲಾ ನೋಡ್ತ ಚಾಕ್ಪೀಸು ಹಾಲು ಕುಡಿತಿನಿ ಅಂದ್ಕ ಹೊಳೆಗ ಇಳಿತು. ಜಾರಿ ಬಿದ್ಕಂತು. ಮುಳುಗ್ತಾ ಇರುವಾಗ 'ಕಾಪಾಡಿ ಕಾಪಾಡಿ' ಅಂದ್ಕ ಕೂಗ್ತಿತ್ತು. ಫ್ರೆಂಡ್ಸೆಲ್ಲ ಕೂಗಿದ್ರು.

ಬೆಂಚ್ಗಳು ಬಾವಿ ಹತ್ರಕ್ಕ ಹೋಗ್ಬುಟ್ಟು 'ನಂ ಫ್ರೆಂಡು ಮುಳಿಕತನ, ಹೆಂಗಾರೂ ಮಾಡಿ ಕಾಪಾಡು' ಅಂತ ಬೇಡ್ಕಂಡ್ರು. ಆಗ ಬಾವಿ ಒಳಗಿಂದ ಸೌಂಡು ಬತ್ತು. ನೀರೆಲ್ಲ ಸೇರಿ ದೊಡ್ಡದೊಂದು ಕೈ ಆಗಿ ಹೊಳೇಲಿ ಮುಳುಗ್ತಿದ್ದ ಚಾಕ್ಪೀಸನ್ನು ಹಿಡ್ದು ಎತ್ತಿದ್ರ ಅಲ್ಲಿ ಮರಿ ನಕ್ಷತ್ರ ಇತ್ತು. ಫ್ರೆಂಡ್ಸೆಲ್ಲ ಕೂಗಿದ್ರು 'ಇದು ನಂ ಫ್ರೆಂಡಲ್ಲ'. ಆಗ ಮರಿ ನಕ್ಷತ್ರ ಹೇಳ್ತು 'ನಾನೇಕಪ್ಪ ನಿಂ ಫ್ರೆಂಡು'. ಆದ್ರ ಇವ್ರು ಅಲ್ಲ ಅಂದ್ರು. ಆಗ ಬಾವಿ ಮಾತಾಡ್ತು.

'ಇಲ್ಲಿ ಯಾರೇ ಹಾಲಿನ ಹೊಳೆಗ ಬಿದ್ರೂ ಮರಿ ನಕ್ಷತ್ರ ಅಯ್ತುರ' ಅಂತಾದ. ಇವ್ರೆಲ್ಲ 'ಮತ್ತೀಗ ಯಾನ್ ಮಾಡೋದು' ಅಂತ ಕೇಳುದ್ರ ಅದ್ಕ ಬಾವಿ, 'ಇಲ್ಲಿರೋ ಜೇನಿನ ಕೊಳದಾಗ ಮುಳುಗಿಸಿದ್ರ ಮೊದ್ಲಿನಂಗ ಅಯ್ತುರ' ಅಂತಾದ. ಮರಿ ನಕ್ಷತ್ರನ್ನ ಜೇನಿನ ಕೊಳದಾಗ ಮುಳುಗಿಸಿ ಮ್ಯಾಕ್ಕೆ ತಗುದ್ರ ಅಲ್ಲಿ ಚಾಕ್ಪೀಸು ಇರುತ್ತ. ಅದು ಓಡ್ಬಂದು ಫ್ರೆಂಡ್ಸನ್ನ ತಬ್ಕಳತ್ತ. ಬಾವಿಯಿಂದ ಬಂದ ಕೈ ತಿರ್ಗ ವೊಂಟೋಯ್ತದ.

❖

ಚಿಣ್ಣರ ಚಿನ್ನರು

ತನುಶ್ರೀ ಯೋಗದ ಈ ಪರಿ

ಯೋಗ ಹಾಗೂ ನೃತ್ಯ ಪ್ರತಿಭೆಯ ಮೂಲಕ ಏಳು ದಾಖಲೆಗಳನ್ನು ನಿರ್ಮಿಸಿದ್ದಾಳೆ ಉಡುಪಿಯ ಪಿತ್ರೋಡಿಯ ಪೋರಿ ತನುಶ್ರೀ. ಸಂಧ್ಯಾ ಹಾಗೂ ಉದಯ್ ಕುಮಾರ್ ದಂಪತಿಯ ಪುತ್ರಿಯಾಗಿರುವ ತನುಶ್ರೀ ಪ್ರಸ್ತುತ ಉಡುಪಿಯ ಸೇಂಟ್ ಸಿಸಿಲಿಸ್ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದಾಳೆ. 2017ರ ನ.11ರಂದು 'ನಿರಾಲಾಂಭ ಪೂರ್ಣ ಚಕ್ರಾಸನ' ಭಂಗಿಯನ್ನು 1 ನಿಮಿಷಕ್ಕೆ 19 ಬಾರಿ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಖಾತೆ ತೆರೆದ ತನುಶ್ರೀ ಹಿಂದಿರುಗಿ ನೋಡಿಲ್ಲ.

2018ರಲ್ಲಿ 'ಮೋಸ್ಟ್ ಫುಲ್ ಬಾಡಿ ರೆವಲ್ಯೂಷನ್ ಮೇಂಟೇನಿಂಗ್ ಎ ಚೆಸ್ಟ್ ಸ್ಟಾಂಡ್ ಪೊಸಿಷನ್' ಭಂಗಿಯನ್ನು 1 ನಿಮಿಷದಲ್ಲಿ 42 ಬಾರಿ ಪ್ರದರ್ಶಿಸಿ ಗಿನ್ನೆಸ್ ವರ್ಲ್ಡ್ ರೆಕಾರ್ಡ್ ಮಾಡಿದ್ದಾಳೆ. ಅದೇ ವರ್ಷ ಇಟಲಿಯ ರೋಮ್‌ನಲ್ಲಿ ಯೋಗ ಸಾಧಕರೊಂದಿಗೆ ಯೋಗ ಪ್ರದರ್ಶನ ನೀಡಿದ್ದಾಳೆ. ಧನುರಾಸನ, ಚಕ್ರಾಸನದಲ್ಲೂ ದಾಖಲೆ ಬರೆದಿದ್ದಾಳೆ. 43.18 ನಿಮಿಷಗಳಲ್ಲಿ 245 ಯೋಗ ಭಂಗಿಗಳ ಪ್ರದರ್ಶಿಸಿ ಗಮನ ಸೆಳೆದಿದ್ದಾಳೆ ಈ ಪೋರಿ. ಮೂರರ ಪ್ರಾಯದಲ್ಲೇ ವೇದಿಕೆ ಮೇಲೆ ನೃತ್ಯ ಮಾಡಿ ಸೈ ಎನಿಸಿಕೊಂಡು ರಾಜ್ಯಮಟ್ಟದ ನೃತ್ಯ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದು, ಇದುವರೆಗೂ 425 ನೃತ್ಯ ಕಾರ್ಯಕ್ರಮಗಳನ್ನು ನೀಡಿ ನಾಟ್ಯಮಯೂರಿ ಬಿರುದು ಪಡೆದಿದ್ದಾಳೆ. ತುಳು ಸಾಹಿತ್ಯ ಅಕಾಡೆಮಿಯಿಂದ ವಿಶೇಷ ಬಾಲಪ್ರತಿಭೆ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಬಾಲಕಿಯ ಮುಡಿಗೇರಿದೆ.

❖

ಮನಸೆಳೆಯುವ ಮೋಹನದಾಸ



ಮಹಾತ್ಮ ಗಾಂಧಿ ಬಾಲ್ಯ ಜೀವನ ಆಧರಿಸಿ ಪಿ.ಶೇಷಾದ್ರಿ ಅವರು ನಿರ್ದೇಶಿಸಿದ ಸಿನಿಮಾ 'ಮೋಹನದಾಸ'ದಲ್ಲಿ, ಗಮನಸೆಳೆಯುವ ಅಭಿನಯ ನೀಡಿದ ಬಾಲಕ ಮೈಸೂರಿನ ಕಿಶೋರ ಪರಮ್‌ಸ್ವಾಮಿ.'ನನಗೆ ನಾಟಕ, ಹಾಡು ಎಂದರೆ ಇಷ್ಟ. ಅಮರಚಿತ್ರ ಕಥಾ ಪುಸ್ತಕದಲ್ಲಿ ಗಾಂಧಿ ಬಗ್ಗೆ ಓದಿದ್ದೆ ಅಷ್ಟೆ. ಸಿನಿಮಾದಲ್ಲಿ ಪಾತ್ರ ಮಾಡುವಾಗ ಗಾಂಧಿ ಮತ್ತಷ್ಟು ಇಷ್ಟವಾದರು. ಎಲ್ಲ ಮನುಷ್ಯರಂತೆ ಗಾಂಧಿ ತಪ್ಪು ಮಾಡಿದ್ದಾರೆ. ನಾವು ತಪ್ಪನ್ನು ಮುಚ್ಚಿಡುತ್ತೇವೆ. ಆದರೆ, ಗಾಂಧಿ ಸತ್ಯ ನುಡಿದರು. ಹೀಗಾಗಿ ಧೈರ್ಯವಾಗಿ ಬ್ರಿಟಿಷರನ್ನು ಎದುರಿಸಿದರು' ಎಂದು ಈ ಪುಟಾಣಿ ಕಣ್ಣು ಮಿಟುಕಿಸುತ್ತಾ ಹೇಳುತ್ತಾನೆ. ಪರಮ್ ತಾಯಿ ದೀಪಾ ರಂಗಭೂಮಿ ನಟಿ, ತಂದೆ ಎನ್.ರವಿಶಂಕರ್ ಲೇಖಕ. 'ಮುಂದೆ ಏನಾಗಬೇಕೆಂದು ಕೊಂಡಿದ್ದೀಯ' ಎಂದು ಪ್ರಶ್ನಿಸಿದರೆ, 'ಒಳ್ಳೆಯ ಮನುಷ್ಯ ಆದರಷ್ಟೇ ಸಾಕು' ಎಂದು ಉತ್ತರಿಸುತ್ತಾನೆ.

❖

ನೆನಪಿನ ಶಕ್ತಿಯ ಪೋರಿ

ಮೂರೂವರೆ ವರ್ಷದ ಪುಟಾಣಿ ಪ್ರತೀಕ್ಷಾ ಬಿರಾದಾರ. ಆದರೆ, ಅವಳು ಮಾತನಾಡಲು ನಿಂತರೆ ನೂರು ವರ್ಷದವರೂ ಬೆರಗಾಗಬೇಕು.

ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು ಪಟಪಟನೆ ಹೇಳುವ ಆಕೆ, ದೇಶದೆಲ್ಲ ರಾಜ್ಯಗಳ ರಾಜಧಾನಿಗಳ ಹೆಸರುಗಳನ್ನೂ ಹೇಳುತ್ತಾಳೆ.

'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್', 'ಕರ್ನಾಟಕ ಅಚೀವರ್ಸ್ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ಅವಳ ಹೆಸರು ಸೇರ್ಪಡೆಯಾಗಿದೆ. ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಪರಸನಹಳ್ಳಿಯ ಶಾಂತಗೌಡ ಮತ್ತು ವಿದ್ಯಾಶ್ರೀ ಅವರ ಪುತ್ರಿ ಪ್ರತೀಕ್ಷಾಳ ನೆನಪಿನ ಶಕ್ತಿ ಅಗಾಧವಾಗಿದೆ. ಸ್ವಾತಂತ್ರ್ಯ ಭಾರತದ ವೀರ ಮಹಿಳೆಯರು, ಸಾಕುಪ್ರಾಣಿಗಳು, ಕಾಡು ಪ್ರಾಣಿಗಳು, ವಾಹನಗಳು, ಶರೀರದ ಭಾಗಗಳು, ಹೂವುಗಳು, ತರಕಾರಿಗಳು, ಹಣ್ಣುಗಳ ಹೆಸರು ಹೇಳುತ್ತಾಳೆ. ಮುಂದೆ ಜಿಲ್ಲಾಧಿಕಾರಿ ಆಗಬೇಕೆಂಬ ಆಸೆ ಹೊಂದಿದ್ದಾಳೆ.

❖

ಅಭಿನಯದಲ್ಲಿ ಹಿತಾನುಭವ

ರತ್ನಪಕ್ಷಿ, ಪಂಜರಶಾಲೆ, ಅಳಿಲು ರಾಮಾಯಣ, ಅಲಿಬಾಬಾ– ನಲವತ್ತು ಕಳ್ಳರು ಸೇರಿದಂತೆ ಹತ್ತಾರು ನಾಟಕಗಳಲ್ಲಿ ಅಭಿನಯಿಸಿದ ಮೈಸೂರಿನ ಹಿತಾ ರಾಗ, ಶಾಸ್ತ್ರೀಯ ಸಂಗೀತ ಹಾಗೂ ಭರತನಾಟ್ಯದ ಭರವಸೆಯ ಕಲಾವಿದೆ. ಬಿ.ಸುರೇಶ ಅವರ 'ಪುಟ್ಟಕ್ಕನ ಹೈವೇ' ಚಿತ್ರಕ್ಕೆ ಹಿತಾ ಆಯ್ಕೆಯಾದಾಗ ಅವಳಿಗೆ ಮೂರು ವರ್ಷವಷ್ಟೆ. ಆ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿಯೂ ಸಿಕ್ಕಿತು. ಗೋಕುಲ ಕೃಷ್ಣ, 'ಇದೊಳ್ಳೆ ರಾಮಾಯಣ'ದಲ್ಲಿ ಹಿತಾಳದ್ದು ಗಮನ ಸಳೆಯುವ ಅಭಿನಯ.

ಓದಿನ ಜೊತೆಗೆ ರಂಗಭೂಮಿಯಲ್ಲಿ ಸದಾ ಸಕ್ರಿಯ. ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ರಾಷ್ಟ್ರೀಯ ನಾಟಕೋತ್ಸವದಲ್ಲೂ ನಾಟಕ ಪ್ರದರ್ಶನ ನೀಡಿದ್ದಾಳೆ. ಹಿತಾಳ ತಾಯಿ ಶಿಲ್ಪಾಮೂರ್ತಿ– ನ್ಯಾಯಾಲಯದಲ್ಲಿ ಶೀಘ್ರ ಲಿಪಿಕಾರ್ತಿ, ತಂದೆ ರಾಘವೇಂದ್ರ ರಾಜೇ ಅರಸ್ ರಂಗಭೂಮಿ, ಕಿರುತೆರೆ ನಟ. ಹಿತಾಗೆ ಚಾರಣದಲ್ಲೂ ವಿಶೇಷ ಆಸಕ್ತಿ– ಬರಪೋಲ್, ಕೆಮ್ಮಣ್ಣುಗುಂಡಿ, ಅಘನಾಶಿನಿ, ಎತ್ತಿನಭುಜ ಪ್ರವಾಸ ಮಾಡಿದ್ದಾಳೆ. ಭಾರತೀಯ ವಾಯುಸೇನೆ ಸೇರುವುದು ಈಕೆಯ ಚಿಕ್ಕಂದಿನ ಕನಸು.

❖

ಚಿಣ್ಣರ ಚಿನ್ನರ ಕಥೆ ಕಟ್ಟಿಕೊಟ್ಟವರು: ಸಂಧ್ಯಾ ಹೆಗಡೆ, ಮೋಹನ್ ಕುಮಾರ ಸಿ., ಬಿ.ಜಿ. ಪ್ರವೀಣ್ ಕುಮಾರ್, ಬಾಲಚಂದ್ರ ಎಚ್.

ಕ ಚ ಟ ತ ಪ ಹಾಡು...

ಅಕ್ಷತಾ ಕೃಷ್ಣಮೂರ್ತಿ

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಅಣಶಿ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಶಾಲೆಯ ಕುಣಬಿ ಬುಡಕಟ್ಟು ಮಕ್ಕಳಿಗೆ ಈ ಶಿಕ್ಷಕಿ ಕಾಗುಣಿತ ಕಲಿಸಲು ಕಟ್ಟಿದ ಹಾಡುಗಳಿವು...

ಕಲೆ: ಭಾವು ಪತ್ತಾರ್

ಕ

ಕರಿಕರಿ
ಕಾಗೆ
ಕಿರಿಕಿರಿ ಮಾಡುತ
ಕೀಲು ಗೊಂಬೆಯಾಗಿತ್ತು
ಕುಹು ಕುಹು
ಕೂಗಲು ಆಗದೆ ಇರಲು
ಕೃ ಕೃ ರಾಗವ ಹಾಡಿತ್ತು
ಕೆಲಸದ ನಡುವೆ
ಕೇಕೆಯ ಹಾಕುತ
ಕೈ ಕೈ ಕುಲುಕಿತ್ತು
ಕೊಕ್ಕಿನ ತುದಿಗೆ
ಕೋಳಿ ಮಾಂಸ ಸಿಕ್ಕಿಸಿಕೊಂಡಿತ್ತು
ಕೌದಿಯ ಹೊದ್ದ ಕಾಗೆಗೀಗ
ಕಂಬಳಿ ಬೇಕಿತ್ತು
ಕಃ ಕಃ ಎನ್ನುತ ಕೆಮ್ಮಿದಾಗ
ಮಾಂಸ ಜಾರಿತ್ತು
ಕ ದಿಂದ ಕಃ ವರೆಗೆ
ಕಾಗೆಯ ಡೈರಿ
ಹೀಗೆ ಮುಗಿದಿತ್ತು

ಚ

ಚಕೋರ ಹಕ್ಕಿಯ ಕೇಳು
ಚಾಮರ ಬೀಸುವ ಹಾಡು
ಚಿಗುರು ತುಂಬುವ ಗತ್ತು
ಚೀಕು ಪದಗಳ ಹೊತ್ತು
ಚುಕ್ಕಿಯು ನಗುತ ನಿಂತಿಹಳಿಲ್ಲಿ
ಚೂರು ನಗೆಯ ಸುತ್ತಲು ಚೆಲ್ಲಿ
ಚೆಲುವಿನ ಆಟಕೆ ಕರೆಯುವಳು
ಚೇತನ ತುಂಬುತ ನಲಿಯುವಳು
ಚೃ ಚೃ ಎಂದು ಹಾಡಿತ್ತೀಗ
ಚೈತ್ರನು ಕಾಣಲು ಬಂದಿಹನೀಗ
ಚೊಚ್ಚಲ ಪ್ರೀತಿಯ ಹಂಚಿಹನು
ಚೋದ್ಯದ ಆಟವ ಆಡುವನು
ಚೌಕಿಮನೆಯಲಿ ನಗುವಿತ್ತು
ಚಂದಿರ ತಣ್ಣಗೆ ಮರಳಿತ್ತು
ಚಃ ದ ಪರಿಮಳ ಮನೆ ತುಂಬಿತ್ತು

ಟ

ಟಪೋರಿ ಪೋರಿ ಕಣ್ಣು ಹೊಡೆದು
ಟಾಟಾ ಎಂದಿತ್ತ
ಟಿಕ್ಲಿ ಪೌಡರ್ ಲಿಪಸ್ಟಿಕ್ ಬಡಿದು
ಟೀಕುಟಾಕು ಆಗಿತ್ತ
ಟುವಾಲು ವ್ಯಾನಿಟಿ ಬ್ಯಾಗನು ಹಾಕಿ
ಟೂರಿಂಗ ಟಾಕೀಜಿಗೆ ಹೋಗಿತ್ತ
ಟೃ ಟೃ ಎಂದು ಪಕ್ಕದ್ಮನೆ ಆಂಟಿ ಕಣ್ ಕೆಂಪು ಮಾಡಿತ್ತ
ಟೆಂಗಾ ಎಂದು ಹೆಬ್ಬೆಟ್ಟ ತೋರ್ಸಿ ಕೀಟಲೆ ಮಾಡಿತ್ತ
ಟೇಲರ್ ಆಗಿ ಹೊಲಿಗೆ ಕಲಿತು
ಟೈಸನ್‌ಗೆ ಅಂಗಿ ಹೊಲೆದಿತ್ತ
ಟೊಣಪ ಎನ್ನುತ ನಾಯಿಮರಿಗೊಂದು
ಟೋಪಿಯ ಹಾಕಿತ್ತ
ಟೌನ್‌ಶಿಪ್ ತಿರುಗಿ
ಟಂ ಟಂ ಗಾಡಿ ಏರಿ ಬಿನ್ನಾಣ ಮಾಡುತ್ತಿತ್ತ
ಟಃ ಟಃ ಹಾಡು ಹಾಡುತ್ತಿತ್ತ

ತ

ತಳಪ ಎಂಬ ಊರು ಇಲ್ಲೆ ಹತ್ರ ಇದೇರಿ
ತಾಯಿ ಜೊತೆ ಅಣ್ಣ ತಮ್ಮ ಮಾಣಿ ಇದ್ದಾರ್ರಿ
ತಿನ್ನಲು ಕೊಡು ಎನ್ನುತ ಮಾಣಿ ಬಂದಾನ್ರಿ
ತೀಜೋರಿಲಿ ಒಂದೇ ಪ್ಯಾಕು ಜೀಲೆಬಿ ಇತ್ತೂರಿ
ತುಮಿ ಹಮಿ ಎನ್ನುತ್ತ ಜಗಳ ಆಡ್ಯಾರ್ರಿ
ತೂತಿರೊ ಜೀಲೆಬಿಗೆ ಭಾರಿ ಬೇಡಿಕೇರಿ
ತೃಪ್ತಿಯಿಂದ ತಿನ್ನೊಕಂತು ಇವ್ರು ಬಿಡೊಲ್ಲಾರಿ
ತೆಪ್ಪಗಿದ್ದ ಮಾಣಿ ಮಾತ್ರ ಹುಷಾರ್ ಆಗ್ಯಾನ್ರಿ
ತೇರಿನ ದಿನವೆ ದೊಡ್ಡ ಪರೀಕ್ಷೆ ಪಾಸ್ ಮಾಡ್ಯಾನ್ರಿ
ತೈನಿ ಮಾಡಾಕ ಹತ್ತಾನ್ರಿ ದುಡ್ ಗಳ್ಸಾಕ ಹತ್ತಾನ್ರಿ
ತೊಡೆ ತಟ್ಟಿ
ತೋಟದ ಕೆಲ್ಸ ಪಸಂದ ಮಾಡ್ಯಾನ್ರಿ
ತೌರು ಈಗ ಮೊದಲಿಗಿಂತ ಚಂದ್ ಆಗೇದ್ರಿ
ತಂಪು ಸುತ್ತಮುತ್ತ ಎದ್ದು ಹಸಿರು ಉಂಟಲ್ರಿ
ತಃ ತಃ ಎನ್ನುತ್ತ ಈ ಕಥೆ ಮುಗಿಸುವಾ ರೀ

ಪ

ಪಟಪಟ ಬಡಿಯುವ
ಪಾಪು ಕಣ್ಣು
ಪಿಳಿಪಿಳಿ ನೋಡಿತ್ತು
ಪೀಪಿಯ ಊದಿ
ಪುಳಕದಿಂದಲಿ
ಪೂನಗೆ ಚೆಲ್ಲಿ
ಪೃ ಪೃ ಎಂದಿತ್ತು
ಪೆಟ್ಟಿಗೆ ಒಳಗಿನ
ಪೇರಲೆ ಹಣ್ಣು
ಪೈಜಾಮು ಸೇರಿತ್ತು
ಪೊತ್ತು ಪೊತ್ತಿಗೂ
ಪೋಷಾಕು ಪೋರಿ
ಪೌಡರ್ ಹಚ್ಚಿತ್ತು
ಪಂಚಮಿ ಹಬ್ಬಕ್ಕೆ ಕರೆದಿತ್ತು
ಪಃ ಎನ್ನುತ್ತು ನಕ್ಕಿತ್ತು.

ಪಾಪ, ಕಾಡುಪಾಪ

10ನೇ ಪುಟದಿಂದ...

'ಫಾಯರ್ ಅಲ್ಲ, ಎಫ್‌ಐಆರ್! ಹಿಂಗಿಂಗಾಯ್ತು ಅಂತ ಪೊಲೀಸರಿಗೆ ಹೇಳಿಕೆ ಕೊಡಬೇಕು; ಅದು ಬಿಡಿ. ಮತ್ತೆಲ್ಲಿಗೆ ಹೋದ್ರಿ? ವಿಧಾನ ಸೌಧಕ್ಕೆ?' ಕೇಳಿದಳು ನೀಲಿ.

'ಐ! ಅಲ್ಲಿಗೆ ಹೋಗೋಕೆ ಭಯ! ಹೆಜ್ಜೇನು ಗೂಡಿಗೆ, ಪಾರಿವಾಳಕ್ಕೆ ವಿಷ ಹೊಡೆದು ಸಾಯಿಸಿದ ಹಂಗೆ ನಮಗೂ ಹೊಡೆದ್ರೆ?' ದಿಗಿಲುಬಿದ್ದ ಬಾವಲಿ ಬಾಯಿ ಹಾಕಿತು.

'ಆಮೇಲೆ ಪ್ರೆಸ್ ಕ್ಲಬ್ಬಿಗೆ ಹೋದ್ವಿ. ನಮ್ ಕಷ್ಟದ ಬಗ್ಗೆ ಪ್ರಚಾರ ಕೊಡಿ, ಸುದ್ದಿ ಮಾಡಿ ಅಂತ ಕೇಳಿದ್ವಿ. ಇಷ್ಟು ಬೆಳಿಗ್ಗೆ ಬೆಳಿಗ್ಗೆ ಬಂದ್ರೆ ಹ್ಯಾಂಗೆ, ಹನ್ನೊಂದರ ಮೇಲೆ ಬನ್ನಿ; ಟಿವಿಯವರು, ಪ್ರೆಸ್‌ನವರು ಯಾರಾದರೂ ಇರ್ತಾರೆ' ಅಂತ ಹೇಳಿದ್ರು. ಯಾವುದಕ್ಕೂ ಇದನ್ನ್ ಇಟ್ಕೊಂಡಿರಿ ಅಂತ ಈ ಪೇಪರ್ ತುಂಡು ಕೊಟ್ರು... ಏನಮ್ಮಾ ಇದು?

ನೀಲಿ ಅದನ್ನು ಹಿಡಿದು ಅತ್ತ ಇತ್ತ ತಿರುಗಿಸಿ ನೋಡಿ ವಾಪಸ್ ಕೊಟ್ಲು. 'ಸಾರಿ ಕಣಮ್ಮ. ನನಗೆ ಕನ್ನಡ ಓದೋಕೆ ಬರಲ್ಲ; ನಂದು ಇಂಗ್ಲಿಷ್ ಮೀಡಿಯಮ್ಮು. ಕನ್ನಡ ಮಾತಾಡ್ತೀನಿ ಅಷ್ಟೆ' ಅಂದ್ಲು.

'ಇಲ್ಲಿಗೆ ಬರೋ ಪ್ರವಾಸಿಗಳು ತೆಲುಗು, ಉರ್ದು, ತಮಿಳು, ಹಿಂದಿ, ಮಾತಾಡ್ತಾರೆ; ಕನ್ನಡ ಗೊತ್ತಿರೋರು ಕಮ್ಮಿ. ಮತ್ಯಾರಿದಾರೆ ನಮಗೆ ಸಹಾಯ ಮಾಡೋಕೆ?' ಕೇಳಿತು ನೀರ್‌ಕಾಗೆ.

ಅಷ್ಟರಲ್ಲಿ ಅಮ್ಮ ಕಾಡುಪಾಪ, 'ನಾನು ಓದ್ತೀನಿ ಕೊಡು' ಅಂತ ಆ ಕಾಗದಾನ ಇಸ್ಕೊಂಡ್ಲು. ಅದರಲ್ಲಿ 'ಪ್ರಜಾವಾಣಿ- ಕ್ಯೂಪಾ ಸಹಯೋಗ' ಅಂತ ಒಂದು ಸುದ್ದಿ ಇತ್ತು. ಪಟಾಕಿಯಿಂದ ತೊಂದರೆ ಆದರೆ ಕ್ಯೂಪಾ ಸಹಾಯಕ್ಕೆ...'

'ಹೋ, ಗೊತ್ತಾಯ್ತು ಗೊತ್ತಾಯ್ತು; ಕ್ಯೂಪಾ ಎಲ್ಲಿದೆ ಅಂತ ಗೊತ್ತು; ಹಲಸೂರ್ ಕೆರೆ ಪಕ್ಕದಲ್ಲಿ ಅವರು ವನ್ಯಪ್ರಾಣಿಗಳ ಆಸ್ಪತ್ರೆ ನಡೆಸ್ತಾರೆ' ಎಂದಳು ನೀಲಿ.

'ನಾನು ಪುಟ್ಟ ಪಾಪಾನ್ನ ಒಯ್ತೀನಿ ಅಲ್ಲಿಗೆ' ಎಂದಿತು ಬಾವಲಿ. ಆದರೆ ಕಾಡುಪಾಪ ಒಪ್ಪಲಿಲ್ಲ. 'ಮೂರು ದಿನದಿಂದ ಊಟಾನೂ ಇಲ್ಲ, ನಿದ್ದೆನೂ ಇಲ್ಲ; ನನ್ ಮಗೂನ್ನ ಎಲ್ಲಾದ್ರೂ ಬೀಳಿಸಿ ಬಿಟ್ರೆ?' ಕೇಳಿತು.

'ಚಿಂತೆ ಮಾಡಬೇಡ; ಇಲ್ಲೇ ಪಕ್ಕದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ಮ್ಯೂಸಿಯಂನಲ್ಲಿ ಒಂದು ಡ್ರೋನ್ ಇದೆ. ಅದನ್ನ ಚಾಲೂ ಮಾಡಿ ಇತ್ತ ತಗೊಂಡ್ ಬಾ' ಅಂತ ನೀಲಿ ಬಾವಲಿಗೆ ಹೇಳಿದಳು. ಹೇಳಿ, ನೀಲಿ ತಾನು ತಲೆಗೆ ಕಟ್ಟಿಕೊಂಡಿದ್ದ ಬಟ್ಟೆಯನ್ನು ಬಿಚ್ಚಿ ತೊಟ್ಟಿಲು ಮಾಡಿದ್ಲು. ಹತ್ತೇ ನಿಮಿಷದಲ್ಲಿ ಬಂದ ಆ ಡ್ರೋನ್‌ಗೆ ಆ ತೊಟ್ಟಿಲನ್ನು ಕಟ್ಟಿ, ಬಾವಲಿಯನ್ನೂ ಕೂರಿಸಿ ನೀಲಿ ಆ ಪುಟ್ಟ ಯಂತ್ರವನ್ನು ಹಾರಿ ಬಿಟ್ಟಳು.

ಎಲ್ಲರೂ ಕೈಬೀಸುತ್ತಿದ್ದಾಗ 'ನೀ ಹ್ಯಾಗೆ ಕನ್ನಡ ಓದೋದನ್ನ ಕಲ್ತೆ?' ಅಂತ ಕಾಡುಪಾಪಂಗೆ ನೀಲಿ ಕೇಳಿದಳು.

'ಇದೇ ಕಬ್ಬನ್ ಪಾರ್ಕಿನಲ್ಲಿ ಕೇಂದ್ರ ಗ್ರಂಥಾಲಯ ಇದೆ. ಅಲ್ಲೇ ಪಕ್ಕದಲ್ಲಿ ಮಕ್ಕಳಿಗಾಗಿ ವಿಶೇಷ ವಾಚನಾಲಯ ಇದೆ. ನಾವೆಲ್ಲ ಹಗಲೂ ರಾತ್ರಿ ಅಲ್ಲೇ ಸುಳೀತಾ ಇರ್ತೀವಿ. ನೀನೂ ಕನ್ನಡ ಓದೋದನ್ನು ಕಲಿ- ಇದು ಕನ್ನಡ ತಿಂಗಳು ಅಲ್ವಾ?' ಅಂತ ಹೇಳಿತು ಮುಂಗುಸಿ.

ಅತ್ತು ಅತ್ತು ಕಣ್ಣು ಕೆಂಪಾಗಿದ್ದರೂ ಅಮ್ಮ ಕಾಡುಪಾಪ ನಕ್ಕಳು ಮುಸಿಮುಸಿ.

❖

ನೆಲಮೂಲದ ಕವಿಗೆ 75!



ಪ್ರೊ. ಎಸ್.ಜಿ ಸಿದ್ಧರಾಮಯ್ಯ

ಕೆ.ವೈ. ನಾರಾಯಣಸ್ವಾಮಿ

'ಎಲ್ಲಿ ಮುಟ್ಟಿದರಲ್ಲಿ ನೆಲದ ಹೊಕ್ಕುಳ ಬಳ್ಳಿ' ಎಂದು ಮಣ್ಣ ಸಂಹಿತೆಯನ್ನು ಹಾಡುತ್ತ ಬಂದ ಕವಿ ಸಿಂಗಾಪುರ ಗುರುಭಕ್ತಯ್ಯ ಸಿದ್ಧರಾಮಯ್ಯ (ಎಸ್‌ಜಿಎಸ್). 'ಗಾಲ್ಫ್ ಉಬ್ಬಿನ ಮೇಲೆ' ಎನ್ನುವ ಮೊದಲ ಕವಿತಾ ಸಂಕಲನದ ಮೂಲಕ ಕನ್ನಡ ಕಾವ್ಯ ಪ್ರಪಂಚವನ್ನು ಪ್ರವೇಶ ಮಾಡಿದವರು ಎಸ್‌ಜಿಎಸ್. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಿಂಗಾಪುರ ಎಂಬ ಪುಟ್ಟಹಳ್ಳಿಯ ಕೃಷಿ ಕುಟುಂಬದಲ್ಲಿ ಹುಟ್ಟಿ ಬೆಳೆದವರು ಅವರು. ಹಳ್ಳಿಗಾಡಿನ ಮೊದಲ ತಲೆಮಾರಿನ ಅಕ್ಷರಸ್ಥರಂತೆ ಆಕಸ್ಮಿಕವಾಗಿ ಓದು ಬರಹ ಕಲಿತವರು.

1970ರ ದಶಕದ ಆರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ರೂಪಿಸಿದ ಅನೇಕ ಪ್ರತಿಭಾವಂತ ಕನ್ನಡ ಬರಹಗಾರರಲ್ಲಿ ಸಿದ್ಧರಾಮಯ್ಯನವರೂ ಒಬ್ಬರು. ನವ್ಯ ಕಾವ್ಯದ ಆರಾಧನಾ ಕಾಲದಲ್ಲಿ ಕವಿತೆಯ ಮೂಲಕ ಲೋಕಸಂವಾದವನ್ನು ಆರಂಭಿಸಿದ ಎಸ್‌ಜಿಎಸ್ ಅವರು ವಿದ್ಯಾರ್ಥಿಯಾಗಿರುವಾಗಲೇ ಕುವೆಂಪು ಅವರ ಸಾಹಿತ್ಯ ಹಾಗೂ ಚಿಂತನೆಗಳ ದಟ್ಟ ಪ್ರಭಾವಕ್ಕೆ ಒಳಗಾದವರು. ಜಿ.ಎಸ್.ಶಿವರುದ್ರಪ್ಪನವರಂತಹ ಗುರುವಿನಿಂದ ಕಾವ್ಯಕಟ್ಟೋಣದ ಕುಸುರಿಯನ್ನು ಕಲಿತವರು. ನವ್ಯರಿಂದ ಪ್ರಯೋಗಶೀಲತೆಯನ್ನು ಕಲಿತರೂ ತಮ್ಮ ಕವಿತೆಗಳಲ್ಲಿ ಗ್ರಾಮೀಣ ಸಂಸ್ಕೃತಿಯ ಸಮುದಾಯದ ನೆನಪುಗಳನ್ನು, ದೇಸಿ ಹಾಡುಗಬ್ಬಗಳ ನಾದವನ್ನು ಮೊಗೆದು ಕೊಟ್ಟವರು.

> ಮಣ್ಣಿನ ಸಂಹಿತೆಯನ್ನೇ ಹಾಡುತ್ತಾ ಬಂದಿರುವ ಎಸ್‌.ಜಿ. ಸಿದ್ಧರಾಮಯ್ಯ ಅವರ ಹೆಸರು ನೆನೆದರೆ ಸಾಕು ಬಹುಮುಖಿ ವ್ಯಕ್ತಿತ್ವವೊಂದು ಕಣ್ಮುಂದೆ ಮೆರವಣಿಗೆ ಹೊರಡುತ್ತದೆ. ದಮನಿತರ ಪರವಾಗಿ ನಿರ್ಭಯವಾಗಿ ದನಿ ಎತ್ತುವ, ಕನ್ನಡ ಕಟ್ಟುವ ಕಾಯಕದಲ್ಲಿ ಬಹುಶ್ರುತವಾಗಿ ತೊಡಗಿಕೊಂಡಿರುವ ಈ ಕವಿ ಈಗ ಬಾಳಿನ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದಾರೆ...

ಕಳೆದ ಶತಮಾನದ ಎಪ್ಪತ್ತರ ದಶಕ ಕನ್ನಡನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಕಾಲಘಟ್ಟ. ಅದು ಪರ್ಯಾಯ ಜ್ಞಾನದ ಆಸ್ಫೋಟದ ಕಾಲ. ತಳ ಮತ್ತು ಕೆಳ ಸಮುದಾಯಗಳ ಹುಡುಗರೆದೆಗೆ ಅಕ್ಷರದ ಬೀಜ ಬಿದ್ದ ಕಾಲ. ಅದೇ ಸಂದರ್ಭದಲ್ಲಿ ನಡೆದ ಬೂಸ ಚಳವಳಿಯು ಆವರೆಗಿನ ಕಾವ್ಯ ಪರಂಪರೆಗಳನ್ನು ಸಾಮಾಜಿಕ ನ್ಯಾಯದ ವಿಮರ್ಶೆಗೆ ಒಡ್ಡಿದ ಕಾಲ. ಕಲೆಗಾಗಿ ಕಲೆ ಎಂಬ ಅಭಿವ್ಯಕ್ತಿಯ ಮಾರ್ಗ ಬದುಕಿಗಾಗಿ ಕಲೆ ಎಂದು ಹೊರಳುದಾರಿಗೆ ತಿರುಗಿಕೊಂಡ ಪರ್ವಕಾಲ. ಇಂತಹ ಸಾಮಾಜಿಕ ರಾಜಕೀಯ ಸನ್ನಿವೇಶದಲ್ಲಿ ಸಾರ್ವಜನಿಕ ಜೀವನಕ್ಕೆ ಕನ್ನಡ ಸಾಹಿತ್ಯದ ಅಧ್ಯಾಪಕರಾಗಿ ಸಿದ್ಧರಾಮಯ್ಯನವರು ಪ್ರವೇಶ ಮಾಡಿದರು. ಮುಂದೆ ಸುಮಾರು ಮೂರು ದಶಕಗಳ ಕಾಲ ಕರ್ನಾಟಕದ ಹಲವು ಸರ್ಕಾರಿ ಕಾಲೇಜುಗಳಲ್ಲಿ ಶಿಷ್ಯಾನುರಾಗಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಆರೋಗ್ಯವಂತ ಯುವ ಸಮುದಾಯಗಳನ್ನು ಕಟ್ಟುವ ಕೆಲಸವನ್ನು ಮಾಡಿದರು.

ಕವಿತೆ ರಚನೆಯ ಜೊತೆಗೆ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ ಮತ್ತು ಮಾರ್ಕ್ಸ್ ಅವರ ಚಿಂತನೆಗಳನ್ನು ಗಂಭೀರವಾಗಿ ಅಧ್ಯಯನ ಮಾಡುವ ಮೂಲಕ ಭಾರತೀಯ ಸಮಾಜದ ಸಾಮಾಜಿಕ ಸ್ತರಗಳನ್ನು ಅರಿತರು. ಕನ್ನಡದ ಪ್ರಾಚೀನ ಸಾಹಿತ್ಯದಿಂದ ಹಿಡಿದು ಜನಪದ ಮತ್ತು ಆಧುನಿಕ ಕನ್ನಡ ಸಾಹಿತ್ಯದ ಕೃತಿಗಳ ನಿರಂತರ ವಿದ್ಯಾರ್ಥಿಯಾದರು.

ಮುಖ್ಯವಾಗಿ 12ನೆಯ ಶತಮಾನದ ಜಾಗತಿಕ ವಿದ್ಯಮಾನವಾದ ವಚನ ಸಾಹಿತ್ಯದ ಅರಿವು ಎಸ್‌ಜಿಎಸ್ ಅವರ ನಡೆ ನುಡಿಗಳನ್ನು ಸರಿದೂಗಿಸುವ ಪ್ರಮಾಣವಾಗಿ ಅವರ ಬದುಕನ್ನು ಮುನ್ನಡೆಸಿದವು. ಹೀಗೆ ಸಾಹಿತ್ಯದ ನಿರಂತರ ಓದು ಮತ್ತು ಯುವ ಮನಸ್ಸುಗಳ ಜೊತೆಗಿನ ಒಡನಾಟ ಎಸ್‌ಜಿಎಸ್ ಅವರನ್ನು ಅಂತಃಕರುಣಿಯಾದ ನಾಡೋಜ ಗುರುವಾಗಿ ರೂಪಿಸಿತು.

ಸಹಜ ಕಾವ್ಯ ಪ್ರತಿಭೆಯ ಕವಿಯಾಗಿರುವ ಎಸ್‌ಜಿಎಸ್ ಕನ್ನಡದ ಪ್ರಮುಖ ಕವಿಯಾಗಿರುವುದು ಅವರು ಪ್ರಕಟಿಸಿರುವ ಹದಿನೈದು ಕವಿತಾ ಸಂಕಲನಗಳಿಂದ ಮಾತ್ರವಲ್ಲ; ಅವರು ನಡೆಸಿದ ಕಾವ್ಯದ ಪ್ರಯೋಗಗಳಿಂದ. ಅವರೊಬ್ಬ ನೆಲಮೂಲದ ಕವಿಯಾಗಿ ಗುರುತಿಸಲ್ಪಟ್ಟಿದ್ದಾರೆ. ವರ್ತಮಾನ ನಿರುಪಯುಕ್ತವೆಂದು ಅಂಚಿಗೆ ಸರಿಸಿದ್ದ ದೇಸಿ ನುಡಿಗಟ್ಟುಗಳು ಮತ್ತು ಅನುಭವಗಳನ್ನು ಅವರು ಆಯ್ದು ಪೋಣಿಸುತ್ತಿರುವ ಚಂದದಲ್ಲಿ ಕನ್ನಡ ಮನಸ್ಸು ಮರೆತ ಮಣ್ಣಿನ ಗಮಲಿದೆ. ತೀರಾ ಪ್ರಾದೇಶಿಕ ಎನ್ನಿಸುವ ಪದ-ಪ್ರಯೋಗದಲ್ಲಿ ಸಂಸ್ಕೃತಿ ಹೊಕ್ಕಳೊಳಗೆ ಕೊಳೆಯುತ್ತಿರುವ ವಿನಾಶವನ್ನು, ಅನುಭಾವದಂತಹ ಸಂಕೀರ್ಣ ಅನುಭೂತಿಯನ್ನು, ಗೋಳೀಕರಣದಿಂದ ಹಿಡಿದು ಇಬ್ಬನಿಯ ಸೋಂಕಿನವರೆಗೆ ಜೀವಜಾಲದ ಸಂಕಟ, ಸಂಭ್ರಮಗಳನ್ನು ಅಭಿವ್ಯಕ್ತಿಸುವ ಹದವನ್ನು ಅವರು ಕಂಡುಕೊಂಡಿದ್ದಾರೆ.

ಕನ್ನಡ ಕಾವ್ಯಲೋಕದಲ್ಲಿ ತಮ್ಮದೇ ವಿಶಿಷ್ಟ ಕಾವ್ಯಮಾರ್ಗವೊಂದನ್ನು ಎಸ್‌ಜಿಎಸ್ ನಿರ್ಮಾಣ ಮಾಡಿದ್ದಾರೆ. 'ಅವಳೆದೆಯ ಜಂಗಮ', 'ಮರುಜೇವಣಿಗೆ' ಹಾಗೂ 'ಕಾಯಮಾಯದ ಹಾಡು' ಮೊದಲಾದ ಮಹತ್ವದ ಕವಿತಾ ಸಂಕಲನಗಳನ್ನು ಅವರು ತೊಂಬತ್ತರ ದಶಕದಲ್ಲಿಯೇ ಪ್ರಕಟಿಸಿದ್ದಾರೆ. 'ಕಾಲಕಣ್ಣಿಯ ಹಂಗು' ಎಂಬ ಹೆಸರಿನ ಸಮಗ್ರ ಕವಿತಾ ಸಂಕಲನವನ್ನು ಪ್ರಕಟಿಸಿದ್ದಾರೆ. ಇವರ ಕವಿತಾ ಸಂಕಲನಗಳಿಗೆ ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರಕಿರುವುದು ಅವರ ಕಾವ್ಯ ಪರಿಣತಿಗೆ ಸಿಕ್ಕಿರುವ ಮನ್ನಣೆಯಾಗಿದೆ.

ಅಮೃತ ಮಥನ

ಜನ ಬದುಕಲೆಂದು ಬರೆದು ಬದುಕುತ್ತಿದ್ದ ಹಲವು ಸಾಂಸ್ಕೃತಿಕ ವ್ಯಕ್ತಿತ್ವಗಳು ಇಪ್ಪತ್ತೊಂದನೆಯ ಶತಮಾನದ ಮೊದಲ ದಶಕದಲ್ಲಿ ಅಕಾಲಿಕವಾಗಿ ನಿರ್ಗಮಿಸಿದವು. ಕನ್ನಡ ನುಡಿ, ಶಿಕ್ಷಣ, ಆರೋಗ್ಯ, ಕೃಷಿ ಹೀಗೆ ಕರ್ನಾಟಕದ ಬಡವರಿಗೆ ಆಗುತ್ತಿದ್ದ ಅನ್ಯಾಯಗಳನ್ನು ನಿರಂಕುಶವಾಗಿ ಪ್ರಶ್ನಿಸುತ್ತಿದ್ದ ಲಂಕೇಶರಂತಹ ಬರಹಗಾರರ ಗೈರು ಹಾಜರಿಯನ್ನು ತುಂಬುವ ವ್ಯಕ್ತಿತ್ವಗಳನ್ನು ಕನ್ನಡ ಸಂಸ್ಕೃತಿ ಹುಡುಕುತ್ತಿತ್ತು. ಯು.ಆರ್. ಅನಂತಮೂರ್ತಿ, ಗಿರೀಶ ಕಾರ್ನಾಡ ಅವರಂಥವರು ವ್ಯವಸ್ಥೆಯನ್ನು ಪ್ರಶ್ನಿಸುವ ಧೈರ್ಯತೋರಿದರೂ ಅವರು ಕನ್ನಡ ಜಗತ್ತಿನ ಅಂಚಿನ ಜನಗಳಿಗೆ, ಸಾಮಾನ್ಯ ಜನರಿಗೆ, ತಮ್ಮ ಎಲೈಟ್ ಜೀವನ ಶೈಲಿಯಿಂದಾಗಿ ನಿಲುಕುವವರಾಗಿರಲಿಲ್ಲ.

ಅದೇ ಸುಮಾರಿಗೆ ವೈದಿಕ ಚಿಂತನಕ್ರಮಗಳು ಸಾರ್ವಜನಿಕ ನಾಚಿಕೆಯ ಸ್ವಭಾವವನ್ನು ತೊರೆದು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಸಾಹಿತ್ಯನಿರ್ಮಿತಿಗಳ ಮೇಲೆ ಪ್ರಹಾರ ಮಾಡತೊಡಗಿದವು. ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕವಾಗಿ ದಮನಿತ ಜನರ ಬದುಕಿನ ಅನ್ಯಾಯ-ಆತಂಕಗಳ ಕುರಿತು ಖಚಿತ ಧ್ವನಿಯಲ್ಲಿ ನಿರ್ಭಯವಾಗಿ ಮಾತನಾಡುವವರ ಅಗತ್ಯವಿತ್ತು. ಅದೇ ಕಾಲಕ್ಕೆ ಎಸ್‌ಜಿಎಸ್ (2004ರಲ್ಲಿ) ಸರ್ಕಾರಿ ವೃತ್ತಿಯಿಂದ ನಿವೃತ್ತಿಯಾಗಿ ಜನಪರವಾಗಿ ನಡೆಯುವ ಹೋರಾಟಗಳಲ್ಲಿ ನೇರವಾಗಿಯೇ ಭಾಗವಹಿಸತೊಡಗಿದ್ದು ಕನ್ನಡದ ಸಾಂಸ್ಕೃತಿಕ ಪ್ರತಿರೋಧಕ್ಕೆ ಬಲಬಂದಂತಾಯಿತು.

ಈ ಮಧ್ಯೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಅವರು ನೇಮಕಗೊಂಡರು. ಅವರ ಮೂರು ವರ್ಷಗಳ ಅಧಿಕಾರದ ಅವಧಿಯಲ್ಲಿ (2005-2008) ಕನ್ನಡ ಪುಸ್ತಕ ಪ್ರಾಧಿಕಾರವು ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಅಧ್ಯಯನ ಯೋಜನೆಗಳನ್ನು ಕೈಗೊಂಡು 12 ದೇಸಿ ಕೃಷಿ ಸಂಪುಟಗಳನ್ನು, 12 ಮಕ್ಕಳ ಸಂಪುಟಗಳನ್ನು ಪ್ರಕಟಿಸಿತು. ಬಹಳ ಮುಖ್ಯವಾಗಿ ಅಲೆಮಾರಿಗಳ ಸಂಸ್ಕೃತಿಯನ್ನು ಕುರಿತ 22 ಅಧ್ಯಯನ ಗ್ರಂಥಗಳನ್ನು ಪ್ರಕಟಿಸಿತು. ಸ್ವಾತಂತ್ರ್ಯದ ಹಲವು ದಶಕಗಳ ನಂತರವೂ ಗುರುತಿಲ್ಲದೆ ಅವಕಾಶವಂಚಿತರಾಗಿದ್ದ ಸರ್ಕಾರದ ಯಾವುದೇ ಯೋಜನೆಗಳ ಪಾಲು ಪಡೆಯದೆ ಇದ್ದ ಜನಸಮುದಾಯಗಳನ್ನು ಕುರಿತ ಮಾಹಿತಿಪೂರ್ಣವಾದ ಹೊತ್ತಿಗೆಗಳು ಇವಾಗಿವೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ತಮ್ಮ ಅವಧಿಯ ಕೊನೆಯಲ್ಲಿ ಹಣಕಾಸಿನ ಲೆಕ್ಕಪತ್ರವನ್ನು ಸಾರ್ವಜನಿಕವಾಗಿ ಪ್ರಕಟಿಸುವ ಮೂಲಕ ಪಾರದರ್ಶಕ ಆಡಳಿತಕ್ಕೆ ಮಾದರಿ ಹಾಕಿಕೊಟ್ಟಿದ್ದರು.

2016-2018ರವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕನ್ನಡದಲ್ಲಿ ಆಡಳಿತದ ಪ್ರಕ್ರಿಯೆ ನಡೆಯುವಂತೆ ನೋಡಿಕೊಳ್ಳಲು ಪರಿಣಾಮಕಾರಿಯಾಗಿ ಪ್ರಯತ್ನಿಸಿದರು. ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಕನ್ನಡ ಕಲಿಕೆಯನ್ನು ಕಲಿಸುವ ಪಠ್ಯಗಳನ್ನು ನಿರ್ಮಾಣ ಮಾಡಿಕೊಡುವ ಕಾರ್ಯಮಾಡಿದರು. ಗಡಿನಾಡಿನಲ್ಲಿ ಕನ್ನಡ ಶಾಲೆಗಳನ್ನು ಪುನರ್‌ಚೈತನ್ಯಗೊಳಿಸುವ ಮಹತ್ವದ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಸಿದ್ಧರಾಮಯ್ಯನವರ ಪ್ರಮುಖ ಸಾಧನೆ. ವೀರಶೈವ-ಲಿಂಗಾಯತ ಧರ್ಮದ ಕುರಿತ ವಿವಾದದಲ್ಲಿ ಬಸವಣ್ಣನವರ ಆಶಯಗಳನ್ನು ಆಧರಿಸಿ ಎಸ್‌ಜಿಎಸ್ ಅವರು ಲಿಂಗಾಯತ ಎಂಬುದು ವೀರಶೈವಕ್ಕಿಂತ ಭಿನ್ನವಾದ ಜೀವನಕ್ರಮವೆಂದು ಸಾಧಿಸಿ ತೋರಿಸಿದರು.

ಈಗ ಎಸ್‌ಜಿಎಸ್ ಅವರಿಗೆ 75ರ ಹರೆಯ. ಎಲ್ಲರಿಗೂ ಪ್ರೀತಿ ಹಂಚುವ ಅವರ ಬಾವಣಿಕೆ ವರ್ತನೆ ಜನಜನಿತ. ನಿರಂತರವಾಗಿ ಕರ್ನಾಟಕದ ನಾಳೆಗಳ ಬಗೆಗೆ ಚಿಂತನ ಮಂಥನದಲ್ಲಿರುವ ಎಸ್‌ಜಿಎಸ್ ಯುವ ಮನಸ್ಸುಗಳಿಗೆ ಮುಕ್ತ ವಿಶ್ವವಿದ್ಯಾಲಯವಾಗಿದ್ದಾರೆ. ಮನಸಿಗೆ ವಯಸ್ಸಿನ ಆಯಾಸವಾಗದಂತೆ ಕಾವ್ಯದ ಹೊಸಪ್ರಯೋಗಗಳಲ್ಲಿ ನಿರತರಾಗುವ ಮೂಲಕ ವೈಯಕ್ತಿಕ ಹಾಗೂ ನಾಡಿನ ಆರೋಗ್ಯವನ್ನು ಕಾಪಿಡುವ ಕಾಯಕವನ್ನು ಅವರು ಮುಂದುವರೆಸಿದ್ದಾರೆ. ❖

ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ 2021

ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ

ಆನಂದ ಗೋಪಾಲ ಅವರ ದೇವತೆಗಳೆ ಹರಸಿರಿ

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನಸ್ಪರ್ಧೆ 2021

ತೀರ್ಪುಗಾರರ ಮೆಚ್ಚುಗೆ ಪಡೆದ ಕವನ

ಅಶ್ಫಾಕ್ ಪೀರ್ ಅವರ ಗಜಲ್

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಒಡನಾಡಿ ಸಬಿಹಾ

ದು.ಸರಸ್ವತಿ

ಮಹಿಳಾ ಚಳವಳಿ, ದಲಿತ ಚಳವಳಿ, ಬಂಡಾಯ ಚಳವಳಿ, ರೈತ ಚಳವಳಿ, ಕಾರ್ಮಿಕ ಚಳವಳಿ... ಹೀಗೆ ಹಲವಾರು ಚಳವಳಿಗಳಿಗೆ 80ರ ದಶಕ ಸಾಕ್ಷಿಯಾಗಿದೆ. ಈ ಚಳವಳಿಗಳು ಕನ್ನಡ ನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಲೋಕದ ಮಿತಿಗಳನ್ನು ಮೀರಿಸಿ ಅರಿವು, ದರ್ಶನವನ್ನು ವಿಸ್ತರಿಸಿವೆ. ಅಲ್ಲದೆ ಈ ಚಳವಳಿಗಳಲ್ಲಿ ದುಡಿದ, ಅವುಗಳ ಸಂಪರ್ಕಕ್ಕೆ ಬಂದ ಅಸಂಖ್ಯಾತ ಜನರು ನುಡಿದಂತೆ ನಡೆಯಲು, ಬದುಕಲು ಅವು ಪ್ರೇರೇಪಿಸಿವೆ. ತಾರತಮ್ಯ ಮಾಡದೆ ಸರಳವಾಗಿ ಬದುಕುವುದು, ಜಾತಿ, ಮತ, ಧರ್ಮ ಮೀರಿ ಕುವೆಂಪು ಅವರ ಮಂತ್ರಮಾಂಗಲ್ಯದನುಸಾರ ಸರಳವಾಗಿ ವಿವಾಹವಾಗುವುದು, ಮೌಢ್ಯಾಚರಣೆಗಳನ್ನು ಬಿಡುವುದು, ಲಂಚ ಕೊಡದೆ, ಪಡೆಯದೇ ದುಡಿಯುವುದು... ಇಂತಹ ನೀತಿ, ನಿಯಮಗಳು ಪರ್ಯಾಯ ಬದುಕಿಗೆ ದಾರಿಯಾಗಿವೆ.

ಆ ಚಳವಳಿಗಳಿಂದ ಪ್ರಭಾವಿತಳಾದ ನಾನೂ ಅಂತಹ ಹಲವು ಬದುಕುಗಳನ್ನು ನಿಕಟವಾಗಿ ಬಲ್ಲೆ. ನನ್ನ ಹಲವಾರು ಗೆಳತಿಯರು ಜಾತಿ, ಧರ್ಮ ಬಿಟ್ಟು ಸರಳವಾಗಿ ಮದುವೆಯಾದರು, ಖಾಸಗಿ ಬದುಕಿನಲ್ಲಿ ಜಾತಿ ಆಚರಣೆಗಳನ್ನು ಬಿಟ್ಟರು, ಮನೆಯವರಿಂದ ಚಿಕ್ಕಾಸೂ ಪಡೆಯದೇ ತಮ್ಮ ದುಡಿಮೆಯಿಂದಲೇ ತಮ್ಮ ಬದುಕುಗಳನ್ನು ಕಟ್ಟಿಕೊಂಡರು, ಸಂಪಾದನೆಗಾಗಿ ದುಡಿದು, ಸಂಸಾರವನ್ನು ನಿಭಾಯಿಸುವುದರ ಜೊತೆಗೆ ಸಂಘಟನೆಗಳ ಭಾಗವಾಗಿ ದುಡಿದರು. ಸ್ವಾಯತ್ತತೆ, ಸ್ವಾಭಿಮಾನವೇ ಉಸಿರಾದ ಹಲವು ಗೆಳತಿಯರು, ಪಟ್ಟುಹಿಡಿದು ನಂಬಿದ್ದನ್ನು ಸಾಧಿಸಿದರು. ಅಂತಹ ನಿಕಟ ಗೆಳತಿಯರಲ್ಲಿ ನಮ್ಮ ಡಾ. ಸಬಿಹಾ ಭೂಮಿಗೌಡ ಒಬ್ಬರು. ನಮ್ಮ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಂಗಾತಿಗಳಿಗೆಲ್ಲ ಅಕ್ಕನಾಗಿರುವ ಇವರು ಸದ್ದು ಮಾಡದೆ ದಿಟ್ಟವಾಗಿ ತಮ್ಮ ಸಮಾನತೆ, ಜಾತ್ಯತೀತ ಆಶಯಗಳನ್ನಿಟ್ಟುಕೊಂಡು ಬದುಕುತ್ತಿರುವವರು.

ಶಿಸ್ತು, ಗಾಂಭೀರ್ಯ ಮತ್ತು ಅಚ್ಚುಕಟ್ಟಾದ ಕೆಲಸ ಮೇಳೈಸಿದಂತಿರುವ ಸಬಿಹಾ ಉದ್ಯೋಗದಿಂದ ನಿವೃತ್ತರಾಗಿದ್ದಾರೆ. ಅಧ್ಯಾಪಕಿಯಾಗಿ, ಸಂಶೋಧಕಿಯಾಗಿ, ಲೇಖಕಿಯಾಗಿ, ಜನಪರ ಚಳವಳಿಗಳ ಒಡನಾಡಿಯಾಗಿ, ಹಾಸ್ಟೆಲ್ ವಾರ್ಡನ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕಿ, ಸಾಹಿತ್ಯ ಅಕಾಡೆಮಿಯ ಸದಸ್ಯೆ, ಕರಾವಳಿ ಲೇಖಕಿಯರ ಸಂಘದ ಅಧ್ಯಕ್ಷೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯೆ, ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಸೇರಿದಂತೆ ಅಧಿಕಾರದ ಹಲವು ಸ್ಥಾನಗಳನ್ನು ನಿಷ್ಪಕ್ಷಪಾತ ಪಾರದರ್ಶಕ ಆಡಳಿತ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳ ಮೂಲಕ ದಕ್ಷತೆಯಿಂದ ನಿಭಾಯಿಸಿದ್ದಾರೆ. ಸವಾಲುಗಳು ಎದುರಾದಾಗಲೂ ಧೃತಿಗೆಡದೆ, ಸೈದ್ಧಾಂತಿಕವಾಗಿ ರಾಜಿಯಾಗದೇ ದಿಟ್ಟ ಹೆಜ್ಜೆಗಳನ್ನು ಇಟ್ಟಿದ್ದಾರೆ. ನಶೆಯಾಗಬಹುದಾದ ಅಧಿಕಾರವನ್ನು ಟಾನಿಕ್‌ನಂತೆ ಬಳಸಿ ಉದ್ದೇಶಿತ ಗುರಿ ಮುಟ್ಟಿರುವುದು ಅವರ ಹೆಗ್ಗಳಿಕೆ.

ಕತೆ, ಕಾವ್ಯ, ಅಂಕಣ ಬರಹ, ವಿಮರ್ಶೆ, ಸಂಶೋಧನಾ ಲೇಖನ ಹೀಗೆ ಇವರ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳೆರಡರ ಬರವಣಿಗೆಗಳಲ್ಲೂ ಸ್ಪಷ್ಟ ಚಿಂತನೆ ಹಾಗೂ ಸ್ತ್ರೀವಾದಿ ನೋಟದ ಛಾಪನ್ನು ಕಾಣಬಹುದು. ನಿತ್ಯದ ಬದುಕಿನ ಮೊಸರನ್ನೇ ಕಡೆದು ಬೆಣ್ಣೆಯ ಕ್ಷಣಗಳನ್ನು ಹೆಣೆಯುವ ಕುಸುರಿಯನ್ನು ಇವರ ಕೃತಿಗಳಲ್ಲಿ ಕಾಣಬಹುದು.

ತಮ್ಮ ನಾಲ್ಕು ದಶಕಗಳ ಅಧ್ಯಾಪಕ ವೃತ್ತಿಯಲ್ಲಿ ನೂರಾರು ವಿದ್ಯಾರ್ಥಿಗಳ ಚಿಂತನೆ, ಬರಹ, ಬದುಕುಗಳನ್ನು ರೂಪಿಸಿದ್ದಾರೆ. ಬೋಧನೆ ಮತ್ತು ಆಡಳಿತ ಎರಡನ್ನೂ ಯಶಸ್ವಿಯಾಗಿ ನಿರ್ವಹಿಸಿ ಮುಂದಿನ ಪೀಳಿಗೆಗೆ ಮಹಿಳಾ ಮಾದರಿಯಾಗಿದ್ದಾರೆ. ಬಹಳ ಮುಖ್ಯವಾಗಿ ಜಾತ್ಯತೀತತೆ, ಘನತೆಯ ಬದುಕು, ಬೌದ್ಧಿಕ ಸ್ವಾಯತ್ತತೆ,

ಸಬಿಹಾ ಭೂಮಿಗೌಡ

ಬಹುತ್ವ, ಮಾನವ ಪ್ರೇಮದಂತಹ ಆದರ್ಶಗಳನ್ನು ಬದುಕುತ್ತಿರುವ ಸಾಹಸಿಯೂ ಹೌದು.

ಹೆಣ್ತನದ ಸಾಮರ್ಥ್ಯದ ಗಡಿಗಳನ್ನು ವಿಸ್ತರಿಸಿದ ಇಂತಹ ಹೆಣ್ಣು ಜೀವದ ಬದುಕು, ಸಾಧನೆಗಳ ದಾಖಲಿಸಬೇಕು ಮತ್ತು ಸಂಭ್ರಮಿಸಬೇಕೆಂದು ಸಬಿಹಾ ಸ್ನೇಹ ಬಳಗದವರು 'ಒಡನಾಡಿ ಸಬಿಹಾ' ಎಂಬ ಅಭಿನಂದನಾ ಹೊತ್ತಗೆಯನ್ನು ನುಡಿ ಬಾಗಿನವಾಗಿ ಸಿದ್ಧಪಡಿಸಿದ್ದಾರೆ. ಈ ಹೊತ್ತಗೆಯಲ್ಲಿ ಸಬಿಹಾರ ಬದುಕು-ಬರಹಗಳನ್ನು ಅರಿಯುವುದರ ಜೊತೆಗೆ ಅವರು ತಾತ್ತ್ವಿಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಕರ್ನಾಟಕದ ಚಳವಳಿ-ಕನ್ನಡ ಮಹಿಳಾ ಸಾಹಿತ್ಯಗಳ ಬಗೆಗಿನ ಅರಿವು ಹೆಚ್ಚಿಸುವ ಆಕರ ಗ್ರಂಥದಂತೆ ರೂಪಿಸಲು ಪ್ರಯತ್ನಿಸಲಾಗಿದೆ. ಕನ್ನಡ ನಾಡಿನ ಪ್ರಮುಖ ಚಳವಳಿಗಳ ಅವಲೋಕನ, ಕಳೆದೆರಡು ದಶಕಗಳ ಕನ್ನಡ ಸಾಹಿತ್ಯದ ಕುರಿತ ಬರಹ, ಸಬಿಹಾ ಅವರ ಸಾಹಿತ್ಯಾವಲೋಕನ, ಒಡನಾಡಿಗಳು ನೆನಪಿಸಿಕೊಂಡ ಸಬಿಹಾ ವ್ಯಕ್ತಿತ್ವದ ಚಿತ್ರಣ ಎಂಬ ನಾಲ್ಕು ಭಾಗಗಳನ್ನು ಅಭಿನಂದನಾ ಗ್ರಂಥವು ಒಳಗೊಂಡಿದೆ.

> ಲೇಖಕಿ, ಅಧ್ಯಾಪಕಿ, ಸಂಶೋಧಕಿ, ಶೈಕ್ಷಣಿಕ ಆಡಳಿತಗಾರ್ತಿ, ಚಳವಳಿಗಾರ್ತಿ... ಹೀಗೆ ಬಹುರೂಪದ ಮೂಲಕ ನಾಡು–ನುಡಿಗೆ ಕೊಡುಗೆ ಕೊಟ್ಟಿರುವ ಸಬಿಹಾ ಅವರನ್ನು ಕರಾವಳಿ ಲೇಖಕಿಯರ–ವಾಚಕರ ಸಂಘ ಇಂದು ಅಭಿನಂದಿಸುವ ಮೂಲಕ ತನ್ನನ್ನೇ ತಾನು ಅಭಿನಂದಿಸಿಕೊಳ್ಳುತ್ತಿದೆ

ಅಡುಗೆ-ಮನೆ-ಪರಿಕರಗಳ ಘಮ, ರುಚಿ, ಸತ್ವ ಮತ್ತು ಸಿಟ್ಟು, ಜುಗುಪ್ಸೆ ಎಂಬ ಎರಡು ತುದಿಗಳ ನಡುವೆ ಜೀಕುತ್ತ, ಜೀ..ಕು..ತ್ತಾ.. ಕಂಡುಕೊಂಡ ಹದದಂತೆ ಇವರ ಬರಹ ಮತ್ತು ಬದುಕು. ಅದನ್ನು ಸಂಭ್ರಮಿಸಲು ಸಬಿಹಾರ ಒಡನಾಡಿಗಳೆಲ್ಲ ಇದೇ 14ರಂದು ಮಂಗಳೂರಿನ ನಂತೂರಿನಲ್ಲಿರುವ ಶಾಂತಿಕಿರಣದಲ್ಲಿ ಬೆಳಿಗ್ಗೆ 10.30ಕ್ಕೆ ಸೇರುತ್ತಿದ್ದೇವೆ-ಮಾತು, ಹಾಡು, ನಾಟಕ, ಕಾವ್ಯ ಜೊತೆಗೆ ಶಾವಿಗೆ ಪಾಯಸ, ಕೋಳಿ ಗಸಿ, ಹುರಿದ ಮೀನಿನ ರುಚಿಕಟ್ಟಾದ ಊಟದೊಂದಿಗೆ. ❖

ಕಿರಿದರೊಳ್ ಪಿರಿದು

ಪ್ರತಿಕ್ರಿಯೆ

ಪ್ರತಿವರ್ಷ ದೀಪಾವಳಿಯ ಸ್ವಾಗತವೆಂದರೆ ಅದು ಪ್ರಜಾವಾಣಿಯ ವಿಶೇಷಾಂಕದ ಸ್ವಾಗತವೂ ಹೌದು. ಪ್ರತಿ ಸಂಚಿಕೆ ಹೊತ್ತು ತರುವ ವಿಭಿನ್ನತೆ, ಅನನ್ಯತೆಯ ನಿರೀಕ್ಷೆ ಎಂದೂ ಹುಸಿಗೊಳಿಸಿಲ್ಲ. ಕಳೆದ ವರ್ಷದ ಸಂಚಿಕೆಯಲ್ಲಿ ರಾಮಾಯಣ ಮಹಾಕಾವ್ಯದ ವಿಶಿಷ್ಟ ವೈವಿಧ್ಯವನ್ನು ಚರ್ಚಿಸಿದ್ದ ನೆನಪು ಇನ್ನೂ ಹಸಿರಾಗಿರುವಂತೆಯೇ ಈ ಬಾರಿಯ ಸ್ವಾತಂತ್ರ್ಯದ 75ನೆಯ 'ವಿಶ್ವಭಾರತಿಗೆ ಅಮೃತದಾರತಿ' ಸಂಚಿಕೆ ಅನುವಾದಿತ ಲೇಖನಗಳ ಮೂಲಕ ಸಮಯೋಚಿತವಾಗಿ ಮೂಡಿಬಂದಿದೆ.

ವಿಜ್ಞಾನವೊಂದು 4, 5 ದಶಕಗಳಲ್ಲಿ ಸಾಮಾನ್ಯನ ಬದುಕನ್ನು ಪ್ರಭಾವಿಸಿರುವುದನ್ನು ನಂಬದ ಪರಿಸ್ಥಿತಿಯಲ್ಲಿರುವ ಯುವಮನಸ್ಸುಗಳು, ಅದೇ ತಂತ್ರಜ್ಞಾನದ ಅತಿ ಅವಲಂಬನೆಯ ಜಗತ್ತಿನ ಇನ್ನೊಂದು ಮುಖದಲ್ಲಿ ಆ ವ್ಯವಸ್ಥೆಯ ಅನುಕೂಲಗಳ ಕಿಂಚಿತ್ ಅರಿವೂ ಇಲ್ಲದವರ ನಡುವೆ ಸಮಾಜದಲ್ಲಿ ಸೇತುವೆ ಕಟ್ಟುವುದರ ಬಗ್ಗೆ ಆಲೋಚಿಸುವ, ಸಮಾಜವೆಷ್ಟೇ ಆಧುನಿಕಗೊಂಡಿದ್ದರೂ ಇನ್ನೂ ಮಗ್ಗದಲ್ಲೇ ಜೀವನ ಕಂಡುಕೊಂಡಿರುವ ಮಗ್ಗದ ಗ್ರಾಮೀಣ ಭಾರತದ ಚಿತ್ರಣದ ಹೂರಣದ ಲೇಖನಗಳು - ಜ್ಞಾನದ ತೋರಣವನ್ನು ಕಟ್ಟುವಂತಹುವುಗಳು.

ಸಮಾಜ ನಿಧಾನವಾಗಿಯಾದರೂ ಕೊರೊನಾ ಕೊಟ್ಟ ಆಘಾತವನ್ನು ಸುಧಾರಿಸಿಕೊಳ್ಳುತ್ತಿದ್ದರೂ, ಸೃಜನಶೀಲ ಪ್ರಕಾರವಿನ್ನೂ ಚೇತರಿಸಿಕೊಳ್ಳುವ ಲಕ್ಷಣ ತೋರುತ್ತಿಲ್ಲ. ಇದರ ಪರಿಣಾಮ ಕಳೆದೆರಡು ವರ್ಷಗಳಿಂದ 'ಓದುಗರ ವೇದಿಕೆ', 'ಮಕ್ಕಳು ಬಿಡಿಸಿದ ವರ್ಣಚಿತ್ರ'ಗಳಂತಹ ಆಸಕ್ತಿಕರ ವಿಭಾಗಕ್ಕೆ ಕತ್ತರಿಯಾಡಿಸಬೇಕಾಗಿಬಂದಿದ್ದು. ಅದಕ್ಕೆ ಪರ್ಯಾಯವಾಗಿ ರಸಗವಳ, ಚಕ್ಕುಲಿ ಬೆಕ್ಕುಲಿ, ಮಕ್ಕಳಿಗಾಗಿ ಆಟಗಳು ಈ ಕೊರತೆಯನ್ನು ನೀಗಿಸಲು ಯಶಸ್ವಿಯಾಗಿವೆ. ಪುಟಗಳ ಸಂಖ್ಯೆ ಕಡಿಮೆಯಾದರೂ (ಇದು ಪತ್ರಿಕೆ ನಡೆಸುವವರಿಗೆ ಅನಿವಾರ್ಯವಾದ ಸ್ಥಿತ್ಯಂತರ) 'ಕಿರಿದರೊಳ್ ಪಿರಿದು' ಹಿಡಿದಿಟ್ಟ ವಿಶೇಷಾಂಕದ ಹಿಂದಿರುವ ಎಲ್ಲಾ ಶ್ರಮಿಕರು ಅಭಿನಂದನಾರ್ಹರು.

ಮುಂದಿನ ದಿನಗಳಲ್ಲಿ ಮೊದಲಿನಂತೆ ಸಂಚಿಕೆ ಸರ್ವಾಂಗ ಸುಂದರವಾಗಿ ಮೂಡಿಬರಲಿ ಎಂಬ ಹಾರೈಕೆ ನನ್ನದು.

ಶ್ರೀರಂಜನಿ ಅಡಿಗ, ಬೆಂಗಳೂರು

ಮುನ್ನೋಟ 14-11-2021 ರಿಂದ 20-11-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಆದಾಯ ಮತ್ತು ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ನ್ಯಾಯಾಧೀಶರಿಗೆ ನೂತನ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ. ನ್ಯಾಯವಾದಿಗಳಿಗೆ ಹೊಸ ದಾವೆಗಳು ದೊರೆತು ಆದಾಯದ ಹೊಸ ಮೂಲಗಳು ಗೋಚರವಾಗಲಿವೆ. ಸ್ವಪ್ರಯತ್ನದಿಂದ ಕಾರ್ಯ ಕ್ಷೇತ್ರಗಳಲ್ಲಿ ಮುನ್ನಡೆಯನ್ನು ಕಾಣುವಿರಿ. ನಿಮ್ಮ ನಡೆನುಡಿಗಳಿಂದ ಸಹೋದ್ಯೋಗಿಗಳಿಗೆ ಇರಿಸುಮುರಿಸು ಉಂಟಾಗುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ವಿದ್ಯಾರ್ಥಿಗಳು ಅಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಡುವುದು ಒಳ್ಳೆಯದು. ಮುಕ್ತ ಭಾವನೆಯಿಂದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಆಶ್ಚರ್ಯಕರ ರೀತಿಯಲ್ಲಿ ನಿಮ್ಮ ವಿರೋಧಿಗಳು ಸಹ ಕಾರ್ಯಗಳಲ್ಲಿ ಬೆಂಬಲ ಸೂಚಿಸುವರು. ವ್ಯವಹಾರದಲ್ಲಿ ನಿಮ್ಮ ಪ್ರಯತ್ನದಿಂದ ಹೆಚ್ಚು ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಕೃಷಿ ಕ್ಷೇತ್ರಕ್ಕೆ ಬಂಡವಾಳವನ್ನು ಹೂಡುವಾಗ ಸ್ವಲ್ಪ ಎಚ್ಚರ ವಹಿಸಿರಿ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಪ್ರಯಾಣ ಕಾಲದಲ್ಲಿ ನಿಮಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಳ್ಳಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ಕಾಲಮಿತಿಯನ್ನು ಹಾಕಿಕೊಂಡು ಕೆಲಸ ಮಾಡುವುದು ಉತ್ತಮ. ಹಿರಿಯರ ಸಕಾಲಿಕ ಸಲಹೆಗಳಿಂದ ಆಗಬಹುದಾಗಿದ್ದ ಸಾಕಷ್ಟು ನಷ್ಟವನ್ನು ತಪ್ಪಿಸಿಕೊಳ್ಳುವಿರಿ. ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಪದೇಪದೇ ನಿಮ್ಮ ನಿರ್ಧಾರಗಳನ್ನು ಬದಲಿಸುವ ಅನಿರೀಕ್ಷಿತ ನಡವಳಿಕೆಯಿಂದಾಗಿ ಕುಟುಂಬದಲ್ಲಿ ಸ್ವಲ್ಪ ಅಸಹನೆ ಮೂಡುತ್ತದೆ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಹೆಚ್ಚಿನ ಶ್ರಮವನ್ನು ಹಾಕಬೇಕಾಗುತ್ತದೆ. ನಿಮ್ಮ ವ್ಯಾಪಾರದ ನಿಯಮಗಳನ್ನು ಸರಳೀಕರಿಸಿ ಹೆಚ್ಚಿನ ಲಾಭಗಳಿಸುವ ಯೋಜನೆಗಳನ್ನು ರೂಪಿಸುವಿರಿ. ಭಿನ್ನಾಭಿಪ್ರಾಯಗಳಿಂದ ನಿಂತಿದ್ದ ಕೆಲವು ವ್ಯವಹಾರಗಳು ಎಲ್ಲರ ಅಭಿಪ್ರಾಯದಂತೆ ಪುನಃ ಆರಂಭವಾಗುತ್ತವೆ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಯಾವುದೇ ವಿಚಾರದಲ್ಲಿ ಆತುರದ ನಿರ್ಧಾರ ಬೇಡ. ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ. ನಿಮ್ಮ ವೃತ್ತಿಯಲ್ಲಿ ಆಕಸ್ಮಿಕ ತಿರುವು ಪಡೆದು ಶಾರೀರಿಕ ಶ್ರಮ ಕಡಿಮೆಯಾಗಿ ಅಧಿಕಾರಿಯಾಗಿ ಬಡ್ತಿ ದೊರೆಯಬಹುದು. ಮಹಿಳೆಯರಿಗೆ ಕುಟುಂಬ ವ್ಯವಹಾರಗಳಲ್ಲಿ ತೃಪ್ತಿ ಇರುತ್ತದೆ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ವಿವಿಧ ಮೂಲಗಳಿಂದ ಧನಾಗಮನವಾಗಿ ಮನಸ್ಸಿಗೆ ಸಂತೋಷವೆನಿಸುತ್ತದೆ. ನಿಮ್ಮ ಅಸಹನೆಯ ಪ್ರವೃತ್ತಿ ಉಳಿದವರಿಗೆ ಬೇಸರ ಮೂಡಿಸುತ್ತದೆ. ಸ್ನೇಹಿತರೊಂದಿಗೆ ವಿಚಾರವಿನಿಮಯ ಮಾಡಿ ಈ ಅಭಿಪ್ರಾಯವನ್ನು ಹೋಗಲಾಡಿಸಿಕೊಳ್ಳಿರಿ. ಬಹಳ ಕಾಡುತ್ತಿದ್ದ ಸಾಲಗಾರನಿಗೆ ಸಾಲ ಮರುಪಾವತಿ ಮಾಡಿ ಗೌರವ ಉಳಿಸಿಕೊಳ್ಳುವಿರಿ. ವಸ್ತ್ರ ವ್ಯಾಪಾರಿಗಳಿಗೆ ಆದಾಯ ಹೆಚ್ಚುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**

ಬೇರೆಯವರ ಸಮಸ್ಯೆಗಳನ್ನು ಪರಿಹರಿಸಲು ಮಧ್ಯಸ್ಥಿಕೆ ಮಾಡಲು ಹೋಗುವುದು ತಪ್ಪು. ಅಲ್ಲಿ ಯಾರದೋ ಪರ ವಹಿಸಿಕೊಳ್ಳಲು ಹೋಗಿ ಎಲ್ಲರ ಎದುರಿಗೆ ಮುಜುಗರ ಪಡುವಿರಿ. ನಿಮ್ಮ ಅತಿಯಾದ ಆತ್ಮಗೌರವ ನಿಮಗೆ ಮುಳುವಾಗುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಉದ್ಯೋಗದಲ್ಲಿರುವ ಮಹಿಳೆಯರಿಗೆ ಮೇಲಧಿಕಾರಿಗಳಿಂದ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**

ಕುಟುಂಬದ ಸದಸ್ಯರ ಮಧ್ಯೆ ಅಸಹನೆ ಆಗಬಹುದು. ವಿದ್ಯಾರ್ಥಿಗಳಿಗೆ ಏಕಾಗ್ರತೆ ಕಡಿಮೆಯಾದರೂ ಸಾಧನೆಗೆ ತೊಡಕಾಗುವುದಿಲ್ಲ. ನಿಕಟವರ್ತಿಗಳ ಸಹಕಾರದಿಂದ ಕೆಲಸಕಾರ್ಯಗಳಲ್ಲಿ ಪ್ರಗತಿ ಇರುತ್ತದೆ. ವ್ಯವಹಾರದ ವಿಸ್ತರಣೆಗಾಗಿ ಓಡಾಡುತ್ತಿದ್ದ ನಿಮಗೆ ದೂರ ಪ್ರದೇಶದಲ್ಲಿ ವ್ಯವಹಾರದ ವಿಸ್ತರಣೆ ಆಗುತ್ತದೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**

ನಿಮ್ಮ ಕೆಲವೊಂದು ಆಸೆಗಳು ಈಡೇರುವ ಸಾಧ್ಯತೆಗಳಿವೆ. ಕಠಿಣ ಪರಿಶ್ರಮಕ್ಕೆ ಫಲ ದೊರೆತು ಉದ್ಯೋಗದಲ್ಲಿ ಬದಲಾವಣೆಯನ್ನು ಕಾಣುವಿರಿ. ಕೆಲವೊಂದು ವಿಷಯಗಳಲ್ಲಿ ನೀವು ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆಗಳಿವೆ. ಸ್ವಲ್ಪ ಸಮಾಧಾನ ಚಿತ್ತದಿಂದ ವ್ಯವಹರಿಸಿರಿ. ವಿದ್ಯಾರ್ಥಿಗಳು ಸ್ನೇಹಿತರೊಂದಿಗೆ ವಿಷಯ ವಿನಿಮಯ ಮಾಡಿಕೊಳ್ಳುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಮಕ್ಕಳ ಬಗ್ಗೆ ಅತಿಯಾದ ಚಿಂತೆಬೇಡ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ನೌಕರ ವರ್ಗದವರ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಅವರ ಉದ್ಯೋಗದಲ್ಲಿ ಬದಲಾವಣೆಯನ್ನು ಕಾಣಬಹುದು. ಸತ್ಯಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವುದು. ನಿಮ್ಮ ನಿಷ್ಕಲ್ಮಶ ಭಾವನೆಗಳಿಗೆ ಸಹೋದ್ಯೋಗಿಗಳಿಂದ ಸೂಕ್ತವಾದ ಪ್ರಶಂಸೆ ವ್ಯಕ್ತವಾಗುವುದು. ಹಣಕಾಸಿನ ವಿಷಯದಲ್ಲಿ ಸ್ವಲ್ಪ ಜಾಗರೂಕತೆ ಅಗತ್ಯ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಯಂತ್ರೋಪಕರಣಗಳ ತಂತ್ರಜ್ಞರಿಗೆ ಬಿಡುವಿಲ್ಲದ ಕೆಲಸಗಳಿಂದ ಉತ್ತಮ ಆದಾಯವಿದ್ದು ದೇಹಶ್ರಮ ಹೆಚ್ಚಾಗಬಹುದು. ಕೃಷಿ ಯಂತ್ರಗಳನ್ನು ಹೊಂದಿರುವವರಿಗೆ ಬಾಡಿಗೆಯಿಂದ ಹೆಚ್ಚಿನ ಆದಾಯ ಇದೆ. ನಿಮ್ಮ ಸ್ವಪ್ರಯತ್ನದಿಂದ ಆರ್ಥಿಕ ಸ್ಥಿತಿಯನ್ನು ಮೇಲೆತ್ತಲು ಯತ್ನಿಸುವಿರಿ. ಇಷ್ಟಮಿತ್ರರಿಗೆ ಸಾಕಷ್ಟು ಸಹಾಯವನ್ನು ಮಾಡುವಿರಿ. ಪ್ರೀತಿ-ಪ್ರೇಮದಲ್ಲಿ ಬಿದ್ದವರಿಗೆ ಹಿನ್ನಡೆ ಇರುತ್ತದೆ. ಹಿರಿಯರು ಅದಕ್ಕೆ ಒಪ್ಪಿಗೆ ಸೂಚಿಸುವುದು ಕಷ್ಟ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ನಿಮ್ಮ ಸಾಮರ್ಥ್ಯವನ್ನು ಅರಿತು ಕೆಲಸ ಕಾರ್ಯಗಳನ್ನು ಆಯ್ಕೆಮಾಡಿಕೊಳ್ಳಿ. ನೌಕರಿಯಲ್ಲಿರುವವರಿಗೆ ಬಯಸಿದ್ದ ಸ್ಥಳಕ್ಕೆ ವರ್ಗಾವಣೆ ದೊರೆಯುವ ಸಾಧ್ಯತೆ ಇದೆ. ಅತಿಯಾದ ಆತ್ಮೀಯತೆಯನ್ನು ತೋರಿಸುವವರ ಬಗ್ಗೆ ಎಚ್ಚರದಿಂದಿರಿ. ಇವರೇ ನಿಮಗೆ ಮೋಸ ಮಾಡಬಹುದು. ನಿಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ ಇರಲಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ಪದಬಂಧ 2713



ಮೇಲಿನಿಂದ ಕೆಳಕ್ಕೆ

1. ಪಕ್ಕಕ್ಕೆ ಸರಿ 3
2. ಸ್ಪಷ್ಟವಾಗಿ ದೃಢವಾದದ್ದು 3
3. ಅನೇಕ ಸಲ ಪದಬಂಧವನ್ನು ಬಿಡಿಸಲು ಶಬ್ದದ ಬಲೆಯನ್ನೇ ಭೇದಿಸಬೇಕಾಗುತ್ತದೆ 4
4. ಭಾರೀ ಗುಂಪು, ಕಾವ್ಯ ಮಾತ್ರೆಗಳ ದೊಡ್ಡ ಸಮೂಹ 4
5. ಮೀರಾಳ ಜೊತೆಗಿನ ಸಾಹಸಿ ಸುಂದರ ಪ್ರಿಯಕರ 3
7. ಸತ್ಯಭಾಮೆಯ ಸವತಿ, ಕೃಷ್ಣನನ್ನು ತುಳಸಿಯಿಂದ ತೂಗಿದವಳು 3
9. ಎಲ್ಲಾ ಮಂದಿಯ ಒಟ್ಟಾದ ಆಂತರ್ಯ 5
11. ಭೂತ ಭವಿಷ್ಯದಲ್ಲ, ಈವತ್ತು ಈಗ 4
12. ಬಗಲಲ್ಲೇ ಇರುವ ಮೋಸದ ಪಣದವನು 5
13. ಕಷ್ಟವೇ ಇಲ್ಲದ ಸರಾಗ ಸೌಭಾಗ್ಯ ದೇವಿ 4
16. ರಾಜ ಕುಲದ ವರ್ಣ 3
17. ತಂದೆಯ ತಂದೆ ತಲೆಕೆಳಗಾದ ಇಲ್ಲಿ 4
18. ಸೋತು ಅಧೀನನಾಗಿ ತಲೆ ತಗ್ಗಿಸು 4
20. ಕೈಯಾಡಿಸಿ ಹುಡುಕು 3
21. ಮತದಲ್ಲಿ ಹಂತವಾಗಿ ಬರುವ ಮತದ ಮುಖ್ಯಸ್ಥ 3
22. ಬಾಯಿ ಸಿಹಿ ಮಾಡುವ ಸಂಸ್ಕೃತ ಸಕ್ಕರೆ 3

ಎಡದಿಂದ ಬಲಕ್ಕೆ

1. ವಿಪತ್ತಿನಿಂದ ಮಂದಿಯ ನಷ್ಟ 4
3. ವಿರಳವಾಗಿ ಬರುವ ಪದ್ಮ 3
5. ತೊಟ್ಟಿಕ್ಕುವ ಜೇನು 2
6. ಸಪ್ತಾಹದಲ್ಲಿ ಧರ್ಮದ ಹೆಸರಿನ ಮಾರ್ಗದರ್ಶಕನ ದಿನ 4
8. ಆನೆಗಳ ಒಡೆಯ 4
10. ರಾಮಸುತನಿಂದ ಬಂದ ಉಪ್ಪು 3
12. ಅಲೆದುಬಂದು ಸುಸ್ತನ್ನು ಅಡಗಿಸು 5
14. ಅಷ್ಟಸಿದ್ಧಗಳಲ್ಲಿ ಹಗುರವಾದದ್ದು 3
15. ಮಾನವರೂಪಿ ದಾನವ 5
17. ಅಂದುಕೊಂಡಿದ್ದು ಆಗದೆ ಮನ ಸೋತಿದೆ 3
19. ಬಯಕೆಯ ದೇವನನ್ನು ಗೆದ್ದುಬಿಟ್ಟವ 4
21. ಸಣ್ಣ ಸಾಧನೆಯಲ್ಲ ಬಹು ದೊಡ್ಡ ಗೆಲುವು 4
23. ವೇಗಕ್ಕೆ ಹಾಕಬೇಕಾದ ತಡೆ 2
24. ಅನಿಷ್ಟದ ಮಾರಿ 3
25. ಆವರಿಸಿದ ಕತ್ತಲನ್ನು ನಿವಾರಿಸಿ ಬಿಡುವವ 4

ಪದಬಂಧ ಉತ್ತರ -2712

ಮೇಲಿಂದ ಕೆಳಕ್ಕೆ

1. ಅರಸ 2. ಗಡವಾ 3.ಅಧಿ 4.ನಿರೀಶ 5.ವಿಷಯ 7.ಹರಾತ್ಮಜ 8.ಸಮಾಗಮಾ 9.ದನಕರು 11.ಜಯಂತ 13.ಕುಸ್ತಿಪಟು 14.ರಖಿಶಿ 16.ವಸುಂಧರ 17.ಮಹಾಬಂಧ 19.ವಸಂತ 21.ರಸಿಕ 23.ಬಂಜರು 24.ನಗರಿ 25.ಜಾತಿ

ಎಡದಿಂದ ಬಲಕ್ಕೆ

1.ಅಸ್ತಂಗತ 3.ಅಭಿಮಾನಿ 5.ವಿಧಿ 6.ಸಹವಾಸದೋಷ 9.ದಶಕ 10.ಯಜಮಾನ 12.ರಾಜಕುಮಾರ 15.ತವರುಮನೆ 18.ಪರಶಿವ 20.ಒರಟು 22.ಸಂಸಾರಬಂಧನ 25.ಜಾತ 26. ಕಡುಪ್ರೀತಿ 27.ಊರುಕೇರಿ

ಮುದ್ದು ಮಕ್ಕಳೇ,

ಇಂದು ನಿಮ್ಮ ದಿನವಲ್ಲವೇ? ಮಜಕೂರದ 'ಮಜಕಟ ಮೇಷ್ಟ್ರ' **ಎಂ.ಎಸ್. ಪೂಜಾರ** ಅವರು ಈ ಸಲ ನಿಮಗೆ **14** ಆಟಗಳನ್ನು ಹೆಕ್ಕಿ ಕೊಟ್ಟದ್ದಾರೆ. ಆಟದ ಮಜ ನೋಡಿ, ಉತ್ತರಗಳನ್ನು '**ಭಾನುವಾರದ ಪುರವಣಿ**'ಗೂ ಕಳುಹಿಸಿ. ಇನ್ನು ತಡವೇಕೇ? ನಿಮ್ಮಿಷ್ಟದ ಆಟ ಆಯ್ಕೆ ಮಾಡಿಕೊಳ್ಳಿ!

14 ಆಟಗಳು

1 ತ್ರಿಕೋನ ಹೋಗಿ ವೃತ್ತ ಬಂತು ಡುಂ... ಡುಂ...

ನಿಮ್ಮಲ್ಲಿರುವ ಒಂದು ನೋಟ್ ಪುಸ್ತಕದ ಕವರಿನ ಒಂದು ತುಂಡಿನಲ್ಲಿ ಚಿತ್ರದಲ್ಲಿ ತೋರಿಸಿದಂತೆ ಒಂದು ತ್ರಿಕೋನದ ಚಿತ್ರ ತೆಗೆಯಿರಿ. ಆ ಚಿತ್ರದ ಮಧ್ಯದಲ್ಲಿ ಒಂದು ರಂಧ್ರ ಮಾಡಿ. ಒಂದು ಉದ್ದನೆಯ ಮೊಳೆಯನ್ನು ತೂರಿಸಿ ಕೆಳಭಾಗದ ಮೊಳೆಯ ತಲೆಯನ್ನು ಹಿಡಿದು ಮೇಲಿನ ರಟ್ಟಿನ ತುಂಡಿನ ಒಂದು ಅಂಚಿಗೆ ಜೋರಾಗಿ ಹೊಡೆದು ತಿರುಗಿಸಿದರೆ ರಟ್ಟು ತಿರುಗುವಾಗ ರಟ್ಟಿನ ಮಧ್ಯದಲ್ಲಿದ್ದ ತ್ರಿಕೋನ ಮಾಯವಾಗಿ ಅಲ್ಲಿ ಒಂದು ವೃತ್ತಾಕಾರದ ಚಿತ್ರ ಕಾಣುತ್ತದೆ. ಈ ಸೋಜಿಗ ಮಾಡಿ ನೋಡಿ.



2 ಸ್ಥಾನಪಲ್ಲಟ ಆಟ

ಚಿತ್ರದಲ್ಲಿ ತೋರಿಸಿದಂತೆ A ಸ್ಥಾನದಲ್ಲಿ 4 ಹರಳುಗಳು, B ಸ್ಥಾನದಲ್ಲಿ 3 ಹರಳುಗಳು, C ಸ್ಥಾನದಲ್ಲಿ 2 ಹರಳುಗಳು, D ಸ್ಥಾನದಲ್ಲಿ 1 ಹರಳು ಇಡಲಾಗಿದೆ. ನೀವು ಕೆಲವು ಷರತ್ತುಗಳನ್ನು ಪಾಲಿಸಿ. ಇದ್ದ ಕ್ರಮವನ್ನು ವಿರುದ್ಧವಾಗಿ (ರಿವರ್ಸ್) ಹೊಂದಿಸಬೇಕು. ನಿಮ್ಮಿಂದ ಸಾಧ್ಯವೇ?



ಷರತ್ತುಗಳು:

1. ಹರಳನ್ನು ಒಂದೊಂದರಂತೆ 3 ಬಾರಿ ಮಾತ್ರ ಎತ್ತಿಡಬಹುದು
2. ಹೀಗೆ ಹರಳುಗಳನ್ನು ಸ್ಥಾನ ಪಲ್ಲಟ ಮಾಡಿದಾಗ A, B, C, D 4-3-2-1 ಕ್ರಮದಲ್ಲಿದ್ದ ಹರಳುಗಳು ವಿರುದ್ಧ ದಿಕ್ಕಿನಲ್ಲಿ 1-2-3-4 ಆಗುವಂತೆ ಹೊಂದಿಸಬೇಕು. 3 ಬೇರೆ ಹರಳುಗಳನ್ನು ಸೇರಿಸುವಂತಿಲ್ಲ. ಇದ್ದ ಹರಳು ಹೊರಗೆ ತೆಗೆಯುವಂತಿಲ್ಲ. ಪ್ರಯತ್ನಿಸಿ.

3 Z ಬಂದರೆ...

ಎಲ್ಲಾ ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಳ್ಳಬೇಕು. ಎಲ್ಲರೂ ಒಂದೊಂದು ಕ್ರಮಸಂಖ್ಯೆ ಬರೆದು ಒಂದು ಡಬ್ಬಿಯಲ್ಲಿ ಹಾಕಬೇಕು. ಒಬ್ಬ ಲೀಡರ್ ಆ ಡಬ್ಬಿಯಿಂದ ಒಂದು ಸಂಖ್ಯೆ ಹೊರತೆಗೆದು, ಆ ಸಂಖ್ಯೆಯವನಿಂದ ಕ್ರಮವಾಗಿ ಗಡಿಯಾರದ ಆಕಾರದಲ್ಲಿ Aಯಿಂದ ಪ್ರಾರಂಭಿಸಿ B, C, D, E... ಹೀಗೆ Z ಬರುವವರೆಗೂ ಎಣಿಸಬೇಕು. Z ಯಾರಿಗೆ ಬರುವುದೋ ಅವರು ಆಟದಿಂದ 'ಔಟ್' ಎಂದು ಘೋಷಿಸಬೇಕು. ಮತ್ತೆ ಮೊದಲಿನಂತೆ ಡಬ್ಬಿಯಿಂದ ಒಂದು ಸಂಖ್ಯೆ ಹೊರತೆಗೆದು ಆ ಕ್ರಮಸಂಖ್ಯೆಯವರಿಂದ ಹೀಗೇ ಎಣಿಸಬೇಕು. ಹೀಗೆ ಮತ್ತೆ Z ಬಂದವರು 'ಔಟ್'. ಆಗಿ ಕೊನೆಗೆ ಉಳಿಯುವ ಒಬ್ಬರೇ ಗೆದ್ದವರು. 26ಕ್ಕಿಂತ ಹೆಚ್ಚಿಗೆ ಜನ ಇದ್ದರೆ Z ಬಂದಾಗ ಮುಂದಿನ ಕ್ರಮ ಸಂಖ್ಯೆವರಿಂದಲೇ Aಯಿಂದ ಪ್ರಾರಂಭಿಸಬೇಕು. (ಪಿಕ್‌ನಿಕ್‌ಗೆ ಹೋದಾಗ ಈ ಆಟ ಆಡಿ ನೋಡಿ)



4 ಹೊಂದಿಸು–ಆನಂದಿಸು

ಇಲ್ಲಿ ಕೊಟ್ಟಿರುವ ವೃತ್ತದಲ್ಲಿ 1ರಿಂದ 7 ಅಂಕಿಗಳನ್ನು ಒಮ್ಮೆ ಮಾತ್ರ ತುಂಬಬೇಕು. ಹಾಗೆ ತುಂಬಿದಾಗ ನೇರ ಗೆರೆಯ ಮೂರು ವೃತ್ತಗಳ ಮೊತ್ತ 12 ಆಗಬೇಕು. ಪ್ರಯತ್ನಿಸಿ.



5 YES- NO ಆಟ

ಮಕ್ಕಳೆಲ್ಲಾ ಒಂದು ಕಡೆ ಸೇರಬೇಕು. ಒಬ್ಬ ಬಾಲಕ ಮಕ್ಕಳಿಂದ ದೂರ ಹೋಗಿ ಮರೆಯಾಗಿರಬೇಕು. ಮಕ್ಕಳು ಇವನಿಗೆ ಕಾಣಿಸಬಾರದು. ಆಗ ಎಲ್ಲ ಮಕ್ಕಳೂ ಸೇರಿ ₹ 1ರ ನಾಣ್ಯವನ್ನು ತಾವಿದ್ದ ಸ್ಥಳದಲ್ಲೇ ಆ ಬಾಲಕನಿಗೆ ನೇರವಾಗಿ ಕಾಣಿಸದಂತೆ ಬಚ್ಚಿಡಬೇಕು. ಈಗ ಆ ಬಾಲಕನನ್ನು ಆ ನಾಣ್ಯ ಹುಡುಕಲು ಕರೆಯಬೇಕು. ಅಂದರೆ, ಎಲ್ಲಾ ಮಕ್ಕಳೂ ಸೇರಿ ಆ ಬಾಲಕನಿಗೆ ಹುಡುಕಲು ನಿರ್ದೇಶನ ನೀಡಬೇಕು. ಆದರೆ ಯಾರೂ ಬಾಯ್ಬಿಟ್ಟು ಹೇಳಕೂಡದು. ಕಣ್ ಸನ್ನೆ ಮಾಡಕೂಡದು. ಕೇವಲ ಎರಡೇ ಪದ ಬಳಸಬೇಕು. ಒಂದು Yes, ಇನ್ನೊಂದು No. Yes ಎಂದು ಹುಡುಕುವ ಬಾಲಕ ನಾಣ್ಯಕ್ಕೆ ಸಮೀಪ ಇದ್ದಾಗ ಹೇಳಬೇಕು. Yes, No, Yes No ಇಷ್ಟೇ ನಿರ್ದೇಶನದಿಂದ ಆ ಬಾಲಕ ಆ ನಾಣ್ಯ ಹುಡುಕಬೇಕು. ಆಟದ ಸಮಯ 2 ನಿಮಿಷ ಮಾತ್ರ. ಹೀಗೆ ಬೇರೆ ಬೇರೆ ಹುಡುಗರು ಪ್ರಯತ್ನಿಸಬೇಕು.

6 ಕೋ-ಕೋ ಕ್ರೀಡೆ

ಎಲ್ಲ ಮಕ್ಕಳು ಎದ್ದು ನಿಂತಿರಬೇಕು. ಒಬ್ಬನು ಲೀಡರ್ ಆಗಿ ಆಜ್ಞೆ ಕೊಡಬೇಕು. ಕೋಳಿ ಎಂದರೆ ಮಕ್ಕಳು ಕುಳಿತುಕೊಳ್ಳಬೇಕು. ಕೋತಿ ಎಂದರೆ ಮಕ್ಕಳು ಎದ್ದು ನಿಲ್ಲಬೇಕು. ಈ ಆಜ್ಞೆಯ ವಿರುದ್ಧವಾಗಿ ಯಾರು ಮಾಡುತ್ತಾರೋ ಅವರು ಆಟದಿಂದ ಹೊರಗೆ. ಆದರೆ, ಈ ಆಟದ ಮಜಾ ಇರುವುದು ಆ ಲೀಡರ್‌ನ ಕೈಯಲ್ಲಿ. ಆತ ಕೋಳಿ, ಕೋತಿ ಎಂದು ಪೂರ್ಣ ಶಬ್ದ ಹೇಳಬಾರದು. ಕೋsssssss ಎಂದು ರಾಗ ಎಳೆಯುತ್ತಾ ಸಾವಕಾಶವಾಗಿ ಅದಕ್ಕೆ 'ಳಿ' ಅಥವಾ 'ತಿ' ಅಕ್ಷರ ಸೇರಿಸಬೇಕು. ಮಕ್ಕಳು ಗೊಂದಲಕ್ಕೆ ಬಿದ್ದು ಬೇಗ ಬೇಗನೇ ಔಟ್ ಆಗುವರು. ಹಾಗೇ ಕೋಳಿ, ಕೋತಿ ಎಂದು ಅವಸರದಿಂದ ಹೇಳಬೇಕು.

7 ಜಾಣ'ಪ'ದ ಆಟ

ಇಲ್ಲಿ ಕೊಟ್ಟಿರುವ 'ಪ'ದಗಳಿಗೆ ಗುಣಿತಾಕ್ಷರವಿಲ್ಲದ 20 ಮೂಲಾಕ್ಷರಗಳಿಂದ ಆಯ್ದು ತುಂಬಿ ಮೂಲಾಕ್ಷರ ಪದ ರಚಿಸಿ.

1. ಪ ____ ____
2. ಪ ____ ____
3. ಪ ____ ____
4. ಪ ____ ____
5. ಪ ____ ____
6. ಪ ____ ____
7. ಪ ____ ____
8. ಪ ____ ____
9. ಪ ____ ____
10. ಪ ____ ____

ದ	ವ	ನ	ನ	ಕ
ಣ	ಚ	ರ	ದ	ಲ
ಯ	ರ	ಕ	ಮ	ಠ
ತ	ಟ	ನ	ಟ	ಣ

8 ಅಂಕಿಗಳ ಮೇಳ

ಇಲ್ಲಿ 1ರಿಂದ 9 ಅಂಕಿಗಳನ್ನು ಒಮ್ಮೆ ಮಾತ್ರ ಬಳಸಿಕೊಂಡು ಈ ಸಂಕಲನ ಲೆಕ್ಕ ಪೂರ್ಣಮಾಡಿ. ಸುಳಿವಿಗಾಗಿ ನಾವೇ 1 ತುಂಬುತ್ತಿದ್ದೇವೆ.



9 ಪದ-ಹುಡುಕಾಟ



ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಲ್ಲಿ ಅಡಗಿರುವ ಒಬ್ಬ ಖ್ಯಾತ ನಟನ ಹೆಸರು ಹುಡುಕಿಕೊಡಿ.

- ಪುನರ್ಜನ್ಮ
- ನೀ ನನ್ನ ಗೆಲ್ಲಲಾರೆ
- ತವರಿನ ಸಿರಿ
- ರಾಜ ನನ್ನ ರಾಜ
- ಜಗ ಮೆಚ್ಚಿದ ಮಗ
- ಕುಲಗೌರವ
- ಮಾರ್ಗದರ್ಶಿ
- ರವಿಚಂದ್ರ

10 ಚಿಹ್ನಾಟ

ಇಲ್ಲಿ ಕೊಟ್ಟಿರುವ ಆಯತದಲ್ಲಿ ಯಾವುದು ಅತಿ ದೊಡ್ಡ ಸಂಕಲನ ಚಿಹ್ನೆ ಹೇಳಬಲ್ಲಿರಾ?



11 ಅಲ್ಫಾಬೆಟ್ ಗೇಮ್

ಎಷ್ಟು ಮಕ್ಕಳು ಆಟದಲ್ಲಿ ಭಾಗವಹಿಸುತ್ತಾರೋ ಅಷ್ಟೇ ಸಂಖ್ಯೆಯಲ್ಲಿ ಹಾಳೆಯಲ್ಲಿ ಇಂಗ್ಲಿಷಿನ 26 ಅಕ್ಷರಗಳನ್ನೂ ಬರೆದು ಒಂದು ಡಬ್ಬಿಯೊಳಗೆ ಹಾಕಿರಿ. ಕಣ್ಣು ಮುಚ್ಚಿ. ಎಲ್ಲರೂ ಕ್ರಮವಾಗಿ ಹತ್ತು, ಹತ್ತು ಅಕ್ಷರಗಳನ್ನು (ಮೊದಲೇ ಎಲ್ಲಾ ಅಕ್ಷರಗಳನ್ನು ಚೆನ್ನಾಗಿ ಮಿಶ್ರ ಮಾಡಿರಿ) ತೆಗೆದುಕೊಂಡು ಆ ಅಕ್ಷರಗಳಿಂದ ಇಂಗ್ಲಿಷಿನ ಎಷ್ಟು ಶಬ್ದಗಳನ್ನು ರಚಿಸಲು ಸಾಧ್ಯವೋ ಅಷ್ಟು ರಚಿಸಿ ನಿಮ್ಮ ನೋಟ್‌ಬುಕ್‌ನಲ್ಲಿ ಬರೆಯಿರಿ. (ಒಂದು ಅಕ್ಷರವನ್ನು ಮತ್ತೆ ಮತ್ತೆ ಬಳಸಬಹುದು.) ನಂತರ ಪ್ರತಿ ಪದಕ್ಕೂ ಆಯಾ ಅಕ್ಷರಗಳ ಸಂಖ್ಯೆ ಬೆಲೆಯನ್ನು ಕೂಡಿಸಿ ಒಟ್ಟು ಮೊತ್ತ ಕಂಡು ಹಿಡಿಯಿರಿ. (A = 1 B = 2 C = 3 ಹೀಗೆ ಮೊದಲೇ ನಿರ್ಧರಿಸಿರಿ) ಯಾರ ಮೊತ್ತ ಹೆಚ್ಚಾಗಿರುತ್ತದೋ ಅವರು ಗೆದ್ದಂತೆ.

ಉದಾ: MAP

M = 13
A = 01
P = 16
30

ಹೀಗೆ ಒಟ್ಟು ಪದಗಳ ಮೊತ್ತ ಕಂಡುಹಿಡಿಯಿರಿ

12 ಉಪಲಬ್ಧ ಶೂನ್ಯ

ಒಂದು ಸಂಖ್ಯೆಯನ್ನು ಬರೆದುಕೊಳ್ಳಿ. ಅದರ ವಿಲೋಮ ಸಂಖ್ಯೆಯನ್ನು ಮೊದಲು ಬರೆದ ಸಂಖ್ಯೆಯ ಪಕ್ಕದಲ್ಲೇ ಬರೆದು ಅದನ್ನು 11ರಿಂದ ಭಾಗಿಸಿದರೆ ಯಾವಾಗಲೂ ಪೂರ್ಣಭಾಗವಾಗುತ್ತದೆ.

ಉದಾ: **37**

11) 3773 (343
33
47
44
33
33
00

13 ಅದೇ ಮೊತ್ತ

ಸಮಾನ ಅಂತರದ 4 ಸಂಖ್ಯೆಗಳನ್ನು ಬರೆದುಕೊಂಡು ಅವುಗಳ 3ನೇ ಸಂಖ್ಯೆಗೆ 3ರಿಂದ ಗುಣಿಸಿ. ಅದರ ಮೊದಲ ಸಂಖ್ಯೆಯನ್ನು ಅದಕ್ಕೆ ಕೂಡಿಸಿದರೆ ನಾಲ್ಕು ಸಂಖ್ಯೆಗಳ ಮೊತ್ತಕ್ಕೆ ಸಮವಾಗಿರುತ್ತದೆ. ಮಾಡಿ ನೋಡಿ.

28+32+36+40 = 136

ಇಲ್ಲಿ ಮೂರನೇ ಸಂಖ್ಯೆ **36**
3ರಿಂದ ಗುಣಿಸಿದರೆ **x 3**
108
ಮೊದಲ ಸಂಖ್ಯೆ ಕೂಡಿದಾಗ **28**
136

14 ಜನ್ಮ ದಿನಾಂಕ

ಇಂದು ಮಕ್ಕಳ ದಿನಾಚರಣೆ. ಚಾಚಾ ನೆಹರೂ ಅವರ ಜನ್ಮದಿನ. ಅವರ ಜನ್ಮ ದಿನಾಂಕವನ್ನು ತಿಳಿಯಬೇಕೇ? ಹಾಗಾದರೆ ಈ ಲೆಕ್ಕ ಮಾಡಿ.

1282899
x 11



ಮಕ್ಕಳು ನಕ್ಕರೆ

ಮಕ್ಕಳು ನಕ್ಕರೆ ಪ್ರೀತಿಯ ತೋರಿರಿ
ಮಕ್ಕಳ ನಗೆಯೇ ಸಕ್ಕರೆ
ಮಕ್ಕಳು ಸಿಕ್ಕರೆ ಆಟವ ಆಡಿರಿ
ಆಗಲೆ ಉಕ್ಕುದು ಅಕ್ಕರೆ

ಮಕ್ಕಳು ಅಂದರೆ ಕಣ್ಣಿಗೆ ಕಾಣುವ
ಸಾಕ್ಷಾತ್ ದೇವರ ರೂಪ
ಮಕ್ಕಳು ಅಂದರೆ ಮನೆಯಲಿ ಹಚ್ಚಿದ
ಆರದ ನಂದಾ ದೀಪ

ಮಕ್ಕಳ ಮಾತು ಮಾತಿಗೆ ಸೋತು
ಜಗವನೆ ಮರೆವೆವು ನಾವು
ಮಕ್ಕಳು ಅಂದರೆ ದೇವರ ತೋಟದ
ಬಗೆ ಬಗೆ ನಗುವ ಹೂವು

ಇಂದಿನ ಮಕ್ಕಳೆ ನಾಳಿನ ಪ್ರಜೆಗಳು
ಮಕ್ಕಳೇ ದೇಶದ ಆಸ್ತಿ
ಮಕ್ಕಳ ಪ್ರತಿಭೆಯ ಹೆಚ್ಚಿಗೆ ಬೆಳೆಸಿ
ಪ್ರೋತ್ಸಾಹಿಸಿ ಜಾಸ್ತಿ

ಮಕ್ಕಳ ನಡೆಯಲಿ ಮಕ್ಕಳ ನುಡಿಯಲಿ
ಎನಿತು ಕಲ್ಮಷವಿಲ್ಲ
ಮಕ್ಕಳ ಆಟವ ಪಾಠವ ನೋಡಿ
ಸವಿಯಿರಿ ಹಾಲು ಬೆಲ್ಲ



ದಣ್ಣ ಚಿಕ್ಕ ಕೇಶ್ರಷ್ಟ ಕಥೆಯ ಚಾಚಾ ನೆಹರೂ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ. ನವೆಂಬರ್ 14, 1889ರಲ್ಲಿ ಅಲಹಾಬಾದ್‌ನಲ್ಲಿ ಅವರು ಜನಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದವರು

ನೆಹರೂ ಅವರಿಗೆ ಮಕ್ಕಳೆಂದರೆ ತುಂಬಾ ಪ್ರೀತಿ. ಮಕ್ಕಳು ಹೂತೋಟದ ಮೊಗ್ಗುಗಳಿದ್ದಂತೆ ಎನ್ನುತ್ತಿದ್ದರು. ಮಕ್ಕಳಿಗೂ ಅವರ ಮೇಲೆ ತುಂಬಾ ಪ್ರೀತಿ. ಚಾಚಾ ನೆಹರೂ ಎಂದು ಕರೆಯುತ್ತಿದ್ದರು

ಮಕ್ಕಳ ಆಟ ಪಾಠ ಎಲ್ಲವೂ ನೆಹರೂ ಅವರಿಗೆ ಇಷ್ಟವಾಗುತ್ತಿದ್ದ ಸಂಗತಿಗಳು. ಇವೆಲ್ಲವುಗಳನ್ನು ನೆಹರೂ ಅವರು ತಮ್ಮ ಮಾತು, ಕೃತಿಗಳಲ್ಲಿ ಅಲ್ಲಲ್ಲಿ ದಾಖಲಿಸಿದ್ದಾರೆ

ನೆಹರೂ ಅವರು ಮಕ್ಕಳ ಮೇಲಿನ ಮಮತೆಯಿಂದ ತಾವು ಹುಟ್ಟಿದ ದಿನವನ್ನು (ನವೆಂಬರ್ 14) ಮಕ್ಕಳ ದಿನಾಚರಣೆ ಎಂದು ಆಚರಿಸಲು ಕರೆಕೊಟ್ಟ ಕಾರಣ ದೇಶದಾದ್ಯಂತ ಹಾಗೇ ಆಚರಿಸಲಾಗುತ್ತಿದೆ

ತಮ್ಮ ಪುತ್ರಿ ಇಂದಿರಾ ಗಾಂಧಿ ಅವರು ವಸತಿ ಶಾಲೆಯಲ್ಲಿ ಓದುತ್ತಿದ್ದಾಗ ನೆಹರೂ ಬರೆದ ಪತ್ರಗಳು 'ಲೆಟರ್ಸ್ ಫ್ರಮ್ ಎ ಫಾದರ್ ಟು ಹಿಸ್ ಡಾಟರ್' ಹೆಸರಿನಲ್ಲಿ ಖ್ಯಾತ ಕೃತಿಯಾಗಿ ಪ್ರಕಟಗೊಂಡಿದೆ

ನೆಹರೂ ಅವರ ಚಿಂತನೆಗಳು, ದೂರದೃಷ್ಟಿಯ ಯೋಜನೆಗಳ ಅನುಷ್ಠಾನ, ದೇಶದ ಅಭಿವೃದ್ಧಿಗೆ ಅವರ ಕೊಡುಗೆಗಳ ಕಾರಣಕ್ಕೆ ಅವರನ್ನು ದೇಶ ಸ್ಮರಿಸುತ್ತದೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಗಣಿತದಲ್ಲಿ ಗಮ್ಮತ್ತು: (ಸಿನಿಮಾ ನೋಡಿದವರ ಹೆಸರು – ಸಿನಿಮಾ ಹೆಸರು – ಟಾಕೀಸ್ ಈ ಕ್ರಮದಲ್ಲಿ) ವಿನೋದ – ಪರಮಾತ್ಮ – ಕರ್ನಾಟಕ, ಪ್ರಸಾದ – ಅಣ್ಣಾಬಾಂಡ್ – ಮಹಾಲಕ್ಷ್ಮಿ, ಉಲ್ಲಾಸ – ಜಾಕಿ – ಕೃಷ್ಣ, ಭಾಗ್ಯಶ್ರೀ –ಡ್ರಾಮಾ – ವೆಂಕಟೇಶ.
ಅದಲು ಬದಲು ಕಂಚಿ ಕದಲು: 1. ಮಡಿಕೇರಿ, 2. ಜಮಖಂಡಿ, 3. ವಿಜಾಪುರ, 4. ಮೂಡಲಗಿ, **ಪದ ಹಿಗ್ಗು:** 1. ಕಾರ್ತಿಕ, 2. ಇವರು, 3 ಮಾತಾಡು, 4. ಗಾರುಡಿ, 5. ತರಲೆ, 6. ಸಕಲ, 7. ಕೂಡಿಸು, 8. ಬಯಲು
ಟ್ವೆಂಟಿ–20 ಮ್ಯಾಚ್: I) 1. C 2. G 3. I 4. B 5. A 6. J 7. F 8. I 9. D 10. E. II) 1. F 2. I 3. G 4. B 5. E 6. H 7. A 8. J 9. C 10. D

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಜರ್ಮನಿಯಲ್ಲಿ ಕೊರೊನಾ ಸೋಂಕು ಗರಿಷ್ಠ ಪ್ರಮಾಣಕ್ಕೆ ಏರಿಕೆ

ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ: ಮರ್ಕೆಲ್



ಮುಖ್ಯಾಂಶಗಳು

- ಲಸಿಕೆ ಪಡೆಯಲು ಮನವೊಲಿಸುವಂತೆ ಮರ್ಕೆಲ್ ಮನವಿ
- ರಷ್ಯಾದಲ್ಲಿ ಶನಿವಾರ ಒಂದೇ ದಿನ 1,241 ಮಂದಿ ಕೋವಿಡ್‌ನಿಂದ ಮೃತ

ಬರ್ಲಿನ್ (ಎಪಿ): ಜರ್ಮನಿಯಲ್ಲಿ ಕೊರೊನಾ ವೈರಸ್ ಸೋಂಕಿನ ಪ್ರಮಾಣವು ಗರಿಷ್ಠ ಪ್ರಮಾಣವನ್ನು ತಲುಪಿದ್ದು, ಸಾವಿನ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿನ ಚಾನ್ಸಲರ್ ಅಂಗೆಲಾ ಮರ್ಕೆಲ್ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕೆಂದು ಶನಿವಾರ ಕರೆ ನೀಡಿದ್ದಾರೆ.

'ನಮ್ಮ ಮುಂದೆ ಕಷ್ಟಕರವಾದ ದಿನಗಳು ಎದುರಾಗಿವೆ. ಅದರೆ, ನಾವೆಲ್ಲ ಒಟ್ಟಿಗೆ ನಿಂತರೆ ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಮತ್ತು ಇತರರನ್ನು ಕಾಳಜಿ ವಹಿಸುವ ಬಗ್ಗೆ ಯೋಚಿಸಿದರೆ, ಈ ಚಳಿಗಾಲದಲ್ಲಿ ನಾವು ನಮ್ಮ ದೇಶವನ್ನು ಉಳಿಸಬಹುದು' ಎಂದು ಮರ್ಕೆಲ್ ಅವರು ತಮ್ಮ ವಾರಾಂತ್ಯದ ಪಾಡ್‌ಕಾಸ್ಟ್ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

ಲಸಿಕೆ ಪಡೆಯದ ಸ್ಥಳಗಳಲ್ಲಿನ ಜನರ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಮರ್ಕೆಲ್ ಅವರು, 'ಲಸಿಕಾ ಅಭಿಯಾನದಲ್ಲಿ ನಮ್ಮೊಂದಿಗೆ ಕೈಜೋಡಿಸಿ. ಲಸಿಕೆ ಪಡೆಯಲು ನಮ್ಮ ಸ್ನೇಹಿತರು ಮತ್ತು ಸಂಬಂಧಿಕರ ಮನವೊಲಿಸಲು ಯತ್ನಿಸಿ' ಎಂದೂ ಕೋರಿದ್ದಾರೆ.

ರಷ್ಯಾದಲ್ಲಿ ಫೆಬ್ರುವರಿ ವೇಳೆಗೆ ಲಾಕ್‌ಡೌನ್?; (ಮಾಸ್ಕೊ ವರದಿ): 'ರಷ್ಯಾದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದಂತೆ ಹೊಸ ನಿರ್ಬಂಧಗಳನ್ನು ಸಂಸತ್ತಿನಲ್ಲಿ ಶುಕ್ರವಾರ ಮಂಡಿಸಲಾಗಿದ್ದು, ಬರುವ ಫೆಬ್ರುವರಿ 1ರಿಂದ ಜಾರಿಗೆ ಬರಲಿದೆ' ಎಂದು ರಷ್ಯಾದ ಉಪ ಪ್ರಧಾನಿ ಟಟ್ಯಾನಾ ಗೋಲಿಕೋವಾ ತಿಳಿಸಿದ್ದಾರೆ.

ಕೋವಿಡ್ ಕಾರ್ಯಪಡೆಯ ಮುಖ್ಯಸ್ಥರೂ ಆಗಿರುವ ಟಟ್ಯಾನಾ ಅವರು, 'ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ನಿರ್ಬಂಧವನ್ನು ವಿಧಿಸಲಾಗುವುದು. ರೈಲು ಮತ್ತು ವಿಮಾನ ನಿರ್ಬಂಧಗಳು ಯಾವಾಗ ಜಾರಿಗೆ ಬರುತ್ತವೆ ಎನ್ನುವ ಕುರಿತು ಪ್ರತ್ಯೇಕ ದಿನಾಂಕವನ್ನು ಪ್ರಕಟಿಸಲಾಗುವುದು' ಎಂದೂ ಹೇಳಿದ್ದಾರೆ. ಶನಿವಾರ ಒಂದೇ ದಿನ ದೇಶದಲ್ಲಿ ದಾಖಲೆಯ 1,241 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ನೆದರ್ಲೆಂಡ್ಸ್: 3 ವಾರಗಳ ಭಾಗಶಃ ಲಾಕ್‌ಡೌನ್

ಹೇಗ್ (ಎಪಿ): ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ನೆದರ್ಲೆಂಡ್ಸ್‌ನಲ್ಲಿ ಮೂರು ವಾರಗಳ ಭಾಗಶಃ ಲಾಕ್‌ಡೌನ್ ಮಾಡಲಾಗುವುದು ಎಂದು ಅಲ್ಲಿನ ಹಂಗಾಮಿ ಪ್ರಧಾನಿ ಮಾರ್ಕ್ ರುಟ್ ಶನಿವಾರ ಘೋಷಿಸಿದ್ದಾರೆ.

ಶನಿವಾರ ರಾತ್ರಿಯಿಂದಲೇ ಲಾಕ್‌ಡೌನ್ ಆರಂಭಿಸಲಾಗಿದ್ದು, ಪಶ್ಚಿಮ ಯುರೋಪಿನಲ್ಲಿ ಭಾಗಶಃ ಲಾಕ್‌ಡೌನ್ ಘೋಷಿಸಿದ ಮೊದಲ ದೇಶ ಇದಾಗಿದೆ.

ಫಿನೊ ಪೇಮೆಂಟ್ಸ್ ಬ್ಯಾಂಕ್ ಲಾಭ ಶೇ 74ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಫಿನೊ ಪೇಮೆಂಟ್ಸ್ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 7.89 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 4.52 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 74ರಷ್ಟು ಹೆಚ್ಚಾಗಿದೆ.

ಬ್ಯಾಂಕ್‌ನ ವರಮಾನವು ₹ 242 ಕೋಟಿಗಳಷ್ಟಾಗಿದ್ದು, ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 35ರಷ್ಟು ಏರಿಕೆ ಕಂಡುಬಂದಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಫಿನೊ ಬ್ಯಾಂಕ್ ಈಚೇಗಷ್ಟೇ ಐಪಿಒಗೆ ಬಂದಿದ್ದು, ಶುಕ್ರವಾರ ಎನ್‌ಎಸ್‌ಇ ಮತ್ತು ಬಿಎಸ್‌ಇನಲ್ಲಿ ನೋಂದಣಿ ಆಗಿದೆ.

ದೇಶದ ಷೇರುಪೇಟೆಗಳಲ್ಲಿ ನೋಂದಾಯಿತ ಮೊದಲ ಪೇಮೆಂಟ್ಸ್ ಬ್ಯಾಂಕ್ ಇದಾಗಿದೆ.

ವಾರದ ವಹಿವಾಟು ಸಕಾರಾತ್ಮಕ ಅಂತ್ಯ

ಹೂಡಿಕೆದಾರರ ಸಂಪತ್ತು ₹ 5 ಲಕ್ಷ ಕೋಟಿ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯಕಂಡಿದ್ದು, ಮುಂಬೈ ಷೇರು ಪೇಟೆಯ (ಬಿಎಸ್‌ಇ) ಹೂಡಿಕೆದಾರರ ಸಂಪತ್ತು ಮೌಲ್ಯವು ₹ 5.14 ಲಕ್ಷ ಕೋಟಿಗಳಷ್ಟು ವೃದ್ಧಿಯಾಗಿದೆ. ಇದರಿಂದಾಗಿ ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳ ಒಟ್ಟಾರೆ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 270.14 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 619 ಅಂಶಗಳಷ್ಟು ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 186 ಅಂಶ ಹೆಚ್ಚಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ವಾರದ ವಹಿವಾಟಿನ ಅವಧಿಯಲ್ಲಿ ಮಾರಾಟಕ್ಕೆ ಹೆಚ್ಚಿನ ಗಮನ ನೀಡಿದ್ದಾರೆ. ಷೇರುಪೇಟೆಯಿಂದ ₹ 2,967 ಕೋಟಿಗೂ ಹೆಚ್ಚಿನ ಮೊತ್ತವನ್ನು ಹಿಂದಕ್ಕೆ ಪಡೆದಿದ್ದಾರೆ.

ಹಣದುಬ್ಬರ ಮತ್ತು ಕೈಗಾರಿಕಾ ಉತ್ಪಾದನೆಯ ಅಂಕಿ-ಅಂಶಗಳು ಸೋಮವಾರ ಷೇರುಪೇಟೆಗಳ ವಹಿವಾಟಿನ ಮೇಲೆ ಪ್ರಭಾವ ಬೀರಲಿವೆ. ತ್ರೈಮಾಸಿಕ ಫಲಿತಾಂಶ ಪ್ರಕಟಣೆ ಸದ್ಯಕ್ಕೆ ಇಲ್ಲದೇ ಇರುವುದರಿಂದ ನಂತರದ ದಿನಗಳಲ್ಲಿ ದೇಶಿ ಷೇರುಪೇಟೆಗಳು ಜಾಗತಿಕ ಮಾರುಕಟ್ಟೆಗಳ ಪ್ರಭಾವಕ್ಕೆ ಒಳಗಾಗಲಿವೆ ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಕಚ್ಚಾ ತೈಲ ದರ ಇಳಿಕೆ: ಬ್ರೆಂಟ್ ಮತ್ತು ಅಮೆರಿಕದ ವೆಸ್ಟ್ ಟೆಕ್ಸಸ್ ಇಂಟರ್‌ಮಿಡಿಯೇಟ್ (ಡಬ್ಲ್ಯುಟಿಎಸ್) ದರ್ಜೆಯ ಕಚ್ಚಾ ತೈಲ ದರ ವಾರದ ವಹಿವಾಟಿನಲ್ಲಿ ಕ್ರಮವಾಗಿ ಶೇ 0.7 ಮತ್ತು ಶೇ 0.6ರಷ್ಟು ಇಳಿಕೆ ಕಂಡಿವೆ. ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ 82.17 ಮತ್ತು ಡಬ್ಲ್ಯುಟಿಐ ದರ್ಜೆಯ ಕಚ್ಚಾ ತೈಲ ದರವು ಬ್ಯಾರಲ್‌ಗೆ 80.79ರಷ್ಟಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

₹ 51,060 ಕೋಟಿ ಮೌಲ್ಯದ ಟೆಸ್ಲಾ ಷೇರು ಮಾರಿದ ಮಸ್ಕ್

ನ್ಯೂಯಾರ್ಕ್ (ಎಎಫ್‌ಪಿ): ಟೆಸ್ಲಾ ಕಂಪನಿಯ ಸಿಇಒ ಎಲಾನ್ ಮಸ್ಕ್ ಅವರು ಒಂದು ವಾರದಲ್ಲಿ ₹ 51,060 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮಸ್ಕ್ ಅವರು ಒಟ್ಟಾರೆ 51 ಲಕ್ಷ ಟೆಸ್ಲಾ ಷೇರುಗಳನ್ನು ಮಾರಾಟ ಮಾಡಿದ್ದು, ಇದರಲ್ಲಿ 42 ಲಕ್ಷ ಷೇರುಗಳನ್ನು ಟ್ರಸ್ಟ್‌ನಲ್ಲಿ ಹೊಂದಿದ್ದರು.

ಅವರು ಷೇರುಗಳನ್ನು ಮಾರಾಟ ಮಾಡಿದ್ದರಿಂದ ಕಂಪನಿಯ ಷೇರು ಮೌಲ್ಯದಲ್ಲಿ ಭಾರಿ ಇಳಿಕೆ ಕಾಣುವಂತೆ ಮಾಡಿದೆ. ವಾರದ ವಹಿವಾಟಿನಲ್ಲಿ ಷೇರುಗಳ ಮೌಲ್ಯವು ಶೇ 15.4ರಷ್ಟು ಇಳಿಕೆ ಕಂಡಿದೆ.

ಕಂಪನಿಯಲ್ಲಿನ ಶೇ 10ರಷ್ಟು ಷೇರುಗಳನ್ನು ಮಾರಾಟ ಮಾಡಬಹುದೇ ಎನ್ನುವ ಕುರಿತು ಅಭಿಪ್ರಾಯ ತಿಳಿಸುವಂತೆ ಮಸ್ಕ್ ಅವರು ಟ್ವಿಟರ್ ಪೋಲ್ ಸೃಷ್ಟಿಸಿದ್ದರು. ಷೇರುಗಳನ್ನು ಮಾರಾಟ ಮಾಡುವುದರ ಪರವಾಗಿ ಶೇ 58ರಷ್ಟು ಮತಗಳು ಬಂದಿದ್ದವು. ಆ ಬಳಿಕ ಮಸ್ಕ್ ಅವರು ಷೇರುಗಳ ಮಾರಾಟ ಮಾಡಿದ್ದಾರೆ.

ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಕಮಿಷನ್‌ನಲ್ಲಿ ಇರುವ ಮಾಹಿತಿಯ ಪ್ರಕಾರ, 51 ಲಕ್ಷ ಷೇರುಗಳನ್ನು ಮಾರಾಟ ಮಾಡಿದ ಬಳಿಕವೂ ಎಲನ್ ಮಸ್ಕ್ ಅವರ ಬಳಿ 16.7 ಕೋಟಿ ಟೆಸ್ಲಾ ಷೇರುಗಳು ಉಳಿದಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ವಿಶ್ವ ಡಯಾಬಿಟಿಸ್ ಜಾಗೃತಿ ದಿನ
ಸಕ್ಕರೆ ಕಾಯಿಲೆ ನಿಯಂತ್ರಣ ಬಗ್ಗೆ ತಿಳಿಯೋಣ
ಮಾಹಿತಿ ನೀಡುವವರು:
ಡಾ. ಆದಿತ್ಯ ಎಸ್. ಚೌತಿ, ಹಿರಿಯ ಸಲಹೆಗಾರರು, ಇಂಟರ್ನಲ್ ಮೆಡಿಸಿನ್, ಫೋರ್ಟಿಸ್ ಆಸ್ಪತ್ರೆ, ಬನ್ನೇರುಘಟ್ಟ, ಬೆಂಗಳೂರು
ಬೆಳಿಗ್ಗೆ 11 ಗಂಟೆಗೆ

ಕ್ಲಬ್ ಹೌಸ್
ಮಾತ್ತು ಕತೆ...
ತಜ್ಞರೊಂದಿಗೆ ಮಾತುಕತೆ
ಮಕ್ಕಳು - ಮನರಂಜನೆ
ಪಿ.ಶೇಷಾದ್ರಿ, ಸಿನಿಮಾ ನಿರ್ದೇಶಕ
ಕವಿತಾ ರತ್ನ, ಮಕ್ಕಳ ಹಕ್ಕು ಕಾರ್ಯಕರ್ತೆ
ಶಂಕರ ಹಲಗತ್ತಿ, ಸಂಸ್ಥಾಪಕ ಅಧ್ಯಕ್ಷ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ
ಡಾ.ಸುಜ್ಞಾನಿ, ಮಕ್ಕಳ ಮತ್ತು ಹದಿ ಹರೆಯದವರ ಮನೋಚಿಕಿತ್ಸಕಿ
ಹೇಮಾ ಖುರ್ಸಾಪೂರ, ಭಾಷಾ ಸಂಪಾದಕಿ, ಪ್ರಥಮ್ ಬುಕ್ಸ್
ಪ್ರಜಾವಾಣಿ ಆಲದಮರ
ಬೆಳಿಗ್ಗೆ 10.30 ರಿಂದ 12.30

ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಕಥಾಸಾಗರ ಸಂಜೆ 4 ವೈದ್ಯಮಿತ್ರ

ಮಂಗಳವಾರ
ಮುಖಾಮುಖಿ
ಸೆಲೆಬ್ರಿಟಿ LIVE
ಸಾಹಿತಿ, ವಾಗ್ಮಿ, ನಿರ್ದೇಶಕ, ಶಿಕ್ಷಣ ತಜ್ಞ, ಹೋರಾಟಗಾರ
ಬರಗೂರು ರಾಮಚಂದ್ರಪ್ಪ
ಅವರ ಜೊತೆಗೆ

16 ನವೆಂಬರ್ 2021, ಬೆಳಿಗ್ಗೆ 11ರಿಂದ 12

ಅಂತರರಾಷ್ಟ್ರೀಯ ಕಾನೂನು ಆಯೋಗ ಸದಸ್ಯರಾಗಿ ಪ್ರೊ.ವಿಮಲ್ ಪಟೇಲ್

ವಿಶ್ವಸಂಸ್ಥೆ (ಪಿಟಿಐ): ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಕುಲಪತಿ ಮತ್ತು ಭಾರತದ ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿ ಸದಸ್ಯ ಪ್ರಾಧ್ಯಾಪಕ ವಿಮಲ್ ಪಟೇಲ್ ಅವರು ಅಂತರರಾಷ್ಟ್ರೀಯ ಕಾನೂನು ಆಯೋಗದ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಪಟೇಲ್ ಅವರ ಅಧಿಕಾರಾವಧಿ 2023ರ ಜನವರಿ 1ರಿಂದ ಐದು ವರ್ಷಗಳಾಗಿವೆ. ವಿಶ್ವಸಂಸ್ಥೆಯಲ್ಲಿ ನಡೆದ ಕಠಿಣ ಸ್ಪರ್ಧೆಯಲ್ಲಿ ಆಯ್ಕೆ ನಡೆಯಿತು. 8 ಸ್ಥಾನಗಳಿಗೆ ನಡೆದ ಚುನಾವಣೆಗೆ ಏಷ್ಯಾ ಪೆಸಿಫಿಕ್ ರಾಷ್ಟ್ರಗಳ ಸಮೂಹದಿಂದ 11 ಅಭ್ಯರ್ಥಿಗಳು ಕಣದಲ್ಲಿದ್ದರು.

51ರ ಹರೆಯದ ಪಟೇಲ್ ಅವರು 163 ಮತ ಪಡೆದರು. ಏಷ್ಯಾ–ಪೆಸಿಫಿಕ್ ಸಮೂಹದಲ್ಲಿರುವ ಚೀನಾ, ದಕ್ಷಿಣ ಕೊರಿಯಾ ಮತ್ತು ಜಪಾನ್ ಸೇರಿದಂತೆ 192 ರಾಷ್ಟ್ರಗಳ ಸದಸ್ಯರು ಮತದಾನ ಮಾಡಿದರು.

ವಿಮಲ್ ಪಟೇಲ್ ಅವರಿಗೆ ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಪ್ರತಿನಿಧಿ ರಾಯಭಾರಿ ಟಿ.ಎಸ್. ತಿರುಮೂರ್ತಿ ಅಭಿನಂದಿಸಿದ್ದಾರೆ. ಟ್ವೀಟ್ ಮಾಡಿರುವ ಅವರು, 'ಅಂತರರಾಷ್ಟ್ರೀಯ ಕಾನೂನು ಆಯೋಗಕ್ಕೆ ಆಯ್ಕೆಯಾಗಲು, ಏಷ್ಯಾ ಪೆಸಿಫಿಕ್ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ವಿಮಲ್ ಪಟೇಲ್ ಅವರಿಗೆ ಅಭಿನಂದನೆಗಳು. ಬೆಂಬಲಿಸಿದ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಧನ್ಯವಾದಗಳು' ಎಂದು ಹೇಳಿದ್ದಾರೆ.

ಪಟೇಲ್ ಅವರು 163 ಮತ ಪಡೆದು ಮೊದಲಿಗರಾದರೆ ನಂತರದ ಸ್ಥಾನದಲ್ಲಿ ಥಾಯ್ಲೆಂಡ್ 162, ಜಪಾನ್ 154, ವಿಯೆಟ್ನಾಂ ಪ್ರತಿನಿಧಿ 145 ಮತ ಪಡೆದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

8ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಸಿ.ನಂಜೇಗೌಡ
ಇಂತಿ: ಕೆ.ಹೆಚ್.ಲಕ್ಷ್ಮಮ್ಮ, ಎನ್.ಎಸ್ ಕುಮಾರ್, ರಾಧಾ, ಕೆ.ಎನ್.ರಘುನಾಥ ಕುಟುಂಬ

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಶಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
Tumkur
FARM LAND: Gated Community with Sandalwood Trees House @ ID Halli, Madhugiri, Tumkur. Call- Shashi@ 9886994437
Ramamurthy Nagar
2BHK FOR sale near KOSHYS HOSPITAL , RAMAMURTHY NAGAR, Bangalore.Contact: 7349054841. Genuine buyers

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+OT. 17,800-48,000/-. 9538811211, 9538811200.
ಬೆಂಗಳೂರಿನ ನೆಲಮಂಗಲ, ಜಕ್ಕಸಂದ್ರ, ಪೆಟ್ರೋಲ್ ಬಂಕ್ ಗೆ. ಪಂಪ್ ಕ್ಯಾಷಿಯರ್, ಅಟೆಂಡರ್. ಕೆಲಸಕ್ಕೆ ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ, ಬೆಳಗ್ಗೆ 5.00ರಿಂದ ರಾತ್ರಿ 10.00ರವರೆಗೆ. ಕೆಲಸ ದಿನ ಬಿಟ್ಟು ದಿನ. ಸಂಪರ್ಕಿಸಿ: 8618738917
Marketing & Sales
WANTED SALES Executives with Good Industrial Knowledge. Bike Must Jain Bearings. 09986781877, 09741966767.

Wanted
ಬೆಂಗಳೂರಿನಲ್ಲಿರುವ ಟ್ರಾನ್ಸ್ ಪೋರ್ಟ್ ಕಂಪನಿಗೆ ಅನುಭವವುಳ್ಳ,ಟಾಟಾ ಸೂಪರ್ ಏಸ್ ವಾಹನಕ್ಕೆ,ಬ್ಯಾಚ್ ಲೈಸೆನ್ಸ್ ಹೊಂದಿರುವ ಡ್ರೈವರ್ ಗಳು ಬೇಕಾಗಿದ್ದಾರೆ,ಸಂಪರ್ಕಿಸಿ: 8778192937/ 08041465999
ನರ್ಸರಿ ಪ್ಲಾಂಟನ್ನು ಮತ್ತು 35ಕೆಲಸಗಾರರ ತಂಡವನ್ನು ನೋಡಿಕೊಳ್ಳಲು, ಅನುಭವವುಳ್ಳ ವ್ಯಕ್ತಿ ಬೇಕಾಗಿದ್ದಾರೆ, ಸ್ಥಳೀಯ ಭಾಷೆ ಬಲ್ಲವರಿಗೆ ಆದ್ಯತೆ. ಸಂಪರ್ಕಿಸಿ. 9901971819.

ವಾಹನ
Four Wheelers Selling
Others
ESCOTS ಅಥವಾ Ace, F16 crane ಬೇಕಾಗಿದೆ. 3 4 ವರ್ಷ ಹಳೆಯದಾದ crane ಉತ್ತಮವಾಗಿರಬೇಕು. ಕೂಡಲೇ ಸಂಪರ್ಕಿಸಿ 9900240446

ವ್ಯಾಪಾರ
Business Offers
Finance
APERIO LOAN get from 15CR TO 150 CR, Interest @3-6%, Against Viable Projects, LAP, Business, Binding Properties, Institutions, Industries, Sickunits & Takeover, Transparent Process, Solicit Enquiry. Ct.7200418844 Mail: aperiofunds@gmail.com

ಭವಿಷ್ಯ
Astrology
★॥ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ, ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30_ನಿಮಿಷದಲ್ಲಿ ಪರಿಹಾರ. 'ಬ್ರಹ್ಮಾನಂದ_ಗುರೂಜಿ'. 8050061378
★॥ಶ್ರೀಶಿರಿಡಿಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್.ವಿಕ್ರಮ್‌ಭಟ್ 9972654095
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071
ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216
ಸಿಗಂದೂರು ಚೌಡೇಶ್ವರಿ ದೇವಿ ಕೃಪೆಯಿಂದ ರೂ. 1750ರಲ್ಲಿ ಪರಿಹಾರ ಇಷ್ಟಪಟ್ಟವರು ನಿಮ್ಮಂತೆ ಆಗಲು ಸ್ತ್ರೀ/ಪುರುಷ ಪ್ರೇಮ ವಿಚಾರ ಗುಪ್ತ ನಿಗೂಢ ಸಮಸ್ಯೆಗೆ 2 ದಿನದಲ್ಲಿ ಪರಿಹಾರ, 8884755515
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ
Travel
ಶ್ರೀಶ್ರೇಯಸ್ ಟೂರ್ಸ್: 23.11.2021 13ದಿನಗಳು ದೆಹಲಿ,ಚಂಡೀಗಡ್,ಸಿಮ್ಲಾ, ಮನಾಲಿ, 5ದೇವಿಯರು,ಚಂಬ, ಡಾಲ್‌ಹೌಸಿ,ಜಮ್ಮು, ವೈಷ್ಣೋದೇವಿ,ಅಮೃತಸರ್, ಕುರುಕ್ಷೇತ್ರ.,23.12.2021 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ).,22.12.2021 16ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯಪ್ರವಾಸ 49ಸ್ಥಳಗಳು.9743351212/ 9206979202/ 9902050065
10.12.2021 11 ದಿನಗಳು ರಾಜಸ್ಥಾನ್.,20.01.2022 11ದಿನಗಳು ಉಜ್ಜೈನಿ, ಗುಜರಾತ್.,22.02.2022 13ದಿನಗಳು ಕಾಶಿಪ್ರವಾಸ., 03.01.2022 9ದಿನಗಳು ಆಂಧ್ರ ಭದ್ರಾಚಲಂಪ್ರವಾಸ. ಆರ್.ಗಾಂಧಿ ಟೂರ್ಸ್(ರಿ).9945445809/ 9902433500
12-11-2021 ಈಶ ಫೌಂಡೇಶನ್,ಏರ್ಕಾರ್ಡ್. 25.11.2021 ಶಿರಡಿ, ಕೊಲ್ಲಾಪುರ್. 22-12-2021 ಗುಜರಾತ್. 6-1-2022 ಅಂಡಮಾನ್. 18-1-2022 ಕಾಶಿ,ಅಯೋಧ್ಯ. ನಂದಿನಿ ಟೂರಿಸ್ಟ್. 9916574089
ಫೆಬ್ರವರಿ 2022, 10 ದಿನಗಳು ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಧರ್ಮಶಾಲ, ಕುಲುಮನಾಲಿ, ಹರಿದ್ವಾರ್. ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು-3. 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

20 ಭಾರತೀಯ ಮೀನುಗಾರರ ಬಿಡುಗಡೆ

ಕರಾಚಿ (ಪಿಟಿಐ): ಪಾಕಿಸ್ತಾನದ ಕರಾಚಿ ಜೈಲಿನಿಂದ ಬಿಡುಗಡೆಯಾದ 20 ಭಾರತೀಯ ಮೀನುಗಾರರನ್ನು ಭಾನುವಾರ ವಾಘಾ ಗಡಿಗೆ ಕಳುಹಿಸಲಾಗುತ್ತಿದ್ದು, ಭಾರತೀಯ ಅಧಿಕಾರಿಗಳಿಗೆ ಹಸ್ತಾಂತರಿಸಲಾಗುವುದು ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಶಿಕ್ಷೆಯ ಅವಧಿ ಪೂರ್ಣಗೊಳಿಸಿ ಜೈಲಿನಲ್ಲಿರುವ 350 ಭಾರತೀಯ ಮೀನುಗಾರರ ಪೈಕಿ ಬಿಡುಗಡೆಯಾದ 20 ಮಂದಿ ಗುಜರಾತ್ ರಾಜ್ಯದವರು. ಉಳಿದವರನ್ನು ಸಹ ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು.

ದೂರು ಇತ್ಯರ್ಥಪಡಿಸುವ ಅಧಿಕಾರ 'ರೆರಾ' ಒಬ್ಬ ಸದಸ್ಯನಿಗೂ ಇದೆ: ಸುಪ್ರೀಂ

ನವದೆಹಲಿ (ಪಿಟಿಐ): ಮನೆ/ಫ್ಲ್ಯಾಟ್ ಖರೀದಿಸುವ ಗ್ರಾಹಕರು ಬಿಲ್ಡರ್ ವಿರುದ್ಧದ ದೂರು ಪರಿಶೀಲಿಸುವ ಅಧಿಕಾರವನ್ನು ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು (ರೆರಾ), ತನ್ನ ಸದಸ್ಯರೊಬ್ಬರಿಗೆ ನೀಡಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ತ್ರಿಸದಸ್ಯ ಪೀಠವು, 'ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ 2016ರ ಸೆಕ್ಷನ್ 81, ಪ್ರಾಧಿಕಾರಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಕಾರ್ಯಭಾರ ಒಪ್ಪಿಸುವ ಅಧಿಕಾರ ನೀಡಲಿದೆ' ಎಂದು ಹೇಳಿತು.

ಗ್ರಾಹಕರ ದೂರು ಆಧರಿಸಿ ಪ್ರಾಧಿಕಾರ ಅಥವಾ ಪ್ರಾಧಿಕಾರ ನಿಯೋಜಿಸುವ ಸದಸ್ಯ ಹೊರಡಿಸುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾಯ್ದೆಯಲ್ಲಿ ಅವಕಾಶವಿದೆ. ಲೆಕ್ಕಾಚಾರ ಅಥವಾ ಗ್ರಾಹಕರಿಗೆ ಹಿಂದಿರುಗಿಸಬೇಕಾದ ಮೊತ್ತ ಲೆಕ್ಕಹಾಕುವಲ್ಲಿ ಲೋಪ ಕುರಿತಂತೆ ಮೇಲ್ಮನವಿ ಸಲ್ಲಿಸಬಹುದು ಎಂದೂ ಪೀಠ ಹೇಳಿದೆ.

ಉತ್ತರ ಪ್ರದೇಶದ ರೆರಾ ಸದಸ್ಯರೊಬ್ಬರ ಆದೇಶದ ವಿರುದ್ಧ ಸಲ್ಲಿಸಲಾದ ಅರ್ಜಿಯನ್ನು ತಿರಸ್ಕರಿಸಿದ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ನ್ಯೂಟೆಕ್ ಪ್ರಮೋಟರ್ಸ್ ಆ್ಯಂಡ್ ಡೆವಲಪರ್ಸ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಪೀಠ ಈ ತೀರ್ಪು ನೀಡಿತು.

ಅಫ್ಗಾನಿಸ್ತಾನಕ್ಕೆ ಆಹಾರ: ಭಾರತದ, ಡಬ್ಲ್ಯುಎಫ್‌ಪಿ ಚರ್ಚೆ

ನವದೆಹಲಿ (ಪಿಟಿಐ): ಮಾನವೀಯ ನೆಲೆಯಲ್ಲಿ ಅಫ್ಗಾನಿಸ್ತಾನಕ್ಕೆ ಆಹಾರ ನೆರವು ನೀಡುವ ಕುರಿತು ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ (ಡಬ್ಲ್ಯುಎಫ್‌ಪಿ) ಮತ್ತು ಭಾರತದ ನಡುವೆ ಚರ್ಚೆ ನಡೆದಿದೆ ಎಂದು ಡಬ್ಲ್ಯೂಎಫ್‌ಪಿ ಮುಖ್ಯಸ್ಥೆ ಸೆಸಿಲಿಯಾ ಗಾರ್ಜೋನ್ ಅವರು ತಿಳಿಸಿದರು.

ಯುದ್ಧ ಬಾಧಿತ ಅಫ್ಗಾನಿಸ್ತಾನದಲ್ಲಿ ಆಹಾರ ಬಿಕ್ಕಟ್ಟು ಉಂಟಾಗಿದೆ. ಕೆಲವು ಸಂಕೀರ್ಣ ಕಾರಣಗಳಿಂದಾಗಿ ಆ ದೇಶದಲ್ಲಿ ಕುಟುಂಬಗಳು ತೀವ್ರವಾದ ಆಹಾರ ಬಿಕ್ಕಟ್ಟು ಎದುರಿಸುತ್ತಿವೆ' ಎಂದು ಅವರು ಹೇಳಿದ್ದಾರೆ.

ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, ಭಾರತ ಸೇರಿದಂತೆ ಈಗಾಗಲೇ ಜಗತ್ತಿನ ಎಲ್ಲ ರಾಷ್ಟ್ರಗಳು ತಮ್ಮ ಪರಿಮಿತಿಯಲ್ಲಿ ಯುದ್ಧಪೀಡಿತ ಅಫ್ಗಾನಿಸ್ತಾನದ ಕುಟುಂಬಗಳಿಗೆ ನೆರವು ನೀಡುತ್ತಿವೆ' ಎಂದು ಅಭಿಪ್ರಾಯಪಟ್ಟರು.

'ಆಹಾರದ ಕೊರತೆ ಹಿನ್ನೆಲೆಯಲ್ಲಿ ಕುಟುಂಬಗಳಿಗೆ ಆಹಾರ, ಭದ್ರತೆ ಮತ್ತು ಸ್ಥಿರತೆಯನ್ನು ಅರಸುತ್ತಾ ಮನೆ ತೊರೆಯುವವರ ಸಂಖ್ಯೆ ಅಫ್ಗಾನಿಸ್ತಾನದಲ್ಲಿ ಹೆಚ್ಚುತ್ತಿದೆ. ಇದರಿಂದಾಗಿ, ಆ ದೇಶದಲ್ಲಿ ದೊಡ್ಡ ಪ್ರಮಾಣದ ಮಾನವೀಯ ಬಿಕ್ಕಟ್ಟು ಉದ್ಭವವಾಗಿದೆ' ಎಂದು ಗಾರ್ಜೋನ್ ಹೇಳಿದ್ದಾರೆ.

ಅಫ್ಗಾನಿಸ್ತಾನಕ್ಕೆ ಆಹಾರದ ನೆರವು ನೀಡುವ ಕುರಿತು ಡಬ್ಲ್ಯುಎಫ್‌ಪಿ ಭಾರತಕ್ಕೆ ಪ್ರಸ್ತಾವ ಸಲ್ಲಿಸಿದೆಯೇ ಎಂಬ ಪ್ರಶ್ನೆಗೆ ಅವರು, 'ಈ ಸಂಬಂಧ ಭಾರತ ಸರ್ಕಾರ ಮತ್ತು ಡಬ್ಲ್ಯುಎಫ್‌ಪಿ ನಡುವೆ ಸಕಾರಾತ್ಮಕ ಚರ್ಚೆ ನಡೆಯುತ್ತಿದೆ. ಶೀಘ್ರವೇ ಇವೆಲ್ಲ ಇತ್ಯರ್ಥಗೊಳ್ಳುವ ಸಾಧ್ಯತೆ ಇದೆ' ಎಂದರು.

ಭಾರತದಿಂದ ಪಾಕ್ ಮಾರ್ಗವಾಗಿ ಅಫ್ಗನ್‌ಗೆ ಗೋಧಿ?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮೂಲಕ ಭಾರತದ ಗೋಧಿ ಸಾಗಣೆಗೆ ಅನುಮತಿ ನೀಡುವಂತೆ ಅಫ್ಗಾನಿಸ್ತಾನದ ಮನವಿಯನ್ನು ಪರಿಗಣಿಸುವುದಾಗಿ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸೆಪ್ಟೆಂಬರ್‌ನಲ್ಲಿ ಕೈಗಾರಿಕಾ ಉತ್ಪಾದನೆ ಶೇ 3.1ಕ್ಕೆ ಇಳಿಕೆ



ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ವಲಯದ ಉತ್ಪಾದನೆಯು ಸೆಪ್ಟೆಂಬರ್‌ನಲ್ಲಿ ಶೇ 3.1ಕ್ಕೆ ಇಳಿಕೆ ಕಂಡಿದೆ. ಆಗಸ್ಟ್‌ನಲ್ಲಿ ಶೇ 12ರಷ್ಟು ಬೆಳವಣಿಗೆ ಕಂಡಿತ್ತು.

ಕೈಗಾರಿಕಾ ಉತ್ಪಾದನೆ ಸೂಚ್ಯಂಕಕ್ಕೆ (ಐಐಪಿ) ಶೇ 7.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯವು ಸೆಪ್ಟೆಂಬರ್‌ನಲ್ಲಿ ಶೇ 2.7ರಷ್ಟು ಬೆಳವಣಿಗೆ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಾಹಿತಿ ನೀಡಿದೆ.

ಗಣಿಗಾರಿಕೆ ಮತ್ತು ತಯಾರಿಕಾ ವಲಯಗಳು ಮಾತ್ರವೇ ಸಕಾರಾತ್ಮಕ ಬೆಳವಣಿಗೆ ಕಂಡಿವೆ. ಗಣಿಗಾರಿಕೆ ವಲಯದ ಉತ್ಪಾದನೆಯು ಶೇ 8.6ರಷ್ಟು ಮತ್ತು ವಿದ್ಯುತ್ ವಲಯದ ಉತ್ಪಾದನೆಯು ಶೇ 0.9ರಷ್ಟು ಹೆಚ್ಚಾಗಿದೆ.

ಮೇ ತಿಂಗಳಿನಲ್ಲಿ ಆಗಸ್ಟ್‌ವರೆಗೂ ತಯಾರಿಕಾ ವಲಯದ ಉತ್ಪಾದನೆಯು ಎರಡಂಕಿ ಪ್ರಗತಿ ಕಂಡಿತ್ತು. ವಲಯದ ಉತ್ಪಾದನೆಯು 2020ರ ಸೆಪ್ಟೆಂಬರ್‌ನಲ್ಲಿ ಕೋವಿಡ್‌ಗೂ ಮುಂಚಿನ ಮಟ್ಟವನ್ನು ಮೀರಿತು. 2020ರ ಸೆಪ್ಟೆಂಬರ್‌ನಲ್ಲಿ ಶೇ 1ರಷ್ಟು ಬೆಳವಣಿಗೆ ಕಂಡಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	500
ರಾಮನಗರ ರೇಷ್ಮೆ ಮಿಶ್ರತಳಿ	288-445
ದ್ವಿತಳಿ	300-688

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13550	13000	---	201.90ಸೆಂಟ್ಸ್
ಎಸಿ	6000	---	---	
ಆರ್‌ಪಿ	6150	---	6300	ಲಂಡನ್
ಆರ್‌ಸಿ	3640	3250	3700	2292 ಡಾಲರ್ಸ್

ರಾತ್ರಿ 10ರ ಮುಂಬೈ ಧಾರಣೆ ಲಭ್ಯವಾಗಿಲ್ಲ

ಟಿ20 ಕ್ರಿಕೆಟ್ ವಿಶ್ವಕಪ್ ಫೈನಲ್ ಇಂದು: ದುಬೈನಲ್ಲಿ ಆಸ್ಟ್ರೇಲಿಯಾ–ಕಿವೀಸ್ ಮುಖಾಮುಖಿ

‘ಮೊದಲ ಕಿರೀಟ’ದತ್ತ ಕೇನ್–ಫಿಂಚ್ ಚಿತ್ತ

ದುಬೈ(ಪಿಟಿಐ): ಟಾಸ್ಮಾನ್ ಸಾಗರದ ಆಚೀಚೆಯ ದಡಗಳಲ್ಲಿರುವ ನ್ಯೂಜಿಲೆಂಡ್–ಆಸ್ಟ್ರೇಲಿಯಾದ ತಂಡಗಳು ಮೊದಲ ಸಲ ಟ್ವೆಂಟಿ-20 ಕ್ರಿಕೆಟ್ ವಿಶ್ವಕಪ್ ಜಯಿಸುವ ಛಲದೊಂದಿಗೆ ಭಾನುವಾರ ಮುಖಾಮುಖಿಯಾಗಲಿವೆ.

ಟಿ20 ವಿಶ್ವಕಪ್ ಇತಿಹಾಸದಲ್ಲಿಯೇ ನ್ಯೂಜಿಲೆಂಡ್ ಮೊದಲ ಸಲ ಮತ್ತು ಆಸ್ಟ್ರೇಲಿಯಾ ಎರಡನೇ ಸಲ ಫೈನಲ್ ಹಂತಕ್ಕೆ ತಲುಪಿವೆ. ಕೂಲ್ ಕ್ಯಾಪ್ಟನ್ ಖ್ಯಾತಿಯ ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಮತ್ತು ಸ್ಫೋಟಕ ಶೈಲಿಯ ಬ್ಯಾಟರ್ ಆ್ಯರನ್ ಫಿಂಚ್ ಅವರಿಬ್ಬರೂ ಇತಿಹಾಸ ನಿರ್ಮಿಸುವ ಛಲದಲ್ಲಿದ್ದಾರೆ. 2016ರ ಟಿ20 ವಿಶ್ವಕಪ್ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಅದರಲ್ಲಿ ನ್ಯೂಜಿಲೆಂಡ್ ಗೆದ್ದಿತ್ತು.

2019ರಲ್ಲಿ ಏಕದಿನ ವಿಶ್ವಕಪ್ ಫೈನಲ್ ತಲುಪಿದ್ದ ಕೇನ್ ವಿಲಿಯಮ್ಸನ್ ಬಳಗವು, ಹೋದ ಜೂನ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್ ಕೂಡ ಆಗಿದೆ. ಇದೀಗ ಚುಟುಕು ಕ್ರಿಕೆಟ್ ಕಿರೀಟಧಾರಣೆಯ ಕನಸು ಕಾಣುತ್ತಿದೆ. ಇಂಗ್ಲೆಂಡ್ ಎದುರಿನ ರೋಚಕ ಸೆಮಿಫೈನಲ್‌ನಲ್ಲಿ ಜಯ ಗಳಿಸಲು ಡೆರಿಲ್ ಮಿಚೆಲ್, ಡೆವೊನ್ ಕಾನ್ವೆ ಮತ್ತು ಜೇಮ್ಸ್ ನಿಶಾಮ್ ಅವರ ಬ್ಯಾಟಿಂಗ್ ಬಲ ಕಾರಣವಾಗಿತ್ತು. ಸೋಲಿನ ಆತಂಕ ಎದುರಿಸಿದ್ದ ತಂಡವನ್ನು ಗೆಲುವಿನ ದಡ ಸೇರಿಸಿದ್ದರು.

ಕಿವೀಸ್ ತಂಡದಲ್ಲಿ ಒಂಬತ್ತನೇ ಕ್ರಮಾಂಕದವರೆಗೂ ಬ್ಯಾಟಿಂಗ್ ಬಲವಿದೆ. ಟ್ರೆಂಟ್ ಬೌಲ್ಟ್, ಟಿಮ್ ಸೌಥಿ, ಸ್ಪಿನ್ನರ್ ಈಶ್ ಸೋಧಿ ಮತ್ತು ಮಿಚೆಲ್ ಸ್ಯಾಂಟನರ್ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಆಸ್ಟ್ರೇಲಿಯಾ ತಂಡದ್ದು ಕೂಡ ಕಿವೀಸ್‌ಗೆ ಸಮಬಲವೇ. ನಾಯಕ ಫಿಂಚ್ ಲಯದಲ್ಲಿಲ್ಲ. ಆದರೆ, ಪಾಕಿಸ್ತಾನ ಎದುರಿನ ಸೆಮಿಫೈನಲ್‌ನಲ್ಲಿ ಗೆಲುವಿನ ರೂವಾರಿಗಳಾದ ಮಾರ್ಕಸ್ ಸ್ಟೊಯಿನಿಸ್ ಮತ್ತು ಮ್ಯಾಥ್ಯೂ ವೇಡ್ ಅವರನ್ನು ಕಟ್ಟಿಹಾಕಲು ಕಿವೀಸ್ ಬೌಲರ್‌ಗಳು ವಿಶೇಷ ಯೋಜನೆಯೊಂದಿಗೆ ಕಣಕ್ಕಿಳಿಯುವುದು ಅನಿವಾರ್ಯ.

ತಂಡದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್, ಮಧ್ಯಮಕ್ರಮಾಂಕದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್, ಸ್ಟೀವನ್ ಸ್ಮಿತ್ ಕೂಡ ರನ್ ಹೊಳೆ ಹರಿಸುವ ಬ್ಯಾಟರ್‌ಗಳು. ಬೌಲಿಂಗ್‌ನಲ್ಲಿ ಸ್ಪಿನ್ನರ್ ಆ್ಯಡಂ ಜಂಪಾ, ವೇಗಿ ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಎದುರಾಳಿಗಳಿಗೆ ಕಠಿಣ ಸವಾಲೊಡ್ಡಬಲ್ಲ ಬೌಲರ್‌ಗಳು.

ನಾಲ್ಕರ ಘಟ್ಟದಲ್ಲಿ ಕಠಿಣ ಹಣಾಹಣಿಗಳಲ್ಲಿ ಜಯಿಸಿಬಂದಿರುವ ಎರಡೂ ತಂಡಗಳು ಭಾನುವಾರ ಮರಳುಗಾಡಿನ ಅಂಗಳದಲ್ಲಿ ಕ್ರಿಕೆಟ್‌ಪ್ರಿಯರಿಗೆ ರೋಚಕ ರಸದೌತಣ ನೀಡುವ ಎಲ್ಲ ಸಾಧ್ಯತೆಗಳೂ ಇವೆ.

ತಂಡಗಳು: ಆಸ್ಟ್ರೇಲಿಯಾ: ಆ್ಯರನ್ ಫಿಂಚ್ (ನಾಯಕ), ಡೇವಿಡ್ ವಾರ್ನರ್, ಮ್ಯಾಥ್ಯೂ ವೇಡ್, ಆ್ಯಡಂ ಜಂಪಾ, ಆ್ಯಷ್ಟನ್ ಅಗರ್, ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್, ಜೋಶ್ ಇಂಗ್ಲಿಸ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್. ಕೇನ್ ರಿಚರ್ಡ್ಸನ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಸ್, ಮಿಚೆಲ್ ಸ್ವಿಪ್ಸನ್.
ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಮಾರ್ಟಿನ್ ಗಪ್ಟಿಲ್, ಡೆರಿಲ್ ಮಿಚೆಲ್, ಡೆವೊನ್ ಕಾನ್ವೆ, ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್ , ಈಶ್ ಸೋಧಿ, ಟಿಮ್ ಸೌಥಿ, ಟಾಡ್ ಆಸ್ಟಲ್, ಟ್ರೆಂಟ್ ಬೌಲ್ಟ್, ಮಾರ್ಕ್ ಚಾಪ್‌ಮನ್, ಆ್ಯಡಂ ಮಿಲ್ನೆ, ಕೈಲ್ ಜೆಮಿಸನ್.

ಪಂದ್ಯ ಆರಂಭ: ರಾತ್ರಿ **7.30**
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮುಖ್ಯಾಂಶಗಳು

- ಟಿ20 ವಿಶ್ವಕಪ್ ಇತಿಹಾಸದಲ್ಲಿ ಕಿವೀಸ್‌ಗೆ ಮೊದಲ ಫೈನಲ್
- ಸೆಮಿಫೈನಲ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್ ಗಳಿಸಿದ್ದ ಆಸ್ಟ್ರೇಲಿಯಾದ ಮ್ಯಾಥ್ಯೂ ವೇಡ್
- ಆ್ಯರನ್ ಫಿಂಚ್‌ಗೆ ಲಯಕ್ಕೆ ಮರಳುವ ಒತ್ತಡ

ಟಿ20 ರ‍್ಯಾಂಕಿಂಗ್

ನ್ಯೂಜಿಲೆಂಡ್ 4
ಆಸ್ಟ್ರೇಲಿಯಾ 6

ಮುಖಾಮುಖಿ

ಪಂದ್ಯಗಳು 14
ಆಸ್ಟ್ರೇಲಿಯಾ ಜಯ 9
ನ್ಯೂಜಿಲೆಂಡ್‌ಗೆಲುವು 5

ಟಿ20 ವಿಶ್ವಕಪ್ ಮುಖಾಮುಖಿ

1 ಪಂದ್ಯಗಳು | 1 ನ್ಯೂಜಿಲೆಂಡ್ ಜಯ

ಆಸ್ಟ್ರೇಲಿಯಾ ಫೈನಲ್ ಹಾದಿ

ಸೂಪರ್ 12 ಹಂತ

- ದಕ್ಷಿಣ ಆಫ್ರಿಕಾ ವಿರುದ್ಧ 5 ವಿಕೆಟ್‌ಗಳ ಜಯ
- ಶ್ರೀಲಂಕಾ ಎದುರು 7 ವಿಕೆಟ್‌ಗಳ ಜಯ
- ಇಂಗ್ಲೆಂಡ್ ಎದುರು 8 ವಿಕೆಟ್‌ಗಳ ಸೋಲು
- ಬಾಂಗ್ಲಾದೇಶ ವಿರುದ್ಧ 8 ವಿಕೆಟ್‌ಗಳ ಜಯ
- ವೆಸ್ಟ್ ಇಂಡೀಸ್ ವಿರುದ್ಧ 8 ವಿಕೆಟ್‌ಗಳ ಜಯ

ಸೆಮಿಫೈನಲ್

- ಪಾಕಿಸ್ತಾನ ಎದುರು 5 ವಿಕೆಟ್‌ಗಳ ಜಯ

ನ್ಯೂಜಿಲೆಂಡ್ ಫೈನಲ್ ಹಾದಿ

ಸೂಪರ್ 12 ಹಂತ

- ಪಾಕಿಸ್ತಾನ ವಿರುದ್ಧ 5 ವಿಕೆಟ್‌ಗಳ ಸೋಲು
- ಭಾರತದ ಎದುರು 8 ವಿಕೆಟ್‌ಗಳ ಜಯ
- ಸ್ಕಾಟ್ಲೆಂಡ್ ವಿರುದ್ಧ 16 ರನ್‌ಗಳ ಜಯ
- ನಮೀಬಿಯಾ ವಿರುದ್ಧ 52 ರನ್‌ಗಳ ಜಯ
- ಅಫ್ಗಾನಿಸ್ತಾನ ವಿರುದ್ಧ 8 ವಿಕೆಟ್‌ಗಳ ಜಯ

ಸೆಮಿಫೈನಲ್

- ಇಂಗ್ಲೆಂಡ್ ವಿರುದ್ಧ 5 ವಿಕೆಟ್‌ಗಳ ಜಯ

ಕೇನ್ ವಿಲಿಯಮ್ಸನ್

ಆ್ಯರನ್ ಫಿಂಚ್

ಯಾರಿಗೆ ಒಲಿಯಲಿದೆ ಟಾಸ್?

ದುಬೈನಲ್ಲಿ ನಡೆದ ಪಂದ್ಯಗಳ ಜಯದಲ್ಲಿ ಟಾಸ್ ಜಯವೇ ಪ್ರಮುಖ ಪಾತ್ರ ವಹಿಸಿದೆ. ಎರಡನೇ ಇನಿಂಗ್ಸ್ ಬೌಲಿಂಗ್ ಮಾಡುವಾಗ ರಾತ್ರಿ ಸುರಿಯುವ ಇಬ್ಬನಿಯ ಸವಾಲು ಇರುತ್ತದೆ. ಆದ್ದರಿಂದ ಟಾಸ್ ಗೆದ್ದವರು ಮೊದಲಿಗೆ ಬೌಲಿಂಗ್ ಆರಿಸಿಕೊಂಡಿದ್ದೇ ಹೆಚ್ಚು.

ಇದುವರೆಗೆ ಈ ಟೂರ್ನಿಯ 12 ಪಂದ್ಯಗಳಿಗೆ ದುಬೈ ಕ್ರೀಡಾಂಗಣ ಆತಿಥ್ಯ ವಹಿಸಿದೆ. ಅದರಲ್ಲಿ 11 ಪಂದ್ಯಗಳಲ್ಲಿ ಗುರಿ ಬೆನ್ನತ್ತಿದ ತಂಡಗಳೇ ಗೆಲುವು ಸಾಧಿಸಿವೆ. ಸೂಪರ್ 12ರ ಹಂತ ಮತ್ತು ಸೆಮಿಫೈನಲ್ ಸೇರಿದಂತೆ ಆಸ್ಟ್ರೇಲಿಯಾ ತಂಡವು ಐದು ಬಾರಿ ಟಾಸ್ ಗೆದ್ದು, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಮಾತ್ರ ಟಾಸ್ ಸೋತು, ಮೊದಲು ಬ್ಯಾಟಿಂಗ್ ಮಾಡಿ ಸೋತಿತ್ತು. ನ್ಯೂಜಿಲೆಂಡ್ ಟಾಸ್ ಗೆದ್ದ ಸಂದರ್ಭಗಳಲ್ಲಿ ಎರಡು ಬಾರಿ ಮೊದಲು ಬ್ಯಾಟಿಂಗ್ ಮಾಡಿತ್ತು. ಅವೆರಡೂ ಮಧ್ಯಾಹ್ನದ ಪಂದ್ಯಗಳಾಗಿದ್ದವು. ಎರಡೂ ಸೆಮಿಫೈನಲ್‌ಗಳಲ್ಲಿ ಗುರಿ ಚೇಸ್ ಮಾಡಿದ ತಂಡಗಳೇ ಜಯಿಸಿದ್ದವು.

ಫೈನಲ್ ಪಂದ್ಯದಲ್ಲಿಯೂ ಟಾಸ್ ಗೆಲ್ಲುವ ತಂಡಕ್ಕೆ ಜಯದ ಅವಕಾಶ ಸಿಗುವುದೇ ಎಂಬ ಕುತೂಹಲ ಈಗ ಗರಿಗೆದರಿದೆ.

ಪಿಚ್ ಹೇಗಿದೆ?

ಪಂದ್ಯದ ಆರಂಭದಲ್ಲಿ ಬ್ಯಾಟರ್‌ಗಳು ಸ್ವಲ್ಪ ಎಚ್ಚರ ತಪ್ಪಿದರೂ ಮಧ್ಯಮವೇಗಿಗಳು ಮೇಲುಗೈ ಸಾಧಿಸುವ ಎಲ್ಲ ಸಾಧ್ಯತೆಗೂ ಇಲ್ಲಿವೆ. ಈ ಸವಾಲು ಮೀರಿದರೆ ದೊಡ್ಡ ಮೊತ್ತ ಗಳಿಸಲು ಬ್ಯಾಟರ್‌ಗಳಿಗೆ ಸಾಧ್ಯವಿದೆ. ಆದರೆ, ರಾತ್ರಿಯ ಇಬ್ಬನಿಯಲ್ಲಿ ಬೌಲಿಂಗ್ ಮಾಡುವ ಸವಾಲು ಎದುರಿಸಲು ಬೌಲರ್‌ಗಳು ಸಿದ್ಧರಾಗುವುದು ಅನಿವಾರ್ಯ.

ಹೆಚ್ಚು ರನ್ ಗಳಿಸಿದ ಉಭಯ ತಂಡಗಳ ಬ್ಯಾಟರ್‌ಗಳು

ಬ್ಯಾಟರ್	ತಂಡ	ಇನಿಂಗ್ಸ್	ರನ್
ಡೇವಿಡ್ ವಾರ್ನರ್	ಆಸ್ಟ್ರೇಲಿಯಾ	6	236
ಡೆರಿಲ್ ಮಿಚೆಲ್	ನ್ಯೂಜಿಲೆಂಡ್	6	197
ಮಾರ್ಟಿನ್ ಗಪ್ಟಿಲ್	ನ್ಯೂಜಿಲೆಂಡ್	6	180

ಹೆಚ್ಚು ವಿಕೆಟ್ ಗಳಿಸಿದ ಉಭಯ ತಂಡಗಳ ಬೌಲರ್‌ಗಳು

ಬೌಲರ್	ತಂಡ	ವಿಕೆಟ್
ಆ್ಯಡಂ ಜಂಪಾ	ಆಸ್ಟ್ರೇಲಿಯಾ	12
ಟ್ರೆಂಟ್ ಬೌಲ್ಟ್	ನ್ಯೂಜಿಲೆಂಡ್	11
ಮಿಚೆಲ್ ಸ್ಟಾರ್ಕ್	ಆಸ್ಟ್ರೇಲಿಯಾ	9

ಐಸಿಸಿ ಹಾಲ್ ಆಫ್ ಫೇಮ್‌ಗೆ ಜಯವರ್ಧನೆ, ಪೊಲಾಕ್

ಜಯವರ್ಧನೆ

ಪೊಲಾಕ್

ದುಬೈ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಾರೆ ಮಹೇಲಾ ಜಯವರ್ಧನೆ, ದಕ್ಷಿಣ ಆಫ್ರಿಕಾದ ಮಾಜಿ ಆಲ್‌ರೌಂಡರ್ ಶಾನ್ ಪೊಲಾಕ್ ಮತ್ತು ಇಂಗ್ಲೆಂಡಿನ ಮಾಜಿ ಆಟಗಾರ್ತಿ ಜೆನೆತ್ ಬ್ರಿಟಿನ್ ಅವರಿಗೆ ಐಸಿಸಿ ಹಾಲ್ ಆಫ್ ಫೇಮ್ ಗೌರವ ನೀಡಲಾಗಿದೆ.

ಭಾನುವಾರ ಟಿ20 ವಿಶ್ವಕಪ್ ಫೈನಲ್ ಪಂದ್ಯಕ್ಕೂ ಮುನ್ನ ವೆಸ್ಟ್ ಇಂಡೀಸ್ ದಿಗ್ಗಜ ಕ್ರಿಕೆಟಿಗ ಕ್ಲೈವ್ ಲಾಯ್ಡ್ ಅವರು ಈ ಮೂವರು ಕ್ರಿಕೆಟಿಗರನ್ನು ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ಮಾಡಲಿದ್ದಾರೆ. 2009ರಲ್ಲಿ ಆರಂಭವಾದ ಹಾಲ್‌ನಲ್ಲಿ ಇದುವರೆಗೆ 106 ಖ್ಯಾತನಾಮ ಕ್ರಿಕೆಟಿಗರನ್ನು ಸೇರ್ಪಡೆ ಮಾಡಲಾಗಿದೆ.

ಬ್ರಿಟಿನ್ ಅವರು 1979–1998ರ ಅವಧಿಯಲ್ಲಿ ಇಂಗ್ಲೆಂಡ್ ತಂಡದ ಪ್ರಮುಖ ಆಟಗಾರ್ತಿಯಾಗಿದ್ದರು. ಮಹಿಳಾ ಕ್ರಿಕೆಟ್ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. 2017ರಲ್ಲಿ ಅವರು ನಿಧನರಾಗಿದ್ದಾರೆ.

ಕ್ರಿಕೆಟ್ ಕ್ಷೇತ್ರದ ಪ್ರಮುಖ ಬ್ಯಾಟರ್‌ಗಳಲ್ಲಿ ಜಯವರ್ಧನೆ ಅವರೂ ಒಬ್ಬರು. ಶ್ರೀಲಂಕಾ ತಂಡವು 2014ರ ಟಿ20 ವಿಶ್ವಕಪ್ ಜಯಿಸಲು ಅವರ ಕಾಣಿಕೆ ಮಹತ್ವದ್ದಾಗಿತ್ತು. ಅವರ ಕಾಲಘಟ್ಟದಲ್ಲಿ ಲಂಕಾ ತಂಡವು ನಾಲ್ಕು ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ಫೈನಲ್ ತಲುಪಿತ್ತು.

ಮುತ್ತಯ್ಯ ಮುರಳೀಧರನ್ ಮತ್ತು ಕುಮಾರ ಸಂಗಕ್ಕಾರ ಅವರ ನಂತರ ಮಹೇಲಾ ಈ ಗೌರವ ಪಡೆದ ಲಂಕಾ ಆಟಗಾರನಾಗಿದ್ದಾರೆ.

ದಕ್ಷಿಣ ಆಫ್ರಿಕಾದ ಶಾನ್ ಪೊಲಾಕ್ ಅವರು ವಿಶ್ವಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿದ್ದಾರೆ. ಟೆಸ್ಟ್ ಮತ್ತು ಏಕದಿನ ಕ್ರಿಕೆಟ್‌ನಲ್ಲಿ ಮೂರು ಸಾವಿರ ರನ್ ಮತ್ತು ಮುನ್ನೂರು ವಿಕೆಟ್‌ಗಳನ್ನು ಗಳಿಸಿದ ಮೊದಲ ಆಟಗಾರನೆಂಬ ಹೆಗ್ಗಳಿಕೆ ಅವರದ್ದಾಗಿದೆ.

ಬಿಸಿಸಿಐ ವಾರ್ಷಿಕ ಸಭೆ ಡಿ. 4ರಂದು

ನವದೆಹಲಿ (ಪಿಟಿಐ): ಕೋಲ್ಕತ್ತದಲ್ಲಿ ಡಿಸೆಂಬರ್ 4ರಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಲಿದೆ.

ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಸೋಲು, ಆಯ್ಕೆ ಸಮಿ ತಿಯ ಅವಧಿ ಪರಿಷ್ಕರಣೆ ಮತ್ತು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರ ನೇಮಕ ಕುರಿತ ವಿಷಯಗಳು ಪ್ರಮುಖವಾಗಿ ಚರ್ಚೆಯಾಗುವ ನಿರೀಕ್ಷೆ ಇದೆ.

ಟಿ20 ತಂಡದ ನಾಯಕತ್ವಕ್ಕೆ ವಿದಾಯ ಹೇಳಿರುವ ಕೊಹ್ಲಿಯವರನ್ನು ಏಕದಿನ ತಂಡಕ್ಕೆ ನಾಯಕರನ್ನಾಗಿ ಮುಂದುವರಿಸುವ ಕುರಿತ ವಿಷಯವೂ ಚರ್ಚೆಯಾಗುವ ಸಾಧ್ಯತೆ ಇದೆ. ಭಾರತ ತಂಡದ ನೆರವು ಸಿಬ್ಬಂದಿ ನೇಮಕ ಮತ್ತು ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿಯ ಕಾರ್ಯಾವಧಿಯ ಪರಿಷ್ಕರಣೆ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಎಂದು ಮೂಲಗಳು ತಿಳಿಸಿವೆ.

ಕೊಹ್ಲಿ ನಾಯಕತ್ವ ತ್ಯಜಿಸಲಿ: ಆಫ್ರಿದಿ

ಕರಾಚಿ (ಪಿಟಿಐ): ವಿರಾಟ್ ಕೊಹ್ಲಿ ಅವರು ಬ್ಯಾಟಿಂಗ್‌ನತ್ತ ಸಂಪೂರ್ಣವಾಗಿ ಚಿತ್ತ ಹರಿಸಲು ಮತ್ತು ಉತ್ತುಂಗ ಸಾಧನೆ ಮಾಡಲು ಎಲ್ಲ ಮಾದರಿಗಳಲ್ಲಿಯ ನಾಯಕತ್ವವನ್ನು ಬಿಟ್ಟುಕೊಡಬೇಕು ಎಂದು ಪಾಕಿಸ್ತಾನ ತಂಡದ ಮಾಜಿ ನಾಯಕ ಶಾಹೀದ್ ಆಫ್ರಿದಿ ಅಭಿಪ್ರಾಯಪಟ್ಟಿದ್ದಾರೆ.

ಖಾಸಗಿ ಚಾನೆಲ್‌ನಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಆಫ್ರಿದಿ, ರೋಹಿತ್ ಶರ್ಮಾ ಅವರನ್ನು ಭಾರತದ ಟಿ20 ನಾಯಕರನ್ನಾಗಿ ನೇಮಕ ಮಾಡಿರುವ ಬಿಸಿಸಿಐ ನಿರ್ಧಾರ ಸರಿಯಾಗಿದೆ ಎಂದು ಹೇಳಿದ್ದಾರೆ.

ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡದ ವಿವೇಕ್ ನಾಯರ್ ಅವರು ಟೀಮ್ ಸ್ಯಾಂಕಿ ತಂಡದ ದೀಪಕ್ ಜಯರಾಮ್ ಎದುರಿನ ಪಂದ್ಯದಲ್ಲಿ ಚೆಂಡು ಹಿಂದಿರುಗಿಸಿದರು– ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಬೆಂಗಳೂರು ಸ್ಕ್ವಾಷ್ ಲೀಗ್: ಸ್ಮ್ಯಾಷಿಂಗ್ ಸ್ಕ್ವಾಷರ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಗೆದ್ದ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡವು ಬೆಂಗಳೂರು ಸ್ಕ್ವಾಷ್ ಲೀಗ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ 4–3ರಿಂದ ಟೀಮ್ ಸ್ಯಾಂಕಿ ತಂಡವನ್ನು ಸೋಲಿಸಿತು.

ವಿಜೇತ ತಂಡದ ವಿವೇಕ್ ನಾಯರ್ 3-0, 11-7, 14-12, 11-8ರಿಂದ ದೀಪಕ್ ಜಯರಾಮ್ ಎದುರು ಗೆದ್ದರೆ, ವಿನಯ್ ಚಂದ್ರಶೇಖರ್ 3-2, 4-11, 11-13, 11-6, 11-4, 11-6ರಿಂದ ಅರುಣ್ ಜಾರ್ಜ್ ವಿರುದ್ಧ, ಸಿದ್ಧಾಂತ್ ಪರ್ನಾಯಿಕ್ 3-2, 12-10, 14-12, 2-11, 13-15, 11-8ರಿಂದ ಶಿವ ಎದುರು ಮತ್ತು ಸಂತೋಷ್ ಮೆನನ್ 3-0, 11-8, 11-3, 12-10ರಿಂದ ಸುರೇಶ್ ಸೋಲೊಮನ್ ಎದುರು ಜಯ ಸಾಧಿಸಿದರು.

ಜಾಯ್ ಅಸುಂಡಿ 2-3, 11-6, 7-11, 11-7, 8-11, 10-12 ನಿತಿನ್ ಗಂಧೋತ್ರಾ ಎದುರು, ವಿವೇಕ್ ಶೇಷಾದ್ರಿ 1-3, 5-11, 11-3, 10-12, 7-11, 7-11ರಿಂದ ಪೃಥ್ವಿ ಆದಿತ್ಯ ಎದುರು ಮತ್ತು ನವೀನ್ ಚಾಯಾ 0-3, 8-11, 2-11, 10-12ರಿಂದ ಅಮ್ಮಾರ್ ಫರೀದ್ ಎದುರು ಎಡವಿದರು.

ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಪ್ರದಾನ: ಕನ್ನಡಿಗ ಸುಹಾಸ್ ಯತಿರಾಜ್, ಕ್ರಿಕೆಟಿಗ ಶಿಖರ್ ಧವನ್‌ಗೆ ‘ಅರ್ಜುನ’ ಗೌರವ

ನೀರಜ್ ಚೋಪ್ರಾ, ಚೆಟ್ರಿಗೆ ಖೇಲ್ ರತ್ನ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಜಯಿಸಿದ ನೀರಜ್ ಚೋಪ್ರಾ ಮತ್ತು ಭಾರತ ಫುಟ್‌ಬಾಲ್ ತಂಡದ ನಾಯಕ ಸುನೀಲ್ ಚೆಟ್ರಿ ಸೇರಿದಂತೆ 12 ಸಾಧಕರಿಗೆ ಶನಿವಾರ ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದೇ ಮೊದಲ ಬಾರಿಗೆ ದಾಖಲೆ ಸಂಖ್ಯೆಯಲ್ಲಿ 12 ಮಂದಿಗೆ ಖೇಲ್ ರತ್ನ ಮತ್ತು 35 ಸಾಧಕರಿಗೆ ಅರ್ಜುನ ಪ್ರಶಸ್ತಿ ಪ್ರದಾನ ಮಾಡಲಾಯಿತು. 10 ಜನ ತರಬೇತುದಾರರಿಗೆ ದ್ರೋಣಾಚಾರ್ಯ ಪುರಸ್ಕಾರ ನೀಡಲಾಯಿತು. ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅವರಿಗೂ ಖೇಲ್ ರತ್ನ ನೀಡಿ ಗೌರವಿಸಲಾಯಿತು. ಪ್ಯಾರಾಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಪದಕ ಗೆದ್ದ ಐಎಎಸ್ ಅಧಿಕಾರಿ, ಕನ್ನಡಿಗ ಸುಹಾಸ್ ಯತಿರಾಜ್ ಮತ್ತು ಕ್ರಿಕೆಟಿಗ ಶಿಖರ್ ಧವನ್ ಅವರಿಗೆ ಅರ್ಜುನ ಪ್ರಶಸ್ತಿ ನೀಡಲಾಯಿತು. ರಾಷ್ಟ್ರಪತಿ ಭವನದ ದರ್ಬಾರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಇದ್ದರು.

ಪ್ರತಿವರ್ಷ ಆಗಸ್ಟ್ 29ರಂದು ಮೇಜರ್ ಧ್ಯಾನಚಂದ್ ಜನ್ಮದಿನದಂಗವಾಗಿ ಈ ಕಾರ್ಯಕ್ರಮ ನಡೆಸಲಾಗುತ್ತಿತ್ತು. ಆದರೆ ಈ ಬಾರಿ ಟೋಕಿಯೊ ಪ್ಯಾರಾಲಿಂಪಿಕ್ಸ್ ಇದ್ದ ಕಾರಣಕ್ಕೆ ಮುಂದೂಡಲಾಗಿತ್ತು.

ಪ್ರಶಸ್ತಿ ಪುರಸ್ಕೃತರು: ಮೇಜರ್ ಧ್ಯಾನಚಂದ್ ಖೇಲ್‌ರತ್ನ: ನೀರಜ್ ಚೋಪ್ರಾ (ಅಥ್ಲೆಟಿಕ್ಸ್), ರವಿಕುಮಾರ್ (ಕುಸ್ತಿ), ಲವ್ಲಿನಾ ಬೊರ್ಗೊಹೈನ್ (ಬಾಕ್ಸಿಂಗ್), ಪಿ.ಆರ್. ಶ್ರೀಜೇಶ್ (ಹಾಕಿ), ಅವನಿ ಲೇಖರಾ (ಪ್ಯಾರಾಶೂಟಿಂಗ್), ಸುಮಿತ್ ಅಂಟಿಲ್ (ಪ್ಯಾರಾ ಅಥ್ಲೆಟಿಕ್ಸ್), ಪ್ರಮೋದ್ ಭಗತ್, ಕೃಷ್ಣ ನಾಗರ್ (ಇಬ್ಬರೂ ಪ್ಯಾರಾ ಬ್ಯಾಡ್ಮಿಂಟನ್), ಮನೀಷ್ ನರ್ವಾಲ್ (ಪ್ಯಾರಾ ಶೂಟಿಂಗ್), ಮಿಥಾಲಿ ರಾಜ್ (ಕ್ರಿಕೆಟ್), ಸುನೀಲ್ ಚೆಟ್ರಿ (ಫುಟ್‌ಬಾಲ್), ಮನ್‌ಪ್ರೀತ್ ಸಿಂಗ್ (ಹಾಕಿ).

ಅರ್ಜುನ್ ಪ್ರಶಸ್ತಿ: ದಿಲ್‌ಪ್ರೀತ್ ಸಿಂಗ್, ಹರ್ಮನ್ ಪ್ರೀತ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಸುರೇಂದರ್ ಕುಮಾರ್, ಅಮಿತ್ ರೋಹಿದಾಸ್, ಬಿರೇಂದ್ರ ಲಕ್ರಾ, ಸುಮಿತ್, ನೀಲಕಂಠ ಶರ್ಮಾ, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಗುರ್ಜಂತ್ ಸಿಂಗ್, ಮನದೀಪ್ ಸಿಂಗ್, ಶಂಶೇರ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ವರುಣಕುಮಾರ್, ಸಿಮ್ರನ್‌ಜೀತ್ ಸಿಂಗ್ (ಎಲ್ಲರೂ ಹಾಕಿ), ಅರ್ಪಿಂದರ್ ಸಿಂಗ್ (ಅಥ್ಲೆಟಿಕ್ಸ್), ಸಿಮ್ರನ್‌ಜೀತ್ ಕೌರ್ (ಬಾಕ್ಸಿಂಗ್), ಶಿಖರ್ ಧವನ್ (ಕ್ರಿಕೆಟ್), ಸಿ.ಎ. ಭವಾನಿದೇವಿ (ಫೆನ್ಸಿಂಗ್), ಮೋನಿಕಾ (ಹಾಕಿ), ವಂದನಾ ಕಟಾರಿಯಾ (ಹಾಕಿ), ಸಂದೀಪ್ ನರ್ವಾಲ್ (ಕಬಡ್ಡಿ), ಹಿಮಾನಿ ಉತ್ತಮ್ ಪರಬ್ (ಮಲ್ಲಕಂಬ), ಅಭಿಷೇಕ್ ವರ್ಮಾ (ಶೂಟಿಂಗ್), ಅಂಕಿತಾ ರೈನಾ (ಟೆನಿಸ್), ದೀಪಕ್ ಪೂನಿಯಾ (ಕುಸ್ತಿ), ಯೋಗೇಶ್ ಖತುನಿಯಾ, ನಿಶಾದ್ ಕುಮಾರ್, (ಪ್ಯಾರಾ ಅಥ್ಲೆಟಿಕ್ಸ್), ಸುಹಾಸ್ ಯತಿರಾಜ್ (ಪ್ಯಾರಾ ಬ್ಯಾಡ್ಮಿಂಟನ್), ಸಿಂಗರಾಜ್ ಅದಾನಾ (ಪ್ಯಾರಾ ಶೂಟಿಂಗ್), ಭಾವಿನಾ ಪಟೇಲ್ (ಪ್ಯಾರಾ ಟಿಟಿ), ಹರವಿಂದರ್ ಸಿಂಗ್ (ಪ್ಯಾರಾ ಆರ್ಚರಿ), ಶರದ್ ಕುಮಾರ್(ಪ್ಯಾರಾ ಅಥ್ಲೆಟಿಕ್ಸ್).

ದ್ರೋಣಾಚಾರ್ಯ ಪ್ರಶಸ್ತಿ: ರಾಧಾಕೃಷ್ಣನ್ ನಾಯರ್ ಪಿ (ಅಥ್ಲೆಟಿಕ್ಸ್), ಸಂಧ್ಯಾ ಗುರುಂಗ್ (ಬಾಕ್ಸಿಂಗ್), ಪ್ರತೀತ್ ಸಿವಾಚ್ (ಹಾಕಿ), ಜೈಪ್ರಕಾದ್ ನೌತಾಲಿಯಾ (ಪ್ಯಾರಾಶೂಟಿಂಗ್), ಸುಬ್ರಮಣಿಯನ್ ರಾಮನ್ (ಟಿಟಿ). **ಜೀವಮಾನ ಸಾಧನೆ ವಿಭಾಗ:** ಟಿ.ಪಿ. ಔಸೆಫ್ (ಅಥ್ಲೆಟಿಕ್ಸ್), ಸರ್ಕಾರ್ ತಲ್ವಾರ್ (ಕ್ರಿಕೆಟ್), ಸರ್ಪಾಲ್ ಸಿಂಗ್ (ಹಾಕಿ), ಅಶನ್ ಕುಮಾರ್ (ಕಬಡ್ಡಿ), ತಪನ್ ಕುಮಾರ್ ಪಾಣಿಗ್ರಹಿ (ಈಜು).

ಮೇಜರ್ ಧ್ಯಾನಚಂದ್ ಪುರಸ್ಕಾರ: ಸಜ್ಜನ್ ಸಿಂಗ್(ಕುಸ್ತಿ), ಕೆ.ಸಿ. ಲೇಖಾ (ಬಾಕ್ಸಿಂಗ್), ಕೆ.ಸಿ. ಅಭಿಜಿತ್ ಕುಂಟೆ (ಚೆಸ್), ದೇವಿಂದರ್ ಸಿಂಗ್ ಗಾರ್ಚಾ (ಹಾಕಿ), ವಿಕಾಸ್ ಕುಮಾರ್ (ಕಬಡ್ಡಿ).

ರಾಷ್ಟ್ರೀಯ ಕ್ರೀಡಾ ಪ್ರೋತ್ಸಾಹಕ ಪುರಸ್ಕಾರ: ಮಾನವರಚನಾ ಶಿಕ್ಷಣ ಸಂಸ್ಥೆ ಮತ್ತು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್

ಮೌಲಾನಾ ಅಬುಲ್ ಕಲಾಂ ಆಜಾದ್ ಟ್ರೋಫಿ: ಪಂಜಾಬ್ ವಿಶ್ವವಿದ್ಯಾಲಯ, ಚಂಡೀಗಡ.

ನಗದು ಪುರಸ್ಕಾರ

₹25 ಲಕ್ಷ ಖೇಲ್‌ರತ್ನ | ₹15 ಲಕ್ಷ ಅರ್ಜುನ

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಸ್ವೀಕರಿಸಿದ ಸಾಧಕರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರೊಂದಿಗೆ ಚಿತ್ರದಲ್ಲಿದ್ದಾರೆ– ಪಿಟಿಐ ಚಿತ್ರ

79 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಗೌರವ್ ಬಲಿಯಾನ್ (ಎಡ) ಅವರು ಫೈನಲ್‌ನಲ್ಲಿ ಜೀತೇಂದರ್ ಅವರನ್ನು ಮಣಿಸಿದರು– ಟ್ವಿಟರ್ ಚಿತ್ರ

ಕುಸ್ತಿ: ಪ್ರೀತಮ್, ಗೌರವ್‌ಗೆ ಚಿನ್ನ

ಗೊಂಡಾ, ಉತ್ತರಪ್ರದೇಶ (ಪಿಟಿಐ): ಖ್ಯಾತನಾಮ ಕುಸ್ತಿಪಟುಗಳನ್ನು ಹಿಂದಿಕ್ಕಿದ ರೈಲ್ವೆಯ ಪ್ರೀತಮ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ 72 ಕೆಜಿ ವಿಭಾಗದ ಫೈನಲ್‌ನಲ್ಲಿ ಶನಿವಾರ ಅವರು 11–0ರಿಂದ ಯುವ ಪೈಲ್ವಾನ ಯಶ್ ಸವಾಲು ಮೀರಿದರು.

ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾಗಿ ನಾಲ್ಕು ವರ್ಷಗಳ ನಿಷೇಧ ಶಿಕ್ಷೆ ಪೂರ್ಣಗೊಳಿಸಿದ್ದ ನರಸಿಂಗ್ ಪಂಚಮ್ ಯಾದವ್ ಮತ್ತು ಅಮಿತ್ ಧನಕರ್ ಈ ವಿಭಾಗದಲ್ಲಿ ಚಿನ್ನದ ಪದಕ ಗೆಲ್ಲುವ ನೆಚ್ಚಿನ ಸ್ಪರ್ಧಿಗಳಾಗಿದ್ದರು.

25 ವರ್ಷದ ಪ್ರೀತಮ್ ಎರಡು ಬೌಟ್‌ಗಳನ್ನು ಬೈ ಫಾಲ್‌ನಲ್ಲಿ ಗೆದ್ದರೆ, ಎರಡರಲ್ಲಿ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಜಯಿಸಿದರು.

ಜಿದ್ದಾಜಿದ್ದಿನ ಸೆಮಿಫೈನಲ್ ಹಣಾಹಣಿಯಲ್ಲಿ ನರಸಿಂಗ್ ಯಾದವ್ ಅವರು 7–11ರಿಂದ ಯಶ್ ಎದುರು ಎಡವಿ ಕಂಚಿನ ಪದಕಕ್ಕೆ ಸಮಾಧಾನಪಡಬೇಕಾಯಿತು. ಇದಕ್ಕೂ ಮೊದಲು ನರಸಿಂಗ್, ರೋಚಕ ಹಣಾಹಣಿಯಲ್ಲಿ 7–6ರಿಂದ ಅಮಿತ್ ಅವರನ್ನು ಮಣಿಸಿದ್ದರು.

ಒಲಿಂಪಿಕ್ಸ್ ಪದಕ ವಿಜೇತರಾದ ಬಜರಂಗ್ ಪೂನಿಯಾ ಹಾಗೂ ರವಿ ದಹಿಯಾ ಅವರ ಅನುಪಸ್ಥಿತಿಯಲ್ಲಿ 65 ಕೆಜಿ ಹಾಗೂ 57 ಕೆಜಿ ವಿಭಾಗಗಳಲ್ಲಿ ಹೆಚ್ಚಿನ ಪೈಪೋಟಿ ಕಂಡುಬರಲಿಲ್ಲ. 65 ಕೆಜಿ ವಿಭಾಗದಲ್ಲಿ ಶರವಣ್ ಅವರಿಗೆ ಸೋಲುಣಿಸಿದ ರೋಹಿತ್ ಚಾಂಪಿಯನ್ ಆಗಿ ಹೊರಹೊಮ್ಮಿದರೆ, 57 ಕೆಜಿ ವಿಭಾಗದ ಚಿನ್ನದ ಪದಕವು ಅಮನ್ ಅವರ ಪಾಲಾಯಿತು.

ಫೈನಲ್ ಬೌಟ್‌ನಲ್ಲಿ ಅಮನ್ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಅಭಿಷೇಕ್ ಎದುರು ಜಯಿಸಿದರು.

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಗೌರವ್ ಬಲಿಯಾನ್ 79 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಪಾರಮ್ಯ ಮೆರೆದರು. ಫೈನಲ್‌ನಲ್ಲಿ 5–3ರಿಂದ ಜೀತೇಂದರ್ ಕಿನ್ಹಾ ಅವರನ್ನು ಸೋಲಿಸಿದರು. 92 ಕೆಜಿ ವಿಭಾಗದಲ್ಲಿ ವಿಕ್ಕಿ ಮತ್ತು 125 ಕೆಜಿ ವಿಭಾಗದಲ್ಲಿ ಶಿವರಾಜ್ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು. ಚಿನ್ನದ ಪದಕದ ಸುತ್ತಿನಲ್ಲಿ ವಿಕ್ಕಿ ಅವರು ಮೋನು ದಹಿಯಾ ಅವರನ್ನು ಪರಾಭವಗೊಳಿಸಿದರೆ, ಶಿವರಾಜ್ ಅವರು ಮೋಹಿತ್ ಎದುರು ಗೆದ್ದರು. ಫ್ರೀಸ್ಟೈಲ್ ವಿಭಾಗದಲ್ಲಿ ಸರ್ವಿಸಸ್ ಕುಸ್ತಿಪಟುಗಳು ಅಗ್ರಸ್ಥಾನ ಗಳಿಸಿದರೆ, ರೈಲ್ವೇಸ್ ರನ್ನರ್ ಅಪ್ ಮತ್ತು ಹರಿಯಾಣ ಪಟುಗಳು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಕೊಂಥಾವೀಟ್ ಜಯಭೇರಿ

ಗ್ವಾಡಲಾಜರಾ, ಮೆಕ್ಸಿಕೊ (ಎಪಿ): ಎಸ್ಟೊನಿಯಾದ ಅನೆಟ್ ಕೊಂಥಾವೀಟ್ ಇಲ್ಲಿ ನಡೆಯುತ್ತಿರುವ ಡಬ್ಲ್ಯುಟಿಎ ಫೈನಲ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಸ್ಥಾನ ಖಚಿತಪಡಿಸಿಕೊಂಡರು.

ಶುಕ್ರವಾರ ನಡೆದ ಪಂದ್ಯದಲ್ಲಿ 25 ವರ್ಷದ ಅನೆಟ್ 6–4, 6–0ಯಿಂದ ಜೆಕ್ ಗಣರಾಜ್ಯದ ಕೆರೊಲಿನಾ ಪ್ಲಿಸ್ಕೋವಾ ವಿರುದ್ಧ ಜಯಿಸಿದರು. ಇದರೊಂದಿಗೆ 12ನೇ ಜಯ ದಾಖಲಿಸಿದರು. ಅನೆಟ್ ಅವರು ತಾವು ಆಡಿದ ಕಳೆದ 30 ಪಂದ್ಯಗಳಲ್ಲಿ ಪೈಕಿ 28ರಲ್ಲಿ ಜಯಿಸಿದ್ದಾರೆ.

ಇನ್ನೊಂದು ಪಂದ್ಯದಲ್ಲಿ ಸ್ಪೇನ್‌ನ ಗಾರ್ಬೈನ್ ಮುಗುರುಜಾ 2–6, 6–3, 6–4ರಿಂದ ಬಾರ್ಬೊರಾ ಕ್ರೆಜಿಕೊವಾ ವಿರುದ್ಧ ಜಯಗಳಿಸಿದರು. ಅದರೊಂದಿಗೆ ಸೆಮಿಫೈನಲ್‌ಗೆ ಅರ್ಹತೆ ಗಿಟ್ಟಿಸಿದರು.

ಪುಣೆ ರೇಸ್

ಪ್ಯೂರ್ ಗೆಲ್ಲುವ ನಿರೀಕ್ಷೆ

ವಿಲ್ಲೂ ಎಸ್. ಪೂನಾವಾಲ ಮಿಲಿಯನ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ಯೂರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಫಾರ್ಚೂನ್ ಕೂಕಿ 1, ಕರ್ದಾಶಿಯಾನ್ 4, ಅರೇಬಿಯನ್ ಸ್ಟಾರ್ಮ್ 8
2ನೇ ರೇಸ್: ಎಲ್ ಕ್ಯಾಪಿಟಾನ್ 1, ಸಾವರಿನ್ ಮಾಸ್ಟರ್ 2, ಲಾ ಪೆರೆಗ್ರಿನ 8
3ನೇ ರೇಸ್: ಡೀಯರ್ ಲೇಡಿ 5, ಹಾಕ್ ಆಫ್ ದಿ ವಿಂಡ್ 3, ಆರ್ಬಿಟ್ರೇಜ್ 1
4ನೇ ರೇಸ್: ಎನಿಗ್ಮಾ 1, ರೆಡ್ ಮರ್ಲೋಟ್ 4, ಸೆಲ್ಲಿನಿ 2
5ನೇ ರೇಸ್: ಲಾರ್ಡ್ ಬೈರಾನ್ 2, ಜರಾಕ್ 5, ಅಹಾ ಬೆಲ್ಲಾ 6
6ನೇ ರೇಸ್: ಎಂಡೆವರ್ 1, ಫ್ಯೂರರ್ 2, ಎನ್‌ಲೈಟೆನ್ಡ್ 3
7ನೇ ರೇಸ್: ಪ್ಯೂರ್ 5, ಕೀ ಟು ದಿ ಮಿಂಟ್ 3, ಮಿಸ್ಟಿಕಲ್ ರೋಸ್ 8
8ನೇ ರೇಸ್: ಸಿಪ್ಲಾಡ್ 4, ನಾರ್ತರನ್ ಲೈಟ್ಸ್ 5, ವಿನ್ಸೆಂಜೊ 1
9ನೇ ರೇಸ್: ವೆಲ್ ಸ್ಪೀಕಿಂಗ್ 1, ಹೆಲ್‌ಬೆಂಟ್ 5, ಅಪಾಯಿಂಟೆಡ್ 2

ಉತ್ತಮ ಬೆಟ್: ಎನಿಗ್ಮಾ

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
2,3,4,5,6	5,6,7,8,9	3,4,5	6,7,8	7,8,9

ಜೋಕಿಮ್ ರಾಡ್ರಿಗಸ್ ಬೈಕ್ ಓಡಿಸಿದ ಪರಿ

ಮೋಟರ್‌ಸ್ಪೋರ್ಟ್ಸ್: ಅಬುಧಾಬಿ ಡಸರ್ಟ್ ಚಾಲೆಂಜ್

ಮಿಂಚಿದ ಜೋಕಿಮ್ ರಾಡ್ರಿಗಸ್

ಅಬುಧಾಬಿ: ಉತ್ತಮ ಸಾಮರ್ಥ್ಯ ತೋರಿದ ಹೀರೊ ಮೋಟರ್‌ಸ್ಪೋರ್ಟ್ಸ್ ತಂಡದ ಜೋಕಿಮ್ ರಾಡ್ರಿಗಸ್ ಅವರು ಅಬುಧಾಬಿ ಡಸರ್ಟ್ ಚಾಲೆಂಜ್ ಟೂರ್ನಿಯಲ್ಲಿ ಒಟ್ಟಾರೆ ಮೂರನೇ ಸ್ಥಾನ ಗಳಿಸಿದರು.

ಇಲ್ಲಿ 'ಪೋಡಿಯಂ ಫಿನಿಶ್' ಸಾಧಿಸುವುದರೊಂದಿಗೆ ಜೋಕಿಮ್ ಮುಂದಿನ ವರ್ಷ ನಡೆಯಲಿರುವ ಡಕಾರ್ ರ‍್ಯಾಲಿಗೆ ಉತ್ತಮ ಸಿದ್ಧತೆ ನಡೆಸಿದರು.

ಡಕಾರ್ ರ‍್ಯಾಲಿಯು ಜನವರಿ 2ರಿಂದ 14ರವರೆಗೆ ಸೌದಿ ಅರೇಬಿಯಾದಲ್ಲಿ ನಿಗದಿಯಾಗಿದೆ.

17 ತಾಸು 38 ನಿಮಿಷ 40.4 ಸೆಕೆಂಡುಗಳಲ್ಲಿ ಗುರಿ ತಲುಪಿದ ರೆಡ್‌ಬುಲ್ ತಂಡದ ಮಥಾಯಿಸ್ ವಾಕ್ನರ್ ಪ್ರಶಸ್ತಿ ಗೆದ್ದರೆ, ಅವರಿಗಿಂತ 3 ನಿಮಿಷ 31.8 ಸೆಕೆಂಡುಗಳಷ್ಟು ಅಧಿಕ ಸಮಯ ತೆಗೆದುಕೊಂಡ ಮಾನ್‌ಸ್ಟರ್ ಎನರ್ಜಿ ಯಮಹಾ ತಂಡದ ಆ್ಯಡ್ರಿಯನ್ ವ್ಯಾನ್ ಬೆವೆರನ್ ರನ್ನರ್ಸ್ ಅಪ್ ಆದರು.

ರಾಡ್ರಿಗಸ್ ಅವರು ಮಥಾಯಿಸ್ ಅವರಿಗಿಂತ 35 ನಿಮಿಷ 40.4 ಸೆಕೆಂಡುಗಳಷ್ಟು ಹೆಚ್ಚಿನ ಸಮಯದಲ್ಲಿ ರೇಸ್‌ಅನ್ನು ಪೂರ್ಣಗೊಳಿಸಿದರು.

ಪ್ಯಾರಾ ಟಿಟಿ: ದತ್ತಪ್ರಸಾದ್‌ಗೆ ಚಿನ್ನ

ಬೆಂಗಳೂರು: ಭಾರತದ ದತ್ತಪ್ರಸಾದ್ ಚೌಗುಲೆ ಅವರು ಪ್ಯಾರಿಸ್‌ನಲ್ಲಿ ನಡೆದ ಫ್ರೆಂಚ್ ಓಪನ್ ಪ್ಯಾರಾ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದು-ಕೊಂಡಿದ್ದಾರೆ.

ನವೆಂಬರ್ 8ರಿಂದ 11ರವರೆಗೆ ನಡೆದ ಟೂರ್ನಿಯಲ್ಲಿ ಭಾರತದ ಆಟಗಾರರು ತಲಾ ಒಂದು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಪುರುಷರ ಕ್ಲಾಸ್ 9 ತಂಡ ವಿಭಾಗದಲ್ಲಿ ಕರ್ನಾಟಕದ ದತ್ತಪ್ರಸಾದ್, ಜರ್ಮನಿಯ ಯಾನಿಕ್ ರುಡೆಂಕ್ಲಾ ಹಾಗೂ ಬ್ರೆಜಿಲ್‌ನ ಲೂಕಾಸ್ ಜೊತೆಗೂಡಿ ಫೈನಲ್‌ನಲ್ಲಿ 2–0ಯಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿದರು.

ಮಹಿಳೆಯರ ಕ್ಲಾಸ್ 3–5 ವಿಭಾಗದಲ್ಲಿ ಉಷಾಬೆಹನ್ ರಾಥೋಡ್ ಅವರು ಕೊರಿಯಾದ ಯೂಂಗ್ ಎ. ಹಾಗೂ ಸಂಗ್ ಎ. ಜೊತೆಗೂಡಿ ಬೆಳ್ಳಿ ಪದಕ ಗೆದ್ದರು. ಪುರುಷರ ಕ್ಲಾಸ್ 5 ವಿಭಾಗದಲ್ಲಿ ರಾಜ್ ಅರವಿಂದನ್ ಮತ್ತು ತ್ರಿವೇಂದ್ರ ಸಿಂಗ್ ಜೋಡಿಯು ಕಂಚು ತಮ್ಮದಾಗಿಸಿಕೊಂಡರು.

ದತ್ತಪ್ರಸಾದ್ ಚೌಗುಲೆ

ರಾಷ್ಟ್ರೀಯ ಶಿಬಿರಕ್ಕೆ ಮನ್‌ಪ್ರೀತ್, ಶ್ರೀಜೇಶ್

ಭುವನೇಶ್ವರದಲ್ಲಿ ಭಾರತ ಪುರುಷರ ಹಾಕಿ ತಂಡದ ತರಬೇತಿ ಶಿಬಿರ

ನವದೆಹಲಿ (ಪಿಟಿಐ): ನಾಯಕ ಮನ್‌ಪ್ರೀತ್ ಸಿಂಗ್ ಮತ್ತು ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಸೇರಿದಂತೆ ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ಪುರುಷರ ಹಾಕಿ ತಂಡದ ಆಟಗಾರರು, ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶಿಬಿರವನ್ನು ಭಾನುವಾರ ಸೇರಿಕೊಳ್ಳಲಿದ್ದಾರೆ.

ಮುಂದಿನ ತಿಂಗಳು ಢಾಕಾದಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಪೂರ್ವಸಿದ್ಧತೆ-ಯಾಗಿ ರಾಷ್ಟ್ರೀಯ ಶಿಬಿರವು ಇದೇ 10ರಂದು ಆರಂಭವಾಗಿದೆ.

ಮನ್‌ಪ್ರೀತ್ ಹಾಗೂ ಶ್ರೀಜೇಶ್ ಅವರು ಈ ಸಾಲಿನ ಮೇಜರ್ ಧ್ಯಾನ್‌ಚಂದ್ ಖೇಲ್‌ರತ್ನ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಹರ್ಮನ್‌ಪ್ರೀತ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಸುರೇಂದರ್ ಕುಮಾರ್, ನೀಲಕಂಠ ಶರ್ಮಾ, ಸುಮಿತ್, ಹಾರ್ದಿಕ್ ಸಿಂಗ್, ಸಿಮ್ರನ್‌ಜೀತ್ ಸಿಂಗ್, ಗುರ್ಜಂತ್ ಸಿಂಗ್, ಮನದೀಪ್ ಸಿಂಗ್, ಶಂಷೇರ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ ಮತ್ತು ವರುಣ್ ಕುಮಾರ್ ಭಾನುವಾರ ಶಿಬಿರಕ್ಕೆ ಸೇರಲಿರುವ ಇನ್ನುಳಿದ ಆಟಗಾರರು. ಒಲಿಂಪಿಕ್ಸ್‌ನ ಐತಿಹಾಸಿಕ ಸಾಧನೆಗಾಗಿ ಈ ಎಲ್ಲ ಆಟಗಾರರಿಗೆ ಅರ್ಜುನ ಪುರಸ್ಕಾರ ಒಲಿದಿದೆ.

ಅರ್ಜುನ ಪ್ರಶಸ್ತಿ ವಿಜೇತ ಇನ್ನೋರ್ವ ಆಟಗಾರ ವಿವೇಕ್ ಸಾಗರ್ ಪ್ರಸಾದ್ ಅವರು ಎಫ್‌ಐಎಚ್ ಜೂನಿಯರ್ ವಿಶ್ವಕಪ್ ಟೂರ್ನಿಯ ಬಳಿಕ ಸೀನಿಯರ್ ತಂಡದ ಶಿಬಿರ ಸೇರಿಕೊಳ್ಳಲಿದ್ದಾರೆ.

ಡಿಸೆಂಬರ್ ಒಂಬತ್ತರವರೆಗೆ ಶಿಬಿರ ನಡೆಯಲಿದೆ.ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯು ಡಿಸೆಂಬರ್ 14ರಿಂದ 22ರವರೆಗೆ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ, ಪಾಕಿಸ್ತಾನ, ಕೊರಿಯಾ, ಜಪಾನ್, ಮಲೇಷ್ಯಾ ಹಾಗೂ ಆತಿಥೇಯ ಬಾಂಗ್ಲಾದೇಶ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ತರಬೇತಿ ಶಿಬಿರದಲ್ಲಿರುವ ಆಟಗಾರರು: ಗೋಲ್ ಕೀಪರ್‌ಗಳು: ಪಿಆರ್ ಶ್ರೀಜೇಶ್, ಕ್ರಿಶನ್ ಬಿ ಪಾಠಕ್, ಸೂರಜ್ ಕರ್ಕೇರ.

ಡಿಫೆಂಡರ್ಸ್: ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಸುರೇಂದರ್ ಕುಮಾರ್, ವರುಣ್ ಕುಮಾರ್, ಗುರಿಂದರ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ನೀಲಮ್ ಸಂಜೀಪ್ ಕ್ಸೆಸ್, ದೀಪ್‌ಸಾನ್ ಟಿರ್ಕಿ, ಮನ್‌ದೀಪ್ ಮೋರ್, ಆಶಿಶ್ ಕುಮಾರ್ ಟೋಪ್ನೊ, ಸುಮನ್ ಬೆಕ್.

ಮಿಡ್‌ಫೀಲ್ಡರ್ಸ್: ಮನ್‌ಪ್ರೀತ್ ಸಿಂಗ್, ನೀಲಕಂಠ ಶರ್ಮಾ, ಸುಮಿತ್, ಹಾರ್ದಿಕ್ ಸಿಂಗ್, ಜಸ್ಕರನ್ ಸಿಂಗ್, ರಾಜ್ ಕುಮಾರ್ ಪಾಲ್.

ಫಾರ್ವರ್ಡ್ಸ್: ಸಿಮ್ರನ್‌ಜೀತ್ ಸಿಂಗ್, ಗುರ್ಜಂತ್ ಸಿಂಗ್, ಮನದೀಪ್ ಸಿಂಗ್, ಶಂಷೇರ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಆಕಾಶದೀಪ್ ಸಿಂಗ್, ಗುರು ಸಾಹಿಬ್‌ಜೀತ್ ಸಿಂಗ್, ಶಿಲಾನಂದ್ ಲಾಕ್ರಾ, ದಿಲ್‌ಪ್ರೀತ್ ಸಿಂಗ್.

ಪಿ.ಆರ್.ಶ್ರೀಜೇಶ್– ಎಎಫ್‌ಪಿ ಚಿತ್ರ

ಮನ್‌ಪ್ರೀತ್ ಸಿಂಗ್

ಬೌರಿಂಗ್ ಇನ್‌ಸ್ಟಿಟ್ಯೂಟ್‌ಗೆ ಪ್ರಶಸ್ತಿ

ಬೆಂಗಳೂರು: ಬೌರಿಂಗ್ ಇನ್‌ಸ್ಟಿಟ್ಯೂಟ್ ತಂಡವು ಎಂ.ಚೆನ್ನಿಯಪ್ಪ ಸ್ಮಾರಕ ಅಂತರ್ ಕ್ಲಬ್ ಬಿಲಿಯರ್ಡ್ಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ 2–0ಯಿಂದ ಕೆಎಸ್‌ಸಿಎ ತಂಡವನ್ನು ಸೋಲಿಸಿತು. ವಿಜೇತ ತಂಡದ ಅರ್ಜುನ್ ಎಂ. 100–34ರಿಂದ ಕಮಲೇಶ್ ಎದುರು ಗೆದ್ದರೆ, ವಿಕ್ರಂ ಎಂ. ಅವರು 100–28ರಿಂದ ನಿಹಾಲ್ ಎದುರು ಜಯಿಸಿದರು.

ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಬೌರಿಂಗ್ ತಂಡವು ಕೆಎಸ್‌ಬಿಎ ಮಹಿಳಾ ತಂಡವನ್ನು ಸೋಲಿಸಿತು. ಅರ್ಜುನ್ ಎಂ. 100–68ರಿಂದ ಇಂದಿರಾ ಗೌಡ ಅವರನ್ನು ಸೋಲಿಸಿದರೆ, ವಿಕ್ರಂ 100–95ರಿಂದ ವರ್ಷಾ ಸಂಜೀವ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನ ಇನ್ನೊಂದು ಹಣಾಹಣಿಯಲ್ಲಿ ಕೆಎಸ್‌ಸಿಎ ತಂಡವು 2–0ಯಿಂದ ಸಿಟಿ ಇನ್‌ಸ್ಟಿಟ್ಯೂಟ್ ತಂಡವನ್ನು ಸೋಲಿಸಿತ್ತು.

ಫುಟ್‌ಬಾಲ್: ಪಲಿಸಿಕ್ ಮೋಡಿ; ಅಮೆರಿಕ ಜಯಭೇರಿ

ಲಾಸ್ ಎಂಜಲೀಸ್ (ಎಎಫ್‌ಪಿ): ಕ್ರಿಸ್ಟಿಯನ್ ಪಲಿಸಿಕ್ ಮತ್ತು ವೆಸ್ಟನ್ ಮೆಕೆನ್ನಿ ಗಳಿಸಿದ ಗೋಲುಗಳ ಬಲದಿಂದ ಅಮೆರಿಕ ತಂಡವು ವಿಶ್ವಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಶುಕ್ರವಾರ ಇಲ್ಲಿ ನಡೆದ ಹಣಾಹಣಿಯಲ್ಲಿ 2–0ಯಿಂದ ಮೆಕ್ಸಿಕೊ ತಂಡವನ್ನು ಪರಾಭವಗೊಳಿಸಿತು. ಪಲಿಸಿಕ್ ಅವರು 74ನೇ ನಿಮಿಷದಲ್ಲಿ ಟಿಮೊಥಿ ವೀಹ್ ನೀಡಿದ ಪಾಸ್‌ನಲ್ಲಿ ಸೊಗಸಾದ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು.

ಬದಲಿ ಆಟಗಾರನಾಗಿ ಬಂದ ಅವರು ಮೋಡಿ ಮಾಡಿದರು. 85ನೇ ನಿಮಿಷದಲ್ಲಿ ಮೆಕ್ಸಿಕೊ ಗೋಲ್‌ಕೀಪರ್ ಗಿಲೆರ್ಮೊ ಒಚೆರಾ ಅವರನ್ನು ವಂಚಿಸಿದ ಮೆಕೆನ್ನಿ ತಂಡದ ಪರ ಎರಡನೇ ಗೋಲು ದಾಖಲಿಸಿದರು.

ಸದ್ಯ ಅಮೆರಿಕ ತಂಡವು ಏಳು ಪಂದ್ಯಗಳಿಂದ 14 ಪಾಯಿಂಟ್ಸ್ ಗಳಿಸಿದೆ.

ಮತ್ತೊಂದು ಪಂದ್ಯದಲ್ಲಿ ಕೆನಡಾ ತಂಡವು 1–0ಯಿಂದ ಕೋಸ್ಟರಿಕಾ ಎದುರು ಗೆದ್ದಿತು. ಇದರೊಂದಿಗೆ 1986ರ ಬಳಿಕ ಮೊದಲ ಬಾರಿ ವಿಶ್ವಕಪ್ ಅರ್ಹತೆ ಗಳಿಸುವ ತನ್ನ ಅವಕಾಶವನ್ನು ವೃದ್ಧಿಸಿಕೊಂಡಿತು. ತಂಡದ ಪರ ಜೋನಾಥನ್ ಡೇವಿಡ್ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಪನಾಮ ತಂಡವು 3–2ರಿಂದ ಹೊಂಡುರಾಸ್ ತಂಡವನ್ನು ಪರಾಭವಗೊಳಿಸಿತು.

ಎಹಸಾನ್ ತ್ರಿಶತಕ

ಕರಾಚಿ (ಪಿಟಿಐ): ಪಾಕಿಸ್ತಾನದ ಯುವ ಬ್ಯಾಟರ್ ಎಹಸಾನ್ ಅಲಿ ಖೈದ್ ಎ ಆಜಂ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ತ್ರಿಶತಕ ಗಳಿಸಿದರು.

ಇದರೊಂದಿಗೆ ತ್ರಿಶತಕ ಬಾರಿಸಿದ ಪಾಕಿಸ್ತಾನದ ಒಂಬತ್ತನೇ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಟೂರ್ನಿಯು ದೇಶದ ಪ್ರಮುಖ ಪ್ರಥಮ ದರ್ಜೆ ಟೂರ್ನಿಯಾಗಿದೆ. ಶನಿವಾರ ನಡೆದ ಪಂದ್ಯದಲ್ಲಿ ಸಿಂಧ್ ತಂಡದ ಪರವಾಗಿ ಆಡಿದ ಎಹಸಾನ್ ಅಲಿ (303; 385ಎಸೆತ,) ಸೆಂಟ್ರಲ್ ಪಂಜಾಬ್ ತಂಡದ ಎದುರು ಮಿಂಚಿದರು.

ಗಡಾಫಿ ಕ್ರೀಡಾಂಗ-ಣದಲ್ಲಿ ನಡೆಯುತ್ತಿರುವ ಹಗಲು–ರಾತ್ರಿ ಪಂದ್ಯದಲ್ಲಿ ಸಿಂಧ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳಿಗೆ 616 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಎಹಸಾನ್ ಅಲಿ ಟಿ20 ಮಾದರಿಯ ಪರಿಣತ ಬ್ಯಾಟ್ಸ್‌ಮನ್ ಆಗಿದ್ದಾರೆ. ಅವರು ಹೋದ ವರ್ಷ ಬಾಂಗ್ಲಾ ವಿರುದ್ಧದ ಸರಣಿಯಲ್ಲಿ ಪಾಕ್ ತಂಡದಲ್ಲಿ ಆಡಿದ್ದರು.